ಮಂಗಳವಾರ, ಜೂನ್ 3, 2025 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮೌನ ಹೋರಾಟ...
ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಕ್ರೈಸ್ ಅಧೀನ ವಸತಿ ಶಾಲೆಗಳ ನೌಕರರ ಸಂಘದ ಕಲಬುರಗಿ ಜಿಲ್ಲಾ ಘಟಕದಿಂದ ಕಲಬುರಗಿಯಲ್ಲಿ ಸೋಮವಾರ ನಡೆದ ಮೌನ ಪ್ರತಿಭಟನೆಯಲ್ಲಿ ಮಹಿಳೆಯೊಬ್ಬರು ಭಿತ್ತಿ ಫಲಕ ಪ್ರದರ್ಶಿಸಿದರು



ಸಂಕ್ಷಿಪ್ತ ಸುದ್ದಿ

'ಕೋಮು ಹಿಂಸೆ ನಿಗ್ರಹ ಪಡೆ' ವಾರದಲ್ಲಿ ಕಾರ್ಯಾರಂಭ

ತುಮಕೂರು: ನಕ್ಸಲ್ ನಿಗ್ರಹ ಪಡೆ ಮಾದರಿಯಲ್ಲೇ ಕೋಮುಗಲಭೆ ನಿಯಂತ್ರಣಕ್ಕೆ 'ಕೋಮು ಹಿಂಸೆ ನಿಗ್ರಹ ಕಾರ್ಯಪಡೆ' ವಾರದಲ್ಲಿ ಕಾರ್ಯಾರಂಭ ಮಾಡಲಿದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಮಾಹಿತಿ ನೀಡಿದರು.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಕೋಮು ಗಲಭೆ ನಿಯಂತ್ರಣಕ್ಕೆ ಕಾರ್ಯಪಡೆ ರಚಿಸಲಾಗಿದೆ. ಈಗಾಗಲೇ ಕಾರ್ಯಪಡೆ ರಚಿಸಿ ಅಧಿಕೃತವಾಗಿ ಆದೇಶ ಹೊರಡಿಸಲಾಗಿದೆ ಎಂದು ಅವರು ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.


ಜಿ.ಪರಮೇಶ್ವರ

ಡಿಐಜಿ, ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ), ಡಿವೈಎಸ್‌ಪಿ, ಸಬ್ ಇನ್‌ಸ್ಪೆಕ್ಟರ್ ಸೇರಿ ಸುಮಾರು 300 ಸಿಬ್ಬಂದಿ ನೇಮಿಸಲಾಗುತ್ತದೆ. ಅವರಿಗೆ ಪ್ರತ್ಯೇಕ ಅಧಿಕಾರ, ಸಮವಸ್ತ್ರ, ವಾಹನ ಸೌಲಭ್ಯ ಕಲ್ಪಿಸಲಾಗುತ್ತದೆ. ಕಾರ್ಕಳದ ತರಬೇತಿ ಕೇಂದ್ರದಲ್ಲಿ ಅಗತ್ಯ ತರಬೇತಿ ನೀಡಲಾಗುತ್ತದೆ ಎಂದರು.

ಯಾವುದೇ ಸಮುದಾಯವನ್ನು ಗುರಿಯಾಗಿಸಿಕೊಂಡು ಕ್ರಮ ಜರುಗಿಸುವುದಿಲ್ಲ. ಕಾನೂನಿಗೆ ವಿರುದ್ಧವಾಗಿ ನಡೆದುಕೊಂಡವರ ಮೇಲೆ ಕ್ರಮ ವಹಿಸಲಾಗುತ್ತದೆ. ರಾಜ್ಯದಲ್ಲಿ ಕೊಲೆ, ಅಪರಾಧ ಪ್ರಕರಣ ನಿಯಂತ್ರಣಕ್ಕೆ ಬರುತ್ತಿವೆ ಎಂದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಿರ್ದೇಶಕರಿಗೆ ಪತ್ರ

'ಅಂಗನವಾಡಿಗಳಲ್ಲಿ ಕಳಪೆ ಆಹಾರ'

• ಜಯಸಿಂಹ ಆರ್.

ಬೆಂಗಳೂರು: ಹಾಸನದಲ್ಲಿ ಅಂಗನವಾಡಿ ಕೇಂದ್ರಗಳ ಮೂಲಕ ಮಕ್ಕಳಿಗೆ ವಿತರಿಸಿದ್ದ ಪೌಷ್ಟಿಕ ಆಹಾರವು ಕಳಪೆ ಗುಣಮಟ್ಟದ್ದು ಎಂದು ವರದಿ ಬಂದಿದೆ. ಇದರ ಬೆನ್ನಲ್ಲೇ, ಎಲ್ಲ ಜಿಲ್ಲೆಗಳಲ್ಲೂ ವಿತರಿಸಲಾದ ಆಹಾರದ ಗುಣಮಟ್ಟ ಪರಿಶೀಲಿಸಬೇಕು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಹಲವು ಜಿಲ್ಲಾ ಉಪ ನಿರ್ದೇಶಕರು, ಇಲಾಖೆಯ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

'ಹಾಸನ ಜಿಲ್ಲೆಯ ಅಂಗನವಾಡಿಗಳಲ್ಲಿ ವಿತರಿಸಲಾಗಿದ್ದ ಹೆಸರು ಕಾಳು, ತೊಗರಿ ಬೇಳೆ, ಸಾಂಬಾರು ಪುಡಿ, ಪುಷ್ಟಿ ಸಿದ್ಧ ಆಹಾರ ಮತ್ತು ಸಿರಿಧಾನ್ಯದ ಉಂಡೆ ಕಳಪೆ ಗುಣಮಟ್ಟದವು ಎಂದು ದೂರುಗಳು ಬಂದಿದ್ದವು. ಈ ಬಗ್ಗೆ ಕ್ರಮ ತೆಗೆದುಕೊಂಡಿದ್ದ ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯು, ಹಾಸನ ಜಿಲ್ಲೆಯಲ್ಲಿ ವಿತರಿಸಲಾಗಿದ್ದ ಪೌಷ್ಟಿಕ ಆಹಾರದ ಮಾದರಿಗಳನ್ನು ಸಂಗ್ರಹಿಸಿ ಪ್ರಯೋಗಾಲಯಕ್ಕೆ ಕಳುಹಿಸಿತ್ತು' ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ಈ ಎಲ್ಲ ಮಾದರಿಯ ಆಹಾರ ಪದಾರ್ಥಗಳೂ ಕಳಪೆ ಗುಣಮಟ್ಟದ್ದು ಮತ್ತು ಬಳಸಲು ಯೋಗ್ಯವಲ್ಲ' ಎಂದು ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ ಇಲಾಖೆಯ ಪ್ರಯೋಗಾಲಯವು ವರದಿ ನೀಡಿತ್ತು. ಮಾಹಿತಿ ಹಕ್ಕು ಕಾಯ್ದೆ ಅಡಿ ಸಲ್ಲಿಸಲಾಗಿದ್ದ ಅರ್ಜಿಗೆ ಏಪ್ರಿಲ್ 16ರಂದು ಉತ್ತರ ನೀಡಿತ್ತು.

ಇದರ ಬೆನ್ನಲ್ಲೇ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವಿವಿಧ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಲವು ಉಪ ನಿರ್ದೇಶಕರು ಮತ್ತು ಸೂಪರಿಂಟೆಂಡೆಂಟ್ ಇಲಾಖೆಯ ನಿರ್ದೇಶಕರಿಗೆ ಮೇ 27 ಮತ್ತು 28ರಂದು ಪತ್ರ ಬರೆದಿದ್ದಾರೆ.

'ಗುತ್ತಿಗೆ ಪಡೆದಿರುವ ಸ್ವಸಹಾಯ ಸಂಘಗಳಿಂದ ಕಳಪೆ ಗುಣಮಟ್ಟದ ಆಹಾರ ಪೂರೈಕೆಯಾಗುತ್ತಿದೆ. ಈ ಬಗ್ಗೆ ಹಲವು ದೂರುಗಳು ಬಂದಿವೆ. ಅಂಗನವಾಡಿಗಳಿಗೆ ಭೇಟಿ ನೀಡಿ ಪರಿಶೀಲಿಸಿದಾಗ, ಹಾಳಾದ ಆಹಾರ ಪದಾರ್ಥಗಳನ್ನು ವಿತರಿಸಿರುವುದು ಗಮನಕ್ಕೆ ಬಂದಿತು. ಹೀಗಾಗಿ ಎಲ್ಲೆಡೆ ಮಾದರಿ ಸಂಗ್ರಹಿಸಿ, ಪ್ರಯೋಗಾಲಯಕ್ಕೆ ಕಳುಹಿಸಬೇಕು' ಎಂದು ಕೋರಿದ್ದಾರೆ.

'ಮಹಿಳಾ ಸ್ವಸಹಾಯ ಗುಂಪುಗಳಿಗೆ ಆಹಾರ ಪೂರೈಕೆಯ ಗುತ್ತಿಗೆ ನೀಡಲಾಗಿದೆ. ಆದರೆ ಈ ಹಿಂದೆ ಕಳಪೆ ಗುಣಮಟ್ಟದ ಆಹಾರ ಪದಾರ್ಥ ಪೂರೈಸಿ ಕಪ್ಪುಪಟ್ಟಿ ಸೇರಿದ್ದ ಕಂಪನಿಯೇ, ಸ್ವಸಹಾಯ ಗುಂಪುಗಳಿಗೆ ಆಹಾರ ಪದಾರ್ಥಗಳನ್ನು ಪೂರೈಸುತ್ತಿದೆ. ಸ್ವಸಹಾಯ ಗುಂಪುಗಳು ಅದನ್ನು ಸಣ್ಣ ಪೊಟ್ಟಣಗಳಲ್ಲಿ ಪ್ಯಾಕ್ ಮಾಡಿ, ವಿತರಣೆಗೆ ಕಳುಹಿಸುತ್ತಿವೆ. ಈ ಬಗ್ಗೆ ವಿಸ್ತೃತ ತನಿಖೆಯ ಅಗತ್ಯವಿದೆ' ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಈ ಪತ್ರಗಳ ಬಗ್ಗೆ ಪ್ರತಿಕ್ರಿಯೆ ಪಡೆಯಲು ಇಲಾಖೆಯ ನಿರ್ದೇಶಕರ ಕಚೇರಿಗೆ ಕರೆ ಮಾಡಿದಾಗ, ಕರೆ ಸ್ವೀಕರಿಸಲಿಲ್ಲ. ಇಲಾಖೆ ಉಪ ನಿರ್ದೇಶಕರೂ ಕರೆ ಸ್ವೀಕರಿಸಲಿಲ್ಲ.

ಮುಖ್ಯಾಂಶಗಳು

- ಹಾಸನದಲ್ಲಿ ವಿತರಿಸಿದ್ದ ಪದಾರ್ಥ ಬಳಸಲು ಯೋಗ್ಯವಲ್ಲ ಎಂದು ವರದಿ
- ಇಲಾಖೆಯ ಜಿಲ್ಲಾ ಉಪ ನಿರ್ದೇಶಕರು, ಅಧಿಕಾರಿಗಳಿಂದ ಪತ್ರ
- ರಾಜ್ಯದ ಎಲ್ಲೆಡೆ ಮಾದರಿ ಸಂಗ್ರಹಿಸಿ, ಪರೀಕ್ಷಿಸುವಂತೆ ಮನವಿ


ಸಂಗ್ರಹ ಚಿತ್ರ

'ಎರಡನೇ ಪರೀಕ್ಷೆಯಲ್ಲಿ ಪಾಸು'

'ಹಾಸನದಲ್ಲಿ ಸಂಗ್ರಹಿಸಲಾಗಿದ್ದ ಮಾದರಿಗಳು ಕಳಪೆ ಗುಣಮಟ್ಟದವು ಎಂದು ವರದಿ ಬಂದ ನಂತರ ಪೂರೈಕೆದಾರರಿಗೆ ನೋಟಿಸ್ ನೀಡಲಾಗಿತ್ತು. ಅವರು ಮತ್ತೊಮ್ಮೆ ಮಾದರಿಗಳನ್ನು ಕಳುಹಿಸಿ, ಪರೀಕ್ಷೆ ನಡೆಸುವಂತೆ ಮನವಿ ಮಾಡಿಕೊಂಡಿದ್ದರು. ಎರಡನೇ ಪರೀಕ್ಷೆಯಲ್ಲಿ ಆಹಾರ ಪದಾರ್ಥಗಳು ಬಳಕೆಗೆ ಯೋಗ್ಯವಾಗಿವೆ ಎಂಬ ವರದಿ ಬಂತು. ಹೀಗಾಗಿ ಅವನ್ನೇ ವಿತರಿಸಲಾಗುತ್ತಿದೆ' ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಹಾಸನ ಜಿಲ್ಲಾ ಉಪ ನಿರ್ದೇಶಕರು ಉತ್ತರದಲ್ಲಿ ವಿವರಿಸಿದ್ದಾರೆ.

ಈ ಬಗ್ಗೆಯೂ ಪತ್ರದಲ್ಲಿ ಉಲ್ಲೇಖಿಸಿರುವ ಅಧಿಕಾರಿಗಳು, 'ಪೂರೈಕೆದಾರರು ಉತ್ತಮ ಗುಣಮಟ್ಟದ ಪದಾರ್ಥಗಳನ್ನು ಪರೀಕ್ಷೆಗೆ ಕಳುಹಿಸುತ್ತಾರೆ. ಅವು ಬಳಕೆಗೆ ಯೋಗ್ಯ ಎಂದು ವರದಿ ಬರುತ್ತದೆ. ಆನಂತರ ಕಡಿಮೆ ಬೆಲೆಯ, ಕಳಪೆ ಗುಣಮಟ್ಟದ ಪದಾರ್ಥ ಪೂರೈಸುತ್ತಾರೆ. ಈ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿ, ನೋಟಿಸ್ ನೀಡಿದಾಗ ಪ್ರಯೋಗಾಲಯದ ವರದಿಯನ್ನು ತೋರಿಸುತ್ತಾರೆ. ಹೀಗಾಗಿ ಎಲ್ಲೆಡೆ ಮಾದರಿ ಸಂಗ್ರಹಿಸಿ, ಪ್ರಯೋಗಾಲಯಕ್ಕೆ ಕಳುಹಿಸಬೇಕು' ಎಂದು ಮನವಿ ಮಾಡಿಕೊಂಡಿದ್ದಾರೆ.

'ಬಿಲ್ ಸಲ್ಲಿಕೆಯಾಗಿಲ್ಲ'

'ಕಳಪೆ ಗುಣಮಟ್ಟದ್ದು ಎಂದು ವರದಿ ಬಂದ ನಂತರ ಪೂರೈಕೆದಾರರಿಗೆ ನೋಟಿಸ್ ನೀಡಿ, ದಂಡ ವಿಧಿಸಲಾಗಿತ್ತು. ಆ ಬ್ಯಾಚ್‌ನಲ್ಲಿ ಉಳಿದಿದ್ದ ಎಲ್ಲ ಪದಾರ್ಥಗಳನ್ನು ವಾಪಸ್ ಮಾಡಲಾಗಿದೆ. ಆ ಬ್ಯಾಚ್‌ನಲ್ಲಿ ಪೂರೈಸಲಾದ ಪದಾರ್ಥಗಳಿಗೆ ಬಿಲ್ ಸಲ್ಲಿಸಬೇಡಿ ಎಂದು ಸೂಚಿಸಿದ್ದೇವೆ. ಪೂರೈಕೆದಾರರೂ ಬಿಲ್ ಸಲ್ಲಿಸಿಲ್ಲ' ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಹಾಸನ ಜಿಲ್ಲಾ ಉಪ ನಿರ್ದೇಶಕ ಧರಣೇಶ್ ಕುಮಾರ್ ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಸುದ್ದಿ 2 ನಿಮಿಷ

ಬಾಲಕಿ ಸಾವು: ತನಿಖಾ ತಂಡ ರಚನೆ

ಮಂಡ್ಯ: ಮಳವಳ್ಳಿ ತಾಲ್ಲೂಕು ನೆಲ್ಲೂರಿನ ಬಾಲಕಿ ಸಾನ್ವಿ (7) ಇಲ್ಲಿನ ಮಿಮ್ಸ್ ಆಸ್ಪತ್ರೆಯಲ್ಲಿ ಭಾನುವಾರ ಮೃತಪಟ್ಟ ಬಗ್ಗೆ ಶಂಕೆಗಳು ವ್ಯಕ್ತವಾಗಿರುವುದರಿಂದ ನಿಖರ ಕಾರಣ ತಿಳಿದುಕೊಳ್ಳಲು ತ್ವರಿತ ಸಮಿತಿ ರಚಿಸಿ, ತನಿಖೆಗೆ ಜಿಲ್ಲಾಧಿಕಾರಿ ಕುಮಾರ ಆದೇಶಿಸಿದ್ದಾರೆ.

'ಕಾಲಿನ ಮೇಲೆ ಟೈಲ್ ಬಿದ್ದು ಗಾಯಗೊಂಡಿದ್ದ ಬಾಲಕಿಗೆ ವೈದ್ಯರು ಸಮರ್ಪಕವಾಗಿ ಚಿಕಿತ್ಸೆ ನೀಡದ ನಿರ್ಲಕ್ಷ್ಯ ವಹಿಸಿದ್ದರಿಂದ ಮೃತಪಟ್ಟಿದ್ದಾಳೆ' ಎಂದು ಪೋಷಕರು ಮತ್ತು ಸಂಬಂಧಿಕರು ಆರೋಪಿಸಿದ್ದರು. ಮಿಮ್ಸ್ ಆವರಣದಲ್ಲಿ ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆದಿತ್ತು.

ತನಿಖಾ ಸಮಿತಿಯಲ್ಲಿ ಮೈಸೂರು ವೈದ್ಯಕೀಯ ಕಾಲೇಜಿನ ಮಕ್ಕಳ ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ಪ್ರದೀಪ್ ಅಧ್ಯಕ್ಷರಾಗಿ, ನಾಗಮಂಗಲ ತಾಲ್ಲೂಕಿನ ಬಿ.ಜಿ. ನಗರದಲ್ಲಿರುವ ಮೂಳೆ ಮತ್ತು ಕೀಲು ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ಮಹೇಶ್, ಶಸ್ತ್ರ ಚಿಕಿತ್ಸಾ ವಿಭಾಗದ ಮುಖ್ಯಸ್ಥ ಡಾ.ಬಾಲಕೃಷ್ಣ, ಅರಿವಳಿಕೆ ವಿಭಾಗದ ಮುಖ್ಯಸ್ಥ ಡಾ.ಚೇತನ್ ಸದಸ್ಯರಾಗಿದ್ದಾರೆ. ಜಿಲ್ಲಾ ಕ್ಷಯ ರೋಗ ನಿಯಂತ್ರಣಾಧಿಕಾರಿ ಡಾ.ಸೋಮಶೇಖರ್ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.

ತನಿಖಾ ವರದಿಯನ್ನು 15 ದಿನದೊಳಗಾಗಿ ಸಲ್ಲಿಸುವಂತೆ ಜಿಲ್ಲಾಧಿಕಾರಿ ಸೂಚಿಸಿದ್ದಾರೆ.

ಪೈಲಟ್ ತರಬೇತಿ ಕೇಂದ್ರಕ್ಕೆ ಸಿದ್ಧತೆ



ಶಿವಮೊಗ್ಗ: ತಾಲ್ಲೂಕಿನ ಸೋಗಾನೆ ಬಳಿ ಇರುವ ವಿಮಾನ ನಿಲ್ದಾಣದಲ್ಲಿ ಖಾಸಗಿ ಸಹಭಾಗಿತ್ವದಲ್ಲಿ ಪೈಲಟ್ ತರಬೇತಿ ಕೇಂದ್ರ ಸ್ಥಾಪನೆಗೆ ರಾಜ್ಯ ಸರ್ಕಾರ ಮುಂದಾಗಿದೆ. ಇದಕ್ಕಾಗಿ 30 ವರ್ಷಗಳ ಅವಧಿಗೆ ಹೂಡಿಕೆ, ನಿರ್ಮಾಣ ಹಾಗೂ ನಿರ್ವಹಣೆ (ಐಬಿಒ) ಆಧಾರದ ಮೇಲೆ ಫ್ಲೈಯಿಂಗ್ ಕ್ಲಬ್ ಆರಂಭಕ್ಕೆ ಜಾಗತಿಕ ಟೆಂಡರ್ ಕರೆಯಲಾಗಿದೆ.

ವಿಮಾನ ನಿಲ್ದಾಣದ ನಿರ್ವಹಣೆ ಮಾಡುತ್ತಿರುವ ರಾಜ್ಯ ಕೈಗಾರಿಕಾ ಹಾಗೂ ಮೂಲ ಸೌಕರ್ಯ ಅಭಿವೃದ್ಧಿ ನಿಗಮ (ಕೆಎಸ್‌ಐಐಡಿಸಿ)ವು ಪೈಲಟ್ ತರಬೇತಿ ಕೇಂದ್ರ ಆರಂಭಕ್ಕೆ ಯೋಜನೆ ರೂಪಿಸಿದೆ. ಸದ್ಯ ಮೈಸೂರು ಹಾಗೂ ಕಲಬುರಗಿಯಲ್ಲಿ ಮಾತ್ರ ಖಾಸಗಿ ವಲಯದ ಪೈಲಟ್ ತರಬೇತಿ ಕೇಂದ್ರಗಳಿವೆ. ಪ್ರತಿ ವರ್ಷ 100 ಜನರಿಗೆ ಇಲ್ಲಿ ಪೈಲಟ್ ತರಬೇತಿ ನೀಡಲಾಗುವುದು. ಅದರಲ್ಲಿ 25 ಸೀಟುಗಳನ್ನು ಕರ್ನಾಟಕದ ವಿದ್ಯಾರ್ಥಿಗಳಿಗೆ ಮೀಸಲಿಡಲಾಗುವುದು ಎಂದು ತಿಳಿದುಬಂದಿದೆ.

ಫ್ಲೈಯಿಂಗ್ ಕ್ಲಬ್ ನಿರ್ಮಾಣಕ್ಕೆ ವಿಮಾನ ನಿಲ್ದಾಣದ ಬಳಿಯೇ 3,500 ಚದರ ಮೀಟರ್ ಸ್ಥಳ ನೀಡಲಾಗುತ್ತದೆ. ಅದರಲ್ಲಿ 1,500 ಚದರ ಮೀಟರ್ ಜಾಗವನ್ನು ಟರ್ಮಿನಲ್ ಪಕ್ಕದ ಹ್ಯಾಂಗರ್ ಸಮೀಪದಲ್ಲಿ ಒದಗಿಸಿದರೆ, 2,000 ಚದರ ಮೀಟರ್ ಜಾಗವನ್ನು ಟರ್ಮಿನಲ್ ಹೊರ ಭಾಗದಲ್ಲಿ ನೀಡಲಾಗುತ್ತದೆ. ಕೆಎಸ್‌ಐಐಡಿಸಿ ಫೈರ್ ಸೇಫ್ಟಿ, ಆಂಬುಲೆನ್ಸ್ ಸೌಲಭ್ಯ, ಏರ್ ಟ್ರಾಫಿಕ್ ಕಂಟ್ರೋಲ್ ಹಾಗೂ ರನ್ ವೇ ವ್ಯವಸ್ಥೆ ಮಾಡಲಿದೆ. ಎಲ್ಲವೂ ನಾಗರಿಕ ವಿಮಾನಯಾನ ನಿರ್ದೇಶನಾಲಯದ (ಡಿಜಿಸಿಎ) ನಿಯಮಗಳ ಅನ್ವಯ ಕಾರ್ಯಾಚರಣೆ ನಡೆಸಲಿವೆ ಎಂದು ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಮೂಲಗಳು ತಿಳಿಸಿವೆ.

ಲೈಂಗಿಕ ದೌರ್ಜನ್ಯ ದೂರು ದಾಖಲು

ಸಿಂಧನೂರು (ರಾಯಚೂರು ಜಿಲ್ಲೆ): ನಗರದ ಮಹಿಳೆಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಮಿನಿ ವಿಧಾನಸೌಧದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಿರಿಯ ಸಹಾಯಕ ಮತ್ತು ನಾಲ್ವರು ಗ್ರಾಮ ಆಡಳಿತಾಧಿಕಾರಿಗಳ ವಿರುದ್ಧ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಮಗಳ ಮದುವೆಗಾಗಿ ಜಮೀನಿನ ಮೇಲೆ ಪಡೆದಿದ್ದ ₹4 ಲಕ್ಷ ಸಾಲದ ಹಣವನ್ನು ವಾಪಸ್ ಕೊಡಲು ಎಪಿಎಂಸಿಯ ಖಾಸಗಿ ಕೋಣೆಗೆ ಹೋದ ಸಂದರ್ಭದಲ್ಲಿ ಐವರು ಸೇರಿ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಸಂತ್ರಸ್ತೆ ದೂರಿನಲ್ಲಿ ತಿಳಿಸಿದ್ದಾರೆ.



'ನನ್ನ ಹೆಸರಿನಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಜಮೀನಿದೆ. ಮಿನಿವಿಧಾನಸೌಧ ಕಚೇರಿಯ ಕಿರಿಯ ಸಹಾಯಕ ರಾಜಾಭಕ್ಷಿ, ಗ್ರಾಮ ಆಡಳಿತಾಧಿಕಾರಿಗಳಾದ ಮಲ್ಲಿಕಾರ್ಜುನ ಗಡೇದ್, ಬಂದೇನವಾಜ್ ನಿಡಗುಂದಿ, ಮೃತ್ಯುಂಜಯ ಹಾಗೂ ಆನಂದ ಸೇರಿ ಜಮೀನು ಖರೀದಿ ಕರಾರು ಪತ್ರ ಬರೆಸಿಕೊಂಡು ಸಾಲ ಕೊಟ್ಟಿದ್ದರು. ಅವರು ಸರ್ಕಾರಿ ಉದ್ಯೋಗದಲ್ಲಿದ್ದರೂ ಕರಾರು ಪತ್ರದಲ್ಲಿ ತಮ್ಮ ಉದ್ಯೋಗ ಒಕ್ಕಲುತನ ಎಂದು ತೋರಿಸಿದ್ದಾರೆ' ಎಂದು ಆರೋಪಿಸಿದ್ದಾರೆ.

'ಅಂಬೇಡ್ಕರ್ ವಿಷಯ ಸಂಘಟನೆಗಳೇಕೆ ಧ್ವನಿ ಎತ್ತಲಿಲ್ಲ'

ಜಮಖಂಡಿ (ಬಾಗಲಕೋಟೆ ಜಿಲ್ಲೆ): 'ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರು ಹಿಂದೂ ಧರ್ಮವನ್ನು ತೊರೆದಾಗ, ಹಿಂದೂ ಸಂಘಟನೆಗಳು ಯಾಕೆ ಮಾತನಾಡಲಿಲ್ಲ' ಎಂದು ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಪ್ರಶ್ನಿಸಿದರು.

'ಅಸ್ಪೃಶ್ಯತೆ ಸಮಸ್ಯೆ ನಮ್ಮ ಜನರನ್ನು ಇನ್ನೂ ಕಾಡುತ್ತಿದೆ. ಇದರ ಬಗ್ಗೆ ಹಿಂದೂ ಸಂಘಟನೆಗಳು, ಮಠಾಧೀಶರು ಧ್ವನಿ ಎತ್ತುತ್ತಿಲ್ಲ. ಇಂಥವರು ಹೇಗೆ ಹಿಂದೂ ರಾಷ್ಟ್ರ ಕಟ್ಟಲು ಸಾಧ್ಯ? ಮೊದಲು ಸುಳ್ಳು ಹೇಳುವುದನ್ನು ಬಿಡಬೇಕು' ಎಂದು ಅವರು ಸೋಮವಾರ ಸುದ್ದಿಗಾರರಿಗೆ ತಿಳಿಸಿದರು.

ಗೃಹ ಆರೋಗ್ಯ: ಎಲ್ಲ ಜಿಲ್ಲೆಗೂ ವಿಸ್ತರಣೆ

ಬೆಂಗಳೂರು: ಪ್ರತಿ ಮನೆಗೂ ತೆರಳಿ 30 ವರ್ಷ ಮೇಲ್ಪಟ್ಟವರನ್ನು ತಪಾಸಣೆಗೆ ಒಳಪಡಿಸುವ ಗೃಹ ಆರೋಗ್ಯ ಯೋಜನೆಯನ್ನು ರಾಜ್ಯದ ಎಲ್ಲ ಜಿಲ್ಲೆಗಳಿಗೂ ವಿಸ್ತರಿಸಲಾಗುತ್ತಿದೆ. ಉಚಿತ ತಪಾಸಣೆ ಜತೆಗೆ, ಔಷಧವನ್ನೂ ನೀಡಲಾಗುತ್ತದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.



ಗೃಹ ಆರೋಗ್ಯ ಯೋಜನೆ ಅನುಷ್ಠಾನ ಕಾರ್ಯಾಗಾರ ಉದ್ಘಾಟಿಸಿದ ನಂತರ ಮಾತನಾಡಿದ ಅವರು, ಕೋಲಾರ ಜಿಲ್ಲೆಯಲ್ಲಿ ಯೋಜನೆಗೆ ಚಾಲನೆ ನೀಡಿದಾಗ ಹಲವು ಸಂಗತಿಗಳು ಪತ್ತೆಯಾಗಿವೆ. ಅವೆಲ್ಲವನ್ನೂ ತುಲನೆ ಮಾಡಿ ಯೋಜನೆಯಲ್ಲಿ ಒಂದಿಷ್ಟು ಬದಲಾವಣೆ ತರಲಾಗಿದೆ. ಆಯುಷ್ಮಾನ್ ಆರೋಗ್ಯ ಮಂದಿರಗಳಲ್ಲೂ ಉಚಿತವಾಗಿ ತಪಾಸಣೆ ನಡೆಸಲಾಗುತ್ತದೆ. ಮೇಲ್ವಿಚಾರಣೆ, ತಪಾಸಣೆ ಕುರಿತು ಸಮುದಾಯ ಆರೋಗ್ಯ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು ಕೈಪಿಡಿ ನೀಡಲಾಗುತ್ತಿದೆ. ತಪಾಸಣೆ ನಡೆಸಿದ ತಕ್ಷಣ ಎನ್‌ಸಿಡಿ ಪೋರ್ಟಲ್‌ನಲ್ಲಿ ರೋಗಿಗಳ ದತ್ತಾಂಶ ನಮೂದಿಸಲಿದ್ದಾರೆ ಎಂದು ಹೇಳಿದರು.

'ತಾಂತ್ರಿಕ ಶಿಕ್ಷಣಕ್ಕೆ ₹2,600 ಕೋಟಿ ಸಾಲ'

ಪಾಲಿಟೆಕ್ನಿಕ್, ಎಂಜಿನಿಯರಿಂಗ್ ಕಾಲೇಜುಗಳ ಸುಧಾರಣೆ: ಸಚಿವ ಸುಧಾಕರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಷ್ಯಾ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ) ₹2,600 ಕೋಟಿ ಸಾಲ ಪಡೆಯಲು ರಾಜ್ಯ ಸರ್ಕಾರ ಒಪ್ಪಿಗೆ ನೀಡಿದ್ದು, ಕರ್ನಾಟಕದ ತಾಂತ್ರಿಕ ಶಿಕ್ಷಣವನ್ನು ಬಲಗೊಳಿಸಲು ನೆರವಾಗಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಹೇಳಿದರು.

ಕರ್ನಾಟಕ ಉನ್ನತ ಶಿಕ್ಷಣ ತ್ರೈಮಾಸಿಕ ಪತ್ರಿಕೆ ಬಿಡುಗಡೆ ನಂತರ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಆರ್ಥಿಕ ವ್ಯವಹಾರಗಳ ನಿರ್ವಹಣೆ ಇಲಾಖೆಯ ಸಮ್ಮತಿಯೂ ಸಿಕ್ಕಿದೆ. ಬ್ಯಾಂಕ್ ಅಧಿಕಾರಿಗಳು ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿ, ಪರಿಶೀಲಿಸಿದ ನಂತರ ಸಾಲದ ಕಂತುಗಳು ಬಿಡುಗಡೆಯಾಗಲಿವೆ. ಈ ಹಣವನ್ನು ಪಾಲಿಟೆಕ್ನಿಕ್ ಹಾಗೂ ಎಂಜಿನಿಯರಿಂಗ್ ಕಾಲೇಜುಗಳ ಸುಧಾರಣೆಗೆ ಬಳಕೆ ಮಾಡಲಾಗುವುದು ಎಂದು ಮಾಹಿತಿ ನೀಡಿದರು.


ಕರ್ನಾಟಕ ಉನ್ನತ ಶಿಕ್ಷಣ ತ್ರೈಮಾಸಿಕ ಪತ್ರಿಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಬಿಡುಗಡೆ ಮಾಡಿದರು

ಉನ್ನತ ಶಿಕ್ಷಣ ಇಲಾಖೆಯ ಆದೇಶಗಳು, ಸೂಚನೆಗಳು, ನಿಯಮಗಳನ್ನು ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ತಲುಪಿಸಲು ಕರ್ನಾಟಕ ಉನ್ನತ ಶಿಕ್ಷಣ ತ್ರೈಮಾಸಿಕ ಪತ್ರಿಕೆ ಸಹಕಾರಿಯಾಗಲಿದೆ. ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಶೈಕ್ಷಣಿಕ ಮಾಹಿತಿ ನೀಡಲೆಂದೇ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಈ ಪತ್ರಿಕೆ ರೂಪಿಸಿದೆ. ರಾಜ್ಯದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ನಡೆಯುವ ಕಾರ್ಯ ಚಟುವಟಿಕೆಗಳು ಹಾಗೂ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ವಿಶ್ವವಿದ್ಯಾಲಯಗಳ ಶೈಕ್ಷಣಿಕ ಪ್ರಗತಿ, ತಂತ್ರಜ್ಞಾನ ಬಳಕೆ ಸೇರಿದಂತೆ ಶಿಕ್ಷಣ ವ್ಯವಸ್ಥೆಯಲ್ಲಿನ ಜಾಗತಿಕ ನಡೆಯನ್ನೂ ಪತ್ರಿಕೆ ಒಳಗೊಂಡಿರುತ್ತದೆ. ಹೆಸರಾಂತ ಶಿಕ್ಷಣ ತಜ್ಞರು, ಸಂಶೋಧಕರು ಪತ್ರಿಕೆಗೆ ಬರೆಯಲಿದ್ದಾರೆ ಎಂದರು.

ರಾಜ್ಯದಲ್ಲಿ ಉನ್ನತ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಉದ್ಯೋಗ ಖಾತ್ರಿ ನೀಡುವುದು ಸರ್ಕಾರದ ಆಶಯ. ಕಲಿಕೆಯ ಸಮಯದಲ್ಲೇ ಕೈಗಾರಿಕೆಗೆ ಪೂರಕ ಹಾಗೂ ಉದ್ಯೋಗ ಖಚಿತತೆಯ ಕೌಶಲಾಧಾರಿತ ಶಿಕ್ಷಣವನ್ನು ನೀಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕರ್ನಾಟಕ ಉನ್ನತ ಶಿಕ್ಷಣ ತ್ರೈಮಾಸಿಕ ಪತ್ರಿಕೆ ಬಿಡುಗಡೆ ಮಾಡಿದರು. ಉನ್ನತ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ಕೆ.ಜಿ. ಜಗದೀಶ್, ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ, ಉನ್ನತ ಶಿಕ್ಷಣ ಪರಿಷತ್ ಉಪಾಧ್ಯಕ್ಷ ಎಸ್.ಆರ್. ನಿರಂಜನ್, ಕಾರ್ಯಕಾರಿ ನಿರ್ವಾಹಕ ಕೆ.ಜಿ. ಚಂದ್ರಶೇಖರ್ ಉಪಸ್ಥಿತರಿದ್ದರು.

'ಅಹಂಕಾರ ಪ್ರದರ್ಶನ ಸರಿಯಲ್ಲ'

ಪ್ರಜಾವಾಣಿ ವಾರ್ತೆ

ಲಿಂಗಸುಗೂರು (ರಾಯಚೂರು ಜಿಲ್ಲೆ): 'ನಟ ಕಮಲ್ ಹಾಸನ್ ತಮಿಳಿನಿಂದ ಕನ್ನಡ ಹುಟ್ಟಿದೆ ಎಂದು ಸುಳ್ಳು ಹೇಳಿ ಭಾಷೆಗಳ ನಡುವೆ ಸಂಘರ್ಷ ಉಂಟು ಮಾಡುತ್ತಿದ್ದಾರೆ. ಕ್ಷಮೆ ಕೇಳುವ ಬದಲು ಅಹಂಕಾರ ಪ್ರದರ್ಶಿಸುತ್ತಿದ್ದಾರೆ. ಇದು ಸರಿಯಲ್ಲ' ಎಂದು ನಟ ಚೇತನ್ ಹೇಳಿದರು.


ನಟ ಚೇತನ್

ಸೋಮವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ತಮಿಳು ಸಹೋದರ ಭಾಷೆಯಾಗಿದೆ. ಕಮಲ್ ಹಾಸನ್ ಬಗ್ಗೆ ಅಪಾರ ಗೌರವ ಇದೆ. ಆದರೆ, ಅವರ ವಿಚಾರ ಧಾರೆಯನ್ನು ಒಪ್ಪುವುದಿಲ್ಲ' ಎಂದರು.

ಕರಾವಳಿಯಲ್ಲಿ ಗಂಟೆಗೆ 50 ಕಿ.ಮೀ. ವೇಗದಲ್ಲಿ ಗಾಳಿ ಬೀಸುವ ಸಾಧ್ಯತೆ

ಮೂರು ದಿನ ಸಾಧಾರಣ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಮುಂದಿನ ಮೂರು ದಿನ ಸಾಧಾರಣ ಮಳೆಯಾಗುವ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕೆಲ ದಿನಗಳಿಂದ ರಾಜ್ಯದ ಹಲವೆಡೆ ಸುರಿಯುತ್ತಿದ್ದ ಮಳೆಯ ಆರ್ಭಟ ಸೋಮವಾರ ತಗ್ಗಿದೆ. ಮಂಗಳವಾರ, ಬುಧವಾರ, ಗುರುವಾರ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ಹೇಳಿದೆ.



ಕರಾವಳಿಯಲ್ಲಿ ಗಂಟೆಗೆ 40ರಿಂದ 50 ಕಿ.ಮೀ. ವೇಗದಲ್ಲಿ ಗಾಳಿ ಬೀಸಲಿದ್ದು, ಮೀನುಗಾರರು ಸಮುದ್ರಕ್ಕೆ ಹೋಗಬಾರದು ಎಂದು ಸೂಚಿಸಲಾಗಿದೆ. ಬೆಂಗಳೂರು ನಗರ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಮಾನ್ಯ ಮಳೆಯಾಗಲಿದೆ ಎಂದು ತಿಳಿಸಿದೆ.

ಮಡಿಕೇರಿ ವರದಿ: ನಗರದಲ್ಲಿ ಸೋಮವಾರ ಅರ್ಧಗಂಟೆಗೂ ಹೆಚ್ಚು ಕಾಲ ಬಿರುಸಿನ ಮಳೆಯಾಯಿತು. ಜಿಲ್ಲೆಯಲ್ಲಿ ಈಚೆಗೆ ಸುರಿದ ಮಳೆಯಿಂದ 1,442 ವಿದ್ಯುತ್ ಕಂಬಗಳು ಮುರಿದು ಬಿದ್ದಿವೆ. 9 ವಿದ್ಯುತ್ ಪರಿವರ್ತಕಗಳು ನಾಶವಾಗಿವೆ.

ಹಾರಂಗಿ ಜಲಾಶಯದ ಮಟ್ಟ 2850.58 ಅಡಿಗೆ ಏರಿಕೆಯಾಗಿದ್ದು, ಭರ್ತಿಯಾಗಲು 9 ಅಡಿಗಳಷ್ಟೇ ಉಳಿದಿದೆ. (ಗರಿಷ್ಠ ಮಟ್ಟ 2,859 ಅಡಿ) ಸದ್ಯ, 2,005 ಕ್ಯುಸೆಕ್ ನೀರು ಜಲಾಶಯಕ್ಕೆ ಹರಿದು ಬರುತ್ತಿದೆ.

ಮರ ಬಿದ್ದು ಸಂಚಾರಕ್ಕೆ ಅಡ್ಡಿ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು–ಉಡುಪಿ ನಗರ ಸೇರಿದಂತೆ ಕರಾವಳಿಯಲ್ಲಿ ಸೋಮವಾರವೂ ಮಳೆಯ ಪ್ರಮಾಣ ಕಡಿಮೆಯಾಗಿದೆ.

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಅಲ್ಲಲ್ಲಿ ಒಂದೆರಡು ಬಾರಿ ಸಾಮಾನ್ಯ ಮಳೆಯಾಗಿದೆ. ದಕ್ಷಿಣ ಕನ್ನಡದಲ್ಲಿ ಒಟ್ಟಾರೆ 1.40 ಸೆಂ.ಮೀ ಮಳೆಯಾಗಿದೆ ಎಂದು ಜಿಲ್ಲಾ ಪ್ರಕೃತಿ ವಿಕೋಪ ನಿರ್ವಹಣಾ ಪ್ರಾಧಿಕಾರ ತಿಳಿಸಿದೆ.

ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕನ್ನು ಕರಾವಳಿಯೊಂದಿಗೆ ಸಂಪರ್ಕಿಸುವ ಚಾರ್ಮಾಡಿ ಘಾಟಿ ಹೆದ್ದಾರಿಯಲ್ಲಿ ಬೃಹತ್ ಮರವೊಂದು ಬಿದ್ದ ಕಾರಣ ಕಲೆಕಾಲ ಸಂಚಾರಕ್ಕೆ ಅಡ್ಡಿಯಾಯಿತು.


ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯ 3ನೇ ತಿರುವಿನ ಬಳಿ ಮರ ಬಿದ್ದಿತ್ತು. ಮೂಡಿಗೆರೆಯತ್ತ ವಾಹನಗಳಿಗೆ ಸಾಗಲು ಸಾಧ್ಯವಾಗದ ಕಾರಣ ಚಿಕ್ಕಮಗಳೂರು ಭಾಗಕ್ಕೆ ತೆರಳುವ ಪ್ರಯಾಣಿಕರು ಪರದಾಡಿದರು. ಕೆಲವು ಬಸ್‌ಗಳನ್ನು ಕೊಟ್ಟಿಗೆಹಾರದಲ್ಲೇ ನಿಲ್ಲಿಸಲಾಯಿತು. ಘಾಟಿಯಲ್ಲಿ ಸುಮಾರು 3 ಕಿ.ಮೀಗಳಷ್ಟು ದೂರ ವಾಹನಗಳು ಸಾಲುಗಟ್ಟಿ ನಿಂತಿದ್ದವು. ಮಳೆಯ ನಡುವೆಯೇ ಪೊಲೀಸ್ ಮತ್ತು ಅರಣ್ಯ ಇಲಾಖೆಯವರು ಮರ ತೆರವುಗೊಳಿಸಿದರು. ಮಂಗಳೂರಿನ ಫಲ್ಗುಣಿ ನದಿಯ ಅಳಿವೆಬಾಗಿಲು ನದಿಯ ದಡದಲ್ಲಿ ಮೇ 30ರಂದು ಬೆಳಿಗ್ಗಿನ ಜಾವ ಮೀನು ಹಿಡಿಯಲು ತೆರಳಿ ನಾಪತ್ತೆಯಾಗಿರುವ ತೋಟ ಬೆಂಗರೆ ನಿವಾಸಿಗಳಾದ ಯಶವಂತ ಕರ್ಕೇರಾ ಮತ್ತು ಕಮಲಾಕ್ಷ ಸಾಲಿಯಾನ್ ಅವರಿಗಾಗಿ ಹುಡುಕಾಟ ಸೋಮವಾರವೂ ಮುಂದುವರಿದಿದೆ.

'ಕ್ಷಮೆ ಕೇಳಿದರಷ್ಟೇ ಚಿತ್ರ ಬಿಡುಗಡೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಟ ಕಮಲ್ ಹಾಸನ್ ಕ್ಷಮೆ ಕೇಳದೇ ಇದ್ದರೆ 'ಥಗ್‌ಲೈಫ್' ಸಿನಿಮಾ ಬಿಡುಗಡೆ ಅವಕಾಶ ನೀಡುವುದಿಲ್ಲ' ಎಂದು ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಎಂ.ನರಸಿಂಹಲು ಹೇಳಿದ್ದಾರೆ.

ಸೋಮವಾರ ಕನ್ನಡ ಪರ ಸಂಘಟನೆಗಳ ಮನವಿ ಸ್ವೀಕರಿಸಿ ಮಾತನಾಡಿದ ಅವರು, 'ಚಿತ್ರರಂಗ ಮಾತ್ರವಲ್ಲದೆ, ಕನ್ನಡ ಪರ ಸಂಘಟನೆಗಳು ಹಾಗೂ ಎಲ್ಲಾ ಪಕ್ಷದ ನಾಯಕರೂ ಕಮಲ್ ಹಾಸನ್ ಮಾತನ್ನು ಖಂಡಿಸಿದ್ದಾರೆ. ಚಿತ್ರಮಂದಿರಗಳ ಮಾಲೀಕರು, ವಿತರಕರು ಬೇರೆ ಸಿನಿಮಾಗಳನ್ನು ಹಾಕಿಕೊಳ್ಳಲು ಸಿದ್ಧತೆ ನಡೆಸಿದ್ದಾರೆ. ಕ್ಷಮೆ ಕೇಳಿದರೂ ತಕ್ಷಣದಲ್ಲೇ ಸಿನಿಮಾ ಬಿಡುಗಡೆಗೆ ಅವಕಾಶ ನೀಡುವುದಿಲ್ಲ. ದೂರು ನೀಡಿದವರ ಜೊತೆ ಚರ್ಚೆ ಮಾಡಿ ಮುಂದಿನ ಕ್ರಮ ಕೈಗೊಳ್ಳುತ್ತೇವೆ. ಕಮಲ್ ಹಾಸನ್ ದುಬೈನಲ್ಲಿದ್ದಾರೆ. ಮಂಗಳವಾರ(ಜೂನ್ 3) ಚೆನ್ನೈಗೆ ಮರಳುತ್ತಿದ್ದಾರೆ ಎನ್ನುವ ಮಾಹಿತಿ ಇದೆ. 'ಥಗ್‌ಲೈಫ್' ಸಿನಿಮಾದ ವಿತರಕರು ಜೂನ್ 3ರ ಮಧ್ಯಾಹ್ನದವರೆಗೆ ಸಮಯ ಕೇಳಿದ್ದಾರೆ' ಎಂದರು.


ನರಸಿಂಹಲು

'ತಮಿಳುನಾಡು ಚಿತ್ರೋದ್ಯಮ ಕಮಲ್ ಹಾಸನ್ ಪರ ನಿಂತಿದೆ. ಆ ಕೆಲಸ ಇಲ್ಲಿ ಆಗಬೇಕು. ನಮ್ಮ ಕಲಾವಿದರ ಸಂಘಕ್ಕೆ ನಾಡಿನ ಬಗ್ಗೆ ಗೌರವ ಇದ್ದರೆ ಅವರೇ ಮುಂದೆ ಬರಬೇಕು. ಕಮಲ್ ಹಾಸನ್ ಸಿನಿಮಾ ಬಿಡುಗಡೆಗೆ ಅವಕಾಶ ನೀಡುವುದಿಲ್ಲ. ತನ್ನ ಈ ನಿರ್ಧಾರದಲ್ಲಿ ವಾಣಿಜ್ಯ ಮಂಡಳಿ ಒಂದು ಹೆಜ್ಜೆಯೂ ಹಿಂದಕ್ಕೆ ಹೋಗಲ್ಲ. ಸಿನಿಮಾದ ಹಂಚಿಕೆದಾರರು ಒಬ್ಬ ಕನ್ನಡಿಗ. ಅವರಿಗೆ ಅನ್ಯಾಯ ಆಗಬಾರದು ಎನ್ನುವ ಉದ್ದೇಶದಿಂದ ಸಮಯ ನೀಡಿದ್ದೇವೆ. ಕಮಲ್ ಹಾಸನ್‌ಗಾಗಿ ನಾವು ಕಾಯುತ್ತಿಲ್ಲ' ಎಂದು ನಿರ್ಮಾಪಕ ಸಾ.ರಾ.ಗೋವಿಂದು ಹೇಳಿದರು.

ಕಮಲ್‌ಗೆ ಕನ್ನಡ ಪುಸ್ತಕ: ನನ್ನ ಪ್ರತಿಭಟನೆ

'ಕನ್ನಡ ಭಾಷೆಯು ತಮಿಳಿನಿಂದ ಹುಟ್ಟಿದ್ದು' ಎನ್ನುವ ನಟ ಕಮಲ್ ಹಾಸನ್ ಅವರ ಮಾತು ವಿವಾದವಾಗಿ ಚರ್ಚೆಯಾಗುತ್ತಿರುವ ಸಂದರ್ಭದಲ್ಲೇ ನಟಿ, ನಿರ್ದೇಶಕಿ ರಂಜನಿ ರಾಘವನ್ ಅವರು ಕಮಲ್ ಹಾಸನ್‌ಗೆ ತಮ್ಮ ಕನ್ನಡ ಕೃತಿಗಳನ್ನು ನೀಡುತ್ತಿರುವ ಫೋಟೊ ಹಂಚಿಕೊಂಡಿದ್ದಾರೆ.

'ಕಮಲ್ ಸರ್‌ಗೆ 'ಕನ್ನಡ ಪುಸ್ತಕ' ಎಂದು ತಮ್ಮ ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದಾರೆ ರಂಜನಿ. ತಮ್ಮ 'ಸ್ವೈಪ್ ರೈಟ್' ಹಾಗೂ 'ಕಥೆ ಡಬ್ಬಿ' ಪುಸ್ತಕಗಳನ್ನು ಕಮಲ್ ಹಾಸನ್ ಅವರಿಗೆ ರಂಜನಿ ನೀಡಿದ್ದಾರೆ.


ಕಮಲ್ ಹಾಸನ್‌ಗೆ ಕನ್ನಡ ಕೃತಿ ನೀಡಿದ ರಂಜನಿ ರಾಘವನ್

ಈ ಬಗ್ಗೆ ಪ್ರತಿಕ್ರಿಯೆ ನೀಡಿರುವ ರಂಜನಿ, 'ನಾನು ನನ್ನ ಸಿನಿಮಾ 'ಡಿಡಿ ಢಿಕ್ಕಿ'ಯ ಟೀಸರ್ ಒಂದನ್ನು ಕಮಲ್ ಹಾಸನ್ ಅವರ ಕೈಯಿಂದ ಲಾಂಚ್ ಮಾಡಿಸಬೇಕು ಎನ್ನುವ ಉದ್ದೇಶದಿಂದ ಮೂರ್ನಾಲ್ಕು ತಿಂಗಳ ಹಿಂದೆ ಹೋಗಿದ್ದೆ. ಆ ಸಂದರ್ಭದಲ್ಲೇ ನನ್ನ ಕೃತಿಗಳನ್ನು ನೀಡಿದ್ದೆ. ನನ್ನ ಸಿನಿಮಾ ಕಥೆ ಕೇಳಿ ಖುಷಿಪಟ್ಟು ಒಂದು ವಿಡಿಯೊ, ಫೋಟೊ ನೀಡಿದ್ದರು. ಅದನ್ನು ಬಳಸಿಕೊಂಡು ನಾವು ಒಂದು ಕಾರ್ಯಕ್ರಮ ಮಾಡುವ ಯೋಜನೆ ಹಾಕಿಕೊಂಡಿದ್ದೆವು. ಇದೀಗ ಕಮಲ್ ಹಾಸನ್ ಅವರ ಹೇಳಿಕೆಯಿಂದ ನಮಗೂ ಬೇಸರವಾಗಿದೆ. ಇಂತಹ ಸಮಯದಲ್ಲಿ ಅವರನ್ನು ನಮ್ಮ ಸಿನಿಮಾಗಾಗಿ ಬಳಸಿಕೊಳ್ಳುವುದು ಸರಿಯಲ್ಲ ಎಂದೆನಿಸಿದೆ. ಈ ಫೋಟೊಗಳನ್ನು ಈಗ ಹಂಚಿಕೊಂಡಿರುವುದಕ್ಕೂ ಕಾರಣವಿದೆ. ಕಮಲ್ ಹಾಸನ್ ಅವರ ಹೇಳಿಕೆಯನ್ನು ಈ ವಿಧಾನದಲ್ಲಿ ನಾನು ಪ್ರತಿಭಟಿಸಿದ್ದೇನೆ. ಜೊತೆಗೆ ಕನ್ನಡದ ಮೇಲಿನ ನನ್ನ ಪ್ರೀತಿ, ಬೆಂಬಲವನ್ನು ವ್ಯಕ್ತಪಡಿಸುವ ರೀತಿಯೂ ಇದಾಗಿದೆ' ಎಂದಿದ್ದಾರೆ.

ಹೈಕೋರ್ಟ್‌ಗೆ 'ಥಗ್ ಲೈಫ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಕಮಲ್ ಹಾಸನ್ ಅಭಿನಯದ 'ಥಗ್ ಲೈಫ್' ಸಿನಿಮಾದ ಬಿಡುಗಡೆ ಹಾಗೂ ಪ್ರದರ್ಶನಕ್ಕೆ ಕರ್ನಾಟಕದಲ್ಲಿ ವಿರೋಧ ವ್ಯಕ್ತವಾಗಿರುವ ಬೆನ್ನಲ್ಲೇ, 'ಸಿನಿಮಾದ ಹಂಚಿಕೆ ಮತ್ತು ಬಿಡುಗಡೆಗೆ ಅಗತ್ಯ ಬಂದೋಬಸ್ತ್ ಒದಗಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ ಸಿನಿಮಾ ನಿರ್ಮಾಣ ಸಂಸ್ಥೆ, 'ರಾಜ್‌ಕಮಲ್ ಫಿಲ್ಮ್ಸ್ ಇಂಟರ್ ನ್ಯಾಷನಲ್' ಹೈಕೋರ್ಟ್ ಮೆಟ್ಟಿಲೇರಿದೆ.

ಈ ಸಂಬಂಧ ಸಂಸ್ಥೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ವಿ.ನಾರಾಯಣನ್ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ಇದು ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇಕಿದೆ.

'ಇದೇ 5ಕ್ಕೆ ಸಿನಿಮಾ ಬಿಡುಗೆಯಾಗಲಿದೆ. ಹೀಗಾಗಿ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯು ಸಿನಿಮಾದ ಬಿಡುಗಡೆ, ಪ್ರದರ್ಶನ ಮತ್ತು ವಿತರಣೆಗೆ ಪ್ರತ್ಯಕ್ಷವಾಗಿ ಅಥವಾ ಅಪ್ರತ್ಯಕ್ಷವಾಗಿ ತೊಂದರೆ ಉಂಟು ಮಾಡುವುದನ್ನು ರಾಜ್ಯ ಗೃಹ ಇಲಾಖೆ ನಿರ್ಬಂಧಿಸಬೇಕು. ನಿರ್ದೇಶಕರು, ನಿರ್ಮಾಪಕರು, ಕಲಾವಿದರು, ಹಂಚಿಕೆದಾರರು ಸೇರಿದಂತೆ, ಸಿನಿಮಾ ಮಂದಿರಗಳಿಗೆ ಮತ್ತು ಸಿನಿಮಾ ನೋಡಲು ಬಂದು ಹೋಗುವ ಜನರಿಗೆ ಸೂಕ್ತ ಭದ್ರತೆ ಒದಗಿಸುವಂತೆ ನಿರ್ದೇಶಿಸಬೇಕು' ಎಂದು ಅರ್ಜಿದಾರ ಸಂಸ್ಥೆಯು ಮನವಿ ಮಾಡಿದೆ.

'ಸಿನಿಮಾ ನಿಷೇಧಿಸಲು ಕರ್ನಾಟಕ ರಾಜ್ಯ ಚಲನಚಿತ್ರ ವಾಣಿಜ್ಯ ಮಂಡಳಿಗೆ ಯಾವುದೇ ಹಕ್ಕು ಇಲ್ಲ. ಸಿನಿಮಾ ಬಿಡುಗಡೆಗೆ ನಿಷೇಧ ಹೇರುವುದರಿಂದ ಕೋಟ್ಯಂತರ ರೂಪಾಯಿ ನಷ್ಟವಾಗಲಿದ್ದು, ಸಿನಿಮಾ ಪ್ರದರ್ಶಿಸುವ ಮತ್ತು ಅದನ್ನು ವೀಕ್ಷಿಸುವ ಜನರ ಹಕ್ಕಿಗೆ ಹಾನಿಯಾಗುತ್ತದೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

ಪ್ರಕರಣದಲ್ಲಿ ರಾಜ್ಯ ಗೃಹ ಇಲಾಖೆ ಕಾರ್ಯದರ್ಶಿ, ಡಿಜಿ–ಐಜಿಪಿ, ಬೆಂಗಳೂರು ನಗರ ಪೊಲೀಸ್ ಆಯುಕ್ತ, ಕೇಂದ್ರೀಯ ಚಲನಚಿತ್ರ ಪ್ರಮಾಣೀಕರಣ ಮಂಡಳಿ (ಸಿಬಿಎಫ್‌ಎಸ್) ಮುಖ್ಯ ಕಾರ್ಯ ನಿರ್ವಾಹಕ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ವಿಕ್ರಮ್ ಉನ್ನಿ ರಾಜಗೋಪಾಲ ವಕಾಲತ್ತು ವಹಿಸಿದ್ದಾರೆ.

ಬುಕರ್ ಪ್ರಶಸ್ತಿಗೆ ಭಾಜನರಾದವರಿಗೆ ತಲಾ ₹10 ಲಕ್ಷ ನಗದು ಪುರಸ್ಕಾರ

ಗ್ರಂಥಾಲಯಗಳಿಗೆ ಬಾನು ಮುಷ್ತಾಕ್ ಕೃತಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುಕರ್ ಪ್ರಶಸ್ತಿ ಪುರಸ್ಕೃತ ಬಾನು ಮುಷ್ತಾಕ್ ಅವರ ಪುಸ್ತಕಗಳನ್ನು ಖರೀದಿಸಿ ಪಂಚಾಯಿತಿ ಗ್ರಂಥಾಲಯಗಳಿಗೆ ನೀಡಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸೋಮವಾರ ಇಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಾನು ಮುಷ್ತಾಕ್ ಹಾಗೂ ದೀಪಾ ಭಾಸ್ತಿ ಅವರನ್ನು ಅಭಿನಂದಿಸಿದರು. ಇದೇ ವೇಳೆ ಇಬ್ಬರಿಗೂ ತಲಾ ₹10 ಲಕ್ಷ ನಗದು ಘೋಷಿಸಿದರು.

ಕನ್ನಡ ಸಾಹಿತ್ಯವನ್ನು ಆಂಗ್ಲ ಭಾಷೆಗೆ ಅನುವಾದ ಮಾಡಲು ಹೆಚ್ಚಿನ ಅನುದಾನ ನೀಡಲಾಗುವುದು. ಪತ್ರಕರ್ತೆಯಾಗಿ, ಲೇಖಕಿಯಾಗಿ, ವಕೀಲರಾಗಿ, ಹೋರಾಟಗಾರ್ತಿಯಾಗಿ ಸಮಾಜದಲ್ಲಿ ಗುರುತಿಸಿಕೊಂಡಿರುವುದೇ ಬಾನು ಮುಷ್ತಾಕ್ ಅವರ ಬರವಣಿಗೆಯ ಶಕ್ತಿ ಎಂದು ವಿಶ್ಲೇಷಿಸಿದರು.

ಲಂಕೇಶ್ ಪತ್ರಿಕೆಯ ಪತ್ರಕರ್ತರಾಗಿ ಬರೆಯುತ್ತಲೇ, ವಕೀಲರಾಗಿ ಬಡವರ ಪರ ವಕಾಲತ್ತು ವಹಿಸುತ್ತಾ ಬಂದವರು. ಹಲವು ಪ್ರಶಸ್ತಿಗಳು ಲಭಿಸಿರುವುದೇ ಬಾನು ಅವರ ಬರವಣಿಗೆಗಳಲ್ಲಿ ಸಮಾಜಮುಖಿ ಸತ್ವ ಇದೆ ಎನ್ನುವುದಕ್ಕೆ ಸಾಕ್ಷ್ಯ. ಮುಸ್ಲಿಂ ಸಮುದಾಯದ ಹೆಣ್ಣುಮಕ್ಕಳ ಧ್ವನಿಯಾಗಿ ಮೌಢ್ಯ ವಿರೋಧಿಸಿ ಬರೆಯುವ ಪ್ರಗತಿಪರ ಎದೆಗಾರಿಕೆ ಬಾನು ಅವರಲ್ಲಿದೆ ಎಂದರು.



ಕನ್ನಡದ ರಾಯಭಾರಿಗಳು: ಬಾನು ಮುಷ್ತಾಕ್ ಮತ್ತು ದೀಪಾ ಭಾಸ್ತಿ ಅವರು ವಿಶ್ವಮಟ್ಟದಲ್ಲಿ ಕನ್ನಡದ ರಾಯಭಾರಿಗಳಾಗಿ ಬೆಳಗಿದ್ದಾರೆ. ಬುಕರ್ ಪ್ರಶಸ್ತಿ ಗೆದ್ದು ಕನ್ನಡದ ಜ್ಯೋತಿಯನ್ನು ಬೆಳಗಿಸಿದ್ದಾರೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದರು.

ದೀಪಾ ಭಾಸ್ತಿ ಮಾತನಾಡಿ, 'ಬುಕರ್ ಪ್ರಶಸ್ತಿ ಬಂದ ಬಳಿಕ ಸಾಮಾಜಿಕ ಮಾಧ್ಯಮಗಳಲ್ಲಿ ನನ್ನ ಸರ್ ನೇಮ್ ಬಗ್ಗೆ ಬಸ್ತಿ, ಭಾಸ್ತಿ, ಬಸದಿ, ಬಸಂತಿ ಎಂಬೆಲ್ಲಾ ಯದ್ವಾತದ್ವಾ ಉಚ್ಚಾರಣೆ ಮಾಡಿದ್ದಾರೆ. ನನ್ನ ಹೆಸರು ದೀಪಾ ಭಾಸ್ತಿ' ಎಂದು ಸ್ಪಷ್ಟಪಡಿಸಿದರು.

'ಬುಕರ್ ಪ್ರಶಸ್ತಿಯ ಕಾರಣಕ್ಕೆ ಕನ್ನಡದ ಘನತೆ ಹೆಚ್ಚಿದೆ ಎನ್ನುವುದಕ್ಕಿಂತ ಇಂಗ್ಲಿಷ್‌ಗೆ ಕನ್ನಡದ ಪರಿಚಯವಾಗಿ ಸಂಪರ್ಕ ಬೆಳೆದ ಕಾರಣ ಆಂಗ್ಲ ಭಾಷೆಗೆ ಹೆಮ್ಮೆ ಬಂದಿದೆ. ಭಾಷೆಯ ಬೆಳವಣಿಗೆಗೆ ಅನುವಾದ ಬಲು ಮುಖ್ಯ. ರಾಜ್ಯದಲ್ಲಿರುವ 234 ಭಾಷೆಗಳ ಬಗ್ಗೆ ಚರ್ಚೆಯಾಗಬೇಕು' ಎಂದು ಅಭಿಪ್ರಾಯಪಟ್ಟರು.

ಸಚಿವರಾದ ಜಮೀರ್ ಅಹಮದ್ ಖಾನ್, ಶಿವರಾಜ ತಂಗಡಗಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಶಾಸಕ ರಿಜ್ವಾನ್ ಅರ್ಷದ್, ವಿಧಾನ ಪರಿಷತ್ ಸದಸ್ಯರಾದ ಕೆ.ಗೋವಿಂದರಾಜು, ನಸೀರ್ ಅಹ್ಮದ್, ಸಾಹಿತಿ ನಟರಾಜ ಹುಳಿಯಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಎಂ.ವಿ.ವೆಂಕಟೇಶ್, ಜಂಟಿ ನಿರ್ದೇಶಕಿ ಬನಶಂಕರಿ ಅಂಗಡಿ ಇದ್ದರು.

'ಕನ್ನಡ ನೆಲದಲ್ಲಿ ಅಸಹಿಷ್ಣುತೆ ಇಲ್ಲ'

ಬಾನು ಮುಷ್ತಾಕ್ ಮಾತನಾಡಿ, 'ಪ್ರಶಸ್ತಿ ಬಂದಾಗಿನಿಂದ ದಿನಕ್ಕೆ 4–5 ಮಾಧ್ಯಮಗಳಿಗೆ ಸಂದರ್ಶನ ನೀಡುತ್ತಿದ್ದೆ. ಪ್ರಶಸ್ತಿ ಪಡೆದ ಮರುದಿನ 8 ತಾಸು ಸಂದರ್ಶನ ನೀಡಿದೆ. 'ಕನ್ನಡ ನೆಲದಲ್ಲಿ ಅಸಹಿಷ್ಣುತೆ ಏಕೆ? ಎಂದು ಸಂದರ್ಶನದ ಕೊನೆಯಲ್ಲಿ ಉತ್ತರ ಭಾರತದ ಮಾಧ್ಯಮದವರು ಪ್ರಶ್ನಿಸಿದರು. ಅದಕ್ಕೆ 'ಕನ್ನಡ ಬಗ್ಗೆ ಈ ರೀತಿಯ ನಿಲುವು ತಳೆಯುವುದು ತಪ್ಪು. ಕನ್ನಡದಷ್ಟು ಸಹಿಷ್ಣುತೆ ಇರುವ ಭಾಷೆಯನ್ನು ಈವರೆಗೂ ನೋಡಿಲ್ಲ. ಅದಕ್ಕೆ ಕನ್ನಡದ ಸಂಸ್ಕೃತಿ ಮುಖ್ಯ ಕಾರಣವಾಗಿದೆ. ಬಹು ಭಾಷೆಗಳಿಗೆ ಇರುವ ಗೌರವವನ್ನು ಅರ್ಥ ಮಾಡಿಕೊಳ್ಳಬೇಕು' ಎಂದು ಹಿಂದಿಯಲ್ಲಿ ಉತ್ತರಿಸಿದೆ ಎಂದು ಹೇಳಿದರು.

'ಈ ವಿಷಯದಲ್ಲಿ ಕನ್ನಡದ ನಿಲುವನ್ನು ಸ್ಪಷ್ಟಪಡಿಸುವ ಅಗತ್ಯ ಹಲವು ಬಾರಿ ಬಂದಿದೆ. ಎಂಟು ಜ್ಞಾನಪೀಠ ಮತ್ತು ಒಂದು ಬುಕರ್ ಪ್ರಶಸ್ತಿಯೊಂದಿಗೆ ಬಹುತ್ವ ಮತ್ತು ಎಲ್ಲಾ ದ್ರಾವಿಡ ಭಾಷೆಗಳೊಂದಿಗೆ ಸಹೋದರತ್ವ ಸಂಬಂಧ ಹೊಂದಿದೆ ಎಂಬುದನ್ನು ಉತ್ತರ ಭಾರತದವರಿಗೆ ಮನವರಿಕೆ ಮಾಡಿದ್ದೇನೆ' ಎಂದರು.

'ತವರು ನೆಲ ನನಗೆ ಸೃಜನಶೀಲತೆಗೆ ಪ್ರೇರಣೆ ನೀಡುವುದರ ಜತೆಗೆ ಜೀವನದ ಹೋರಾಟ, ಬದುಕಿಗೆ ಮುಖಾಮುಖಿಯಾಗಿದೆ' ಎಂದರು.

ಮಂಗಳವಾರ, ಜೂನ್ 3, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 153 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಈಶಾನ್ಯ ರಾಜ್ಯಗಳಲ್ಲಿ ಮಳೆ ಆರ್ಭಟ



ಸಿಕ್ಕಿಂ: ಭೂಕುಸಿತದಿಂದ 3 ಯೋಧರ ಸಾವು, 6 ಯೋಧರು ನಾಪತ್ತೆ

ಅರುಣಾಚಲ, ಅಸ್ಸಾಂ: ಮೃತರ ಸಂಖ್ಯೆ 21ಕ್ಕೆ ಏರಿಕೆ

ಮಣಿಪುರ: 3,365 ಮನೆಗಳಿಗೆ ಹಾನಿ

ಆಳ-ಅಗಲ: ಲೈಂಗಿಕ ದೌರ್ಜನ್ಯ ಬಾಲ್ಯದಲ್ಲೇ ಸಂತ್ರಸ್ತರು

'ಟೆಸ್ಲಾ'ಕ್ಕೆ ಘಟಕ ಸ್ಥಾಪನೆಗೆ ಆಸಕ್ತಿ ಇಲ್ಲ 12

ರವಿಕುಮಾರ್ 5 ಗಂಟೆ ವಿಚಾರಣೆ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
81,373	24,716	₹1 ಲಕ್ಷ (ಬೆಂಗಳೂರು)	₹1.03 ಲಕ್ಷ (ಬೆಂಗಳೂರು)	85.39

ಇನ್ನು ಬಿಬಿಎಂಪಿ, ಬಿಡಿಎ ವ್ಯಾಪ್ತಿಯ ಎಲ್ಲ ನಿವೇಶನಗಳೂ ಸಕ್ರಮ

ಬಿ–ಖಾತಾ: ಸಿಗಲಿದೆ ಸಕಲ ಸೌಲಭ್ಯ?

• ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ಹಾಗೂ ಬಿಡಿಎ ವ್ಯಾಪ್ತಿಯಲ್ಲಿರುವ ಬಿ–ಖಾತಾ ನಿವೇಶನಗಳಿಗೆ ಎ–ಖಾತಾದ ಜೊತೆಗೆ ಸಕಲ ಸೌಲಭ್ಯಗಳೂ ದೊರೆಯಲಿದ್ದು, ಇದಕ್ಕಾಗಿ ಮಾರ್ಗಸೂಚಿ ದರದ ಶೇ 5ರಷ್ಟು ಶುಲ್ಕ ಪಾವತಿಸಬೇಕಾಗುತ್ತದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಬಿ–ಖಾತಾ ನೀಡುವ ಪ್ರಕ್ರಿಯೆಯನ್ನು ಪಾಲಿಕೆ ಸ್ಥಗಿತಗೊಳಿಸಲಿದ್ದು, ಈಗಿರುವ ಅಷ್ಟೂ ಬಿ–ಖಾತಾ ನಿವೇಶನ ಅಥವಾ ಕಟ್ಟಡಗಳಿಗೆ ಎ–ಖಾತಾ ಲಭ್ಯವಾಗಲಿದೆ. ಒಂದು ನಿವೇಶನ ಅಥವಾ ಒಂದು ಬಡಾವಣೆಯ ಜನ, ತಮ್ಮ ನಿವೇಶನಗಳಿಗೆ ಎ–ಖಾತಾ ನೀಡಬೇಕೆಂದು ಪಾಲಿಕೆಗೆ ಅರ್ಜಿ ಸಲ್ಲಿಸಿದರೆ, ಎಲ್ಲವನ್ನೂ ಪರಿಶೀಲಿಸಿ ಕ್ರಮ ಕೈಗೊಳ್ಳಲಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮಾರ್ಗದರ್ಶನದಲ್ಲಿ ಬಿಬಿಎಂಪಿ ನಗರ ಯೋಜನೆ ವಿಭಾಗದ ಅಧಿಕಾರಿಗಳು ನಿಯಮಗಳನ್ನು ರೂಪಿಸಿ, ಅದರ ಪ್ರಸ್ತಾವವನ್ನು ಸರ್ಕಾರದ ಮುಂದಿರಿಸಿದ್ದಾರೆ.

ಬಿ–ಖಾತಾ ನಿವೇಶನ ಅಥವಾ ಕಟ್ಟಡದ ಮುಂದಿನ ಖಾಸಗಿ ರಸ್ತೆ ಕನಿಷ್ಠ 30 ಅಡಿ ಅಗಲ ಇರಬೇಕು. ಇಲ್ಲದಿದ್ದರೆ ಎರಡೂ ಬದಿಯ ನಿವೇಶನಗಳ ಮಾಲೀಕರು ಕೊರತೆ ಇರುವ ವಿಸ್ತೀರ್ಣವನ್ನು ಸಮನಾಗಿ ರಸ್ತೆಗೆ ಬಿಟ್ಟುಕೊಡಲು ಒಪ್ಪಿ, ನೋಂದಣಿ ಮಾಡಿಕೊಡಬೇಕು. ಅಂದರೆ, 25 ಅಡಿ ರಸ್ತೆಯಲ್ಲಿ ಬಿ–ಖಾತಾ ನಿವೇಶನಗಳಿದ್ದರೆ, ಕಡಿಮೆಯಿರುವ ಐದು ಅಡಿಯನ್ನು ಎರಡೂ ಬದಿಯ ನಿವೇಶನಗಳು ತಲಾ ಎರಡೂವರೆ ಅಡಿಯನ್ನು ರಸ್ತೆಗೆ ಬಿಡಬೇಕು. ಇದು ಮೊದಲ ಮಾನದಂಡವಾಗಲಿದೆ.

30 ಅಡಿ ರಸ್ತೆ ನಿಗದಿಯಾದ ಮೇಲೆ, ಬಿಬಿಎಂಪಿ ಕಾಯ್ದೆ ನಿಯಮ 225–226ರಂತೆ ಆ ರಸ್ತೆಯನ್ನು ಸಾರ್ವಜನಿಕ ರಸ್ತೆ ಎಂದು ಘೋಷಿಸಲಾಗುತ್ತದೆ. ಬಿ–ಖಾತಾ ನಿವೇಶನದಾರರು, ನೋಂದಣಿ ಮತ್ತು ಮುದ್ರಾಂಕ ಕಾಯ್ದೆಯಂತೆ ನಿಗದಿ ಪಡಿಸಿರುವ ಮಾರ್ಗಸೂಚಿ ದರದ ಶೇ 5ರಷ್ಟು ಶುಲ್ಕವನ್ನು ಬಿಬಿಎಂಪಿಗೆ ಪಾವತಿಸಬೇಕು. ಸುಮಾರು ₹5 ಸಾವಿರ ಮಾರ್ಗಸೂಚಿ ದರವಿರುವ 30x 40 ಅಡಿ ನಿವೇಶನಕ್ಕೆ ಸುಮಾರು ₹3 ಲಕ್ಷ ಶುಲ್ಕವಾಗುತ್ತದೆ. ಇದರ ಜೊತೆ ಸುಮಾರು ₹25 ಸಾವಿರದಂತೆ ಇತರೆ ವೆಚ್ಚವಾಗುತ್ತದೆ. ಇದನ್ನು ಪಾವತಿಸಿದ ಮೇಲೆ, ಎ–ಖಾತಾ ಲಭ್ಯವಾಗುತ್ತದೆ. ಕಟ್ಟಡ ನಕ್ಷೆ ಸೇರಿದಂತೆ ಪಾಲಿಕೆಯ ಎಲ್ಲ ಸೌಲಭ್ಯ ಹಾಗೂ ಬೆಸ್ಕಾಂ, ಜಲಮಂಡಳಿಯ ಸೌಕರ್ಯಗಳನ್ನೂ ಪಡೆಯಬಹುದು.

ಸರ್ವೆ ಸಂಖ್ಯೆಯ ಭೂಮಿಯಲ್ಲಿ ಬಿ–ಖಾತಾ ಹೊಂದಿರುವ ಎಲ್ಲ ನಿವೇಶನದಾರರು ಒಟ್ಟಿಗೆ ಅಥವಾ ಪ್ರತ್ಯೇಕವಾಗಿಯೂ ಅರ್ಜಿ ಸಲ್ಲಿಸಬಹುದಾಗಿದೆ.

5B ಪುಟ ನೋಡಿ

5%	30 ಅಡಿ	3.5 ಲಕ್ಷ
ಮಾರ್ಗಸೂಚಿ ದರ ಶುಲ್ಕ	ರಸ್ತೆ ಅಗಲ ಕಡ್ಡಾಯ	ಇರುವ ಬಿ–ಖಾತಾಗಳ ಸಂಖ್ಯೆ

ಸೆಟ್‌ಬ್ಯಾಕ್: ಶೇ 15ರವರೆಗೂ ಸಕ್ರಮ?

ಬಿಬಿಎಂಪಿ ವ್ಯಾಪ್ತಿಯಲ್ಲಿ ನಿರ್ಮಿಸಲಾಗಿರುವ ಕಟ್ಟಡಗಳಲ್ಲಿನ ಸೆಟ್‌ಬ್ಯಾಕ್ ಉಲ್ಲಂಘನೆಯನ್ನು ಶೇ 15ರವರೆಗೆ ಸಕ್ರಮಗೊಳಿಸುವ ಪ್ರಸ್ತಾವ ರಾಜ್ಯ ಸರ್ಕಾರದ ಮುಂದಿದೆ.

ವಸತಿ ಕಟ್ಟಡದ ಸೆಟ್‌ಬ್ಯಾಕ್ ನಿಯಮಗಳಿಗೆ ವಿನಾಯಿತಿ ನೀಡಲು ಬಿಬಿಎಂಪಿ ಪ್ರಸ್ತಾವ ಸಲ್ಲಿಸಿದೆ. ಪ್ರಸ್ತುತ ಸೆಟ್‌ಬ್ಯಾಕ್‌ನಲ್ಲಿ ಶೇ 5ರಷ್ಟು ಉಲ್ಲಂಘನೆಯನ್ನು ಸಕ್ರಮಗೊಳಿಸಲು ಸಾಧ್ಯವಿದೆ. ಇದನ್ನು ಶೇ 15ಕ್ಕೆ ಹೆಚ್ಚಿಸಲಾಗುತ್ತದೆ.

ಇದಲ್ಲದೆ, ಚಿಕ್ಕ ನಿವೇಶನಗಳಲ್ಲಿ ನಿರ್ಮಿಸುವ ವಸತಿ ಕಟ್ಟಡದ ಸೆಟ್‌ಬ್ಯಾಕ್ ನಿಯಮಗಳಿಗೂ ವಿನಾಯಿತಿ ನೀಡುವ ಪ್ರಸ್ತಾವವಿದೆ. ರಸ್ತೆ ಬದಿಗೆ 20 ಅಡಿ ಅಗಲ ಹೊಂದಿರುವ ನಿವೇಶನದಲ್ಲಿ ವಸತಿ ಕಟ್ಟಡ ನಿರ್ಮಿಸುವಾಗ ಮುಂಭಾಗದಲ್ಲಿ ಮಾತ್ರ ಮೂರು ಅಡಿ ಜಾಗ (ಸೆಟ್‌ಬ್ಯಾಕ್) ಬಿಡಬೇಕು. 30 ಅಡಿವರೆಗಿನ ನಿವೇಶನದಲ್ಲಿ ಕಟ್ಟಡದ ಹಿಂಬದಿಯಲ್ಲಿ ಜಾಗ ಬಿಡಬೇಕಾದ ಅಗತ್ಯವಿಲ್ಲ. 30 ಅಡಿಯಿಂದ 40 ಅಡಿವರೆಗಿನ ನಿವೇಶನದಲ್ಲಿ ಕಟ್ಟಡ ನಿರ್ಮಿಸುವಾಗ ಅದರ ಅಳತೆಗೆ ಅನುಗುಣವಾಗಿ ಸುತ್ತಲೂ ಜಾಗ ಬಿಡಬೇಕಾಗುತ್ತದೆ. ಈ ಕುರಿತಂತೆ ವಲಯ ನಿಯಮಗಳಿಗೆ ತಿದ್ದುಪಡಿ ತರಬೇಕು ಎಂದು ಸರ್ಕಾರಕ್ಕೆ ಬಿಬಿಎಂಪಿ ಪ್ರಸ್ತಾವ ಸಲ್ಲಿಸಿದೆ.

ನೆಲ ಅಂತಸ್ತು ಪಾರ್ಕಿಂಗ್; 4ನೇ ಅಂತಸ್ತಿಗೆ ಅವಕಾಶ

ನಗರದಲ್ಲಿ ಕಟ್ಟಡದ ನೆಲ ಅಂತಸ್ತನ್ನು ವಾಹನ ನಿಲುಗಡೆಗೆ (ಪಾರ್ಕಿಂಗ್) ಮೀಸಲಿಡುವುದನ್ನು ಕಡ್ಡಾಯಗೊಳಿಸಲಾಗುತ್ತದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ನೆಲ ಅಂತಸ್ತು ಹಾಗೂ 3 ಅಂತಸ್ತಿನ (ಜಿ + 3) ಕಟ್ಟಡಕ್ಕೆ ಅನುಮತಿ ನೀಡಲಾಗುತ್ತಿದೆ. ಇನ್ನು ಮುಂದೆ, ನೆಲ ಅಂತಸ್ತು ವಾಹನ ನಿಲುಗಡೆಗೆ ಸೀಮಿತವಾಗಿರಬೇಕು. ಬೇರೆ ರೀತಿಯಲ್ಲಿ ಬಳಕೆ ಮಾಡಿದರೆ, ಬೆಸ್ಕಾಂ, ಜಲಮಂಡಳಿ ಸಂಪರ್ಕವನ್ನು ಕಡಿತಗೊಳಿಸಲು ಬಿಬಿಎಂಪಿ ನಿಯಮ ರೂಪಿಸಿದೆ.

ನೆಲ ಅಂತಸ್ತನ್ನು ಪಾರ್ಕಿಂಗ್‌ಗೆ ಮೀಸಲಿಟ್ಟ ಕಟ್ಟಡಕ್ಕೆ ನಾಲ್ಕನೇ ಅಂತಸ್ತನ್ನು (ಜಿ + 4) ಅದೇ ಸೆಟ್‌ಬ್ಯಾಕ್‌ನಲ್ಲಿ ನಿರ್ಮಿಸಿಕೊಳ್ಳಲು ಅವಕಾಶ ನೀಡಲಾಗುತ್ತದೆ. 21 ಮೀಟರ್ ಎತ್ತರದವರೆಗಿನ ಕಟ್ಟಡಕ್ಕೆ ಈ ಸೌಲಭ್ಯ ಲಭ್ಯವಾಗಲಿದೆ. ಈಗಾಗಲೇ, ಜಿ + 3 ಕಟ್ಟಡ ನಿರ್ಮಿಸಿರುವವರು, ನೆಲ ಅಂತಸ್ತನ್ನು ಸಂಪೂರ್ಣವಾಗಿ ಪಾರ್ಕಿಂಗ್‌ಗೆ ಮೀಸಲಿಟ್ಟರೆ, ಅವರಿಗೂ ಇನ್ನೊಂದು ಅಂತಸ್ತು ನಿರ್ಮಿಸಿಕೊಳ್ಳಲು ಅವಕಾಶ ನೀಡಲಾಗುತ್ತದೆ. ರಸ್ತೆಯಲ್ಲಿ ವಾಹನ ನಿಲುಗಡೆಯನ್ನು ಕಡಿಮೆ ಮಾಡಲು ಇಂತಹ ವ್ಯವಸ್ಥೆ ಜಾರಿಗೆ ತರಲು ನಿರ್ಧರಿಸಲಾಗಿದೆ ಎಂದು ಬಿಬಿಎಂಪಿ ನಗರ ಯೋಜನೆ ಅಧಿಕಾರಿಗಳು ತಿಳಿಸಿದರು.

ಐಪಿಎಲ್ ಹದಿನೆಂಟು: ಯಾರಿಗುಂಟು ಕಪ್ ನಂಟು?

ರಾಯಲ್ ಚಾಲೆಂಜರ್ಸ್ ಬೆಂಗಳೂರು–ಪಂಜಾಬ್ ಕಿಂಗ್ಸ್ ಮುಖಾಮುಖಿ ಇಂದು

ಅಹಮದಾಬಾದ್: ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಗೆ ಈಗ ಹದಿನೆಂಟರ ಹರೆಯ. ಈ ಶ್ರೀಮಂತ ಲೀಗ್ ಶುರುವಾದಾಗಿನಿಂದಲೂ ಕಣದಲ್ಲಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಪಂಜಾಬ್ ಕಿಂಗ್ಸ್ ತಂಡಗಳಿಗೆ ಒಂದು ಸಲವೂ ಪ್ರಶಸ್ತಿ ಒಲಿದಿಲ್ಲ. ಈ ಸಲ ಯಾರೇ ಗೆದ್ದರೂ ಐಪಿಎಲ್‌ಗೆ ಹೊಸ ಚಾಂಪಿಯನ್ ಲಭಿಸಿದಂತಾಗುತ್ತದೆ.

ಬಲಾಬಲ

36	18	18
ಪಂದ್ಯ	ಆರ್‌ಸಿಬಿ ಜಯ	ಕಿಂಗ್ಸ್ ಗೆಲುವು

ಐಪಿಎಲ್ ಸಾಧನೆ

ಆರ್‌ಸಿಬಿ	ಕಿಂಗ್ಸ್
ರನ್ನರ್ಸ್ ಅಪ್ 2009, 2011 ಮತ್ತು 2016	ರನ್ನರ್ಸ್ ಅಪ್ 2014



ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊಹಾಟ್‌ಸ್ಟಾರ್ ಆ್ಯಪ್

ಸ್ಥಳ: ನರೇಂದ್ರ ಮೋದಿ ಕ್ರೀಡಾಂಗಣ, ಅಹಮದಾಬಾದ್

ಜೆಇಇ: ದಕ್ಷ್, ಶಶಾಂಕ ರಾಜ್ಯಕ್ಕೆ ಮೊದಲಿಗರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಂಟಿ ಪ್ರವೇಶ ಪರೀಕ್ಷೆ (ಜೆಇಇ) ಫಲಿತಾಂಶದಲ್ಲಿ ಬೆಂಗಳೂರಿನ ಶ್ರೀರಾಮ್ ಗ್ಲೋಬಲ್ ಶಾಲೆಯ ವಿದ್ಯಾರ್ಥಿ ದಕ್ಷ್ ತಯಾಲಿಯಾ, ಬೀದರ್ ಜಿಲ್ಲೆ ಭಾಲ್ಕಿ ತಾಲ್ಲೂಕಿನ ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ವಿದ್ಯಾರ್ಥಿ ಶಶಾಂಕ ಭೀಮಶಾ ಬರಗಲಿ ಅಖಿಲ ಭಾರತ ರ‍್ಯಾಂಕಿಂಗ್‌ನಲ್ಲಿ (ಎಐಆರ್) 15ನೇ ಸ್ಥಾನಗಳಿಸುವ ಮೂಲಕ ರಾಜ್ಯಕ್ಕೆ ಮೊದಲಿಗರಾಗಿ ಹೊರಹೊಮ್ಮಿದ್ದಾರೆ.



ದಕ್ಷ್ | ಭವೇಶ್ | ಕುಶಾಗ್ರ ಗುಪ್ತಾ | ಶಶಾಂಕ

360ಕ್ಕೆ 312 ಅಂಕ ಗಳಿಸಿರುವ ದಕ್ಷ್ ತಯಾಲಿಯಾ ಅವರು, ಮುಂಬೈನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ (ಐಐಟಿ) ಸೇರಿ ಕಂಪ್ಯೂಟರ್ ಸೈನ್ಸ್ ಅಧ್ಯಯನ ಮಾಡುವ ಗುರಿ ಹೊಂದಿದ್ದಾರೆ.

'ಕಳೆದ ಎರಡು ವರ್ಷಗಳು ಸವಾಲಿನವುಗಳಾಗಿದ್ದವು. 10ನೇ ತರಗತಿಯಲ್ಲಿದ್ದಾಗ ನನ್ನ ತಯಾರಿ ಆರಂಭವಾಯಿತು. ಆನ್‌ಲೈನ್ ತರಗತಿಗಳು ಮತ್ತು ಅಣಕು ಪರೀಕ್ಷೆಗಳು ನಿಗದಿತ ಗುರಿ ತಲುಪಲು ಸಹಕಾರಿಯಾದವು. ಪೋಷಕರು, ಉಪನ್ಯಾಸಕರು ಮತ್ತು ತರಬೇತಿ ನೀಡಿದ ಸಂಸ್ಥೆಗೆ ಧನ್ಯವಾದ ಸಲ್ಲಿಸುವೆ' ಎಂದು ದಕ್ಷ್ ಪ್ರತಿಕ್ರಿಯಿಸಿದರು.

'ದೇಶದ ಪ್ರತಿಷ್ಠಿತ ಐಐಟಿಯಲ್ಲಿ ಉನ್ನತ ವಿದ್ಯಾಭ್ಯಾಸ ಪೂರ್ಣಗೊಳಿಸಿ, ಸ್ಟಾರ್ಟ್‌ಅಪ್ ಕಂಪನಿ ಆರಂಭಿಸಿ, ನಿರುದ್ಯೋಗ ನಿವಾರಣೆ ಮಾಡುವ ಧ್ಯೇಯ ಇಟ್ಟುಕೊಂಡಿದ್ದೇನೆ' ಎಂದು ಶಶಾಂಕ ಹೇಳಿದರು.

13ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ





ಸನ್ಮಾನ ಬುಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್ ಮತ್ತು ದೀಪಾ ಭಾಸ್ತಿ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಗಳೂರಿನಲ್ಲಿ ಸರ್ಕಾರದ ಪರವಾಗಿ ಸೋಮವಾರ ಅಭಿನಂದಿಸಿದರು. ಶಿವರಾಜ್ ಎಸ್.ತಂಗಡಗಿ, ಜಮೀರ್ ಅಹಮದ್ ಖಾನ್, ಬಸವರಾಜ ಹೊರಟ್ಟಿ, ಕೆ.ಗೋವಿಂದರಾಜು, ರಿಜ್ವಾನ್ ಅರ್ಷದ್ ಜತೆಗಿದ್ದರು ಪ್ರಜಾವಾಣಿ ಚಿತ್ರ

ಪುತ್ತಿಲ ಸೇರಿ 36 ಮಂದಿಯ ಗಡೀಪಾರಿಗೆ ಕ್ರಮ

'ಕೋಮುವಾದಿ' ಮುಖಂಡರ ಮೇಲೆ ನಿಗಾ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ದಕ್ಷಿಣ ಕನ್ನಡ ಜಿಲ್ಲೆಯ ಅಧಿಕಾರಿಗಳು ಮತ್ತು ಕಾಸರಗೋಡು ಎಸ್‌ಪಿ ಸಭೆ
- ಆರೋಪಿಗಳ ಪತ್ತೆಗೆ ಸಹಕಾರ ನೀಡುವಂತೆ ಮನವಿ

ಮಂಗಳೂರು: 'ಜಿಲ್ಲೆಯಲ್ಲಿರುವ ಕೋಮುವಾದಿ ಸಂಘಟನೆಗಳ ಮುಖಂಡರ ಪಟ್ಟಿ ತಯಾರಿಸಿ, ಅವರ ಚಲನವಲನದ ಮೇಲೆ ನಿಗಾ ಇಡುವ ಕಾರ್ಯವನ್ನು ಆರಂಭಿಸಿದ್ದೇವೆ' ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಕೆ. ತಿಳಿಸಿದ್ದಾರೆ.



ಅರುಣ್ ಕುಮಾರ್

ಬಿಜೆಪಿ ಮುಖಂಡ ಅರುಣ್ ಪುತ್ತಿಲ, ಸೌಜನ್ಯಾ ಪರ ಹೋರಾಟ ನಡೆಸುತ್ತಿದ್ದ ಮಹೇಶ್ ಶೆಟ್ಟಿ ತಿಮರೋಡಿ, ವಿಶ್ವ ಹಿಂದೂ ಪರಿಷತ್ ಮುಖಂಡ ಭರತ್ ಕುಮ್ಡೇಲು, ಹಕೀಂ ಕೂರ್ನಡ್ಕ, ಕೆ.ಅಜೀಜ್, ಅಬ್ದುಲ್ ರಹಿಮಾನ್ ಸೇರಿದಂತೆ ಒಟ್ಟು 36 ಮಂದಿಯನ್ನು ಜಿಲ್ಲೆಯಿಂದ ಗಡೀಪಾರು ಮಾಡಲು ಕಾನೂನು ಪ್ರಕ್ರಿಯೆ ಆರಂಭಿಸಲಾಗಿದೆ. ಇವರಲ್ಲಿ ಬೇರೆ ಬೇರೆ ಧರ್ಮದವರು ಸೇರಿದ್ದಾರೆ.

'ಜಿಲ್ಲೆಯಲ್ಲಿ ಕೆಲವು ಹತ್ಯೆಗಳಿಂದಾಗಿ ತಿಂಗಳಿನಿಂದ ಈಚೆಗೆ ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ. 10 ವರ್ಷಗಳ ಈಚೆಗೆ ನಡೆದಿರುವ ಹತ್ಯೆಗಳನ್ನು ವಿಶ್ಲೇಷಿಸಿದಾಗ, ಅವುಗಳ ಆರೋಪಿಗಳು ಕೋಮುವಾದಿ ಸಂಘಟನೆಗಳ ಸಂಪರ್ಕದಲ್ಲಿ ಇದ್ದುದು ಕಂಡುಬಂದಿದೆ. ಮುನ್ನೆಚ್ಚರಿಕಾ ಕ್ರಮವಾಗಿ, ಕೋಮುವಾದಿ ಸಂಘಟನೆಗಳ ಮುಖಂಡರ ಪಟ್ಟಿ ತಯಾರಿಸಿ, ಅವರ ದೈನಂದಿನ ಚಟುವಟಿಕೆ ಮೇಲೆ ನಿಗಾ ಇಡಲು ಕ್ರಮ ವಹಿಸಿದ್ದೇವೆ' ಎಂದು ಅರುಣ್ ಕೆ. ತಿಳಿಸಿದ್ದಾರೆ.

11ನೇ ಪುಟ ನೋಡಿ

ಕಲ್ಲಡ್ಕ ಪ್ರಭಾಕರ ಭಟ್ ವಿರುದ್ಧ ಎಫ್‌ಐಆರ್



ಕಲ್ಲಡ್ಕ ಪ್ರಭಾಕರ ಭಟ್

ಪ್ರಚೋದನಕಾರಿ ಹೇಳಿಕೆ ನೀಡಿದ ಆರೋಪದ ಮೇಲೆ ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ವಿರುದ್ಧ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎಫ್.ಐ.ಆರ್ ದಾಖಲಾಗಿದೆ.

ಬಜಪೆಯಲ್ಲಿ ಹತ್ಯೆಗೊಳಗಾದ ಸುಹಾಸ್ ಶೆಟ್ಟಿ ಶ್ರದ್ಧಾಂಜಲಿ ಕಾರ್ಯಕ್ರಮ ಬಂಟ್ವಾಳ ತಾಲ್ಲೂಕಿನ ಕಾವಳಪಡೂರು ಗ್ರಾಮದ ಮಧ್ವ ಕಲ್ಯಾಣ ಮಂಟಪದಲ್ಲಿ ಮೇ 12ರಂದು ನಡೆದಿತ್ತು. ಸುಮಾರು 500 ಜನ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಭಾಷಣ ಮಾಡುವ ವೇಳೆ ಕಲ್ಲಡ್ಕ ಪ್ರಭಾಕರ್ ಭಟ್ ಅವರು ಸಮಾಜದ ಸ್ವಾಸ್ಥ್ಯ ಕೆಡುವಂತೆ, ಮತೀಯ ಗುಂಪುಗಳ ನಡುವೆ ವೈಮನಸ್ಸು ಉಂಟು ಮಾಡುವಂತೆ, ಪ್ರಚೋದನಾತ್ಮಕವಾಗಿ ಹೇಳಿಕೆ ನೀಡಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಕೆ. ತಿಳಿಸಿದ್ದಾರೆ.

'ಇದರಿಂದಾಗಿ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುವ ಸಾಧ್ಯತೆಗಳಿರುವುದರಿಂದ, ಅವರ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 353(2)ರ ಅಡಿ ಪ್ರಕರಣವನ್ನು ಸೋಮವಾರ ದಾಖಲಿಸಿಕೊಳ್ಳಲಾಗಿದೆ. ಈ ಸಂಬಂಧ ಮುಂದಿನ ಕಾನೂನು ಕ್ರಮ ಕೈಗೊಳ್ಳಲಿದ್ದೇವೆ' ಎಂದು ಅವರು ಹೇಳಿದ್ದಾರೆ.

ನಂದಿ ಗಿರಿಧಾಮದಲ್ಲಿ 19ಕ್ಕೆ ಸಚಿವ ಸಂಪುಟ ಸಭೆ: ಸುಧಾಕರ್

ಗೌರಿಬಿದನೂರು: ಚಿಕ್ಕಬಳ್ಳಾಪುರ ಜಿಲ್ಲೆಯ ನಂದಿಗಿರಿಧಾಮದಲ್ಲಿ ಜೂನ್ 19ರಂದು ಸಚಿವ ಸಂಪುಟ ಸಭೆ ನಡೆಯಲಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನಂದಿ ಗಿರಿಧಾಮದಲ್ಲಿಯೂ ಸಚಿವ ಸಂಪುಟ ಸಭೆ ನಡೆಸುವಂತೆ ಮುಖ್ಯಮಂತ್ರಿ ಅವರಿಗೆ ಪತ್ರ ನೀಡಿದ್ದೆ' ಎಂದು ತಿಳಿಸಿದರು. ಎರಡು ದಿನಗಳ ಹಿಂದೆ ಕರೆ ಮಾಡಿದ್ದ ಮುಖ್ಯಮಂತ್ರಿ ಜೂನ್ 19ಕ್ಕೆ ನಂದಿ ಬೆಟ್ಟದಲ್ಲಿ ಸಚಿವ ಸಂಪುಟದ ಸಭೆ ನಡೆಸಬಹುದಾ ಎಂದು ಕೇಳಿದರು. ಆ ಸಮಯದಲ್ಲಿ ಯಾವುದೇ ಕಾರ್ಯಕ್ರಮ ಇಲ್ಲದಿದ್ದರೆ 19ರಂದೇ ಸಂಪುಟ ಸಭೆ ನಡೆಯಲಿದೆ ಎಂದರು.

ಇ.ವಿ ಚಾರ್ಜಿಂಗ್ ಹಬ್ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಸಮೀಪದ ಬೇಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬೆಸ್ಕಾಂ ಅನುಷ್ಠಾನಗೊಳಿಸಿರುವ ದೇಶದ ಮೊದಲ ಸೌರಶಕ್ತಿ ಆಧಾರಿತ ಸೆಕೆಂಡ್ ಲೈಫ್ ಬ್ಯಾಟರಿ ಇ.ವಿ ಚಾರ್ಜಿಂಗ್ ಕೇಂದ್ರವನ್ನು ಇಂಧನ ಸಚಿವ ಕೆ.ಜೆ. ಜಾರ್ಜ್ ಸೋಮವಾರ ಉದ್ಘಾಟಿಸಿದರು.

ಬೆಸ್ಕಾಂ, ಜರ್ಮನ್ ಕಾರ್ಪೊರೇಷನ್ ಫಾರ್ ಇಂಟರ್ ನ್ಯಾಷನಲ್ ಕೋ ಆಪರೇಷನ್ (ಜಿಐಝಡ್) ಮತ್ತು ಬಾಷ್ ಕಂಪನಿ ಸಹಭಾಗಿತ್ವದಲ್ಲಿ ನಿರ್ಮಾಣಗೊಂಡಿರುವ ಈ ಬೃಹತ್ ಇ.ವಿ ಚಾರ್ಜಿಂಗ್ ಹಬ್‌ನಲ್ಲಿ 23 ವಾಹನಗಳನ್ನು ಏಕಕಾಲದಲ್ಲಿ ಚಾರ್ಜ್ ಮಾಡಬಹುದಾಗಿದೆ.

ಕೇಂದ್ರ ಉದ್ಘಾಟಿಸಿ ಮಾತನಾಡಿದ ಸಚಿವ ಜಾರ್ಜ್, 'ವಿದ್ಯುತ್ ವಾಹನ ಮೂಲಸೌಕರ್ಯ ಅಭಿವೃದ್ಧಿಯಲ್ಲಿ ದೇಶದಲ್ಲೇ ಕರ್ನಾಟಕ ಮುಂಚೂಣಿಯಲ್ಲಿದ್ದು, ಸುಸ್ಥಿರ ಇಂಧನ ಬಳಕೆಯ ಮಾದರಿಯಲ್ಲೂ ನಮ್ಮದೇ ಮೊದಲ ಹೆಜ್ಜೆಯಾಗಿದೆ' ಎಂದರು.

'ವಿದ್ಯುತ್ ವಾಹನಗಳ ಬಳಕೆ ಹೆಚ್ಚಿದಂತೆ ನಮ್ಮ ಸರ್ಕಾರ ಚಾರ್ಜಿಂಗ್ ಕೇಂದ್ರಗಳನ್ನು ಹೆಚ್ಚಿಸುತ್ತಿದೆ. ರಾಜ್ಯದಲ್ಲಿ 5,880 ಇ.ವಿ ಚಾರ್ಜಿಂಗ್ ಕೇಂದ್ರಗಳಿವೆ. ಬೆಂಗಳೂರು ನಗರ ಜಿಲ್ಲೆಯಲ್ಲಿ 4,462 ಇ.ವಿ ಚಾರ್ಜಿಂಗ್ ಕೇಂದ್ರಗಳಿವೆ. ಈ ವರ್ಷ ಹೊಸದಾಗಿ 140 ಚಾರ್ಜಿಂಗ್‌ಗಳನ್ನು ಅಳವಡಿಸಲಾಗಿದೆ. ಮುಂದಿನ ದಿನಗಳಲ್ಲಿ ರಾಜ್ಯದ ಪೆಟ್ರೋಲ್ ಬಂಕ್‌ಗಳಲ್ಲೂ ಇ.ವಿ ಚಾರ್ಜಿಂಗ್ ಕೇಂದ್ರಗಳನ್ನು ಆರಂಭಿಸಲಾಗುತ್ತದೆ' ಎಂದರು.

ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, 'ಎಲೆಕ್ಟ್ರಿಕ್ ವಾಹನಗಳನ್ನು ಬಳಕೆ ಮಾಡುತ್ತಿರುವ ಕ್ಯಾಬ್ ಚಾಲಕರು ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ಚಾರ್ಜಿಂಗ್ ಸ್ಟೇಷನ್ ಆರಂಭಿಸಲಾಗಿದೆ. ಈ ರಸ್ತೆಯಲ್ಲಿ ನಿತ್ಯ 10 ಸಾವಿರಕ್ಕೂ ಹೆಚ್ಚು ಟ್ಯಾಕ್ಸಿಗಳು ಸಂಚರಿಸುತ್ತವೆ. ಅದರಲ್ಲಿ ಇ.ವಿ ಕಾರು ಹೆಚ್ಚಿವೆ' ಎಂದರು.

ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್. ಶಿವಶಂಕರ್, '24 ಗಂಟೆಗಳ ಕಾಲ ಇ.ವಿ ಚಾರ್ಜಿಂಗ್ ಸೌಲಭ್ಯ ನೀಡುವ ದೇಶದ ಮೊದಲ ಚಾರ್ಜಿಂಗ್ ಸ್ಟೇಷನ್ ಇದು. ಬೆಸ್ಕಾಂ ಕೈಗೆಟುಕುವ ದರದಲ್ಲಿ ಇ.ವಿ ಚಾರ್ಜಿಂಗ್ ಸೌಲಭ್ಯ ಒದಗಿಸುತ್ತಿದೆ. ಖಾಸಗಿಯವರ ಚಾರ್ಜಿಂಗ್ ದರ ಬೆಸ್ಕಾಂಗಿಂತ 2 ರಿಂದ 3 ಪಟ್ಟು ಹೆಚ್ಚಿದೆ' ಎಂದು ವಿವರಿಸಿದರು.

ಬೇಗೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಬೈರೇಗೌಡ, ಜಿಐಝಡ್‌ನ ಸಸ್ಟೈನಬಲ್ ಅರ್ಬನ್ ಮೊಬಿಲಿಟಿಯ ಯೋಜನೆಯ ಮುಖ್ಯಸ್ಥ ಮಂಜುನಾಥ್ ಶೇಖರ್, ಯೋಜನಾ ನಿರ್ದೇಶಕ ಕ್ರಿಸ್ಟಿಯನ್ ಕಪ್ಫೆನ್‌ಸ್ಟೈನರ್ ಹಾಜರಿದ್ದರು.



ದೇಶದ ಮೊದಲ ಸೌರಶಕ್ತಿ ಆಧಾರಿತ ಸೆಕೆಂಡ್ ಲೈಫ್ ಬ್ಯಾಟರಿ ಇ.ವಿ ಚಾರ್ಜಿಂಗ್ ಕೇಂದ್ರವನ್ನು ಇಂಧನ ಸಚಿವ ಕೆ.ಜೆ. ಜಾರ್ಜ್ ಉದ್ಘಾಟಿಸಿದರು. ಸಚಿವ ಕೃಷ್ಣ ಬೈರೇಗೌಡ, ಜಿಐಝಡ್ ಮುಖ್ಯಸ್ಥ ಕ್ರಿಸ್ಟನ್, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಎನ್. ಶಿವಶಂಕರ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಭಾರತ ಸರ್ಕಾರ

ಆಯುಷ್ ಸಚಿವಾಲಯ

ನ್ಯಾಷನಲ್ ಧನ್ವಂತರಿ ಆಯುರ್ವೇದ ಅವಾರ್ಡ್ಸ್ 2025 ಪ್ರಶಸ್ತಿಗಾಗಿ ಆಯುರ್ವೇದ ಪರಿಣಿತರಿಂದ ಅರ್ಜಿಗಳನ್ನು/ನಾಮನಿರ್ದೇಶನಗಳನ್ನು ಆಹ್ವಾನಿಸಲಾಗಿದೆ. ಸದರಿ ಪ್ರಶಸ್ತಿಯನ್ನು ಭಾರತ ಸರ್ಕಾರದ ಆಯುಷ್ ಸಚಿವಾಲಯವು ಸ್ಥಾಪಿಸಿದ್ದು, ಭಾರತೀಯ ಔಷಧ ಪದ್ಧತಿಗಳು ಕಾಯ್ದೆ, 2020 ಅಥವಾ ಭಾರತೀಯ ಔಷಧಿಗಳ ಕೇಂದ್ರಿಯ ಪರಿಷತ್ ಕಾಯ್ದೆ, 1970ರ ರಾಷ್ಟ್ರೀಯ ಆಯೋಗದ ನಿಯಮಗಳನ್ವಯ ಅಂಗೀಕೃತ ಅರ್ಹತೆಗಳನ್ನು ಹೊಂದಿರುವ ಮತ್ತು ಆಯುರ್ವೇದ ಕ್ಷೇತ್ರದಲ್ಲಿ ಸಾಕಷ್ಟು ಕೊಡುಗೆ ಸಲ್ಲಿಸಿದವರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ. 23ನೇ ಸೆಪ್ಟಂಬರ್ 2025 ರಂದು ಆಚರಿಸಲಾಗುವ 10ನೇ ಆಯುರ್ವೇದ ದಿನಾಚರಣೆ ದಿನದಂದು ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ವಿವರಗಳನ್ನು ಗೃಹ ವ್ಯವಹಾರಗಳ ಸಚಿವಾಲಯದ http://awards.gov.in ನ್ಯಾಷನಲ್ ಅವಾರ್ಡ್ಸ್ ಪೋರ್ಟಲ್‌ನಲ್ಲಿ ಪರಿಶೀಲಿಸಬಹುದು. 30ನೇ ಜೂನ್, 2025 ರೊಳಗೆ ಅರ್ಜಿಗಳನ್ನು/ನಾಮನಿರ್ದೇಶನಗಳನ್ನು ಸಲ್ಲಿಸತಕ್ಕದ್ದು.

CBC 17201/11/0002/2526

ಭಾವಪೂರ್ಣ ಶ್ರದ್ಧಾಂಜಲಿ



ದಿವಂಗತ ವಿ. ರಂಗಯ್ಯ (78)

ಮರಣ : 02-06-2025

ಇವರ ಅಂತ್ಯಕ್ರಿಯೆಯು ರಾಮನಗರ ಮಾಗಡಿ ರಸ್ತೆಯ ಪುಣ್ಯಕೋಟಿ ಗೋಶಾಲೆ, ಅತ್ತಿಂಗೆರೆ ಗ್ರಾಮ, ಗೊಲ್ಲರದೊಡ್ಡಿ ಇಲ್ಲಿ ದಿನಾಂಕ : 03-06-2025ರ ಮಂಗಳವಾರದಂದು ಬೆಳಿಗ್ಗೆ 10-00 ಗಂಟೆಗೆ ನೆರವೇರಲಿದೆ.

ಮೊ. : 9591056080

ಕರ್ನಾಟಕ ಸರ್ಕಾರ

ತೋಟಗಾರಿಕೆ ಇಲಾಖೆ

ತೋಟಗಾರಿಕೆ ಉಪನಿರ್ದೇಶಕರ ಕಛೇರಿ (ಜಿಪಂ), ಕಬ್ಬನ್ ಪಾರ್ಕ್, ಬೆಂಗಳೂರು ನಗರ ಜಿಲ್ಲೆ-560 001.
ದೂರವಾಣಿ : 080-22860640, E-mail : ddhbangurban@gmail.com

ಸಂ: ತೋಉನಿ/ಜಿಪಂ/ಬೆಂನ/ವಿನಿ/1:3/2025-26 ದಿನಾಂಕ: 02.06.2025

ಪ್ರಕಟಣೆ

ಬೆಂಗಳೂರು ನಗರ ಜಿಲ್ಲೆ: ತೋಟಗಾರಿಕೆ ಇಲಾಖೆ ವತಿಯಿಂದ ಜಿಲ್ಲೆಯ ಆನೇಕಲ್, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಹಾಗೂ ಬೆಂಗಳೂರು ಪೂರ್ವ ತಾಲ್ಲೂಕುಗಳಲ್ಲಿ ತೋಟಗಾರಿಕೆ ಬೆಳೆ ಬೆಳೆಯುವ ರೈತ ಫಲಾನುಭವಿಗಳಿಗೆ 2025-26ನೇ ಸಾಲಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಯೋಜನೆಗಳಡಿ ಸಹಾಯಧನಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

MIDH ರಾಷ್ಟ್ರೀಯ ತೋಟಗಾರಿಕೆ ಮಿಷನ್ ಉಪಯೋಜನೆಯಡಿ ಹೊಸ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ (ಬಾಳೆ, ದ್ರಾಕ್ಷಿ, ದಾಳಿಂಬೆ, ಪೇರಲ, ಡ್ರಾಗನ್ ಫ್ರೂಟ್, ಮಾವು, ಗುಲಾಬಿ, ಸೇವಂತಿಗೆ, ಚೆಂಡು ಹೂವು ಹಾಗೂ ಇತರೆ) ಬೆಳೆಗಳಿಗೆ ಮತ್ತು ಕೃಷಿಹೊಂಡ ನಿರ್ಮಾಣ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುವುದು. ಶೀತಲ ವಾಹನ (Refrigerated van), ಶೀತಲ ಕೊಠಡಿ (Staging room), ಶೀತಲ ಗೃಹ ಘಟಕ (cold storage), ಪ್ರಾಥಮಿಕ ಸಂಸ್ಕರಣಾ ಘಟಕ (primary processing unit), ಹಣ್ಣು ಮಾಗಿಸುವ ಘಟಕ (Ripening chamber) ಮತ್ತು ಸಗಟು ಮಾರುಕಟ್ಟೆ (whole sale Market)/ ಚಿಲ್ಲರೆ ಮಾರುಕಟ್ಟೆ (Retail Market)/ಗ್ರಾಮೀಣ ಮಾರುಕಟ್ಟೆ (Rural Market), ಹಸಿರುಮನೆ (Poly house) ಕಾರ್ಯಕ್ರಮಗಳಡಿ ಆಸಕ್ತ ರೈತ ಫಲಾನುಭವಿಗಳು ಈ ಯೋಜನೆಗಳ ಸೌಲಭ್ಯ ಸದುಪಯೋಗ ಪಡೆದುಕೊಳ್ಳಬಹುದಾಗಿರುತ್ತದೆ.

ಕೇಂದ್ರ ಪುರಸ್ಕೃತ ಪ್ರಧಾನಮಂತ್ರಿ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ- ಪ್ರತಿ ಹನಿಗೆ ಅಧಿಕ ಬೆಳೆ (ಸೂಕ್ಷ್ಮ ನೀರಾವರಿ) ಕಾರ್ಯಕ್ರಮದಡಿ ಹೊಸದಾಗಿ ಹನಿ ನೀರಾವರಿ ಘಟಕ ಅಳವಡಿಸುವ ಎಲ್ಲಾ ವರ್ಗದ ರೈತರಿಗೆ ಮೊದಲ ಗರಿಷ್ಠ 2.00 ಹೆಕ್ಟೇರ್‌ವರೆಗೆ ಶೇ.90 ರಂತೆ ಸಹಾಯಧನ ನೀಡಲಾಗುವುದು. ಹಾಗೂ ಸದರಿ ಯೋಜನೆಯಡಿ ಸಹಾಯಧನ ಪಡೆದು 7 ವರ್ಷಗಳ ನಂತರ ಮತ್ತೊಮ್ಮೆ ಅದೇ ಸರ್ವೆ ನಂಬರಿನ ಜಮೀನಿನಲ್ಲಿ ಬೆಳೆದಿರುವ ತೋಟಗಾರಿಕ ಬೆಳೆಗಳಿಗೆ ಮತ್ತೊಮ್ಮೆ ಹೊಸದಾಗಿ ಸೂಕ್ಷ್ಮ ನೀರಾವರಿ ಘಟಕ ಅಳವಡಿಸಿಕೊಂಡಲ್ಲಿ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ.

CHD ಸಮಗ್ರ ತೋಟಗಾರಿಕೆ ಅಭಿವೃದ್ಧಿ ಉಪಯೋಜನೆಯಡಿ ಹೊಸ ಪ್ರದೇಶ ವಿಸ್ತರಣೆ ಕಾರ್ಯಕ್ರಮದಡಿ ದ್ರಾಕ್ಷಿ, ದಾಳಿಂಬೆ, ಡ್ರಾಗನ್ ಫ್ರೂಟ್ ಹಾಗೂ ನುಗ್ಗೆ ಬೆಳೆಯುವ ರೈತರಿಗೆ ಸಹಾಯಧನ ನೀಡಲಾಗುವುದು.

ಮಧುವನ ಮತ್ತು ಜೇನು ಸಾಕಣೆ ಅಭಿವೃದ್ಧಿ ಯೋಜನೆಯಡಿ ಜೇನು ಪೆಟ್ಟಿಗೆ, ಜೇನು ಕುಟುಂಬ ಹಾಗೂ ಸ್ಟ್ಯಾಂಡ್ ಖರೀದಿಸಿದ ಇತರ ವರ್ಗದವರಿಗೆ ಶೇ75 ರಂತೆ ಹಾಗೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವರ್ಗದವರಿಗೆ ಶೇ.90 ರಂತೆ ಸಹಾಯಧನ ನೀಡಲಾಗುವುದು.

ಸಹಾಯಧನ ಪಡೆಯಲು ಇಚ್ಛಿಸುವ/ಆಸಕ್ತಿಯುಳ್ಳ ಅರ್ಹ ಸಾಮಾನ್ಯ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವರ್ಗದ ರೈತರುಗಳು ಮತ್ತು ಉದ್ದಿಮೆದಾರರು ಸಂಬಂಧಪಟ್ಟ ತಾಲ್ಲೂಕುಗಳ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರುರವರ ಕಛೇರಿಯನ್ನು ಸಂಪರ್ಕಿಸಿ ನಿಗದಿತ ದಾಖಲೆಗಳೊಂದಿಗೆ **10.06.2025**ರೊಳಗಾಗಿ ಅರ್ಜಿಯನ್ನು ಸಲ್ಲಿಸಿ, ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕೆಂದು ಈ ಮೂಲಕ ಪ್ರಕಟಿಸಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:-			
ಬೆಂಗಳೂರು ದಕ್ಷಿಣ ಮತ್ತು ಪೂರ್ವ ತಾಲ್ಲೂಕು 9538953949	ಆನೇಕಲ್ ತಾಲ್ಲೂಕು 9845268382	ಬೆಂಗಳೂರು ಉತ್ತರ ತಾಲ್ಲೂಕು 9036043217	ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ, ಕಬ್ಬನ್ ಪಾರ್ಕ್, ಬೆಂಗಳೂರು 080 22860640

ಸಹಿ/-
ತೋಟಗಾರಿಕೆ ಉಪ ನಿದೇಶಕರು (ಜಿಪಂ)
ಬೆಂಗಳೂರು ನಗರ ಜಿಲ್ಲೆ.

ವಾಸಾಸಂಇ/ವಾ.ಪ್ರ./ಎಸ್‌ಎಸ್‌ಸಿ/1009/2025-26

ಭಾರತೀಯ ಭಾಷಾ ಸಂಸ್ಥಾನ

(ಶಿಕ್ಷಣ ಸಚಿವಾಲಯ, ಉನ್ನತ ಶಿಕ್ಷಣ ಇಲಾಖೆ, ಭಾರತ ಸರ್ಕಾರ)
ಮಾನಸ ಗಂಗೋತ್ರಿ, ಮೈಸೂರು - 570006

ಭಾಷಾ ತರಬೇತಿ ಡಿಪ್ಲೊಮಾ (ಜುಲೈ 2025- ಏಪ್ರಿಲ್ 2026)

ಸರಿಯಾಗಿ ಭರ್ತಿ ಮಾಡಿದ ಅರ್ಜಿಯನ್ನು ಭಾರತೀಯ ಭಾಷಾ ಸಂಸ್ಥಾನ ಮಾನಸ ಗಂಗೋತ್ರಿ ಮೈಸೂರಿನಲ್ಲಿ ಸ್ವೀಕರಿಸಲು ಕೊನೆಯ ದಿನಾಂಕ ಜೂನ್ 30, 2025)

ಮೈಸೂರು, ಭುವನೇಶ್ವರ, ಪುಣೆ, ಪಟಿಯಾಲ, ಸೋಲನ್, ಲಕ್ನೋ ಮತ್ತು ಗುವಾಹಟಿಯಲ್ಲಿರುವ ಏಳು ಪ್ರಾದೇಶಿಕ ಭಾಷಾ ಕೇಂದ್ರಗಳಲ್ಲಿ ಆಧುನಿಕ ಭಾರತೀಯ ಭಾಷೆಗಳಲ್ಲಿ ಅಂದರೆ ಅಸ್ಸಾಮಿ, ಬಂಗಾಳಿ, ಬೋಡೋ, ಡೋಗ್ರಿ, ಗುಜರಾತಿ, ಕನ್ನಡ, ಕಾಶ್ಮೀರಿ, ಕೊಂಕಣಿ, ಮೈಥಿಲಿ, ಮಲಯಾಳಂ, ಮಣಿಪುರಿ, ನೇಪಾಳಿ, ಒರಿಯಾ, ಪಂಜಾಬಿ, ಸಂತಾಲಿ, ಸಿಂಧಿ, ತಮಿಳು, ತೆಲುಗು ಮತ್ತು ಉರ್ದು ಭಾಷೆಗಳಲ್ಲಿ ಭಾಷಾ ತರಬೇತಿ ಡಿಪ್ಲೊಮಾ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಸೇವಾ ನಿರತ ಶಿಕ್ಷಕರು, ಭಾವಿ ಶಿಕ್ಷಕರು, ಸಂಶೋಧಕರು ಮತ್ತು ಸಾರ್ವಜನಿಕರು ತಮ್ಮ ಅರ್ಜಿಗಳನ್ನು ಮೇಲೆ ತಿಳಿಸಿದ ದಿನಾಂಕದಂದು ಅಥವಾ ಅದಕ್ಕೂ ಮೊದಲು ನಿರ್ದೇಶಕರು, ಭಾರತೀಯ ಭಾಷಾ ಸಂಸ್ಥಾನ, ಮಾನಸ ಗಂಗೋತ್ರಿ, ಮೈಸೂರು - 570 006 ಅವರಿಗೆ ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು www.ciil.org/langtraining.php ಗೆ ಭೇಟಿ ನೀಡಿ.

ಅರ್ಜಿಯನ್ನು ಭರ್ತಿ ಮಾಡಿ ಆನ್‌ಲೈನ್ ಅಥವಾ ಆಫ್‌ಲೈನ್ ನಲ್ಲಿ https://ciil.org/admission ಸಲ್ಲಿಸಬಹುದು. ಆನ್‌ಲೈನ್ ನಲ್ಲಿ ಅರ್ಜಿ ಸಲ್ಲಿಸುವ ಅರ್ಜಿದಾರರು ಅರ್ಜಿಯ ಪ್ರತಿಯನ್ನು ಸಹ ಕಳುಹಿಸಬೇಕು ಮತ್ತು ಅರ್ಜಿದಾರರು ಆಫ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಲು ಬಯಸಿದರೆ ವೆಬ್‌ಸೈಟ್‌ನಿಂದ ಅರ್ಜಿಯನ್ನು ಡೌನ್‌ಲೋಡ್ ಮಾಡಿಕೊಂಡು ನಿರ್ದೇಶಕರು, ಭಾರತೀಯ ಭಾಷಾ ಸಂಸ್ಥಾನ, ಮಾನಸ ಗಂಗೋತ್ರಿ, ಮೈಸೂರು - 570 006 ಅವರಿಗೆ ನಿಗದಿತ ದಿನಾಂಕದ ಮೊದಲು ಅಂಚೆ ಮೂಲಕ ಸಲ್ಲಿಸಬಹುದು. ಅರ್ಜಿ ಶುಲ್ಕವನ್ನು QR ಕೋಡ್ ಮೂಲಕ ಅಥವಾ ರಾಷ್ಟ್ರೀಕೃತ ಬ್ಯಾಂಕ್ ಡಿಮ್ಯಾಂಡ್ ಡ್ರಾಫ್ಟ್ ಮೂಲಕ ಪಾವತಿಸಬಹುದು.

ಸಹಿ/-
ನಿರ್ದೇಶಕರು, ಭಾರತೀಯ ಭಾಷಾ ಸಂಸ್ಥಾನ, ಮಾನಸ ಗಂಗೋತ್ರಿ, ಮೈಸೂರು.

CBC 21248/12/0001/2526

11 ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು: ಕೆಪಿಎಸ್‌ಸಿ ಕಾರ್ಯದರ್ಶಿ ರಮಣದೀಪ್ ಚೌಧರಿ, ನೋಂದಣಿ ಮಹಾ ಪರಿವೀಕ್ಷಕ ಕೆ.ಎ. ದಯಾನಂದ ಸೇರಿ ಹನ್ನೊಂದು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಸೋಮವಾರ ಅಧಿಸೂಚನೆ ಹೊರಡಿಸಿದೆ.

ವರ್ಗಾವಣೆಗೊಂಡವರು: ಅಮ್ಲಾನ್ ಆದಿತ್ಯ ಬಿಸ್ವಾಸ್- ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, ನವೀನ್‌ರಾಜ್ ಸಿಂಗ್- ಪ್ರಧಾನ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ವಿ. ಅನ್ಬುಕುಮಾರ್- ಕಾರ್ಯದರ್ಶಿ, ವಸತಿ ಇಲಾಖೆ, ಸಮೀರ್ ಶುಕ್ಲಾ- ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಡಿ. ರಂದೀಪ್- ಕಾರ್ಯದರ್ಶಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ರಮಣದೀಪ್ ಚೌಧರಿ- ಕಾರ್ಯದರ್ಶಿ, ಯೋಜನೆ, ಕಾರ್ಯಕ್ರಮ ಮತ್ತು ಸಾಂಖ್ಯಿಕ ಇಲಾಖೆ, ಪೊಮ್ಮಲ ಸುನಿಲ್‌ಕುಮಾರ್- ನೋಂದಣಿ ಮಹಾ ಪರಿವೀಕ್ಷಕ ಮತ್ತು ಮುದ್ರಾಂಕ ಆಯುಕ್ತ, ಆರ್. ರಾಮಚಂದ್ರನ್ - ವ್ಯವಸ್ಥಾಪಕ ನಿರ್ದೇಶಕ, ಕೆಎಸ್‌ಆರ್‌ಟಿಸಿ, ಕೆ.ಎ. ದಯಾನಂದ- ಆಯುಕ್ತ, ಕರ್ನಾಟಕ ಗೃಹ ನಿರ್ಮಾಣ ಮಂಡಳಿ, ಇಬ್ರಾಹಿಂ ಮೈಗೂರ್- ನಿರ್ದೇಶಕ (ಐಟಿ), ಕೆಎಸ್‌ಆರ್‌ಟಿಸಿ, ಮನೋಜ್‌ಕುಮಾರ್; ಕಾರ್ಯದರ್ಶಿ, ರೇರಾ.

ಸಂಕ್ಷಿಪ್ತ ಸುದ್ದಿ

ಕ್ರಯೊಜೆನಿಕ್ ಎಂಜಿನ್: 3ನೇ ಪರೀಕ್ಷೆ ಯಶಸ್ವಿ

ಬೆಂಗಳೂರು (ಪಿಟಿಐ): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ತಮಿಳುನಾಡಿನ ಮಹೇಂದ್ರಗಿರಿ ಇಸ್ರೊ ಸೆಂಟರ್‌ನಲ್ಲಿ ಪವರ್ ಹೆಡ್ ಟೆಸ್ಟ್ ಆರ್ಟಿಕಲ್‌ನ (ಪಿಹೆಚ್‌ಟಿಎ) ಅರೆ ಕ್ರಯೊಜೆನಿಕ್ ಎಂಜಿನ್ ಅನ್ನು ಸೋಮವಾರ ಯಶಸ್ವಿಯಾಗಿ ಮೂರನೇ ಬಾರಿ ಪರೀಕ್ಷೆ ನಡೆಸುವ ಮೂಲಕ ಮಹತ್ವದ ಮೈಲಿಗಲ್ಲು ಸ್ಥಾಪಿಸಿತು.

ಈ ಪರೀಕ್ಷೆಯು ಭಾರತ ಭವಿಷ್ಯದಲ್ಲಿ ನಡೆಸಲಿರುವ ಸೆಮಿಕ್ರಯೋಜೆನಿಕ್ ಎಂಜಿನ್‌ಗಳ ಪ್ರದರ್ಶನ ಸಾಮರ್ಥ್ಯವನ್ನು ಅವಲೋಕನ ಮಾಡಲು ಮುಖ್ಯವಾದದ್ದು, ಯಂತ್ರದ ಜ್ವಲನಾ ಮತ್ತು ಪ್ರಾರಂಭದ ಅನುಕ್ರಮವನ್ನು ಪರೀಕ್ಷಿಸುವ ಹಂತವಾಗಿ ಈ ಪರೀಕ್ಷೆ ನಡೆದಿದೆ. ಈಗಾಗಲೇ ಇಂತಹ ಎರಡು ಪರೀಕ್ಷೆಗಳನ್ನು ಇಸ್ರೊ ನಡೆಸಿದೆ. ಸೆಮಿಕ್ರಯೋಜೆನಿಕ್ ಎಂಜಿನ್ (ಲಿಕ್ವಿಡ್ ಆಕ್ಸಿಜನ್/ಕೆರೊಸಿನ್ ಎಂಜಿನ್) ಅಭಿವೃದ್ಧಿ ಯೋಜನೆಯ ಮಹತ್ವದ ಘಟ್ಟ ಇದಾಗಿದೆ ಎಂದು ಇಸ್ರೊ ತಿಳಿಸಿದೆ.

ಗ್ರೂಪ್ ಸಿ, ಡಿ ವರ್ಗಾವಣೆಗೆ ಕೌನ್ಸೆಲಿಂಗ್

ಬೆಂಗಳೂರು: ಗ್ರೂಪ್ 'ಸಿ' ಮತ್ತು 'ಡಿ' ನೌಕರರ ವರ್ಗಾವಣೆಯನ್ನು ಕೌನ್ಸೆಲಿಂಗ್ ಮೂಲಕ ನಡೆಸಲು ಶಾಲಾ ಶಿಕ್ಷಣ ಇಲಾಖೆ ಸುತ್ತೋಲೆ ಹೊರಡಿಸಿದೆ. ಕೌನ್ಸೆಲಿಂಗ್ ಮೂಲಕ ವರ್ಗಾವಣೆ ನಡೆಸಲು ಈಗಾಗಲೇ ಇಲಾಖೆ ತಂತ್ರಾಂಶವನ್ನು ಅಭಿವೃದ್ಧಿಪಡಿಸಿದೆ. ಈ ತಂತ್ರಾಂಶ ಬಳಸಿಕೊಂಡು ಆಯಾ ವಿಭಾಗಗಳ ವ್ಯಾಪ್ತಿಯಲ್ಲಿ 'ಸಿ' ಮತ್ತು 'ಡಿ' ನೌಕರರ ವರ್ಗಾವಣೆ ಪ್ರಕ್ರಿಯೆಯನ್ನು ಆನ್‌ಲೈನ್ ಮೂಲಕ ಆರಂಭಿಸಬೇಕು. ಪದವಿಪೂರ್ವ ಶಿಕ್ಷಣ ಇಲಾಖೆಯಲ್ಲೂ ಇದೇ ನಿಯಮ ಅನುಸರಿಸಬೇಕು. ಕೌನ್ಸೆಲಿಂಗ್‌ನಲ್ಲಿ ಎಲ್ಲರಿಗೂ ಸ್ಥಳದಲ್ಲೇ ವರ್ಗಾವಣೆ ಆದೇಶ ನೀಡಬೇಕು ಎಂದು ಇಲಾಖೆ ಪ್ರಧಾನ ಕಾರ್ಯದರ್ಶಿ ವಿ. ರಶ್ಮಿ ಮಹೇಶ್ ಸೂಚಿಸಿದ್ದಾರೆ.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್

CENTUM

CIN: L85110KA1993PLC013869
ನೋಂದಾಯಿತ ಕಛೇರಿ: ನಂ.44 ಕೆ.ಎಚ್.ಬಿ. ಕೈಗಾರಿಕಾ ಪ್ರದೇಶ, ಯಲಹಂಕ ನ್ಯೂ ಟೌನ್, ಬೆಂಗಳೂರು - 560 106
Tel: 080 - 4143 6000 Fax: 080 - 4143 6005
Email: investors@centumelectronics.com Website: www.centumelectronics.com

ಕಂಪನಿಯ ಪೋಸ್ಟಲ್ ಬ್ಯಾಲೆಟ್‌ನ ಸೂಚನೆ

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಷೇರುದಾರರಿಗೆ,

ಆತ್ಮೀಯ ಸದಸ್ಯರೇ,

ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, 2013ರ ಕಂಪನಿಗಳ ಕಾಯಿದೆಯ ("**ದಿ ಆಕ್ಟ್**") ಸೆಕ್ಷನ್ 108 ಮತ್ತು ಇತರ ಅನ್ವಯವಾಗುವ ನಿಬಂಧನೆಗಳೊಂದಿಗೆ ಓದಿದ ಸೆಕ್ಷನ್ 110 ಗೆ ಅನುಸಾರವಾಗಿ ಸೂಚನೆಯನ್ನು ನೀಡಲಾಗಿದೆ. ಇದನ್ನು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 (ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ) ಜೊತೆಯಲ್ಲಿ ಓದಲಾಗುತ್ತದೆ, ಸದ್ಯಕ್ಕೆ ಜಾರಿಯಲ್ಲಿರುವ ಯಾವುದೇ ಶಾಸನಬದ್ಧ ಮಾರ್ಪಾಡು(ಗಳು) ಅಥವಾ ಮರು-ಅನುಷ್ಠಾನ(ಗಳು) ಸೇರಿದಂತೆ. ಈ ಸೂಚನೆಯು ಸೆಕ್ಯುರಿಟೀಸ್ ಅಂಡ್ ಎಕ್ಸ್ಚೇಂಜ್ ಬೋರ್ಡ್ ಆಫ್ ಇಂಡಿಯಾದ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) ನಿಯಮಗಳು, 2015 (ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ) (**"SEBI LODR"**) ಮತ್ತು ಹೊರಡಿಸಲಾದ ಸಾಮಾನ್ಯ ಸಭೆಗಳ ಮೇಲಿನ ಕಾರ್ಯದರ್ಶಿಯ ಮಾನದಂಡದ 44 ರ ಅನುಸಾರವಾಗಿದೆ. ಇನ್ಸ್ಟಿಟ್ಯೂಟ್ ಆಫ್ ಕಂಪನಿ ಸೆಕ್ರೆಟರೀಸ್ ಆಫ್ ಇಂಡಿಯಾ ("**SS-2**") ಮೂಲಕ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಈ ಕೆಳಗಿನ ಸಾಮಾನ್ಯ ಸುತ್ತೋಲೆಗಳ ಮೂಲಕ ಹೊರಡಿಸಿದ ಸಡಿಲಿಕೆಗಳು ಮತ್ತು ಸ್ಪಷ್ಟೀಕರಣಗಳು ಸಹ ಅನ್ವಯಿಸುತ್ತವೆ: 14/2020 ದಿನಾಂಕ 8ನೇ ಏಪ್ರಿಲ್ 2020, 17/2020 ದಿನಾಂಕ 13ನೇ ಏಪ್ರಿಲ್ 2020, 22/2020 ದಿನಾಂಕ 15ನೇ ಜೂನ್ 2020, 28/2020 ಸೆಪ್ಟೆಂಬರ್ 33 2020, 39/2020 ದಿನಾಂಕ 31ನೇ ಡಿಸೆಂಬರ್ 2020, 10/2021 ದಿನಾಂಕ 23ನೇ ಜೂನ್ 2021, 20/2021 ದಿನಾಂಕ 8ನೇ ಡಿಸೆಂಬರ್ 2021, 3/2022 ದಿನಾಂಕ 5ನೇ ಮೇ 2022, 11/2022 ದಿನಾಂಕ 2022 ಸೆಪ್ಟೆಂಬರ್ 2022 ದಿನಾಂಕ 2028ನೇ ದಿನಾಂಕ 2023, 09/2024 ದಿನಾಂಕ 19ನೇ ಸೆಪ್ಟೆಂಬರ್ 2024, ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ (ಒಟ್ಟಾರೆಯಾಗಿ "**MCA ಸುತ್ತೋಲೆಗಳು**" ಎಂದು ಉಲ್ಲೇಖಿಸಲಾಗುತ್ತದೆ), ಯಾವುದೇ ಇತರ ಅನ್ವಯವಾಗುವ ಕಾನೂನು, ನಿಯಮಗಳು ಮತ್ತು ನಿಬಂಧನೆಗಳು, ಯಾವುದಾದರೂ ಇದ್ದರೆ, ಮತ್ತೆ ಪ್ರಸ್ತಾವಿತ ವಿಶೇಷ ಕೆಳಗೆ ಲಗತ್ತಿಸಲಾದ ನಿರ್ಣಯಗಳು ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ("**ಕಂಪನಿ**"/ "**CEL**") ಸದಸ್ಯರ ಅನುಮೋದನೆಗಾಗಿ ರಿಮೋಟ್ ಇ-ವೋಟಿಂಗ್ ಪ್ರಕ್ರಿಯೆಯ ("**ರಿಮೋಟ್ ಇ-ವೋಟಿಂಗ್**") ಮೂಲಕ ಪೋಸ್ಟಲ್ ಬ್ಯಾಲೆಟ್ ಮೂಲಕ ಪರಿಗಣಿಸಲಾಗುತ್ತದೆ.

ಐಟಂ ಸಂಖ್ಯೆ 1 : ಕಂಪನಿಯ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿ ಶ್ರೀ ಅಪ್ಪಾರಾವ್ ವಿ ಮಲ್ಲವರಪು (ಡಿಐಎನ್ : 00286308) ಅವರನ್ನು ಮರು ನೇಮಕ ಮಾಡುವುದು.

ಐಟಂ ಸಂಖ್ಯೆ 2 : ಶ್ರೀ ಅಪ್ಪಾರಾವ್ ವಿ ಮಲ್ಲವರಪು ಅವರು ಎಪ್ಪತ್ತು ವರ್ಷ ವಯಸ್ಸನ್ನು ತಲುಪಿದ ನಂತರ ಕಂಪನಿಯ ಅಧ್ಯಕ್ಷರು ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿ ಮುಂದುವರಿಯುವ ಬಗ್ಗೆ.

ಐಟಂ ಸಂಖ್ಯೆ 3 : ಕಂಪನಿಯ ಸ್ವತಂತ್ರ ನಿರ್ದೇಶಕರಾಗಿ ಡಾ. ಉದಯಂತ್ ಮಲ್ಹೋತ್ರಾ (ಡಿಐಎನ್ : 00053714) ಅವರನ್ನು ನೇಮಕ ಮಾಡುವುದು.

ಐಟಂ ಸಂಖ್ಯೆ 4 : ಕಾರ್ಯನಿರ್ವಾಹಕ ನಿರ್ದೇಶಕರಿಂದ ಜಂಟಿ ವ್ಯವಸ್ಥಾಪಕ ನಿರ್ದೇಶಕರಾಗಿ ಶ್ರೀ ನಿಖಿಲ್ ಮಲ್ಲವರಪು (ಡಿಐಎನ್ : 00288551) ಅವರ ಹುದ್ದೆ ಬದಲಾವಣೆ ಮಾಡುವುದು.

ಎಂಸಿಎ ಸುತ್ತೋಲೆಗಳ ಪ್ರಕಾರ, ಜೂನ್ 2, 2025 ರ ಅಂಚೆ ಮತಪತ್ರದ ಸೂಚನೆಯನ್ನು ("**ಸೂಚನೆ**") ಠೇವಣಿ ಭಾಗವಹಿಸುವವರು / ಕಂಪನಿ / ನೋಂದಣಿದಾರರು ಮತ್ತು ಷೇರು ವರ್ಗಾವಣೆ ಏಜೆಂಟ್‌ಗಳು ("**ಆರ್‌ಟಿಎ**") ಅಂದರೆ ಕೆಎಫ್‌ಐಎನ್ ಟೆಕ್ನಾಲಜೀಸ್ ಲಿಮಿಟೆಡ್‌ನಲ್ಲಿ ನೋಂದಾಯಿಸಲಾದ ಕಂಪನಿಯ ಸದಸ್ಯರಿಗೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಕಳುಹಿಸಲಾಗಿದೆ. ಸೂಚನೆಯ ಎಲೆಕ್ಟ್ರಾನಿಕ್ ರವಾನೆಯ ಪ್ರಕ್ರಿಯೆಯು ಜೂನ್ 2, 2025 ರಂದು ಪೂರ್ಣಗೊಂಡಿದೆ. ರಿಮೋಟ್ ಇ-ವೋಟಿಂಗ್ ಪ್ರಕ್ರಿಯೆ ಮತ್ತು ವಿಧಾನವನ್ನು ಸೂಚಿಸುವ ಅಂಚೆ ಮತಪತ್ರದ ಸೂಚನೆಯು ಕಂಪನಿಯ ವೆಬ್‌ಸೈಟ್ www.centumelectronics.com ನಲ್ಲಿ, ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ ಅಂದರೆ ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ ಮತ್ತು ಕೆಎಫ್‌ಐಎನ್ ಟೆಕ್ನಾಲಜೀಸ್ ಲಿಮಿಟೆಡ್ ("ಕೆಫಿನ್ ಟೆಕ್") ನ ವೆಬ್‌ಸೈಟ್ **https://evoting.kfintech.com** ನಲ್ಲಿ ಲಭ್ಯವಿದೆ.

ಈ ಸೂಚನೆ ಮತ್ತು ಕಾಯ್ದೆಯ ಸೆಕ್ಷನ್ 102 ರ ಅಡಿಯಲ್ಲಿ ವಿವರಣಾತ್ಮಕ ಹೇಳಿಕೆಯಲ್ಲಿ ಉಲ್ಲೇಖಿಸಲಾದ ಸಂಬಂಧಿತ ದಾಖಲೆಗಳನ್ನು ಪರಿಶೀಲಿಸಲು ಬಯಸುವ ಸದಸ್ಯರು ತಮ್ಮ ನೋಂದಾಯಿತ ಇಮೇಲ್ ವಿಳಾಸಗಳಿಂದ investors@centumelectronics.com ಗೆ ರಿಮೋಟ್ ಇ-ವೋಟಿಂಗ್‌ನ ಕೊನೆಯ ದಿನಾಂಕದವರೆಗೆ ಅಂದರೆ ಬುಧವಾರ, ಜುಲೈ 2, 2025 ರವರೆಗೆ ತಮ್ಮ ಹೆಸರು, ಫೋಲಿಯೊ ಸಂಖ್ಯೆ / ಕ್ಲೈಂಟ್ ಐಡಿ ಮತ್ತು ಡಿಪಿ ಐಡಿ ಮತ್ತು ಅವರು ಪರಿಶೀಲಿಸಲು ಬಯಸುವ ದಾಖಲೆಗಳನ್ನು ನಮೂದಿಸುವ ಇಮೇಲ್ ಅನ್ನು ಕಳುಹಿಸಬಹುದು.

ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಕಂಪನಿಗಳು (ನಿರ್ವಹಣೆ ಮತ್ತು ಆಡಳಿತ) ನಿಯಮಗಳು 2014 (**"ನಿಯಮಗಳು"**) ರ ನಿಯಮ 20 ರೊಂದಿಗೆ ಓದಲಾದ ಕಾಯ್ದೆಯ ಸೆಕ್ಷನ್ 108 ರ ನಿಬಂಧನೆಗಳ ಪ್ರಕಾರ, ಲಿಸ್ಟಿಂಗ್ ನಿಯಮಗಳ ನಿಯಮ 44 ಮತ್ತು ಭಾರತದ ಕಂಪನಿ ಕಾರ್ಯದರ್ಶಿಗಳ ಸಂಸ್ಥೆ ಹೊರಡಿಸಿದ SS-2 ರ ಪ್ರಕಾರ, ಕಂಪನಿಯು ತನ್ನ ಸದಸ್ಯರು ವಹಿವಾಟು ನಡೆಸಲು ಉದ್ದೇಶಿಸಿರುವ ವ್ಯವಹಾರಕ್ಕೆ ಸಂಬಂಧಿಸಿದಂತೆ ಎಲೆಕ್ಟ್ರಾನಿಕ್ ವಿಧಾನದ ಮೂಲಕ ಮತ ಚಲಾಯಿಸಲು ಅನುವು ಮಾಡಿಕೊಡಲು KFintech ಮೂಲಕ https://evoting.kfintech.com/ ನಲ್ಲಿ ಎಲೆಕ್ಟ್ರಾನಿಕ್ ಮತದಾನ ಸೌಲಭ್ಯವನ್ನು ಒದಗಿಸುತ್ತಿದೆ.

ನಿಯಮಗಳು, SS-2 ಮತ್ತು ಎಂಸಿಎ ಸುತ್ತೋಲೆಗಳೊಂದಿಗೆ ಓದಲಾದ ಕಾಯ್ದೆಗೆ ಅನುಸಾರವಾಗಿ ವಿವರಗಳು ಈ ಕೆಳಗಿನಂತಿವೆ:

a. ಶುಕ್ರವಾರ, ಮೇ 30, 2025ರ ಶುಕ್ರವಾರದಂತೆ ("**ಕಟ್-ಆಫ್ ದಿನಾಂಕ**") ಭೌತಿಕ ರೂಪದಲ್ಲಿ ಅಥವಾ ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ಮಾತ್ರ ರಿಮೋಟ್ ಇ-ಮತದಾನದ ಮೂಲಕ ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಅರ್ಹರಾಗಿರುತ್ತಾರೆ. ಕಟ್-ಆಫ್ ದಿನಾಂಕದಂದು ಸದಸ್ಯರಲ್ಲದ ವ್ಯಕ್ತಿಯು ಅಂಚೆ ಮತಪತ್ರದ ಸೂಚನೆಯನ್ನು ಮಾಹಿತಿ ಉದ್ದೇಶಗಳಿಗಾಗಿ ಮಾತ್ರ ಪರಿಗಣಿಸಬೇಕು.

b. ಇಮೇಲ್ ವಿಳಾಸಗಳನ್ನು ನೋಂದಾಯಿಸುವ/ಅಪ್‌ಡೇಟ್ ಮಾಡುವ ವಿಧಾನ: ಇಮೇಲ್ ವಿಳಾಸವನ್ನು ನೋಂದಾಯಿಸದ ಸದಸ್ಯರು, ಈ ಕೆಳಗಿನ ಕಾರ್ಯವಿಧಾನದ ಮೂಲಕ ನೋಂದಾಯಿಸಲು / ನವೀಕರಿಸಲು ವಿನಂತಿಸಲಾಗಿದೆ.

i) ಡಿಮೆಟೀರಿಯಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇಮೇಲ್ ವಿಳಾಸವನ್ನು ತಮ್ಮ ಡಿಪಿಗಳೊಂದಿಗೆ ನೋಂದಾಯಿಸಲು / ನವೀಕರಿಸಲು ವಿನಂತಿಸಲಾಗಿದೆ.

ii) ಭೌತಿಕ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸಲು/ನವೀಕರಿಸಲು ವಿನಂತಿಸಲಾಗಿದೆ, ಇಮೇಲ್ ಕೋರಿಕೆಯೊಂದಿಗೆ ಸರಿಯಾಗಿ ಸಹಿ ಮಾಡಿದ ಫಾರ್ಮ್ ISR-1 ಅನ್ನು KFintech ಗೆ ಇಮೇಲ್ ಐಡಿ einward.ris@kfintech.com ಗೆ ಕಳುಹಿಸಲು ವಿನಂತಿಸಲಾಗಿದೆ.

c. ಇ-ಮತದಾನದ ಮೂಲಕ ಮತ ಚಲಾಯಿಸುವ ವಿಧಾನ: ಇ-ಮತದಾನ ವ್ಯವಸ್ಥೆಯ ಮೂಲಕ ಅಂಚೆ ಮತಪತ್ರದ ಸೂಚನೆಯಲ್ಲಿ ಸೂಚಿಸಿರುವಂತೆ ಸದಸ್ಯರು ತಮ್ಮ ಮತಗಳನ್ನು ರಿಮೋಟ್ ಆಗಿ ಚಲಾಯಿಸಲು ಅವಕಾಶವನ್ನು ಹೊಂದಿರುತ್ತಾರೆ. ಇ-ಮತದಾನದ ಮೂಲಕ ಮತ ಚಲಾಯಿಸುವ ವಿವರವಾದ ಕಾರ್ಯವಿಧಾನವನ್ನು ಅಂಚೆ ಮತಪತ್ರದ ಸೂಚನೆಯಲ್ಲಿ ಒದಗಿಸಲಾಗಿದೆ. ವಿವರಗಳನ್ನು ಕಂಪನಿಯ ಜಾಲತಾಣದಲ್ಲೂ ನೀಡಲಾಗಿದೆ.

d. ರಿಮೋಟ್ ಇ-ಮತದಾನದ ಅವಧಿಯು ಮಂಗಳವಾರ, ಜೂನ್ 3, 2025 ಬೆಳಿಗ್ಗೆ 9:00 ಗಂಟೆಗೆ ಪ್ರಾರಂಭವಾಗಿ ಬುಧವಾರ, ಜುಲೈ 2, 2025 ರಂದು ಸಂಜೆ 5:00 ಗಂಟೆಗೆ ಕೊನೆಗೊಳ್ಳುತ್ತದೆ. ರಿಮೋಟ್ ಇ-ಮತದಾನ ಮಾಡ್ಯೂಲ್ ಅನ್ನು ಮತದಾನಕ್ಕಾಗಿ ಕೆಫಿನ್ ಟೆಕ್ ನಿಷ್ಕ್ರಿಯಗೊಳಿಸುತ್ತದೆ ಮತ್ತು ಮತದಾನಕ್ಕೆ ಮತ್ತೆ ಅವಕಾಶವಿರುವುದಿಲ್ಲ.

e. ಒಮ್ಮೆ ನಿರ್ಣಯದ ಮೇಲೆ ಮತ ಚಲಾಯಿಸಿದ ನಂತರ, ಸದಸ್ಯರು ಅದನ್ನು ನಂತರ ಬದಲಾಯಿಸಲು ಅವಕಾಶವಿರುವುದಿಲ್ಲ.

f. ಕಟ್-ಆಫ್ ದಿನಾಂಕದಂದು ಕಂಪನಿಯ ಎಲ್ಲಾ ಸದಸ್ಯರು (ಕಂಪನಿ/ಆರ್.ಟಿ.ಎ/ಡಿಪಾಸಿಟರಿಗಳಲ್ಲಿ ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದ ಕಾರಣ ಸೂಚನೆಯನ್ನು ಸ್ವೀಕರಿಸದ ಸದಸ್ಯರು ಸೇರಿದಂತೆ) ಅಂಚೆ ಮತಪತ್ರದ ಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಪ್ರಕ್ರಿಯೆಗೆ ಅನುಗುಣವಾಗಿ ಪ್ರಸ್ತಾವಿತ ವ್ಯವಹಾರಕ್ಕೆ ಸಂಬಂಧಿಸಿದಂತೆ ಮತ ಚಲಾಯಿಸಲು ಅರ್ಹರಾಗಿರುತ್ತಾರೆ.

g. ಅಂಚೆ ಮತಪತ್ರದ ಸಮಯದಲ್ಲಿ ರಿಮೋಟ್ ಇ-ಮತದಾನವನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ಪರಿಶೀಲಿಸಲು ಕಂಪನಿ ಕಾರ್ಯದರ್ಶಿ (ಸಿಪಿ ಸಂಖ್ಯೆ 4738) ಶ್ರೀ ಎಸ್. ಪಿ. ನಾಗರಾಜನ್ ಅವರನ್ನು ಪರಿಶೀಲನಾಧಿಕಾರಿಯಾಗಿ ನೇಮಿಸಲಾಗಿದೆ.

h. ಮತದಾನದ ಫಲಿತಾಂಶಗಳನ್ನು ಬಿಎಸ್‌ಇ ಲಿಮಿಟೆಡ್ ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್ಚೇಂಜ್ ಮತ್ತು ಕೆಫಿನ್‌ಟೆಕ್ ಗೆ ತಿಳಿಸಲಾಗುವುದು ಮತ್ತು ಅದು ಶುಕ್ರವಾರ, ಜುಲೈ 4, 2025 ರಂದು ಅಥವಾ ಅದಕ್ಕೂ ಮೊದಲು ಆಯಾ ವೆಬ್‌ಸೈಟ್‌ಗಳಲ್ಲಿ ಲಭ್ಯವಿರುತ್ತದೆ.

i. ಇ-ಮತದಾನದ ಬಗ್ಗೆ ವಿವರವಾದ ಸೂಚನೆಗಳಿಗಾಗಿ ಸದಸ್ಯರು ಅಂಚೆ ಮತಪತ್ರದ ಸೂಚನೆಯನ್ನು ನೋಡಬಹುದು. ಸದಸ್ಯರು ದಯವಿಟ್ಟು https://evoting.kfintech.com ನ ಇ-ಮತದಾನದ ವೆಬ್‌ಸೈಟ್‌ನ ಡೌನ್ಲೋಡ್ ವಿಭಾಗದಲ್ಲಿ ಲಭ್ಯವಿರುವ 'ಇ-ಮತದಾನದ ಬಳಕೆದಾರರ ಕೈಪಿಡಿಯನ್ನು' ನೋಡಿ. ಇ-ಮತದಾನ ಪ್ರಕ್ರಿಯೆಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗಳು/ಕುಂದುಕೊರತೆಗಳ ಸಂದರ್ಭದಲ್ಲಿ ಅಥವಾ ಯಾವುದೇ ಸಹಾಯದ ಅಗತ್ಯವಿದ್ದರೆ ನೀವು ಸಂಪರ್ಕಿಸಬಹುದು:

ಎನ್.ಎಸ್.ಡಿ.ಎಲ್. ಜಾಲತಾಣದಲ್ಲಿ ಯಾವುದೇ ತಾಂತ್ರಿಕ ಸಮಸ್ಯೆಯ ಸಂದರ್ಭದಲ್ಲಿ ಸಂಪರ್ಕ ವಿವರಗಳು	ಸಿ.ಡಿ.ಎಸ್.ಎಲ್. ಜಾಲತಾಣದಲ್ಲಿ ಯಾವುದೇ ತಾಂತ್ರಿಕ ಸಮಸ್ಯೆಯ ಸಂದರ್ಭದಲ್ಲಿ ಸಂಪರ್ಕ ವಿವರಗಳು
ಲಾಗಿನ್ ಮಾಡುವಾಗ ಯಾವುದೇ ತಾಂತ್ರಿಕ ಸಮಸ್ಯೆಯನ್ನು ಎದುರಿಸುತ್ತಿರುವ ಸದಸ್ಯರು ಎನ್.ಎಸ್.ಡಿ.ಎಲ್. ಸಹಾಯವಾಣಿ ಅನ್ನು evoting@nsdl.co.in ಗೆ ವಿನಂತಿಯನ್ನು ಕಳುಹಿಸುವ ಮೂಲಕ ಸಂಪರ್ಕಿಸಬಹುದು ಅಥವಾ 022-4886 7000/ 1800 102 0990 ಗೆ ಕರೆ ಮಾಡಬಹುದು.	ಲಾಗಿನ್ ಮಾಡುವಾಗ ಯಾವುದೇ ತಾಂತ್ರಿಕ ಸಮಸ್ಯೆಯನ್ನು ಎದುರಿಸುತ್ತಿರುವ ಸದಸ್ಯರು ಸಿ.ಡಿ.ಎಸ್.ಎಲ್. ಸಹಾಯವಾಣಿ helpdesk.evoting@cdslindia.com ಗೆ ವಿನಂತಿಯನ್ನು ಕಳುಹಿಸುವ ಮೂಲಕ ಸಂಪರ್ಕಿಸಬಹುದು ಅಥವಾ 1800 210 9911 ಗೆ ಕರೆ ಮಾಡಬಹುದು.

ಸದಸ್ಯರು ಕಂಪನಿಯ ಕಾರ್ಯದರ್ಶಿಗೆ ಅವರ ನೋಂದಾಯಿತ ಕಚೇರಿಯ ವಿಳಾಸದಲ್ಲಿ ಬರೆಯಬಹುದು ಅಥವಾ investors@centumelectronics.com ಗೆ ಇಮೇಲ್ ಮಾಡಬಹುದು.

ಸೆಂಟಮ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ನ ಪರವಾಗಿ
ಸಹಿ/-
ಇಂದು ಎಚ್ ಎಸ್
ಕಂಪನಿ ಕಾರ್ಯದರ್ಶಿ
ಸದಸ್ಯತ್ವ ಸಂಖ್ಯೆ: F12285


ಸ್ಥಳ : ಬೆಂಗಳೂರು
ದಿನಾಂಕ : ಜೂನ್ 3, 2025

‘ಒನ್–8 ಕಮ್ಯೂನ್’ ಬಾರ್ ಆ್ಯಂಡ್ ರೆಸ್ಟೋರೆಂಟ್‌ನ ವ್ಯವಸ್ಥಾಪಕ ಹಾಗೂ ಸಿಬ್ಬಂದಿ ವಿರುದ್ಧ ದೂರು

ಕೊಹ್ಲಿ ಪಾಲುದಾರಿಕೆ ಪಬ್: ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕಸ್ತೂರಬಾ ರಸ್ತೆಯಲ್ಲಿರುವ, ಕ್ರಿಕೆಟಿಗ ವಿರಾಟ್ ಕೊಹ್ಲಿ ಪಾಲುದಾರಿಕೆಯ ‘ಒನ್–8 ಕಮ್ಯೂನ್’ ಬಾರ್ ಆ್ಯಂಡ್ ರೆಸ್ಟೋರೆಂಟ್‌ನ ವ್ಯವಸ್ಥಾಪಕ ಹಾಗೂ ಸಿಬ್ಬಂದಿ ವಿರುದ್ಧ ಕಬ್ಬನ್‌ಪಾರ್ಕ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.



ಠಾಣೆಯ ಪಿಎಸ್‌ಐ ಜಿ.ಅಶ್ವಿನಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

‘ಮೇ 29ರಂದು ಠಾಣಾ ವ್ಯಾಪ್ತಿಯಲ್ಲಿ ಕಾನೂನುಬಾಹಿರ ಚಟುವಟಿಕೆ ನಿಯಂತ್ರಿಸಲು ಪೊಲೀಸರು ಗಸ್ತು ನಡೆಸುತ್ತಿದ್ದರು. ಆಗ, ಒನ್–8 ಕಮ್ಯೂನ್ ಬಾರ್ ಆ್ಯಂಡ್ ರೆಸ್ಟೋರೆಂಟ್‌ನಲ್ಲಿ ಗ್ರಾಹಕರಿಗೆ ಪ್ರತ್ಯೇಕ ಸ್ಥಳಾವಕಾಶ ನೀಡದೇ ಧೂಮಪಾನ ಮಾಡಲು ಅವಕಾಶ ಕಲ್ಪಿಸಿದ್ದು ಕಂಡುಬಂದಿತ್ತು. ಪಬ್‌ನ ವ್ಯವಸ್ಥಾಪಕ ಹಾಗೂ ಸಿಬ್ಬಂದಿ ಕೋಟ್ಪಾ ಕಾಯ್ದೆ (ಸಿಗರೇಟ್ ಮತ್ತಿತರ ತಂಬಾಕು ಉತ್ಪನ್ನಗಳ ಕಾಯ್ದೆ) ಅನ್ನು ಉಲ್ಲಂಘನೆ ಮಾಡಿದ್ದರು. ಅವರ ವಿರುದ್ಧ ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿ

‘ಮೇ 29ರಂದು ಪಬ್ ವಿರುದ್ಧ ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲು ಮಾಡಿಕೊಳ್ಳಲಾಗಿತ್ತು. 41ನೇ ಎಸಿಜೆಎಂ ನ್ಯಾಯಾಲಯದ ಸೂಚನೆ ಮೇರೆಗೆ ಮೇ 31ರಂದು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ. ವ್ಯವಸ್ಥಾಪಕ ಹಾಗೂ ಸಿಬ್ಬಂದಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕ್ವೀನ್ಸ್ ವೃತ್ತದ ಟಾನಿಕ್ ಕಟ್ಟಡದ ಕೊನೆಯ ಮಹಡಿಯಲ್ಲಿ ವಿರಾಟ್ ಕೊಹ್ಲಿ ಪಾಲುದಾರಿಕೆಯಲ್ಲಿ ಕಳೆದ ಕೆಲವು ವರ್ಷದಿಂದ ಈ ಪಬ್ ಕಾರ್ಯಾಚರಿಸುತ್ತಿದೆ. ಅವಧಿ ಮೀರಿ ಪಬ್ ತೆರೆದು ನಿಯಮ ಉಲ್ಲಂಘಿಸಿದ್ದ ಆರೋಪದ ಅಡಿ 2024ರ ಜುಲೈ 9ರಂದು ಈ ಪಬ್ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಗಸ್ತಿನಲ್ಲಿದ್ದ ಸಿಬ್ಬಂದಿಗೆ ಸ್ಥಳೀಯರೊಬ್ಬರು ನೀಡಿದ ಮಾಹಿತಿ ಆಧರಿಸಿ ಪಬ್ ಮೇಲೆ ದಾಳಿ ನಡೆಸಿದ್ದರು. ತಡರಾತ್ರಿ 1.20ರ ಸುಮಾರಿಗೆ ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಸರ್ಕಾರ ನಿಗದಿ ಪಡಿಸಿದ್ದ ಸಮಯವನ್ನೂ ಮೀರಿ ಅನಧಿಕೃತವಾಗಿ ಪಬ್ ತೆರೆದಿರುವುದು ಗೊತ್ತಾಗಿತ್ತು ಎಂದು ಮೂಲಗಳು ಹೇಳಿವೆ.



ಸೋಲದೇವನಹಳ್ಳಿ ಪೊಲೀಸರು ಅಂಗಡಿ ಮಳಿಗೆಗಳಲ್ಲಿ ಕಾರ್ಯಾಚರಣೆ ನಡೆಸಿ ಅನುಮತಿ ಇಲ್ಲದೆ ಗುಟ್ಕಾ ತಂಬಾಕು ಮಾರುತಿದ್ದವರಿಗೆ ದಂಡ ವಿಧಿಸಿದರು

ಧೂಮಪಾನ: ದಂಡ, ಪ್ರಕರಣ ದಾಖಲು

ಪೀಣ್ಯ ದಾಸರಹಳ್ಳಿ: ವಿಶ್ವ ಧೂಮಪಾನ ನಿಷೇಧ ದಿನದ ಅಂಗವಾಗಿ ಭಾನುವಾರ ಸೋಲದೇವನಹಳ್ಳಿ ಪೊಲೀಸರು ವಿಶೇಷ ಕಾರ್ಯಾಚರಣೆ ನಡೆಸಿ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ಮಾಡುತ್ತಿದ್ದ ಹಾಗೂ ಗುಟ್ಕಾ ಅಗಿದು ಉಗುಳುತ್ತಿದ್ದವರಿಗೆ ದಂಡ ವಿಧಿಸಿದರು.

ಆತ್ಮೀಯ ಗೆಳೆಯರ ಬಳಗ ಬಡಾವಣೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಇನ್‌ಸ್ಪೆಕ್ಟರ್ ಕೆ.ಕೆ.ರಘು ನೇತೃತ್ವದಲ್ಲಿ ಆರು ಸಬ್ ಇನ್‌ಸ್ಪೆಕ್ಟರ್ ಹಾಗೂ ಸಿಬ್ಬಂದಿ ಜೊತೆ ದಿಢೀರ್ ಕಾರ್ಯಾಚರಣೆ ಕೈಗೊಂಡರು. ಅನುಮತಿ ಪಡೆಯದೆಯೇ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದ ಮಳಿಗೆಗಳ ಮೇಲೆ ದಾಳಿ ನಡೆಸಿ, ಸಾವಿರಾರು ರೂಪಾಯಿ ಮೌಲ್ಯದ ಉತ್ಪನ್ನಗಳನ್ನು ಜಪ್ತಿ ಮಾಡಿದರು. ಸಾರ್ವಜನಿಕ ಸ್ಥಳಗಳಲ್ಲಿ ಸಿಗರೇಟ್ ಸೇದುತ್ತಿದ್ದ ಮತ್ತು ಗುಟ್ಕಾ ಉಗುಳುತ್ತಿದ್ದವರನ್ನು ಪತ್ತೆ ಮಾಡಿ 100ಕ್ಕೂ ಅಧಿಕ ಪ್ರಕರಣ ದಾಖಲಿಸಿದರು. ಅಲ್ಲದೇ ತಲಾ ₹200 ದಂಡ ವಿಧಿಸಿದರು.

ಮುಂದಿನ ದಿನಗಳಲ್ಲಿ ಬಾರ್, ಮಾಲ್‌ಗಳು, ಅಂಗಡಿಗಳ ಮೇಲೆ ದಾಳಿ ನಡೆಸಲಾಗುವುದು, ಶಾಲಾ-ಕಾಲೇಜುಗಳ ಸಮೀಪದ ಚಿಲ್ಲರೆ ಅಂಗಡಿ ಮಳಿಗೆಗಳ ಮೇಲೂ ನಿಗಾ ವಹಿಸಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ವಧುವಿನ ಕೊಠಡಿಯಲ್ಲಿದ್ದ ₹25 ಲಕ್ಷ ಮೌಲ್ಯದ ಆಭರಣ ಕಳವು

ಬೆಂಗಳೂರು: ನಗರದ ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿರುವ ಸಪ್ತಪದಿ ಕಲ್ಯಾಣ ಮಂಟಪದ ವಧುವಿನ ಕೊಠಡಿಯಲ್ಲಿದ್ದ ₹25 ಲಕ್ಷ ಮೌಲ್ಯದ ಆಭರಣ ಹಾಗೂ ಉಡುಗೊರೆಗಳ ಕಳ್ಳತನವಾಗಿದ್ದು, ಈ ಸಂಬಂಧ ಮಾಗಡಿ ರೋಡ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದ ಗವಿಪುರ ಬಡಾವಣೆಯ ನಿವಾಸಿ ಎಲ್.ಶಿವಶಂಕರ್ ಅವರು ನೀಡಿದ ದೂರು ಆಧರಿಸಿ ತನಿಖೆ ನಡೆಸಲಾಗುತ್ತಿದೆ. ಅಪರಿಚಿತ ವ್ಯಕ್ತಿಯೊಬ್ಬ ಬಂದು ಹೋಗುತ್ತಿರುವ ದೃಶ್ಯವು ಕಲ್ಯಾಣ ಮಂಟಪದಲ್ಲಿ ಅಳವಡಿಸಿರುವ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ. ಆ ದೃಶ್ಯವನ್ನು ಆಧರಿಸಿ ಆರೋಪಿಗೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಶಿವಕುಮಾರ್ ಅವರು ತಮ್ಮ ಪುತ್ರಿಯ ಮದುವೆಗೆಂದು ರಾಜಾಜಿನಗರದ ವೆಸ್ಟ್ ಆಫ್ ಕಾರ್ಡ್ ರಸ್ತೆಯಲ್ಲಿರುವ ಸಪ್ತಪದಿ ಕಲ್ಯಾಣ ಮಂಟಪವನ್ನು ಎರಡು ದಿನಕ್ಕೆ ಕಾಯ್ದಿರಿಸಿದ್ದರು. ಮೇ 29ರಂದು ಸಂಜೆ ಆರತಕ್ಷತೆ ನಡೆದಿತ್ತು. ಆರತಕ್ಷತೆಗೆ ಗಣ್ಯರು, ಸಂಬಂಧಿಕರು ಬಂದು ಉಡುಗೊರೆ ನೀಡಿದ್ದರು. ವಧುವಿಗೆ ಸಂಬಂಧಿಸಿದ ಚಿನ್ನಾಭರಣ, ನಗದು ಹಾಗೂ ಉಡುಗೊರೆಗಳನ್ನು ವಧುವಿನ ಕೊಠಡಿಯಲ್ಲಿ ಸೂಟ್‌ಕೇಸ್‌ನಲ್ಲಿ ಅಂದು ರಾತ್ರಿ ಇಡಲಾಗಿತ್ತು. ಅದನ್ನು ಕಳ್ಳತನ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಮೇ 30ರಂದು ಮುಹೂರ್ತ ಕಾರ್ಯಕ್ರಮವಿತ್ತು. ಮುಂಜಾನೆಯೇ ವಧು ಸಿದ್ಧಗೊಂಡು ಉಳಿದ ಆಭರಣಗಳನ್ನು ಕೊಠಡಿಯಲ್ಲಿ ಇಟ್ಟು ಮುಹೂರ್ತಕ್ಕೆ ತೆರಳಿದ್ದರು. ಆಗ ಬಂದ ಕಳ್ಳ ನಕಲಿ ಕೀ ಬಳಸಿ ಕೊಠಡಿಯ ಬಾಗಿಲು ತೆಗೆದು ನಗದು, ಕಿವಿಯೋಲೆ, ಚೈನು, ನಗದು ಕಳ್ಳತನ ಮಾಡಿಕೊಂಡು ಪರಾರಿ ಆಗಿದ್ದಾನೆ ಎಂದು ಪೊಲೀಸರು ಹೇಳಿದರು.

ಮುಹೂರ್ತ ಮುಗಿಸಿಕೊಂಡು ಊಟವಾದ ಮೇಲೆ ಕೊಠಡಿಗೆ ಬಂದು ನೋಡಿದಾಗ ಚಿನ್ನಾಭರಣದ ಸೂಟ್‌ಕೇಸ್ ಇರಲಿಲ್ಲ. ನಂತರ, ಕಲ್ಯಾಣ ಮಂಟಪದ ವ್ಯವಸ್ಥಾಪಕ ಬಂದು ಸಿ.ಸಿ.ಟಿ.ವಿ. ಕ್ಯಾಮೆರಾಗಳ ಪರಿಶೀಲನೆ ನಡೆಸಿದಾಗ ಅಪರಿಚಿತ ವ್ಯಕ್ತಿಯೊಬ್ಬ ಬಂದು ಹೋಗುತ್ತಿರುವ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿತ್ತು ಎಂದು ಮೂಲಗಳು ಹೇಳಿವೆ.

ಸಂಕ್ಷಿಪ್ತ ಸುದ್ದಿ

ಮಕ್ಕಳ ಸಾಹಿತ್ಯ ಕೃತಿಗಳ ಬಹುಮಾನ ಪ್ರಕಟ

ಬೆಂಗಳೂರು: ಇಂದಿರಾ ನಗರದ ಎಸ್. ಚನ್ನಪ್ಪ ಪ್ರತಿಷ್ಠಾನ ನೀಡುವ 2024ನೇ ಸಾಲಿನ ಮಕ್ಕಳ ಸಾಹಿತ್ಯ ಕೃತಿಗಳ ಬಹುಮಾನ ಪ್ರಕಟವಾಗಿದೆ.

ಧಾರವಾಡದ ಚಂದ್ರಗೌಡ ಕುಲಕರ್ಣಿ ಅವರ ‘ಚಿಲಿಪಿಲಿ ಶ್ರೀಗಂಧ’ ಕೃತಿ (ಮೊದಲ ಬಹುಮಾನ), ಮೈಸೂರಿನ ಬಿ.ಕೆ. ಮೀನಾಕ್ಷಿ ಅವರ ‘ಮೋನು ಮತ್ತು ಆನೆ’ ಪುಸ್ತಕ (ಎರಡನೇ ಬಹುಮಾನ) ಹಾಗೂ ಹಾವೇರಿ ಜಿಲ್ಲೆಯ ರಾಣೆಬೆನ್ನೂರಿನ ನಾಮದೇವ ಕಾಗದಗಾರ ಅವರ ‘ಸುರ್ ಸುರ್ ಬತ್ತಿ’ ಕೃತಿ (ಮೂರನೇ ಬಹುಮಾನ) ಆಯ್ಕೆಯಾಗಿವೆ ಎಂದು ಪ್ರಕಟಣೆ ತಿಳಿಸಿದೆ.

ಭಕ್ತಿಗೀತೆ ಗಾಯನ ಸ್ಪರ್ಧೆ

ಬೆಂಗಳೂರು: ಬಿ.ಎಂ.ಶ್ರೀ ಪ್ರತಿಷ್ಠಾನವು ಜೂನ್ 29ರಂದು ಬೆಳಿಗ್ಗೆ 10.30ಕ್ಕೆ ಭಕ್ತಿಗೀತೆ ಗಾಯನಸ್ಪರ್ಧೆಯನ್ನು ಎನ್.ಆರ್.ಕಾಲೊನಿಯ ಎಂ.ವಿ.ಸೀ ಸಭಾಂಗಣದಲ್ಲಿ ಏರ್ಪಡಿಸಿದೆ.

13ರಿಂದ 18 ವರ್ಷದೊಳಗಿನವರು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ವಿಜೇತರಿಗೆ ಬಹುಮಾನ ಹಾಗೂ ಪ್ರಶಸ್ತಿಪತ್ರಗಳನ್ನು ನೀಡಲಾಗುವುದು. ಆಸಕ್ತರು ಜೂನ್ 25ರೊಳಗೆ ತಮ್ಮ ಹೆಸರು ನೋಂದಣಿ ಮಾಡಿಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕ: 99728 12127

ವಿಶ್ವ ಪರಿಸರ ದಿನ: ಚಿತ್ರಕಲೆ, ಪ್ರಬಂಧ ಸ್ಪರ್ಧೆ

ಬೆಂಗಳೂರು: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಶಾಲಾ ಮಕ್ಕಳಿಗೆ ಚಿತ್ರಕಲೆ ಮತ್ತು ಪ್ರಬಂಧ ಸ್ಪರ್ಧೆಗಳನ್ನು ಆಯೋಜಿಸಿದೆ.

ಸ್ಪರ್ಧೆಯು ಜೂನ್ 3ರಂದು ಕಬ್ಬನ್ ಉದ್ಯಾನದಲ್ಲಿರುವ ಬಾಲಭವನದಲ್ಲಿ ಬೆಳಿಗ್ಗೆ 10ಕ್ಕೆ ಪ್ರಾರಂಭವಾಗಲಿದೆ. ‘ಪ್ಲಾಸ್ಟಿಕ್ ಬಳಕೆಯನ್ನು ಅಂತ್ಯಗೊಳಿಸೋಣ’ ಎಂಬ ಘೋಷವಾಕ್ಯದ ಅಡಿಯಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಗುತ್ತಿದೆ

ಬೆಳಿಗ್ಗೆ 10ರಿಂದ 11.30ರವರೆಗೆ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಚಿತ್ರಕಲಾ ಸ್ಪರ್ಧೆ ನಡೆಯಲಿದೆ. ಮಧ್ಯಾಹ್ನ 12ರಿಂದ 1ರವರೆಗೆ ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆ ಹಮ್ಮಿಕೊಳ್ಳಲಾಗಿದೆ.

ಸ್ಪರ್ಧೆಯು ‘ಪ್ಲಾಸ್ಟಿಕ್ ಬಳಕೆಯನ್ನು ಅಂತ್ಯಗೊಳಿಸೋಣ’ ಎಂಬ ವಿಷಯದ ಬಗ್ಗೆ ನಡೆಯಲಿದೆ. ಈ ಸ್ಪರ್ಧೆಗಳಲ್ಲಿ ಭಾಗವಹಿಸಲು ಯಾವುದೇ ಶುಲ್ಕ ಇರುವುದಿಲ್ಲ. ವಿಶ್ವ ಪರಿಸರ ದಿನಾಚರಣೆ ದಿನವಾದ ಜೂನ್ 5ರಂದು ಬಳ್ಳಾರಿ ರಸ್ತೆಯಲ್ಲಿರುವ ತ್ರಿಪುರ ವಾಸಿನಿ, ಅರಮನೆ ಮೈದಾನದಲ್ಲಿ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಗುವುದು.

ನೋಂದಣಿ ಸ್ಥಳ: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಾದೇಶಿಕ ಕಚೇರಿ, 1ನೇ ಮಹಡಿ, ನಿಸರ್ಗ ಭವನ, 7 ನೇ ‘ಡಿ’ ಕ್ರಾಸ್, ಶಿವನಗರ, ಬೆಂಗಳೂರು - 560010 ಅಥವಾ ಇ-ಮೇಲ್ bngcitysouth @kspcb.gov.inನಲ್ಲಿ ನೋಂದಣಿ ಮಾಡಿಕೊಳ್ಳಬಹುದು ಎಂದು ತಿಳಿಸಿದೆ.

ಆಟೊ ಚಾಲಕನ ಬಳಿ ಕ್ಷಮೆ ಕೇಳಿದ ಮಹಿಳೆ

ಬೆಳ್ಳಂದೂರಿನ ಸೆಂಟ್ರಲ್ ಮಾಲ್ ಬಳಿ ಚಪ್ಪಲಿಯಿಂದ ಹಲ್ಲೆ ಮಾಡಿದ್ದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳ್ಳಂದೂರು ಸೆಂಟ್ರಲ್ ಮಾಲ್ ಬಳಿ ಆಟೊ ಚಾಲಕನ ಮೇಲೆ ಚಪ್ಪಲಿಯಿಂದ ಹಲ್ಲೆ ಮಾಡಿದ್ದ ಬಿಹಾರದ ಸಾಫ್ಟ್‌ವೇರ್ ಎಂಜಿನಿಯರ್ ಫಂಕುನಿ ಮಿಶ್ರಾ ಅವರು ಆಟೊ ಚಾಲಕ ಲೋಕೇಶ್ ಹಾಗೂ ಅವರ ಕುಟುಂಬಸ್ಥರ ಕಾಲು ಹಿಡಿದು ಕ್ಷಮೆಯಾಚನೆ ಮಾಡಿದ್ದಾರೆ.

ಅಲ್ಲದೇ ಎಲ್ಲ ಕನ್ನಡಿಗರೂ ಕ್ಷಮಿಸಬೇಕು ಎಂದು ಕೋರಿದ್ದು, ದೂರನ್ನು ವಾಪಸ್ ಪಡೆಯುವಂತೆ ಆಟೊ ಚಾಲಕನ ಬಳಿ ಮನವಿ ಮಾಡಿದ್ದಾರೆ.

ಶನಿವಾರ ಮಧ್ಯಾಹ್ನ 3.30ರ ಸುಮಾರಿಗೆ ಮಾಲ್ ಬಳಿ ಆಟೊವನ್ನು ಎಡಕ್ಕೆ ತಿರುಗಿಸಿಕೊಂಡು ತೆರಳುವಾಗ ಬಲಭಾಗದಲ್ಲಿ ಬರುತ್ತಿದ್ದ ದ್ವಿಚಕ್ರ ವಾಹನ ಸವಾರರು, ಇಳಿದು ಗಲಾಟೆ ಮಾಡಿದ್ದರು. ‘ದ್ವಿಚಕ್ರ ವಾಹನಕ್ಕೆ ಆಟೊ ತಾಗಿಸಿದ್ದೀಯಾ’ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ದ್ವಿಚಕ್ರ ವಾಹನದ ಹಿಂದೆ ಕುಳಿತಿದ್ದ ಯುವತಿ ಚಪ್ಪಲಿ ಹಾಗೂ ಕೈಯಿಂದ ಹಲ್ಲೆ ನಡೆಸಿದ್ದಳು ಎಂದು ಆರೋಪಿಸಿ ಲೋಕೇಶ್ ನೀಡಿದ ದೂರು ಆಧರಿಸಿ ಫಂಕುನಿ ಮಿಶ್ರಾ ಅವರ ವಿರುದ್ಧ ಬೆಳ್ಳಂದೂರು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು.



ಆಟೊ ಚಾಲಕ ಲೋಕೇಶ್ ಅವರ ಬಳಿ ಕ್ಷಮೆ ಕೋರಿದ ಸಾಫ್ಟ್‌ವೇರ್ ಎಂಜಿನಿಯರ್ ಫಂಕುನಿ ಮಿಶ್ರಾ ಹಾಗೂ ಅವರ ಪತಿ

ಮಹಿಳೆಯನ್ನು ಭಾನುವಾರ ಠಾಣೆಗೆ ಕರೆಸಿ ವಿಚಾರಣೆ ನಡೆಸಿದ್ದ ಪೊಲೀಸರು ಫಂಕುನಿ ಮಿಶ್ರಾ ಅವರ ಹೇಳಿಕೆ ದಾಖಲಿಸಿಕೊಂಡಿದ್ದರು. ವಿಚಾರಣೆ ವೇಳೆ ಮಹಿಳೆಯು ಆಟೊ ಚಾಲಕನ ಮೇಲೆ ಹಲ್ಲೆ ಮಾಡಿರುವುದನ್ನು ಒಪ್ಪಿಕೊಂಡಿದ್ದರು. ಇದರ ಬೆನ್ನಲ್ಲೇ ಚಾಲಕರ ಸಂಘದ ಪದಾಧಿಕಾರಿಗಳ ಎದುರು ಆಟೊ ಚಾಲಕನ ಬಳಿ ಕ್ಷಮೆ ಕೇಳಿದ್ದಾರೆ.

ಬಿಹಾರದ ಫಂಕುನಿ ಮಿಶ್ರಾ ಅವರು ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದು, ಕುಟುಂಬದ ಸದಸ್ಯರ ಜೊತೆಗೆ ಬೆಳ್ಳಂದೂರು ಬಳಿಯ ಗ್ರೀನ್ ಗ್ಲೆನ್ ಲೇಔಟ್‌ನಲ್ಲಿ ನೆಲಸಿದ್ದಾರೆ.

‘ಭಯದಲ್ಲಿ ಹಲ್ಲೆ ಮಾಡಿದ್ದೆ’: ‘ಬೆಳ್ಳಂದೂರು ಸೆಂಟ್ರಲ್ ಮಾಲ್ ಬಳಿ ದ್ವಿಚಕ್ರ ವಾಹನದಲ್ಲಿ ತೆರಳುವಾಗ ಆಟೊ ತಾಗಿತ್ತು. ಗರ್ಭಿಣಿಯಾಗಿದ್ದು, ಅಪಘಾತವಾಗಿ ಏನಾದರೂ ತೊಂದರೆಯಾದರೆ ಎನ್ನುವ ಭಯದಲ್ಲಿ ಹಲ್ಲೆ ಮಾಡಿದ್ದೆ. ಉದ್ದೇಶಪೂರ್ವಕವಾಗಿ ಹಲ್ಲೆ ನಡೆಸಿಲ್ಲ. ಈ ವಿಚಾರಕ್ಕೆ ನಾನು ನಿಮ್ಮಲ್ಲಿ ಹಾಗೂ ನಿಮ್ಮ ಕುಟುಂಬದವರಲ್ಲಿ ಕ್ಷಮೆ ಕೇಳುತ್ತೇನೆ’ ಎಂದು ಫಂಕುನಿ ಮಿಶ್ರಾ ಅವರು ಆಟೊ ಚಾಲಕ ಮತ್ತು ಅವರ ಕುಟುಂಬದವರ ಎದುರು ಹೇಳಿದರು. ಅದರ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ.

‘ಬೆಂಗಳೂರು ಅಂದರೆ ತುಂಬಾ ಇಷ್ಟ. ಇಲ್ಲಿನ ಸಂಸ್ಕೃತಿಯನ್ನು ಗೌರವಿಸುತ್ತೇನೆ. ಆಟೊ ಚಾಲಕರನ್ನೂ ಗೌರವಿಸುತ್ತೇವೆ’ ಎಂದು ಮಹಿಳೆಯ ಪತಿ ಹೇಳಿದ್ದಾರೆ.

ಡೆಲಿವರಿ ಯುವಕನ ಬೈಕ್‌ನಲ್ಲಿದ್ದ ಸಾಮಗ್ರಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಕೊ ಲೇಔಟ್‌ನ ರಂಕಾ ಕಾಲೊನಿಯಲ್ಲಿ ಡೆಲಿವರಿ ಯುವಕನ ದ್ವಿಚಕ್ರ ವಾಹನದಲ್ಲಿದ್ದ ಬೆಲೆ ಬಾಳುವ ವಸ್ತುಗಳನ್ನು ಕಳ್ಳರು ದೋಚಿ ಪರಾರಿ ಆಗಿದ್ದಾರೆ.

ಎಎನ್‌ಎನ್‌ರಾಜ್ ಅಪಾರ್ಟ್‌ಮೆಂಟ್ ಬಳಿ ಡೆಲಿವರಿ ಮಾಡಲು ತನ್ನ ಸ್ಕೂಟರ್‌ನಲ್ಲಿ ವಿವಿಧ ಉಪಕರಣಗಳನ್ನು ತಂದಿದ್ದರು. ಸ್ಕೂಟರ್ ನಿಲ್ಲಿಸಿ ವಸ್ತುಗಳನ್ನು ಡೆಲಿವರಿ ಮಾಡಲು ತೆರಳಿದ್ದ ಸಂದರ್ಭದಲ್ಲಿ ಕಳವು ಮಾಡಿಕೊಂಡು ಪರಾರಿ ಆಗಿದ್ದಾರೆ.

ಪೊಲೀಸರು ಘಟನಾ ಸ್ಥಳಕ್ಕೆ ಬಂದು ಸಿಸಿಟಿವಿ ಕ್ಯಾಮೆರಾಗಳನ್ನು ಪರಿಶೀಲಿಸಿದಾಗ ಇಬ್ಬರು ಕಳ್ಳರು ಕೃತ್ಯ ಎಸಗಿರುವುದು ಕ್ಯಾಮೆರಾದಲ್ಲಿ ಸೆರೆಯಾಗಿತ್ತು. ಆ ದೃಶ್ಯಾವಳಿ ಆಧರಿಸಿ ಪೊಲೀಸರು ಕಳ್ಳರ ಪತ್ತೆಗೆ ಮುಂದಾಗಿದ್ದಾರೆ.

ಎನ್.ಆರ್.ರಮೇಶ್ ವಿರುದ್ಧ ದೂರು

ಪೌರ ಕಾರ್ಮಿಕರೊಬ್ಬರಿಗೆ ಕೊಲೆ ಬೆದರಿಕೆ ಹಾಗೂ ನಿಂದನೆ ಮಾಡಿದ್ದ ಆರೋಪದ ಅಡಿ ಬಿಜೆಪಿ ಮುಖಂಡ ಎನ್.ಆರ್.ರಮೇಶ್ ವಿರುದ್ಧ ಮುನಿಸ್ವಾಮಿ ಎಂಬುವವರು ಸಿ.ಕೆ.ಅಚ್ಚುಕಟ್ಟು ಠಾಣೆಗೆ ದೂರು ನೀಡಿದ್ದಾರೆ. ದೂರು ಆಧರಿಸಿ ಎನ್‌ಸಿಆರ್ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

‘ಬೆಂಬಲಿತ ಹುಡುಗರ ಜತೆಗೆ ಗಲಾಟೆ ಮಾಡಿದ್ದಕ್ಕೆ ರಮೇಶ್ ಕರೆ ಮಾಡಿ ಬೆದರಿಕೆ ಹಾಕಿದ್ದರು’ ಎಂದು ಆರೋಪಿಸಿ ದೂರು ನೀಡಲಾಗಿದೆ. ಈ ಸಂಬಂಧ ವಿಡಿಯೊ ಮಾಡಿ ಯುವಕ ಮುನಿಸ್ವಾಮಿ ಅಳಲು ತೋಡಿಕೊಂಡಿದ್ದಾರೆ.

ನಾಗರಿಕ ಹಕ್ಕು ಸಂರಕ್ಷಣಾ ದಿನಾಚರಣೆ 9ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿ. ಕೃಷ್ಣಪ್ಪ ಅವರ ಜನ್ಮದಿನದ ಪ್ರಯುಕ್ತ ಜೂನ್ 9ರಂದು ಸೆಂಟ್ರಲ್ ಕಾಲೇಜಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಾಗರಿಕ ಹಕ್ಕು ಸಂರಕ್ಷಣಾ ದಿನಾಚರಣೆ ಹಮ್ಮಿಕೊಳ್ಳಲಾಗಿದೆ’ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯದ ತಳ ಸಮುದಾಯಗಳ ಪರವಾಗಿ ಮಹಿಳೆಯರ ಹಾಗೂ ದಲಿತರ ಘನತೆಯ ಹಕ್ಕುಗಳ ರಕ್ಷಿಸಲು ಬಿ. ಕೃಷ್ಣಪ್ಪ ಅವರು ಅನೇಕ ಹೋರಾಟಗಳನ್ನು ನಡೆಸಿದ್ದಾರೆ’ ಎಂದರು.

‘ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ ತಡೆಯುವುದು, ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿ ಪಡಿಸುವುದು, ಅನ್ಯಾಯಕ್ಕೆ ಒಳಗಾದವರಿಗೆ ತ್ವರಿತವಾಗಿ ನ್ಯಾಯ ಕಲ್ಪಿಸುವ ಉದ್ದೇಶದಿಂದ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ (ಡಿಸಿಆರ್‌ಇ) ಪ್ರತ್ಯೇಕವಾಗಿ ವಿಶೇಷ ಪೊಲೀಸ್ ಠಾಣೆಗಳನ್ನು ಪ್ರಾರಂಭಿಸಿರುವುದು ಶ್ಲಾಘನೀಯ’ ಎಂದು ಹೇಳಿದರು.

‘ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಬರುವ ಬೇಡ ಜಂಗಮ-ಬುಡ್ಗ ಜಂಗಮ ಜಾತಿಗಳಿಗೂ ಮತ್ತು ವೀರಶೈವ ಜಗಮರಿಗೂ ಯಾವುದೇ ರೀತಿಯ ಸಂಬಂಧವಿಲ್ಲ. ಬೇಡ ಜಂಗಮ ಹಾಗೂ ಬುಡ್ಗ ಜಂಗಮರು ಅಲೆಮಾರಿಗಳಾಗಿದ್ದು, ಮಾಂಸಾಹಾರಿಗಳಾಗಿದ್ದಾರೆ. ವೀರಶೈವ ಜಂಗಮರು ಸಸ್ಯಾಹಾರಿಗಳಾಗಿದ್ದಾರೆ. ಮೀಸಲಾತಿ ಸೌಲಭ್ಯ ಪಡೆದುಕೊಳ್ಳಲು ಪರಿಶಿಷ್ಟ ಜಾತಿ ಎಂದು ಹೇಳಿಕೊಂಡು, ನಕಲಿ ಜಾತಿ ಪ್ರಮಾಣ ಪತ್ರ ಪಡೆದುಕೊಳ್ಳುತ್ತಿದ್ದಾರೆ’ ಎಂದು ದೂರಿದರು.

ಬೆದರಿಕೆ ಆರೋಪ: ಎಎಸ್‌ಐ ವಿರುದ್ಧ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಎಸ್‌ಐ ಒಬ್ಬರು ಸಾರ್ವಜನಿಕ ಸ್ಥಳದಲ್ಲಿ ಪಿಸ್ತೂಲ್ ಹಿಡಿದು ಬೆದರಿಕೆ ಹಾಕಿದ್ದ ಆರೋಪವಿದ್ದು, ಈ ಸಂಬಂಧ ಹಿರಿಯ ಅಧಿಕಾರಿಗಳಿಗೆ ದೂರು ನೀಡಲಾಗಿದೆ. ಈ ಸಂಬಂಧ ಪೊಲೀಸ್ ಅಧಿಕಾರಿಗಳು ತನಿಖೆ ಆರಂಭಿಸಿದ್ದಾರೆ.

‘ಮಡಿವಾಳ ಎಎಸ್‌ಐ ಕುಮಾರ್ ಮೇಲೆ ಆರೋಪ ಇದೆ. ಘಟನೆಯ ಸಂಬಂಧ ಮಡಿವಾಳ ಉಪ ವಿಭಾಗದ ಎಸಿಪಿ ತನಿಖೆ ಕೈಗೊಂಡಿದ್ದಾರೆ’ ಎಂದು ಗೊತ್ತಾಗಿದೆ. ಮೇ 23ರ ಮಧ್ಯರಾತ್ರಿ 1.35ಕ್ಕೆ ಮಡಿವಾಳದ ಜಕ್ಕಸಂದ್ರದ ಖಾಸಗಿ ಹೋಟೆಲ್‌ನಲ್ಲಿ ಘಟನೆ ನಡೆದಿದೆ.

‘ಮಡಿವಾಳದ ಹೋಟೆಲ್‌ನಲ್ಲಿ ಆಡಳಿತ ಮಂಡಳಿ ಹಾಗೂ ಕಾರ್ಮಿಕರ ಮಧ್ಯೆ ಸಂಬಳದ ವಿಚಾರಕ್ಕೆ ಮೂರು ತಿಂಗಳಿಂದ ಗಲಾಟೆ ನಡೆಯುತ್ತಿತ್ತು. ಗಲಾಟೆ ಸಂಬಂಧ ಕಾರ್ಮಿಕನೊಬ್ಬ ಪೊಲೀಸ್ ಕಂಟ್ರೋಲ್‌ಗೆ ರೂಂಗೆ ಕರೆ ಮಾಡಿದ್ದ. ಕರೆ ಆಧರಿಸಿ ಸ್ಥಳಕ್ಕೆ ಹೋಗಿ ವಿಚಾರಿಸಿದ್ದೇನೆ. ಪಿಸ್ತೂಲ್‌ನ ಪೌಚ್ ಕಿತ್ತುಹೋಗಿತ್ತು. ಕೈನಲ್ಲಿ ಪಿಸ್ತೂಲ್ ಹಿಡಿದುಕೊಂಡು ಮಾಹಿತಿ ಪಡೆದಿದ್ದೇನೆ’ ಎಂದು ಪ್ರಾಥಮಿಕ ತನಿಖೆ ವೇಳೆ ಕುಮಾರ್ ಹೇಳಿಕೆ ನೀಡಿದ್ದಾರೆ.

ತನಿಖೆ ವೇಳೆ ಪೊಲೀಸ್ ಠಾಣೆಗೆ ಮತ್ತು ಪೊಲೀಸರ ಸಹಾಯವಾಣಿಗೆ ಯಾವುದೇ ಕರೆ ಬಂದಿರಲಿಲ್ಲ ಎಂಬುದು ಗೊತ್ತಾಗಿದೆ. ತನಿಖೆ ಪೂರ್ಣವಾದ ಬಳಿಕ ಘಟನೆಯ ಪೂರ್ಣ ಮಾಹಿತಿ ನೀಡಲಾಗುವುದು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹೋಟೆಲ್‌ಗೆ ಬಂದಿದ್ದ ಎಎಸ್‌ಐ ಪಿಸ್ತೂಲ್ ಹಿಡಿದು ಓಡಾಡಿರುವ ದೃಶ್ಯ ಹೋಟೆಲ್‌ನ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಹೋಟೆಲ್ ಸಿಬ್ಬಂದಿ ಈ ದೃಶ್ಯವನ್ನು ಸಾಮಾಜಿಕ ಮಾಧ್ಯಮದಲ್ಲಿ ಹರಿಯಬಿಟ್ಟಿದ್ದಾರೆ.

‘ಪೊಲೀಸ್ ಶಿಷ್ಟಾಚಾರದ ಪ್ರಕಾರ ಪಿಸ್ತೂಲ್ ಹಿಡಿದುಕೊಂಡು ಸಾರ್ವಜನಿಕವಾಗಿ ಓಡಾಡುವಂತಿಲ್ಲ. ಘಟನೆ ಕುರಿತು ತನಿಖೆ ನಡೆಸಲಾಗುತ್ತಿದೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಆರೋಪಿ ಮೊಬೈಲ್ ಬಳಸಿ ಆನ್‌ಲೈನ್ ಬೆಟ್ಟಿಂಗ್: ಪಿಎಸ್‌ಐ ಅಮಾನತು

ತುರುವೇಕೆರೆ: ಆರೋಪಿಯೊಬ್ಬನ ಮೊಬೈಲ್‌ನಿಂದ ಆನ್‌ಲೈನ್ ಬೆಟ್ಟಿಂಗ್ ಆಡಿದ ಆರೋಪದ ಮೇಲೆ ಪಟ್ಟಣದ ಪಿಎಸ್‌ಐ ಸಂಗಮೇಶ ಮೇಟಿ ಅವರನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮಾನತು ಮಾಡಿದ್ದಾರೆ.

ಪ್ರಕರಣವೊಂದರ ಆರೋಪಿಯೊಬ್ಬನನ್ನು ಜೈಲಿಗೆ ಬಿಡಬೇಕಾದ ಸಂದರ್ಭದಲ್ಲಿ ಆತನಿಂದ ಮೊಬೈಲ್ ಮತ್ತು ಫೋನ್ ಪೇ ಪಾಸ್‌ವರ್ಡ್ ಪಡೆದ ಸಂಗಮೇಶ್ ಮೇಟಿ ಆನ್‌ಲೈನ್ ಬೆಟ್ಟಿಂಗ್ ಆಡಿದ್ದರು ಎಂಬ ಆರೋಪ ಕೇಳಿಬಂದಿತ್ತು.

‘ಸಬ್ ಇನ್‌ಸ್ಪೆಕ್ಟರ್ ಸಂಗಮೇಶ ಮೇಟಿ ಆನ್‌ಲೈನ್‌ನಲ್ಲಿ ಬೆಟ್ಟಿಂಗ್ ಆಡಲು ನನ್ನ ಮೊಬೈಲ್ ಬಳಸಿದ್ದಾರೆ. ನನ್ನ ಫೋನ್ ಪೇನಲ್ಲಿದ್ದ ಸುಮಾರು ₹95 ಸಾವಿರ ದುರುಪಯೋಗಪಡಿಸಿಕೊಳ್ಳಲಾಗಿದೆ’ ಎಂದು ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಗಳಿಗೆ ಆರೋಪಿ ದೂರು ಸಲ್ಲಿಸಿದ್ದ.



ಸಂಗಮೇಶ ಮೇಟಿ

ಆರೋಪಿ ದೂರಿನ ತನಿಖೆ ಮಾಡಿದಾಗ, ಆರೋಪಿಯ ಮೊಬೈಲ್‌ನಿಂದ ಸಬ್ ಇನ್‌ಸ್ಪೆಕ್ಟರ್ ಆನ್‌ಲೈನ್ ಬೆಟ್ಟಿಂಗ್‌ಗಾಗಿ ಆತನ ₹95 ಸಾವಿರ ದುರುಪಯೋಗಪಡಿಸಿಕೊಂಡಿರುವುದು ಸಾಬೀತಾಗಿದೆ.

ಶ್ರೀ ಚೈತನ್ಯ ಶಿಕ್ಷಣ ಸಂಸ್ಥೆ: ಜೆಇಇ ಅಡ್ವಾನ್ಸ್ಡ್ ಸಾಧಕರು



ಭಾವೇಶ್ ಜಯಂತಿ, ಎಐಆರ್ 35



ದಿನೇಶ್ ಗೋಮತಿ ಎಸ್.ವಿ., ಎಐಆರ್ 166



ಅರ್ಣವ್ ಕೃಷ್ಣ ಎಐಆರ್ 299



ಶರತ್ ಚಂದ್ರ ಎಂ. ಎಐಆರ್ 335



ಕೃಷ್ಣಶ್ರೀಪಾದ ಕೆ. ಎಐಆರ್ 440



ಬೆಂಗಳೂರಿನ ಅಲೆನ್ ಕೆರಿಯರ್ ಇನ್‌ಸ್ಟಿಟ್ಯೂಟ್‌ನ 17 ವಿದ್ಯಾರ್ಥಿಗಳು ಜೆಇಇ ಅಡ್ವಾನ್ಸ್ಡ್–2025ರಲ್ಲಿ ಮೊದಲ 500ರಲ್ಲಿ ಸ್ಥಾನ ಪಡೆದಿದ್ದು, ಸೋಮವಾರ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಸಿಹಿ ಹಂಚಿ ಸಂಭ್ರಮಿಸಿದರು

ಜೆಇಇ ಅಡ್ವಾನ್ಸ್ಡ್: ‘ನಾರಾಯಣ’ಕ್ಕೆ 5 ರ‍್ಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಇಇ ಅಡ್ವಾನ್ಸ್ಡ್ ಪರೀಕ್ಷೆಯಲ್ಲಿ ನಾರಾಯಣ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಅಖಿಲ ಭಾರತ ಮಟ್ಟದ (ಎಐಆರ್) 10 ರ‍್ಯಾಂಕ್‌ಗಳಲ್ಲಿ 5 ಸ್ಥಾನಗಳನ್ನು ಪಡೆಯುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ.

ಮಧ್ಯಪ್ರದೇಶದ ಮಜೀದ್ ಹುಸೇನ್ (ಎಐಆರ್ 3), ಮಹಾರಾಷ್ಟ್ರದ ಮಂದರ್ ವರ್ತಕ್ (ಎಐಆರ್ 4), ರಾಜಸ್ಥಾನದ ಅಕ್ಷತ್ ಚೌರಾಸಿಯಾ (ಎಐಆರ್ 6), ಮಹಾರಾಷ್ಟ್ರದ ಸಾಹಿಲ್ ದಿಯೊ (ಎಐಆರ್ 7) ಮತ್ತು ಆಂಧ್ರಪ್ರದೇಶದ ವಡ್ಲಮುಡಿ ಲೋಕೇಶ್ (ಎಐಆರ್ 10) ಅತ್ಯುತ್ತಮ ಶ್ರೇಯಾಂಕಗಳನ್ನು ಪಡೆದಿದ್ದಾರೆ.

ಈ ಉನ್ನತ ಶ್ರೇಯಾಂಕಗಳ ಜೊತೆಗೆ, ನಾರಾಯಣ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು ಮೊದಲ 100 ರ‍್ಯಾಂಕ್‌ಗಳಲ್ಲಿ 43 ರ‍್ಯಾಂಕ್‌ಗಳನ್ನು ಹಾಗೂ ಮೊದಲ 1000 ರ‍್ಯಾಂಕ್‌ಗಳಲ್ಲಿ 200 ರ‍್ಯಾಂಕ್‌ಗಳನ್ನು ಪಡೆದಿದ್ದಾರೆ. ಈ ಫಲಿತಾಂಶ ಭಾರತದ ಪ್ರಮುಖ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ(ಐಐಟಿ) ಸಂಸ್ಥೆಗಳನ್ನು ಸುಲಭವಾಗಿ ಪ್ರವೇಶಿಸಲು ವಿದ್ಯಾರ್ಥಿಗಳಿಗೆ ದಾರಿ ಮಾಡಿಕೊಟ್ಟಿದೆ ಎಂದು ಶಿಕ್ಷಣ ಸಂಸ್ಥೆ ತಿಳಿಸಿದೆ.

ಸಾಧಕ ವಿದ್ಯಾರ್ಥಿಗಳನ್ನು ಅಭಿನಂದಿಸಿದ ನಾರಾಯಣ ಶಿಕ್ಷಣ ಸಂಸ್ಥೆಗಳ ನಿರ್ದೇಶಕಿ ಡಾ. ಪಿ. ಸಿಂಧೂರ ‘ವಿದ್ಯಾರ್ಥಿಗಳ ಕಠಿಣ ಅಭ್ಯಾಸ, ಪರಿಶ್ರಮ ಹಾಗೂ ಶಾಲೆಯಲ್ಲಿರುವ ಉತ್ತಮ ಕಲಿಕಾ ಪರಿಸರ ವ್ಯವಸ್ಥೆಯಿಂದ ಇಂಥದ್ದೊಂದು ಯಶಸ್ಸು ಸಿಗಲು ಸಾಧ್ಯವಾಗಿದೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕ್ಷೇಮ ಕುಶಲ



ಮತ್ತೆ ಕೋವಿಡ್ ಭೀತಿ ಬೇಡ




ಡಾ. ಕಿರಣ್ ವಿ. ಎಸ್.

ನಮ್ಮ ದೃಶ್ಯಮಾಧ್ಯಮಗಳಲ್ಲಿ 'ಮರುಕಳಿಸಿದ ಮಹಾಮಾರಿ' ಮಾದರಿಯ ಅರ್ಭಟಗಳು ಏರಿವೆ. ಕೋವಿಡ್-19 ರೋಗಿಗಳು ಮತ್ತೆ ವರದಿಯಾಗಿದ್ದಾರೆ. ಅಲ್ಲಲ್ಲಿ ಸಾವು-ನೋವುಗಳು ಸಂಭವಿಸಿವೆ. ನಾಲ್ಕೈದು ವರ್ಷಗಳ ಹಿಂದೆ ಜಗತ್ತನ್ನು ಇನ್ನಿಲ್ಲದಂತೆ ತಲ್ಲಣಗೊಳಿಸಿದ್ದ ಕೋವಿಡ್-19 ಪುನಃ ಅದೇ ಪ್ರಮಾಣದಲ್ಲಿ ನಮ್ಮನ್ನು ಕಾಡಲಿದೆಯೇ ಎನ್ನುವುದು ಜನಸಾಮಾನ್ಯರ ಪ್ರಶ್ನೆ. ಇದಕ್ಕೆ ಉತ್ತರಿಸುವ ಮುನ್ನ ಕೆಲವು ವಿಷಯಗಳನ್ನು ಸ್ಪಷ್ಟಗೊಳಿಸಬೇಕು.

> ಜಗತ್ತನ್ನು ಆತಂಕಕ್ಕೆ ತಳ್ಳಿದ್ದ ಕೋವಿಡ್ ಮತ್ತೆ ಈಗ ಸುದ್ದಿಯಲ್ಲಿದೆ. ದೇಶದಲ್ಲಿ ಕೋವಿಡ್ ಪ್ರಕರಣಗಳು ವರದಿಯಾಗುತ್ತಿವೆ. ಆದರೆ ಜನರು ಇದರಿಂದ ಭಯ ಪಡಬೇಕಿಲ್ಲ. ಕೆಲವೊಂದು ಎಚ್ಚರಿಕೆಗಳನ್ನು ಪಾಲಿಸಿದರೆ ಕೋವಿಡನ್ನು ನಾವು ಸೋಲಿಸಬಹುದಾಗಿದೆ. ಮಾತ್ರವಲ್ಲ, ಕೋವಿಡ್‌ನೊಂದಿಗೆ ಬದುಕುವ ಧೈರ್ಯವನ್ನೂ ಬೆಳೆಸಿಕೊಳ್ಳಬೇಕಿದೆ.

● ಕೋವಿಡ್-19 ಕಾಯಿಲೆಯ ಮೇಲೆ ನಿಯಂತ್ರಣ ಸಾಧಿಸಿದ್ದೆವಲ್ಲವೇ? ಮತ್ತೆ ಏನಾಯಿತು?



ಮಾನವನ ನಿಯಂತ್ರಣಕ್ಕೆ ಒಳಗಾಗಿ ಸಂಪೂರ್ಣ ತಹಬಂದಿಗೆ ಬಂದಿರುವ ಕಾಯಿಲೆಗಳು ತೀರಾ ಬೆರಳೆಣಿಕೆಯಷ್ಟು ಮಾತ್ರ. ಉಳಿದವು ಸಮಯಾನುಸಾರ ಮರುಕಳಿಸುತ್ತಲೇ ಇರುತ್ತವೆ. ಚಳಿಗಾಲ ಆರಂಭ ಆಗುತ್ತಿದ್ದಂತೆ ಉಸಿರಾಟದ ಕಾಯಿಲೆಗಳು ಉಲ್ಬಣವಾಗುತ್ತವೆ. ಆಗ ಅಂತಹ ರೋಗಿಗಳ ಸಂಖ್ಯೆ ಹಠಾತ್ ಏರುತ್ತದೆ. ಕೆಲದಿನಗಳಲ್ಲಿ ಈ ಸಂಖ್ಯೆ ಒಂದು ಮಟ್ಟಕ್ಕೆ ತಲುಪಿ, ನಂತರ ಇಳಿಯುತ್ತದೆ. ಬೇಸಿಗೆಯ ಆರಂಭದಲ್ಲಿ ನೀರಿನಿಂದ ಹರಡುವ ಅತಿಸಾರದಂತಹ ರೋಗಗಳ ಸಂಖ್ಯೆ ಏರುತ್ತದೆ. ಹೀಗೆ, ಪ್ರತಿಯೊಂದು ಕಾಯಿಲೆಗೂ ಏರಿಳಿತಗಳು ಇದ್ದೇ ಇವೆ. ಕೋವಿಡ್-19 ಜಗತ್ತಿನಿಂದ ನಿರ್ನಾಮವಾಗಿಲ್ಲ. ಅದು ಹೊಸ ರೂಪದಲ್ಲಿ ಆಗಾಗ್ಗೆ ಬರುತ್ತದೆ. ಹೀಗಾಗಿ, ಸತತ ಎಚ್ಚರ ಮುಖ್ಯ.

● ಪ್ರಸ್ತುತ ಕೋವಿಡ್-19 ವೈರಸ್ ತಳಿ ಹೆಚ್ಚು ಅಪಾಯಕಾರಿಯೇ?

ತಳಿರೂಪಾಂತರ ಯಾವುದೇ ವೈರಸ್‌ನ ಸಹಜ ಗುಣ. ಇಂತಹ ರೂಪಾಂತರಿತಳಿ ಅಧಿಕ ರೋಗಕಾರಕವೂ ಆಗಿರಬಹುದು; ಇಲ್ಲವೇ ಶಕ್ತಿಹೀನವೂ ಆಗಬಹುದು. ಕೋವಿಡ್-19 ರೂಪಾಂತರಗೊಳ್ಳುವುದು ಮನುಷ್ಯರ ದೇಹದಲ್ಲಿ. ಅಧಿಕ ಮಂದಿ ಕಾಯಿಲೆಗೆ ಈಡಾದರೆ ವೈರಸ್ ರೂಪಾಂತರದ ಸಾಧ್ಯತೆಗಳು ಹೆಚ್ಚಾಗುತ್ತವೆ. ಒಮ್ಮೆ ರೂಪಾಂತರ ಹೊಂದಿದರೆ ಇನ್ನೂ ಹೆಚ್ಚು ಜನರು ಕಾಯಿಲೆಗೆ ತುತ್ತಾಗುತ್ತಾರೆ. ಆಗ ವೈರಸ್ ಮತ್ತೊಮ್ಮೆ ರೂಪಾಂತರ ಹೊಂದಬಹುದು. ಇದೊಂದು ವಿಷಮ ಆವರ್ತನಚಕ್ರ. ಕಾಯಿಲೆಯನ್ನು ನಿಯಂತ್ರಿಸಬೇಕೆಂದರೆ ಈ ಚಕ್ರವನ್ನು ಮುರಿಯಬೇಕು. ಅತ್ಯಂತ ಸಫಲವಾಗಿ ಈ ಚಕ್ರವನ್ನು ಭಿನ್ನ ಮಾಡುವ ಸಾಧ್ಯತೆ ಇರುವುದು ಕಾಯಿಲೆಯ ಪ್ರಮಾಣವನ್ನು ಕಡಿಮೆ ಮಾಡುವುದರಲ್ಲಿ. ಅಂದರೆ ಎಷ್ಟು ಕಡಿಮೆ ಜನರಿಗೆ ಕಾಯಿಲೆ ತಗಲುತ್ತದೋ ವೈರಸ್ ರೂಪಾಂತರ ಹೊಂದುವ ಸಾಧ್ಯತೆ ಅಷ್ಟೇ ಕಡಿಮೆಯಾಗುತ್ತದೆ. ಹೀಗಾಗಿ, ವೈರಸ್ ಹರಡುವಿಕೆಯನ್ನು ಮಿತಗೊಳಿಸುವುದು ಬಹಳ ಮುಖ್ಯ. ಈ ಬಾರಿಯ ಕಾಯಿಲೆ ಅಪಾಯಕಾರಿಯೇ ಎನ್ನುವ ಪ್ರಶ್ನೆಗೆ 'ಹೌದು' ಅಥವಾ 'ಇಲ್ಲ' ಎಂದು ಉತ್ತರಿಸುವುದು ಪ್ರಜೆಗಳ ನಿಯಂತ್ರಣದಲ್ಲಿದೆ. ಪ್ರಪಂಚದ ಯಾವುದೇ ಸರ್ಕಾರವೂ ಎಷ್ಟೇ ಕಟ್ಟುನಿಟ್ಟಿನ ಕಾಯಿದೆಗಳನ್ನು ಮಾಡಿದರೂ, ಜನರ ಸಹಕಾರವಿಲ್ಲದೆ ಅದು ಸಫಲವಾಗದು. ಯಾವುದೇ ಕಾಯಿಲೆಯ ನಿಯಂತ್ರಣದಲ್ಲಿ ಸರ್ಕಾರದ ಪಾತ್ರಕ್ಕಿಂತಲೂ ಜನರ ಶಿಸ್ತುಬದ್ಧ ನಡವಳಿಕೆಯೇ ಮುಖ್ಯ.

● ಈ ಬಾರಿಯ ಕೋವಿಡ್-19 ಅಲೆ ಏರದಂತೆ ನಾವೇನು ಮಾಡಬಹುದು?

ಎಲ್ಲಕ್ಕಿಂತ ಮುಖ್ಯವಾಗಿ ಸಾಂಘಿಕ ಹೊಣೆಗಾರಿಕೆಯಿಂದ ಕಾಯಿಲೆಯನ್ನು ನಿಯಂತ್ರಿಸುತ್ತೇವೆ ಎನ್ನುವ ಧೈರ್ಯದ ಮನಃಸ್ಥಿತಿ ಇರಬೇಕು. ಕಳೆದ ಅಲೆಗಳ ವೇಳೆ 'ಕೋವಿಡ್-19 ಅಲೆಗಳು ತಾವಾಗಿಯೇ ಬರುವುದಿಲ್ಲ; ಬಹಳ ಮಟ್ಟಿಗೆ ನಾವಾಗಿಯೇ ತಂದುಕೊಳ್ಳುತ್ತೇವೆ' ಎನ್ನುವ ಸಾಂಕ್ರಾಮಿಕ ರೋಗತಜ್ಞರ ಮಾತುಗಳು ನೆನಪಿರಬೇಕು. ಇದು ಪ್ರತಿಯೊಬ್ಬರ ಜವಾಬ್ದಾರಿ. ಪ್ರಸ್ತುತ ಕೋವಿಡ್-19 ಕಾಯಿಲೆ ಅಲೆಯ ಸ್ವರೂಪ ಪಡೆಯುವುದಕ್ಕೆ ಹಲವಾರು ಕಾರಣಗಳು ಇರುತ್ತವೆ. ಇದನ್ನು ಅರಿತು, ನಿಗ್ರಹಕ್ಕೆ ಬೇಕಾದ ಶಿಸ್ತಿನ ಕ್ರಮಗಳನ್ನು ಪಾಲಿಸಿದರೆ ಕಾಯಿಲೆಯಿಂದ ಮುಕ್ತರಾಗಬಹುದು. ಶಿಸ್ತಿನ ಅಗತ್ಯವನ್ನು ಮರೆತು, ತಜ್ಞರ ಸಲಹೆಗಳನ್ನು ಕಡೆಗಣಿಸಿ, ಮನಸೋ ಇಚ್ಛೆ ವ್ಯವಹರಿಸಿದರೆ ಹಿಂದಿನ ದಿನಗಳು ಮರುಕಳಿಸಬಹುದು ಎನ್ನುವ ಎಚ್ಚರ ಬೇಕು.

ನಮ್ಮದು ಮೂಲತಃ ಅಶಿಸ್ತಿನ, ಉಡಾಫೆ ಸ್ವಭಾವದ ಸಮಾಜ. ಅಪಾಯದ ಸಂದರ್ಭಗಳಲ್ಲೂ ಸರಿ-ತಪ್ಪುಗಳ ವಿವೇಚನೆ ನಮಗೆ ಕಡಿಮೆ. ಒತ್ತಾಯಪೂರ್ವಕವಾಗಿ ಗಟ್ಟಿಯಾದ ನಿಯಮಗಳನ್ನು ತಂದರೆ ನಮ್ಮ ಜನರ ಪ್ರತಿರೋಧ ಬೆಳೆಯುತ್ತದೆ ಎನ್ನುವ ಕಾರಣಕ್ಕೆ ಸರ್ಕಾರಗಳು ಈ ವಿಷಯಗಳಲ್ಲಿ ಮೃದುಧೋರಣೆ ತಳೆಯುತ್ತವೆ. ಆದರೆ ಸರ್ಕಾರದ ಸಡಿಲ ನಿಲುವು ಅಶಿಸ್ತಿಗೆ ಆಹ್ವಾನವಾಗಬಾರದು. ಕೋವಿಡ್-19 ಅಲೆ ಮರುಕಳಿಸಿದರೆ ಅತ್ಯಧಿಕ ಸಂಕಟಕ್ಕೆ ಒಳಗಾಗುವವರು ಸಾಮಾನ್ಯ ಪ್ರಜೆಗಳೇ ಎಂಬುದು ನಮ್ಮ ಗಮನದಲ್ಲಿರಬೇಕು. ಸರ್ಕಾರದ ನೀತಿ ಹೇಗೆಯೇ ಇದ್ದರೂ, ನಾವು ವೈಯಕ್ತಿಕ ಮತ್ತು ಸಮಷ್ಟಿ ಶಿಸ್ತನ್ನು ಪಾಲಿಸುವುದು ಬಹಳ ಮುಖ್ಯ. ಸರಳವಾಗಿ ಏನು ಮಾಡಬೇಕೆಂಬುದನ್ನು ಹಿಂದಿನ ಅಲೆಗಳು ನಮಗೆ ಕಲಿಸಿವೆ. ಕೈಗಳನ್ನು ಸಾಬೂನು ಮತ್ತು ನೀರಿನಿಂದ ಆಗಾಗ ತೊಳೆದು ಸ್ವಚ್ಛವಿಡುವುದು; ವೈಯಕ್ತಿಕ ನೈರ್ಮಲ್ಯ; ಇತರರನ್ನು ಸುರಕ್ಷಿತವಾಗಿ ಇರುವಂತೆ ಪ್ರೇರೇಪಿಸುವುದು; ಎಚ್ಚರಿಕೆಯ ಅಂಶಗಳನ್ನು ಕುಟುಂಬ ಸದಸ್ಯರ ಜೊತೆ ಕಾಲಕಾಲಕ್ಕೆ ಚರ್ಚಿಸುತ್ತಾ ಅವರನ್ನು ಸನ್ನದ್ಧರಾಗಿ ಇಡುವುದು; ರೋಗದ ಮೊದಲ ಲಕ್ಷಣಗಳು ಕಂಡ ಒಡನೆಯೇ ಅಂತಹವರನ್ನು ಇತರರಿಂದ ಪ್ರತ್ಯೇಕಿಸುವುದು; ವೈದ್ಯರ ಸಲಹೆ ಪಡೆದು ಪರೀಕ್ಷೆ, ಚಿಕಿತ್ಸೆ ಮಾಡಿಸುವುದು – ಮೊದಲಾದ ಎಚ್ಚರಗಳು ಸದಾ ಇರಬೇಕು. ಇದರಲ್ಲಿ ಯಾವ ರೀತಿಯ ವಿನಾಯತಿಯೂ ಸಲ್ಲದು. ಅದನ್ನು ಕ್ರಮಬದ್ಧವಾಗಿ ಪಾಲಿಸುವುದು ಮಾತ್ರ ನಮ್ಮ ಕೈಯಲ್ಲಿದೆ.

ಕೋವಿಡ್-19 ಇನ್ನೂ ಕೊನೆಯಾಗಿಲ್ಲ; ಸದ್ಯದಲ್ಲೇ ಕೊನೆಯಾಗುವುದೂ ಇಲ್ಲ; ಕಾಯಿಲೆಯ ಪ್ರಸ್ತುತ ಮರುಕಳಿಕೆ ಅದರ ಮುಕ್ತಾಯವಲ್ಲ. ಯಾವುದೇ ಕಾಯಿಲೆಯ ಅಲೆಗಳು ತಾವಾಗಿಯೇ ಬರುವುದಿಲ್ಲ. ಬೇಜವಾಬ್ದಾರಿ ಸಮಾಜ ಅದನ್ನು ಬರಮಾಡಿಕೊಳ್ಳುತ್ತದೆ. ಅವಜ್ಞೆ ಹೆಚ್ಚಿದಷ್ಟೂ ಅವು ವೇಗವಾಗಿ, ತೀಕ್ಷ್ಣವಾಗಿ ಬರುತ್ತವೆ. ಶಿಸ್ತನ್ನು ಪಾಲಿಸದಿದ್ದರೆ ಮತ್ತೆ ಮತ್ತೆ ಬರುತ್ತಲೇ ಇರುತ್ತವೆ; ಸಂಯಮರಹಿತ ಸಮಾಜಗಳು ತಮ್ಮ ಸರದಿಗಾಗಿ ಕಾದಿರುತ್ತವೆ. ನಮ್ಮ ದೇಶ ಕೋವಿಡ್-19 ಅಲೆಗೆ ಮತ್ತೊಮ್ಮೆ ತುತ್ತಾಗದಿರುವುದು ಸಾರ್ವಜನಿಕರ ಕಟ್ಟೆಚ್ಚರದಲ್ಲಿದೆ.

❖

ಮಳೆಗಾಲದಲ್ಲಿ ಚರ್ಮದ ಆರೋಗ್ಯ

ಡಾ. ಸತ್ಯನಾರಾಯಣ ಭಟ್ ಪಿ.

ಬೆವರಿನ ಬವಣೆ ತಪ್ಪಿತು ಎಂಬ ನಿರಾಳತೆ ಮಳೆಗಾಲದುದ್ದಕ್ಕೆ ಮನಗಾಣುವೆವು. ಚರ್ಮದಲ್ಲಿ ಮಲಿನಾಂಶದ ಶೇಖರಣೆ ಆದರೆ ಆಗ ತುರಿಕೆ, ಕಜ್ಜಿಗಳು ಆರಂಭವಾಗುತ್ತವೆ. ಕೊನೆಗೆ ಮಳೆಗಾಲದ ಹಣ್ಣಿನ ರಾಜ ಮಾವು, ಹಲಸಿನ ಮೇಲೆಯೂ ದೋಷಾರೋಪಣೆಯನ್ನು ಮಾಡುತ್ತೇವೆ. ಅವು ನಂಜಿನ ಪದಾರ್ಥಗಳು ಎಂದು ಟೀಕೆ; ಹೆಚ್ಚು ತಿಂದರೆ ಚರ್ಮದಲ್ಲಿ ಬೊಕ್ಕೆ, ಕುರು, ಕಜ್ಜಿ, ದದ್ದು ಮತ್ತು ಕೆಸರುಹುಣ್ಣು ಎಂಬ ಅಭಿಪ್ರಾಯ ನಮಗಿದೆ.

ಇಳೆಯ ಮಳೆ ತಂಪನ್ನು ತರುವುದು. ಬೆವರು ಇಳಿದು ಹದ ಚಳಿ ಇದ್ದೀತು. ಆಗ ಧರಿಸುವ ಬಿಗಿ ಉಡುಪು, ವಿಶೇಷತಃ ಕೃತಕ ನೂಲಿನ ದಿರಸು ಕೂಡ ತ್ವಚೆಗೆ ತ್ರಾಸದಾಯಕ. ಒಣಗದ ಬಟ್ಟೆಯನ್ನು ಧರಿಸುವ ದೆಸೆಯಿಂದಲೂ ಇಂತಹ ಕಿರಿಕಿರಿಯ ಕಾಯಿಲೆಗಳಿಗೆ ಆಸ್ಪದ. ನೆನಪಿಡಿ. ಹಗುರ ಮತ್ತು ಚೆನ್ನಾಗಿ ಒಣಗಿದ ಹತ್ತಿಬಟ್ಟೆಯ ಸಹವಾಸ, ಕೂಸಿಗಾಗಲಿ, ಹಿರಿಹರೆಯದವರಿಗಾಗಲಿ ಖಂಡಿತ ಅತ್ಯಗತ್ಯ. ಒಣಗದ ಬಟ್ಟೆಗಳಿಂದ ಕಂಕುಳು, ತೊಡೆಸಂದು, ಗುಪ್ತಾಂಗಗಳು, ಮಹಿಳೆಯರ ಎದೆಗಟ್ಟಿನ ಕೆಳಗಿನ ಚರ್ಮದ ತುರಿಕೆ, ಬಣ್ಣಗೆಡುವ ಮತ್ತು ಗುಳ್ಳೆಗಳೇಳಲು ಅವಕಾಶವಾಗುತ್ತದೆ.

ತಂಪು ಗಾಳಿಯನ್ನು ತಡೆಯಲು, ತೇವಾಂಶವನ್ನು ದೂರವಿಡಲು ಕಿಟಕಿ, ಬಾಗಿಲು ಮುಚ್ಚಿರುವ ಮನೆಗಳು ಹೊಸ ತೊಂದರೆಗೆ ಇಂಬೀಯುತ್ತವೆ. ಒಳಗೆ ಇರುವ ಬೂಷ್ಟು, ಶಿಲೀಂಧ್ರಗಳು ಗಾಳಿಯಲ್ಲಿ ಹೆಚ್ಚುತ್ತವೆ. ಮೂಗಿನೊಳಗೆ ತೂರಿದರೆ ನೆಗಡಿ, ಸೀನು. ಚರ್ಮದಡಿ ತಂಗಿದರೆ ಗಾದರಿ ಗುಳ್ಳೆಗಳಿಗಿದೆ ಅವಕಾಶ. ಹಳ್ಳಿಯ ಹೆಂಚಿನ ಮನೆಗಳಲ್ಲಿ ಇರಲಿ, ತಾರಸಿ ಕಟ್ಟಡವಿರಲಿ, ಇಂತಹ ಬವಣೆ ತಪ್ಪಿದ್ದಲ್ಲ. ಅಗ್ಗಿಷ್ಟಿಕೆ, ಅಂದರೆ ಮಣ್ಣ ಬಾನಿಯ ಕೆಂಡಕ್ಕೆ ಹಸಿ ಸೊಪ್ಪನ್ನು ಹಾಕಿ ಹೊಗೆ ಬರಿಸುವ ವಿಧಾನ ಪ್ರಯೋಜನಕಾರಿ. ಲಕ್ಕಿಗಿಡದ ಎರಡು ಮೂರು ಪ್ರಭೇದಗಳಿವೆ. ಅದರ ಎಲೆಗಳನ್ನು ಹಾಕಿದರೆ ಕೊಠಡಿ, ದನದ ಕೊಟ್ಟಿಗೆ ತುಂಬ ಹೊಗೆ; ಇದರಿಂದ ಸೊಳ್ಳೆ, ಪರೋಜೀವಿಗಳ ಬೆಳೆಗೆ ಕಡಿವಾಣ. ಕಹಿ ಬೇವಿನೆಲೆ, ಲೋಳೆಸರದ ಘನೀಕೃತ ಕೆಂಪು ಗಟ್ಟಿ ಮುಸಾಂಬರ, ಅರಿಸಿನ, ಸಾಸಿವೆ, ಲೋಭಾನ, ಧೂಪದ ಹೊಗೆಯಿಂದಲೂ ವಾತಾವರಣದ ಸೂಕ್ಷ್ಮಜೀವಿಗಳ ನಿರ್ಮೂಲನೆ ಸಾಧ್ಯ.



ಸೊಳ್ಳೆಗಳು ಕಚ್ಚಿದ ಹಸುಗೂಸಿಗಂತೂ ಕೆಂಪನೆ ಗುಳ್ಳೆ ಗಾದರಿಗಳು ಸಹಜ. ಪರದೆ ಹಾಕಿ ಕೂಸಿನ ಆರೋಗ್ಯವನ್ನು ಕಾಪಾಡಿರಿ. ಕಕ್ಕೆಮರ(ರಾಲಿ ಹೆಸರು ರಾಲಿ, ತುಳುವರ ಕೊಂದೆ) ಕರಿಯ ಒಣಕಾಯಿಗಿದೆ 'ಬಂದರ್ ಲಾಠೀ' ಎಂಬ ಹಿಂದಿ ಹೆಸರು. ಕೋತಿಬಾಲದಂತೆ ಮರದ ತುಂಬ ಜೋತಾಡುವ ಈ ಮರದ ಕಾಯಿಯನ್ನು ಸುಟ್ಟಾಗ ಹೊಗೆ ಬರುತ್ತದೆ. ಅಂತಹ ಹೊಗೆಯಿಂದ ಜಿರಳೆಗಳನ್ನು ಓಡಿಸಲಾದೀತು. ಕಾಲುಬೆರಳುಗಳ ಸಂದಿಯ ಕೆಸರುಹುಣ್ಣು ತೊಂದರೆ ಮಳೆಗಾಲದುದ್ದಕ್ಕೆ ಕಾಡುವ ಕಾಟ. ಅರಶಿನದ ಜತೆ ಬಿಸಿ ಕೊಬ್ಬರಿಯೆಣ್ಣೆಯನ್ನು ಹಚ್ಚಿರಿ. ಉರಿ, ನೋವು, ಕಿರಿ ಕಿರಿ ತಪ್ಪೀತು. ಇದಕ್ಕೆ ಹೊಗೆಯನ್ನು ಕೊಡಲು ಆಸ್ಪದವಿದೆ. ಚರ್ಮದ ತೇವಾಂಶಕ್ಕೆ ಇದು ಕಡಿವಾಣ; ಗಾಯ ಮಾಯಲು ಅವಕಾಶ. ಚೆನ್ನಾಗಿ ದ್ರವಾಂಶಭರಿತ ಆಹಾರ ನಿಮ್ಮದಾಗಿರಲಿ. ತಪ್ಪದೆ ವಾರಕ್ಕೆರಡು ಬಾರಿಯಂತೂ ಅರಿಸಿನಸಹಿತ ಬಿಸಿ ಮಾಡಿದ ತೆಂಗಿನೆಣ್ಣೆ, ಎಳ್ಳೆಣ್ಣೆಗಳ ಮೈಮಾಲೀಶನ್ನು ತಪ್ಪಿಸದಿರಿ. ಹದವಾದ ಬಿಸಿನೀರಿನ ಜಳಕದ ಭಾಗ್ಯ ನಿಮ್ಮದಾಗಲಿ. ಹೊಲದ ದುಡಿಮೆಯ ವೇಳೆ ಮೈಕೈಯ ಕೆಸರು, ಒದ್ದೆ ಮುದ್ದೆಯ ದಿರಸು ಸಹಜ. ಆದರೆ ಕೆಲಸದ ಪಾಳಿಯ ಅನಂತರ ಅಭ್ಯಂಗ, ಸ್ನಾನದ ಉಪಚಾರಕ್ಕೆ ಶರಣು ಹೋಗಿರಿ. ಒಣ ಬಟ್ಟೆಯನ್ನು ಧರಿಸಿ, ಉಂಡು, ಬೆಚ್ಚನೆ ನೆಲವನ್ನೋ ಚಾಪೆಯನ್ನೋ ಹೊದಿಕೆಯನ್ನೋ ಸೇರಿಕೊಳ್ಳಿರಿ. ತೇವಾಂಶದ ಗಾಳಿಗೊಡ್ಡುವಿಕೆ ಚರ್ಮಾರೋಗ್ಯಕ್ಕೆ ಬಾಧಕ.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಗಣಿತ

ಎರಡು ಚರಾಕ್ಷರಗಳಿರುವ ರೇಖಾತ್ಮಕ ಸಮೀಕರಣಗಳ ಜೋಡಿಗಳು

ಸಮಸ್ಯೆ ಮತ್ತು ಪರಿಹಾರ

$$x + 3y = 6 \quad (1)$$

ಮತ್ತು

$$2x - 3y = 12 \quad (2)$$


ಈ ಸಮೀಕರಣಗಳು ಸ್ಥಿರವೇ ಎಂಬುದನ್ನು ನಕ್ಷೆಯ ಮೂಲಕ ಪರೀಕ್ಷಿಸಿ, ಹೌದು ಎನ್ನುವುದಾದರೆ ನಕ್ಷಾ ಕ್ರಮದಿಂದ ಬಿಡಿಸಿ.

ಪರಿಹಾರ:– ಸಮೀಕರಣ (1) ಮತ್ತು (2)ರ ನಕ್ಷೆ ರಚಿಸಲು ಕೆಳಗಿನ ಕೋಷ್ಟಕದಲ್ಲಿರುವಂತೆ ಎರಡೆರಡು ಪರಿಹಾರವನ್ನು ಕಂಡು ಹಿಡಿದುಕೊಳ್ಳಬೇಕು

x	0	6
$y = \frac{6-x}{3}$	2	0

x	0	3
$y = \frac{2x-12}{3}$	-4	-2

ಚಿತ್ರದಲ್ಲಿ ತೋರಿಸಿದಂತೆ ಗ್ರಾಫ್ ಹಾಳೆಯ ಮೇಲೆ **A** (0, 2) **B**(6, 0) **P**(0, –4) ಮತ್ತು **Q**(3, –2) ಬಿಂದುಗಳನ್ನು ಗುರುತಿಸಿ **AB** ಮತ್ತು **PQ** ರೇಖೆಗಳುಂಟಾಗುವಂತೆ ಅವುಗಳನ್ನು ಜೋಡಿಸಬೇಕು.



AB ಮತ್ತು **PQ** ಈ ಎರಡು ರೇಖೆಗಳಿಗೂ ಸಾಮಾನ್ಯವಾಗಿರುವಂತೆ **B** (6, 0) ಎಂಬ ಬಿಂದು ಇರುವುದನ್ನು ಗಮನಿಸಬಹುದು ಆದ್ದರಿಂದ ರೇಖಾತ್ಮಕ ಸಮೀಕರಣಗಳ ಜೋಡಿಗೆ **x** =6 ಮತ್ತು **y** =0 ಎಂಬುದು ಪರಿಹಾರವಾಗಿದೆ ಅಂದರೆ ದತ್ತ ಸಮೀಕರಣ ಜೋಡಿಯು ಸ್ಥಿರವಾಗಿದೆ

2) ಚಂಪಾಳು ಕೆಲವು ಪ್ಯಾಂಟ್ ಮತ್ತು ಲಂಗಗಳನ್ನು ಖರೀದಿಸಲು ಒಂದು ಮಾರಾಟ ಮಳಿಗೆಗೆ ಹೋದಳು. ಪ್ರತಿಯೊಂದನ್ನು ಎಷ್ಟೆಷ್ಟು ಖರೀದಿಸಿದಳೆಂದು ಅವಳ ಗೆಳತಿಯರು ಕೇಳಿದಾಗ ಅವಳು ಹೀಗೆ ಉತ್ತರಿಸಿದಳು. 'ಖರೀದಿಸಿದಂತಹ ಲಂಗಗಳ ಸಂಖ್ಯೆಯು ಪ್ಯಾಂಟ್‌ಗಳ ಸಂಖ್ಯೆಯ ಇಮ್ಮಡಿಗಿಂತ ಎರಡು ಕಡಿಮೆ. ಅಲ್ಲದೆ, ಖರೀದಿಸಿದಂತಹ ಲಂಗಗಳ ಸಂಖ್ಯೆಯು ಪ್ಯಾಂಟುಗಳ ಸಂಖ್ಯೆಯ ನಾಲ್ಕು ಪಟ್ಟಿಗಿಂತ ನಾಲ್ಕು ಕಡಿಮೆ'. ಚಂಪಾ ಎಷ್ಟು ಪ್ಯಾಂಟ್ ಮತ್ತು ಎಷ್ಟು ಲಂಗಗಳನ್ನು ಖರೀದಿಸಿದಳು ಎಂಬುದನ್ನು ಕಂಡುಹಿಡಿಯಲು ಅವಳ ಗೆಳತಿಯರಿಗೆ ಸಹಾಯ ಮಾಡಿ.

ಪರಿಹಾರ: ಪ್ಯಾಂಟ್‌ಗಳ ಸಂಖ್ಯೆಯನ್ನು x ನಿಂದಲೂ, ಲಂಗಗಳ ಸಂಖ್ಯೆಯನ್ನು y ಯಿಂದಲೂ ನಾವು ಗುರುತಿಸೋಣ. ಆಗ ಉಂಟಾಗುವ ಸಮೀಕರಣಗಳೆಂದರೆ,


$$y = 2x - 2 \quad (1)$$

$$y = 4x - 4 \quad (2)$$

ಪ್ರತಿಯೊಂದು ಸಮೀಕರಣಕ್ಕೂ ಎರಡೆರಡು ಪರಿಹಾರಗಳನ್ನು ಕಂಡುಹಿಡಿಯುವ ಮೂಲಕ ನಾವು (1) ಮತ್ತು (2)ನೇ ಸಮೀಕರಣಗಳ ನಕ್ಷೆಗಳನ್ನು ರಚಿಸೋಣ.

x	2	0
$y = 2x - 2$	2	-2

x	0	1
$y = 4x - 4$	-4	0



ಎರಡು ಸರಳರೇಖೆಗಳು (1, 0) ಬಿಂದುವಿನಲ್ಲಿ ಛೇದಿಸುತ್ತವೆ. ಆದ್ದರಿಂದ ರೇಖಾತ್ಮಕ ಸಮೀಕರಣಗಳ ಜೋಡಿಗೆ ಅಪೇಕ್ಷಿತ ಪರಿಹಾರ $x = 1$, $y = 0$ ಅಂದರೆ ಅವಳು ಒಂದು ಪ್ಯಾಂಟ್‌ನ್ನು ಖರೀದಿಸಿದಳು ಮತ್ತು ಅವಳು ಲಂಗವನ್ನು ಖರೀದಿಸಲಿಲ್ಲ.

ಅಭ್ಯಾಸ 3.1

ಕೆಳಗೆ ನೀಡಿರುವ ಸಮಸ್ಯೆಗಳಿಗೆ ರೇಖಾತ್ಮಕ ಸಮೀಕರಣಗಳ ಜೋಡಿಗಳನ್ನು ರಚಿಸಿರಿ ಮತ್ತು ನಕ್ಷಾಕ್ರಮದಿಂದ ಅವುಗಳಿಗೆ ಪರಿಹಾರಗಳನ್ನು ಕಂಡಿಹಿಡಿಯಿರಿ.

(i) X ತರಗತಿಯ 10 ವಿದ್ಯಾರ್ಥಿಗಳು ಗಣಿತ ರಸಪ್ರಶ್ನೆಯಲ್ಲಿ ಭಾಗವಹಿಸಿದರು. ಹುಡುಗರ ಸಂಖ್ಯೆಗಿಂತ, ಹುಡುಗಿಯರ ಸಂಖ್ಯೆಯು 4 ಹೆಚ್ಚಾಗಿದ್ದರೆ, ರಸಪ್ರಶ್ನೆಯಲ್ಲಿ ಭಾಗವಹಿಸಿದ ಹುಡುಗರ ಮತ್ತು ಹುಡುಗಿಯರ ಸಂಖ್ಯೆಗಳನ್ನು ಕಂಡುಹಿಡಿಯಿರಿ.

(ii) 5 ಪೆನ್ಸಿಲು ಮತ್ತು 7 ಪೆನ್ನುಗಳ ಒಟ್ಟು ಬೆಲೆ ₹ 50. ಹಾಗೆಯೇ 7 ಪೆನ್ಸಿಲು ಮತ್ತು 5 ಪೆನ್ನುಗಳ ಒಟ್ಟು ಬೆಲೆ ₹ 46. ಪ್ರತಿಯೊಂದು ಪೆನ್ಸಿಲಿನ ಹಾಗೂ ಪೆನ್ನಿನ ಬೆಲೆಗಳನ್ನು ಕಂಡುಹಿಡಿಯಿರಿ.

ಪರಿಹಾರ: ಹುಡುಗಿಯರ ಸಂಖ್ಯೆ x ಮತ್ತು ಹುಡುಗರ ಸಂಖ್ಯೆ y ಆಗಿರಲಿ

ವಿದ್ಯಾರ್ಥಿಗಳ ಸಂಖ್ಯೆ = 10

$$x + y = 10$$
$$x - y = 4$$

ಈಗ $x+y = 10$ ಅಥವಾ $x = 10-y$ ಸಮೀಕರಣಕ್ಕೆ

x	5	4	6
y	5	6	4

ಹಾಗೂ $x - y = 4$ ಅಥವಾ $x = 4 + y$ ಸಮೀಕರಣಕ್ಕೆ

x	4	5	3
y	0	1	-1

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC: MATHS

DETERMINANTS

10. Find the determinant of the following eqns:

$$3x + 2y + 5z = 32$$
$$2x + 5y + 3z = 31$$
$$5x + 3y + 2z = 27$$

Soln :– Given equations are –

$$3x + 2y + 5z = 32$$
$$2x + 5y + 3z = 31$$
$$5x + 3y + 2z = 27$$

$$\text{is } \Delta = \begin{vmatrix} 3 & 2 & 5 \\ 2 & 5 & 3 \\ 5 & 3 & 2 \end{vmatrix} = 3(1) - 2(-11) + 5(-19)$$

$$= 3 + 22 - 95$$
$$= -70$$

11. If $A = \begin{bmatrix} 3 & 2 & x \\ 4 & 1 & -1 \\ 0 & 3 & 4 \end{bmatrix}$ **is a singular matrix, find x.**

Soln :– Consider, matrix $A = \begin{bmatrix} 3 & 2 & x \\ 4 & 1 & -1 \\ 0 & 3 & 4 \end{bmatrix}$

is a singular matrix, hence $|A| = 0$

$$\Rightarrow \begin{vmatrix} 3 & 2 & x \\ 4 & 1 & -1 \\ 0 & 3 & 4 \end{vmatrix} = 0$$

$$\Rightarrow 3(4+3) - 2(16-0) + x(12-0) = 0$$
$$\Rightarrow 21 - 32 + 12x = 0 \Rightarrow 12x - 11 = 0$$
$$\Rightarrow x = \frac{11}{12}$$

Minors and co-factors

Minor of an element a_{ij} of the determinant of matrix A is the determinant obtained by deleting i^{th} row and j^{th} column, and it is denoted by M_{ij}.

ii) Co-factor of an element a_{ij} is given by

$$A_{ij} = (-1)^{i+j} M_{ij}.$$

iii) Value of determinant of a matrix A is obtained by the sum of products of elements of a row (or a column) with corresponding co-factors.

Eg :– $|A| = a_{11}A_{11} + a_{12}A_{12} + a_{13}A_{13}$

iv) If elements of a row (or column) are multiplied with co-factors of element of any other row (or column), then their sum is zero.

Eg :– $|A| = a_{11}A_{21} + a_{12}A_{22} + a_{13}A_{23}$

Answer the following :-

1) Write a brief note on Minor of an element.

Soln :– Consider, $A = \begin{bmatrix} a_{11} & a_{12} & a_{13} \\ b_{11} & b_{12} & b_{13} \\ c_{11} & c_{12} & c_{13} \end{bmatrix}$

a square matrix of order 3

The minor of an element a_{ij} is defined to be the 2^{nd} order determinant obtained by deleting i^{th} row and j^{th} column and is denoted by A_{ij}

Eg :– $A_{11} = \begin{vmatrix} b_{12} & b_{13} \\ c_{12} & c_{13} \end{vmatrix}$; $A_{12} = \begin{vmatrix} a_{11} & a_{13} \\ b_{11} & b_{13} \end{vmatrix}$;

$A_{13} = \begin{vmatrix} a_{11} & a_{12} \\ b_{11} & b_{12} \end{vmatrix}$ etc.,

2) Write a brief note on Co-factor of an element.

Soln :– Consider, $A = \begin{bmatrix} a_{11} & a_{12} & a_{13} \\ b_{11} & b_{12} & b_{13} \\ c_{11} & c_{12} & c_{13} \end{bmatrix}$

a square matrix of order 3

The Co – factor of an element a_{ij} denoted by C_{ij} is defined by $C_{ij} = (-1)^{i+j} \cdot a_{ij}$., where A_{ij} is the minor of a_{ij}.

Thus, $C_{11} = A_{11}$, $C_{12} = -A_{12}$, $C_{13} = A_{13}$

$C_{21} = -A_{21}$, $C_{22} = -A_{22}$, $C_{23} = -A_{23}$

$C_{31} = A_{31}$, $C_{32} = -A_{32}$, $C_{33} = A_{33}$

3) What is Adjoint of matrix A?

Soln :– Adjoint of a matrix is the transpose of cofactor matrix of A & denoted by adj A

If $A = \begin{bmatrix} a_{11} & a_{12} & a_{13} \\ b_{11} & b_{12} & b_{13} \\ c_{11} & c_{12} & c_{13} \end{bmatrix}$

the adjoint of A is defined by

$$\text{adj } A = \begin{bmatrix} C_{11} & C_{12} & C_{13} \\ C_{21} & C_{22} & C_{23} \\ C_{31} & C_{32} & C_{33} \end{bmatrix}^{1} = \begin{bmatrix} C_{11} & C_{21} & C_{31} \\ C_{12} & C_{22} & C_{32} \\ C_{13} & C_{23} & C_{33} \end{bmatrix}$$

4) What is inverse of a square matrix?

Ans :– If A is a non – singular (i.e., $|A| \neq 0$) matrix then the inverse of A is $A^{-1} = \frac{\text{adj } A}{|A|}$

5) Find the adjoint of $\begin{bmatrix} 4 & -7 \\ -2 & 5 \end{bmatrix}$

Soln :– Given that $\begin{bmatrix} 4 & -7 \\ -2 & 5 \end{bmatrix}$

$$C_{11} = A_{11} = 5$$
$$C_{12} = -A_{12} = -(-2) = 2$$
$$C_{21} = -A_{21} = -(-7) = 7$$
$$C_{22} = A_{22} = 4$$

$$\therefore \text{adj } A = \begin{bmatrix} 5 & 2 \\ 7 & 4 \end{bmatrix}' = \begin{bmatrix} 5 & 7 \\ 2 & 4 \end{bmatrix}$$

(Contd……)



ಹಿಂದುಳಿದವರ ಆಶಾಕಿರಣ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 2 ವರ್ಷದ ಸಾಧನೆಯ ಹಾದಿ



ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಹಾಸ್ಟೆಲ್ ನಿರ್ವಹಣೆಯಲ್ಲಿ ಪಾರದರ್ಶಕತೆ

ಅಂಗೈಯಲ್ಲಿ ಮಾಹಿತಿ

ಲೋಕಕ್ಕೆ ಒಳ್ಳೆಯದು ಮಾಡುವ ಯಾರೇ ಮಾಡಿದರೂ ನೀವು ಅದಕ್ಕೆ ಬೆಂಬಲ ಕೊಡಬೇಕು, ಸಹಕರಿಸಬೇಕು. ನೀವು ಒಪ್ಪಿರುವ ತತ್ವಗಳನ್ನೇ ಆಚರಿಸ ಹೊರಡುವವರನ್ನು ವಿರೋಧಿಗಳೆಂದು ಹೇಳುವುದು ಅವಿವೇಕ. ಒಳ್ಳೆಯ ಕೆಲಸ ಎಲ್ಲಿ ನಡೆಯುತ್ತದೆಯೋ ಅದನ್ನು ನೀವು ಒಪ್ಪಿಕೊಳ್ಳಬೇಕು. ಬೆಂಬಲ ಕೊಡಬೇಕು. ಅದನ್ನು ಪ್ರಚೋದಿಸಬೇಕು. ಪ್ರಚಾರಮಾಡಬೇಕು.



ಕುವೆಂಪು

ಗಣಕೀಕೃತ ಆಡಳಿತ ವ್ಯವಸ್ಥೆ ಜಾರಿಗೊಳಿಸುವಲ್ಲಿ ಯಶಸ್ವಿಯಾದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ್ ತಂಗಡಗಿ

ಎಷ್ಟೋ ಬಡ ಮಕ್ಕಳಿಗೆ ಓದಿನಲ್ಲಿ ಆಸಕ್ತಿ ಇರುತ್ತದೆ. ಆದರೆ, ಸೌಲಭ್ಯಗಳ ಕೊರತೆಯಿಂದ ವಿದ್ಯಾಭ್ಯಾಸವನ್ನು ಮೊಟಕುಗೊಳಿಸುವ ಪರಿಸ್ಥಿತಿ ಎದುರಾಗುತ್ತದೆ. ಇಂತಹ ಸಾವಿರಾರು ಬಡ ಮಕ್ಕಳಿಗೆ ಸರ್ಕಾರಿ ಹಾಸ್ಟೆಲ್‌ಗಳೇ ಆಸರೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ಹಾಸ್ಟೆಲ್‌ಗಳ ನಿರ್ವಹಣೆ ಎಂಬುದು ಸವಾಲೇ ಸರಿ.

ಆದರೆ, ಬಡತನದ ಬೇಗೆಯಲ್ಲಿ ಬಂದು ಹಾಸ್ಟೆಲ್ ವ್ಯವಸ್ಥೆಯಲ್ಲಿ ಬೆಳೆದ ಸಚಿವ ಶಿವರಾಜ್ ತಂಗಡಗಿ ಅವರು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜವಾಬ್ದಾರಿ ವಹಿಸಿಕೊಂಡ ಕೂಡಲೇ ಇಲಾಖೆಯ ಹಾಸ್ಟೆಲ್‌ಗಳ ಕಾರ್ಯನಿರ್ವಹಣೆಯಲ್ಲಿ ತೆಗೆದುಕೊಂಡ ಕ್ರಮಗಳು ನಿಜಕ್ಕೂ ಮಾದರಿಯಾಗಿವೆ.

ತಾವು ಅಧಿಕಾರ ವಹಿಸಿಕೊಂಡ ಕೂಡಲೇ ಹಾಸ್ಟೆಲ್ ಗಳಲ್ಲಿ ಪಾರದರ್ಶಕತೆ, ಸುಧಾರಣೆ ತರುವ ಮೂಲಕ ಸಂಪೂರ್ಣ ಗಣಕೀಕೃತ ಆಡಳಿತ ವ್ಯವಸ್ಥೆ ಜಾರಿಗೊಳಿಸುವಲ್ಲಿ ಸಚಿವರು ಯಶಸ್ವಿಯಾಗಿದ್ದಾರೆ.

ಇಲಾಖೆ ಅಧೀನದಲ್ಲಿ ಪೂರ್ವ ಮೆಟ್ರಿಕ್ 1284 ಹಾಗೂ ಮೆಟ್ರಿಕ್ ನಂತರದ 1,162 ಸೇರಿ ಒಟ್ಟು 2,597 ಹಾಸ್ಟೆಲ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಮೆಟ್ರಿಕ್ ಪೂರ್ವ ಹಾಸ್ಟೆಲ್‌ಗಳಲ್ಲಿ 66,413 ವಿದ್ಯಾರ್ಥಿಗಳು, ಮೆಟ್ರಿಕ್ ನಂತರದ ಹಾಸ್ಟೆಲ್ ಗಳಲ್ಲಿ 1,18,415 ಮಕ್ಕಳು ಪ್ರವೇಶ ಪಡೆದಿದ್ದಾರೆ.

ಹಾಸ್ಟೆಲ್‌ಗಳ ನಿರ್ವಹಣೆಗೆ ಇ-ವ್ಯವಸ್ಥೆ




ಇಲಾಖೆ ಅಧೀನದಲ್ಲಿ ಬರುವ ಎಲ್ಲ ಹಾಸ್ಟೆಲ್‌ಗಳ ನಿರ್ವಹಣೆಗಾಗಿ ಇ-ವ್ಯವಸ್ಥೆ ಜಾರಿಗೆ ತಂತ್ರಾಂಶವನ್ನು ಅಭಿವೃದ್ಧಿಪಡಿಸಲಾಗಿದೆ.

ಕೊರತೆ ಆರೋಪಗಳು: ಕಳಪೆ ಆಹಾರ ಪೂರೈಕೆ ಮೂಲ ಸೌಲಭ್ಯಗಳ ಕೊರತೆ ಆರೋಪಗಳು ಈ ತಂತ್ರಾಂಶದ ಅಳವಡಿಕೆಯಿಂದ ಕಡಿಮೆಯಾಗಲಿದೆ.

ಭೋಜನದ ಫೋಟೋ ಅಪ್ಲೋಡ್: ಹಾಸ್ಟೆಲ್‌ಗಳಲ್ಲಿ ನಿಗದಿತ ಮೆನು ಚಾರ್ಟ್ ಅನುಸಾರ ಭೋಜನದ ವ್ಯವಸ್ಥೆಯನ್ನು ಪರಿಚಯದ ಬಗ್ಗೆ ಪರಿಶೀಲಿಸಲಾಗುತ್ತದೆ. ತಯಾರಿಸಲಾದ ಭೋಜನದ ಫೋಟೋಗಳನ್ನು ಈ ತಂತ್ರಾಂಶದ ಮೂಲಕ ಕಡ್ಡಾಯವಾಗಿ ಅಪ್ಲೋಡ್ ಮಾಡಲಾಗುತ್ತದೆ.

ಸೌಲಭ್ಯಗಳ ಮಾಹಿತಿ: ಹಾಸ್ಟೆಲ್‌ಗಳಲ್ಲಿ ನಿತ್ಯ ಸ್ವಚ್ಛತೆ, ವಿದ್ಯಾರ್ಥಿಗಳಿಗೆ ನೀಡುವ ಸೌಲಭ್ಯಗಳ ವಿವರಗಳನ್ನು ತಂತ್ರಾಂಶದ ಮೂಲಕ ಪಡೆಯುವ ವ್ಯವಸ್ಥೆ ಕಲ್ಪಿಸಲಾಗಿದೆ.

'ಬಡತನದಿಂದ ಬಂದ ನಾನು ಹಾಸ್ಟೆಲ್ ಜೀವನ ಕಂಡಿದ್ದೇನೆ. ಹೀಗಾಗಿ ಹಾಸ್ಟೆಲ್ ಆಹಾರ ಹೇಗಿರುತ್ತದೆ ಎಂಬುದು ತಿಳಿದಿದ್ದೇನೆ. ಹಾಸ್ಟೆಲ್‌ಗಳಲ್ಲಿ ಉತ್ತಮ ಗುಣಮಟ್ಟದ ಆಹಾರ ಪೂರೈಕೆಯೇ ನನ್ನ ಆದ್ಯತೆ. ಈ ಉದ್ದೇಶದಿಂದ ಸಂಪೂರ್ಣವಾಗಿ ಆಹಾರ ಸರಬರಾಜು ವ್ಯವಸ್ಥೆಯನ್ನು ಉನ್ನತೀಕರಿಸಲಾಗಿದೆ ಹಾಗೂ ಪಾರದರ್ಶಕತೆಯನ್ನು ತರಲು ನಿಲಯ ಪೋರ್ಟಲ್ ಅನ್ನು ಜಾರಿಗೆ ತರಲಾಗಿದೆ'.



ಶಿವರಾಜ್ ಎಸ್. ತಂಗಡಗಿ, ಸಚಿವರು ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

150 ನೂತನ ಹಾಸ್ಟೆಲ್

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಪ್ರತಿ ವರ್ಷ ಎರಡೂವರೆ ಲಕ್ಷ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಇನ್ನೂ ಹೆಚ್ಚಿನ ಹಾಸ್ಟೆಲ್‌ಗಳ ಅಗತ್ಯವಿರುವ ನಿಟ್ಟಿನಲ್ಲಿ ಮುಖ್ಯಮಂತ್ರಿಗಳ ಬಳಿ ಸಚಿವರು ವಿಶೇಷವಾಗಿ 150 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸ್ಥಾಪನೆಗೆ ಅನುದಾನ ಪಡೆದಿದ್ದಾರೆ. ಈ ಹಾಸ್ಟೆಲ್‌ಗಳಿಗೆ ಕಳೆದ ಡಿಸೆಂಬರ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಚಾಲನೆ ಕೂಡ ನೀಡಲಾಗಿದೆ.

ಯುಪಿಎಸ್‌ಸಿ ವಿದ್ಯಾರ್ಥಿಗಳಿಗೆ ಉಚಿತ ವಸತಿ ವ್ಯವಸ್ಥೆ: ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್ಸಿ) ಪರೀಕ್ಷೆಗೆ ಸಿದ್ಧತೆ ನಡೆಸುವ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಬೆಂಗಳೂರು ಹಾಗೂ ದೆಹಲಿಯಲ್ಲಿ ಉಚಿತ ವಸತಿ ವ್ಯವಸ್ಥೆ ಕಲ್ಪಿಸುವ ಬಗ್ಗೆ ಸಚಿವ ಶಿವರಾಜ್ ತಂಗಡಗಿ ಅವರು ಅಗತ್ಯ ಕ್ರಮ ವಹಿಸಿದ್ದಾರೆ.

ಕನಕಗಿರಿ, ಕಲಬುರಗಿಯಲ್ಲಿ ಸೇನಾ ತರಬೇತಿ ಶಾಲೆ: ಸಚಿವ ಶಿವರಾಜ್ ತಂಗಡಗಿ ಅವರು ತಮ್ಮ ಕೊಪ್ಪಳ ಜಿಲ್ಲೆ ಅದರಲ್ಲೂ ತಾವು ಪ್ರತಿನಿಧಿಸುವ ಕನಕಗಿರಿ ವಿಧಾನಸಭಾ ಕ್ಷೇತ್ರಕ್ಕೆ ಸೈನಿಕ ಶಾಲೆ ತರಬೇಕೆಂಬುದು ಅವರ ಬಹಳ ದಿನಗಳ ಕನಸಾಗಿತ್ತು. ಅದಕ್ಕಾಗಿ ಬಹಳಷ್ಟು ಶ್ರಮಿಸಿದ್ದರು. ಆದರೆ, ತಾವು ಅಂದುಕೊಂಡಂತೆ ಹಿಂದುಳಿದ ವರ್ಗಗಳ ಇಲಾಖೆಯ ಹೊಣೆಗಾರಿಕೆ ಅವರಿಗೆ ದೊರಕಿದ ಪರಿಣಾಮ 'ಕನಕಗಿರಿಗೆ ಸೈನಿಕ ಶಾಲೆ' ತರುವಲ್ಲಿ ಅವರು ಯಶಸ್ವಿಯಾಗಿದ್ದಾರೆ.

ಸೇನಾ ಆಯ್ಕೆ ಪೂರ್ವ ತರಬೇತಿ ಶಾಲೆ: ಕೊಪ್ಪಳ ಜಿಲ್ಲೆಯ ಕನಕಗಿರಿ ಮತ್ತು ಕಲಬುರಗಿಯ ಕೇಂದ್ರ ಸ್ಥಳಗಳಲ್ಲಿ ಸೇನಾ ಆಯ್ಕೆ ಪೂರ್ವ ತರಬೇತಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. (ಎರಡೂ ಜಿಲ್ಲೆಯಲ್ಲಿ ಒಂದು ಬ್ಯಾಚ್‌ಗೆ 100 ಅಭ್ಯರ್ಥಿ ಗಳು) ಈಗಾಗಲೇ ಆರಂಭಿಸಿರುವ 3 ಸೇನಾ ಆಯ್ಕೆ ಪೂರ್ವ ತರಬೇತಿ ಶಾಲೆಗಳಲ್ಲಿ ಸುಮಾರು 1,000 ಅಭ್ಯರ್ಥಿಗಳಿಗೆ ಯಶಸ್ವಿಯಾಗಿ ತರಬೇತಿ ನೀಡಲಾಗಿದೆ. ದೇಶಾದ್ಯಂತ 300ಕ್ಕೂ ಅಧಿಕ ಅಭ್ಯರ್ಥಿಗಳು ಭಾರತೀಯ ಸೇನಾ ಪಡೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

- **ಪ್ರಸಕ್ತ ಸಾಲಿನಲ್ಲಿ ರಾಜ್ಯದ ಹಾಸ್ಟೆಲ್‌ಗಳಲ್ಲಿ ಹೆಚ್ಚುವರಿ 15 ಸಾವಿರ ವಿದ್ಯಾರ್ಥಿಗಳಿಗೆ ಪ್ರವೇಶಾತಿಗೆ ಅವಕಾಶ**
- **ಕಲ್ಯಾಣ ಕರ್ನಾಟಕದಲ್ಲಿ ₹156 ಕೋಟಿ ವೆಚ್ಚದಲ್ಲಿ 34 ಹಾಸ್ಟೆಲ್ ನಿರ್ಮಾಣಕ್ಕೆ ಕ್ರಮ**
- **ವಿದ್ಯಾಸಿರಿ ಯೋಜನೆಗೆ ₹100 ಕೋಟಿ ಅನುದಾನ ನೀಡಿಕೆ**
- **ಕಳೆದ ವರ್ಷ ಆಯವ್ಯಯದಲ್ಲಿ ನೀಡಲಾಗಿದ್ದ ಅನುದಾನದಲ್ಲಿ ಶೇ 98.42 ರಷ್ಟು ವೆಚ್ಚ**
- **ಗಂಗಾ ಕಲ್ಯಾಣ ಯೋಜನೆ ಅಡಿ ನೀಡಲಾಗುತ್ತಿದ್ದ ಸಹಾಯಧನ ₹2.50 ಲಕ್ಷದಿಂದ ₹3.50 ಲಕ್ಷಕ್ಕೆ ಹೆಚ್ಚಳ**
- **ಹಾಸ್ಟೆಲ್‌ಗಳಲ್ಲಿನ ಪ್ರತಿ ವಿದ್ಯಾರ್ಥಿಗಳ ಭೋಜನ ವೆಚ್ಚ ₹100ಗೆ ಹೆಚ್ಚಳ**
- **ಮಧ್ಯವರ್ತಿಗಳ ಹಾವಳಿ ತಡೆಗೆ ವಿಶ್ವಾಸ್ ತಂತ್ರಾಂಶ ಅಭಿವೃದ್ಧಿ**

ರಾಯಣ್ಣ ಶಿಲ್ಪ ವನ ಸಜ್ಜು!

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಅಧೀನದಲ್ಲಿರುವ ಸಂಗೊಳ್ಳಿ ರಾಯಣ್ಣ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ರಾಯಣ್ಣ ಹುತಾತ್ಮನಾದ ಸ್ಥಳವಾದ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ನಂದಗಡ ಮತ್ತು ಜನ್ಮ ಸ್ಥಳವಾದ ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮ ಹಾಗೂ ಅವುಗಳ ಸುತ್ತಮುತ್ತಲಿನ ಪಾರಂಪರಿಕ ತಾಣಗಳನ್ನು ಅಂತರರಾಷ್ಟ್ರೀಯ ಪ್ರವಾಸ ಸ್ಥಳವಾಗಿ ಅಭಿವೃದ್ಧಿಪಡಿಸಲು ಸಚಿವ ತಂಗಡಗಿ ಹಲವು ಕ್ರಮ ಕೈಗೊಂಡಿದ್ದಾರೆ.

ಇದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಒತ್ತಾಸೆ ಕೂಡ ಇದೆ. ಈ ಹಿನ್ನೆಲೆಯಲ್ಲಿ ನಾಲ್ಕಾರು ಬಾರಿ ನಂದಗಡಕ್ಕೆ ಖುದ್ದು ಸಚಿವರೇ ಭೇಟಿ ನೀಡಿ ಕಾಮಗಾರಿಗಳಿಗೆ ವೇಗ ನೀಡುವಂತೆ ನೋಡಿಕೊಂಡ ಪರಿಣಾಮ 'ರಾಕ್ ಗಾರ್ಡನ್' ಸಾರ್ವಜನಿಕರ ಪ್ರವೇಶಕ್ಕೆ ಮುಕ್ತವಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 10 ಎಕರೆ ಪ್ರದೇಶದಲ್ಲಿ ತಲೆಯೆತ್ತಿರುವ ರಾಕ್ ಗಾರ್ಡನನ್ನು ಉದ್ಘಾಟನೆ ಮಾಡಿದ್ದು, ರಾಯಣ್ಣನ ಕುರಿತಾದ ಸಂಪೂರ್ಣ ಜೀವನ ಸಾರವನ್ನು ಹೇಳುವ ಮಾಹಿತಿ ಈ ಶಿಲ್ಪವನದಲ್ಲಿದೆ. ⌘

ತಂತ್ರಾಂಶದ ವೈಶಿಷ್ಟ್ಯ

ಇ-ತಂತ್ರಾಂಶದಲ್ಲಿ ರಾಜ್ಯದ 31 ಜಿಲ್ಲೆಗಳ ಹಾಸ್ಟೆಲ್‌ಗಳ ಮಾಹಿತಿ, ಪಡಿತರ ವಿತರಕರು, ಸಿಬ್ಬಂದಿ ಪಡಿತರ ವಿತರಕರು, ಆಸ್ತಿ, ಗ್ರಂಥಾಲಯ ಹಾಗೂ ಖಾತೆ ನಿರ್ವಹಣೆಯ ವಿವರಗಳನ್ನು ಅಳವಡಿಸಲಾಗಿದೆ. ಆನ್ಲೈನ್ ಪ್ರವೇಶಾತಿ, ಹಾಜರಾತಿ ಮತ್ತು ವಿದ್ಯಾರ್ಥಿಗಳ ಚಲನವಲನವನ್ನು ದಾಖಲಿಸಲಾಗುತ್ತದೆ. ಹಾಸ್ಟೆಲ್‌ಗಳಿಗೆ ಬೇಕಾಗುವ ಆಹಾರ ಸಾಮಗ್ರಿಗಳ ಬೇಡಿಕೆಯನ್ನು ಪೋರ್ಟಲ್ ಮೂಲಕ ತಂತ್ರಾಂಶದಲ್ಲಿಯೇ ವಿತರಕರಿಗೆ ತಿಳಿಸಲಾಗುತ್ತದೆ. ಆಹಾರ ಸಾಮಗ್ರಿಗಳ ಬಗ್ಗೆ ದೂರುಗಳಿದ್ದರೆ ವಿದ್ಯಾರ್ಥಿಗಳು ಈ ತಂತ್ರಾಂಶದಲ್ಲಿ ನೇರವಾಗಿ ದೂರ ಸಲ್ಲಿಸಲು ಅವಕಾಶ.



2 ವರ್ಷದಲ್ಲಿ 15 ಸಾವಿರ ಬೋರ್‌ವೆಲ್ ಡ್ರಿಲ್

ಅನ್ನದಾತ ರೈತ ಈ ದೇಶದ ಬೆನ್ನೆಲುಬು. ರೈತನಿಗೆ ಅನುಕೂಲ ಮಾಡಿಕೊಡಬೇಕೆಂದೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಗಂಗಾ ಕಲ್ಯಾಣ (ಕೊಳವೆ ಬಾವಿ) ಯೋಜನೆಯನ್ನು ಜಾರಿಗೆ ತರಲಾಗಿದೆ. ಇಲಾಖೆ ವತಿಯಿಂದ ಈ ಯೋಜನೆಯಡಿ ರೈತರಿಗೆ ₹3.50 ಲಕ್ಷ ಒದಗಿಸಲಾಗುತ್ತದೆ.



ಕಳೆದ ಮೂರು ವರ್ಷಗಳಲ್ಲಿ ಹಿಂದಿನ ಸರ್ಕಾರ ಹಲವು ನೆಪಗಳನ್ನೊಡ್ಡಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಒಂದೇ ಒಂದು ಕೊಳವೆ ಬಾವಿ ಕೊರೆಸಿರಲಿಲ್ಲ. ಆದರೆ, ಸಚಿವರಾದ ಶಿವರಾಜ್ ತಂಗಡಗಿ ಅವರು ಯೋಜನೆಗೆ ತಾಂತ್ರಿಕವಾಗಿ ಅಡ್ಡಿಯಾಗಿದ್ದ ಎಲ್ಲ ಸಮಸ್ಯೆಗಳನ್ನು ಬಗೆಹರಿಸಿ, ಎರಡು ವರ್ಷದಲ್ಲಿ ದಾಖಲೆ ಸಂಖ್ಯೆಯ ಕೊಳವೆ ಬಾವಿ ಕೊರೆಸುವಲ್ಲಿ ಯಶಸ್ವಿಯಾಗಿದ್ದಾರೆ.

ಅಧಿಕಾರಿಗಳ ಬೆನ್ನಿಗೆ ಬಿದ್ದಿದ್ದ ಸಚಿವರು ಇಲಾಖೆ ಅಧಿಕಾರಿಗಳು ಮತ್ತು ನಿಗಮಗಳ ವ್ಯವಸ್ಥಾಪಕರಿಗೆ ನಿರಂತರವಾಗಿ ಕೊಳವೆ ಬಾವಿ ಕೊರೆಸುವ ಬಗ್ಗೆ ಪ್ರಗತಿ ಪರಿಶೀಲನೆ ನಡೆಸಿದ್ದರ ಪರಿಣಾಮ ಕಳೆದ ಎರಡು ವರ್ಷದಲ್ಲಿ ಬರೋಬ್ಬರಿ 15,460 ಕೊಳವೆ ಬಾವಿ ಕೊರೆಸುವ ಮೂಲಕ ಎಲ್ಲರ ಮೆಚ್ಚುಗೆ ಗಳಿಸಿದ್ದಾರೆ.

ಗಂಗಾ ಕಲ್ಯಾಣ ಯೋಜನೆ ನೆರವು ₹3.5 ಲಕ್ಷಕ್ಕೆ ಹೆಚ್ಚಳ

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ಕೇವಲ ₹2.0 ಲಕ್ಷ ಘಟಕ ವೆಚ್ಚವನ್ನು ಮಾತ್ರ ನೀಡಲಾಗುತ್ತಿತ್ತು. ಉಳಿದ ವೆಚ್ಚವನ್ನು ರೈತರೇ ಭರಿಸಬೇಕಿತ್ತು.

ರೈತರ ಕಷ್ಟ ಅರಿತಿದ್ದ ಸಚಿವರು ಕೂಡಲೇ ಈ ಸಂಬಂಧ ಅಧಿಕಾರಿಗಳ ಜತೆ ಸಭೆ ನಡೆಸಿ ಸಚಿವರಾದ ಕೆಲವೇ ತಿಂಗಳಲ್ಲಿ ಘಟಕದ ವೆಚ್ಚವನ್ನು ₹2.0 ಲಕ್ಷದಿಂದ ₹3.50 ಲಕ್ಷಕ್ಕೆ ಹೆಚ್ಚಿಸುವಂತೆ ಮಾಡಿ ಅನ್ನದಾತರಿಗೆ ಅನುಕೂಲ ಮಾಡಿಕೊಡುವ ಮೂಲಕ ರೈತರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.





ನಿಗಮಗಳಿಗೆ ₹1600 ಕೋಟಿ ಅನುದಾನ

ಹಿಂದುಳಿದ ವರ್ಗಗಳ ಸಮುದಾಯಗಳನ್ನು ಅಭಿವೃದ್ಧಿಯ ಮುಖ್ಯವಾಹಿನಿಗೆ ತರಲು ಬಜೆಟ್‌ನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಮಾನ್ಯತೆ ಹಾಗೂ ಪ್ರಾಧಾನ್ಯತೆ ಸಿಗುವಂತೆ ಮಾಡುವಲ್ಲಿ ಇಲಾಖೆಯ ಸಚಿವ ಶಿವರಾಜ್ ತಂಗಡಗಿ ಅವರ ಪ್ರಯತ್ನ ಹಾಗೂ ಕಾಳಜಿ ಕಂಡುಬರುತ್ತದೆ. ಇಲಾಖೆಯಡಿ ರೂಪಿಸಿದ ದೂರದರ್ಶಿ ಯೋಜನೆಗಳ ಜತೆಗೆ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಸೇರಿ 10 ವಿವಿಧ ಹಿಂದುಳಿದ ಅಭಿವೃದ್ಧಿ ನಿಗಮಗಳು ರೂಪಿಸಿದ ಕಾರ್ಯ ಚಟುವಟಿಕೆಗಳಿಗೆ ಆರ್ಥಿಕ ಬಲ ಒದಗಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ.

ಸಚಿವ ತಂಗಡಗಿ ಅವರ ಪ್ರಯತ್ನ ಹಾಗೂ ದೂರಗಾಮಿ ಯೋಜನೆಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಅಗತ್ಯ ಅನುದಾನ ಒದಗಿಸಿ ಪ್ರೋತ್ಸಾಹಿಸಿದ್ದಾರೆ.

ಇದರಿಂದಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಬರುವ ಅಭಿವೃದ್ಧಿ ನಿಗಮಗಳಿಗೆ ₹1600 ಕೋಟಿ ದಾಖಲೆಯ ಅನುದಾನ ಪಡೆದಿರುವುದು ಸಚಿವ ತಂಗಡಗಿ ಅವರ ಸಾಧನೆಗೆ ಕೈಗನ್ನಡಿ. ಅವರ ಇಲಾಖೆಯಡಿ ಬರುವ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳು, ಕಳೆದ ಎರಡು ವರ್ಷಗಳಲ್ಲಿ ಒಂದು ಸಾವಿರ ಕೋಟಿ ವೆಚ್ಚ ಮಾಡಿ, ಕಾರ್ಯಕ್ರಮಗಳನ್ನು ಅರ್ಹರಿಗೆ ತಲುಪಿಸುವಲ್ಲಿ ಯಶಸ್ವಿಯಾಗಿ ಛಾಪು ಮೂಡಿಸಿವೆ.

'ಯಾವುದೇ ಸರ್ಕಾರದ ಮುಖ್ಯಮಂತ್ರಿಗಳು ಇಷ್ಟು ಮಟ್ಟದ ಅನುದಾನವನ್ನು ಈ ನಿಗಮಗಳಿಗೆ ನೀಡಿರಲಿಲ್ಲ. ಆದರೆ, ಹಿಂದುಳಿದ ವರ್ಗಗಳ ನಾಯಕರೆಂದೇ ಖ್ಯಾತಿ ಪಡೆದಿರುವ ನಮ್ಮ ಮುಖ್ಯಮಂತ್ರಿಗಳು ನಿಗಮಗಳಿಗೆ ದಾಖಲೆಯ ಅನುದಾನ ನೀಡಿರುವುದು ನಮ್ಮ ಹೆಮ್ಮೆ' ಎನ್ನುತ್ತಾರೆ ಸಚಿವ ಶಿವರಾಜ ತಂಗಡಗಿ.

ಸ್ವಾವಲಂಬಿ ಜೀವನಕ್ಕೆ ಆಸರೆ: ಮುಖ್ಯವಾಗಿ ಕೃಷಿ ಜಮೀನಿನಲ್ಲಿ ಕೊಳವೆ ಬಾವಿ ಕೊರೆದು ವಿದ್ಯುತ್ ಸಂಪರ್ಕ, ಮೋಟಾರ್ ಅಳವಡಿಸುವ "ಗಂಗಾ ಕಲ್ಯಾಣ ಯೋಜನೆ'ಗೆ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಗಳು ಹೆಚ್ಚಿನ ಆದ್ಯತೆ ನೀಡಿವೆ. ಕೃಷಿ ಲಾಭಾದಾಯಕವಾಗಿ ಪರಿವರ್ತಿಸಿ ಆದಾಯ ವೃದ್ಧಿಗೆ ಆಸರೆಯಾಗಿವೆ. ಶಿಕ್ಷಣ, ವಿದೇಶದಲ್ಲಿ ವ್ಯಾಸಂಗಕ್ಕೆ ಸಾಲ, ಸ್ವಯಂ ಉದ್ಯೋಗ, ವಿವಿಧ ಕಸಬುಗಳಡಿ ಆದಾಯೋತ್ಪನ್ನ ಚಟುವಟಿಕೆಗಳಿಗೆ ಸಾಲಗಳಿಗೆ ಸಹಾಯಧನ ಸೌಲಭ್ಯವನ್ನು ಯಥೋಚಿತವಾಗಿ ನೀಡಿ, ಅರ್ಹ ಫಲಾನುಭವಿಗಳು ಹೆಚ್ಚು ಬಡ್ಡಿ ದರದ ಸಾಲಕ್ಕೆ ಕೈಯೊಡ್ಡುವುದನ್ನು ತಪ್ಪಿಸಿವೆ.

ನೋಂದಣಿ ಮಾಡಿಸಿ ಅನುದಾನ ಒದಗಿಸಿದ್ರು!

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ 10 ನಿಗಮಗಳು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿವೆ. ಹಿಂದಿನ ಸರ್ಕಾರ ಕೇವಲ ಭಾಷಣದಲ್ಲಿ ನಿಗಮಗಳ ಘೋಷಣೆ ಮಾಡಿ ಹೋಗಿದ್ದು, ನೋಂದಣಿ ಕೂಡ ಮಾಡಿಸಿರಲಿಲ್ಲ. ಆದರೆ, ಶಿವರಾಜ್ ತಂಗಡಗಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರಾದ ಮೇಲೆ, ಮುಖ್ಯಮಂತ್ರಿ ಅವರ ಬಳಿ ನೇರವಾಗಿ ಚರ್ಚಿಸಿ, ಹಿಂದೆ ಘೋಷಣೆ ಮಾಡಿ ಹೋಗಿದ್ದ ನಿಗಮಗಳಿಗೆ ಅನುದಾನ ಪಡೆದು ಜೀವ ತುಂಬಿದ್ದಾರೆ.



ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಎರಡು ವರ್ಷಗಳಲ್ಲಿ [202324, 2024 25] ಒಟ್ಟು ₹3,500 ಕೋಟಿ ವಿನಿಯೋಗಿಸಿ ಎಲ್ಲ ಯೋಜನೆ ಹಾಗೂ ಕಾರ್ಯಕ್ರಮಗಳನ್ನು ಪ್ರತಿಶತ 99 ರಷ್ಟು ಅನುಷ್ಠಾನಗೊಳಿಸಲಾಗಿದೆ. ಹಿಂದುಳಿದ ವರ್ಗಗಳ ಸಮುದಾಯವನ್ನು ಎಲ್ಲ ರೀತಿಯಲ್ಲಿ ಸಾಮಾಜಿಕ ಮುಖ್ಯವಾಹಿನಿಗೆ ತರಲು ಇಲಾಖೆ ಶ್ರಮಿಸಿದೆ.




ಸಂಜಯ್ ಬಿ ಶೆಟ್ಟಣ್ಣನವರ್, ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಉದ್ಘಾಟನೆಗೆ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮ್ಯೂಸಿಯಂ ಸಿದ್ಧ

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಮ್ಯೂಸಿಯಂನಲ್ಲಿ (ವೀರಭೂಮಿ) ಕಾಮಗಾರಿಗಳು ಪೂರ್ಣಗೊಂಡಿದ್ದು, ಉದ್ಘಾಟನೆಗೆ ಸಿದ್ಧಗೊಂಡಿದೆ. ಮ್ಯೂಸಿಯಂನಲ್ಲಿ ಸಂಗೊಳ್ಳಿ ರಾಯಣ್ಣನ ಅಧ್ಯಯನ ಕೇಂದ್ರ ಹಾಗೂ ರಾಯಣ್ಣನ ಕುರಿತು ಗ್ರಂಥಾಲಯ ಇರಲಿದ್ದು, ಪ್ರವಾಸಿಗರ ಅನುಕೂಲಕ್ಕಾಗಿ ರಾಯಣ್ಣನ ಇತಿಹಾಸ ತಿಳಿಸಿಕೊಡುವ ರೊಬೋಟ್ ಅನ್ನು ಕೂಡ ಇರಿಸಲಾಗಿದೆ.








‘ಸ್ಮಾರಕ ದತ್ತು’ ಯೋಜನೆಯಡಿ ಬ್ರಿಗೇಡ್ ಫೌಂಡೇಷನ್‌ನಿಂದ ಕಟ್ಟಡ ನವೀಕರಣ

ಹೈಟೆಕ್ ಸ್ಪರ್ಶ ಪಡೆದ ವೆಂಕಟಪ್ಪ ಚಿತ್ರಶಾಲೆ

● ವರುಣ ಹೆಗಡೆ



ನವೀಕರಣಗೊಂಡ ವೆಂಕಟಪ್ಪ ಚಿತ್ರಶಾಲೆಯ ಹೊರನೋಟ ಪ್ರಜಾವಾಣಿ ಚಿತ್ರ/ರಂಜು ಪಿ.

ಬೆಂಗಳೂರು: ಕಸ್ತೂರಬಾ ರಸ್ತೆಯಲ್ಲಿ ಸಂಚರಿಸುವಾಗ ಸರ್ಕಾರಿ ವಸ್ತು ಸಂಗ್ರಹಾಲಯದ ಬಳಿ ಕಾಣಿಸುವ ಕಟ್ಟಡವೊಂದು ನಮ್ಮನ್ನು ಆಕರ್ಷಿಸದೆ ಇರದು. ಸುತ್ತಲೂ ಕೊಳದಿಂದ ಆವೃತವಾದ, ಕಾರ್ಪೊರೇಟ್ ಕಂಪನಿಯ ಕಟ್ಟಡದಂತೆ ಭಾಸವಾಗುವ ಈ ಕಟ್ಟಡ ಸರ್ಕಾರಿ ಕಲಾ ಗ್ಯಾಲರಿ ಎಂದರೆ ನಂಬುವುದು ಕಷ್ಟಸಾಧ್ಯ.

ಹೌದು, ಮೂಲಸೌಕರ್ಯ ಕೊರತೆ ಎದುರಿಸುತ್ತಿದ್ದ ವೆಂಕಟಪ್ಪ ಚಿತ್ರಶಾಲೆ (ಆರ್ಟ್ ಗ್ಯಾಲರಿ) ಈಗ ಹೈಟೆಕ್ ಸ್ಪರ್ಶ ಪಡೆದಿದೆ. ಹೊರಾಂಗಣ ವಿನ್ಯಾಸ ಮಾತ್ರವಲ್ಲದೆ, ಒಳಗಡೆಯೂ ಈ ಚಿತ್ರಶಾಲೆ ಆಧುನಿಕತೆಗೆ ತೆರೆದುಕೊಂಡಿದೆ. ಅತ್ಯಾಧುನಿಕ ಬೆಳಕಿನ ವಿನ್ಯಾಸ, ಕೇಂದ್ರೀಕೃತ ಹವಾನಿಯಂತ್ರಣ ವ್ಯವಸ್ಥೆ, ಸುಸಜ್ಜಿತ ಸಭಾಂಗಣ, ಚರ್ಚಾ ಕೊಠಡಿ ಸೇರಿ ಹಲವು ಸೌಲಭ್ಯಗಳನ್ನು ಇಲ್ಲಿ ಹೊಸದಾಗಿ ಒದಗಿಸಲಾಗಿದೆ. ಕಟ್ಟಡದ ಮೂಲ ಸ್ವರೂಪಕ್ಕೆ ಧಕ್ಕೆ ಆಗದಂತೆ ನವೀಕರಣ ಮಾಡಿರುವುದು ವಿಶೇಷ.

‘ಸ್ಮಾರಕ ದತ್ತು’ ಯೋಜನೆಯಡಿ ಈ ಕಟ್ಟಡದ ನವೀಕರಣಕ್ಕೆ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಜತೆಗೆ ಬ್ರಿಗೇಡ್ ಫೌಂಡೇಷನ್ ಒಡಂಬಡಿಕೆ ಮಾಡಿಕೊಂಡಿತ್ತು. ಈ ನವೀಕರಣ ಕಾಮಗಾರಿಗೆ 2024ರ ಫೆಬ್ರುವರಿಯಲ್ಲಿ ಚಾಲನೆ ನೀಡಲಾಗಿತ್ತು. ಆರಂಭದಲ್ಲಿ ನವೀಕರಣ ವೆಚ್ಚ ₹5 ಕೋಟಿಯಾಗಲಿದೆ ಎಂದು ಅಂದಾಜಿಸಲಾಗಿತ್ತು. ಈಗ ಆ ಮೊತ್ತವು ದುಪ್ಪಟ್ಟಾಗಿದ್ದು, ಸಂಪೂರ್ಣ ವೆಚ್ಚವನ್ನು ಫೌಂಡೇಷನ್ ತನ್ನ ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿ ಭರಿಸಿದೆ. ಒಂದೂವರೆ ವರ್ಷದೊಳಗೆ ಚಿತ್ರಶಾಲೆಯ ನವೀಕರಣ ಕಾಮಗಾರಿ ಪೂರ್ಣಗೊಂಡಿದ್ದು, ಪುನರಾರಂಭಕ್ಕೆ ಸಜ್ಜುಗೊಳ್ಳುತ್ತಿದೆ.

ಆಧುನಿಕ ಬೆಳಕಿನ ವಿನ್ಯಾಸ: ಚಿತ್ರಶಾಲೆಯ ಚಾವಣಿ, ಗೋಡೆಗಳಿಗೂ ಹೊಸ ವಿನ್ಯಾಸದ ಸ್ಪರ್ಶ ನೀಡಲಾಗಿದೆ. ಬೆಳಕು ತಜ್ಞರ ಸಲಹೆಯೊಂದಿಗೆ ಕಲಾಕೃತಿ ಪ್ರದರ್ಶನಕ್ಕೆ ಅತ್ಯಾಧುನಿಕ ಬೆಳಕಿನ ವ್ಯವಸ್ಥೆ ಕಲ್ಪಿಸಲಾಗಿದೆ. ಹೊಸದಾಗಿ ಗ್ಯಾಲರಿಗಳನ್ನೂ ಸೇರ್ಪಡೆ ಮಾಡಲಾಗಿದೆ. ಕಲಾಕೃತಿಗಳ ಪ್ರದರ್ಶನಕ್ಕೆ ಅವಕಾಶ ಕಲ್ಪಿಸುವ ಜತೆಗೆ ಕಲೆಗೆ ಸಂಬಂಧಿಸಿದ ಚರ್ಚಾಗೋಷ್ಠಿಗೂ ಸ್ಥಳವನ್ನು ಮೀಸಲಿಡಲಾಗಿದೆ. ಇದಕ್ಕಾಗಿ ಗ್ಯಾಲರಿಯ ಹಿಂಭಾಗ ತೆರೆದ ಸಭಾಂಗಣ ನಿರ್ಮಿಸಲಾಗಿದೆ. ‘ಕೆಫಿಟೇರಿಯಾ’ ಕೂಡ ಹೊಸದಾಗಿ ಸೇರ್ಪಡೆ ಮಾಡಲಾಗಿದೆ.

ಕಲಾವಿದರಿಗೆ ಕಲಾಕೃತಿಗಳ ಸಂಗ್ರಹಕ್ಕೆ ಪ್ರತ್ಯೇಕ ಕೊಠಡಿ ವ್ಯವಸ್ಥೆ ಸೇರಿ ಇನ್ನಿತರ ಸೌಲಭ್ಯ ಕಲ್ಪಿಸಲಾಗಿದೆ. ಟಿಕೆಟ್ ಕೌಂಟರ್ ಕೂಡ ನಿರ್ಮಾಣ ಮಾಡಲಾಗಿದ್ದು, ಗ್ಯಾಲರಿ ಪ್ರವೇಶ ಹಾಗೂ ಪ್ರದರ್ಶನಕ್ಕೆ ಪ್ರವೇಶ ಶುಲ್ಕ ಗೊತ್ತುಪಡಿಸುವ ಪ್ರಸ್ತಾವ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಮುಂದಿದೆ. ಇದಕ್ಕೆ ಕಲಾವಿದರನ್ನೂ ಒಳಗೊಂಡ ಪ್ರತ್ಯೇಕ ಸಮಿತಿಯನ್ನು ರಚಿಸಲಾಗಿದೆ. ಈ ಸಮಿತಿಯ ಶಿಫಾರಸಿನ ಆಧಾರದಲ್ಲಿ ದರ ನಿಗದಿಮಾಡಲಾಗುತ್ತದೆ ಎಂದು ಇಲಾಖೆ ಮೂಲಗಳು ತಿಳಿಸಿವೆ.

ಚಿತ್ರಶಾಲೆಯ ಕಟ್ಟಡದ ಹೊರಾಂಗಣದಲ್ಲಿಯೂ ಕುಳಿತುಕೊಳ್ಳಲು ವ್ಯವಸ್ಥೆ ಕಲ್ಪಿಸಲಾಗಿದೆ. ಹೊಸದಾಗಿ ನೆಲಹಾಸು ಅಳವಡಿಸಲಾಗಿದ್ದು, ಹೊರಗಡೆಯೂ ಕಲಾ ಶಿಬಿರಗಳನ್ನು ನಡೆಸಬಹುದಾಗಿದೆ.



ವೆಂಕಟಪ್ಪ ಚಿತ್ರಶಾಲೆಯ ಆವರಣದಲ್ಲಿ ನಿರ್ಮಿಸಲಾದ ಟಿಕೆಟ್ ಕೌಂಟರ್

‘ಇಲಾಖೆಯಿಂದಲೇ ನಿರ್ವಹಣೆ’



‘ವೆಂಕಟಪ್ಪ ಚಿತ್ರಶಾಲೆ ನವೀಕರಣ ಕಾಮಗಾರಿ ಪೂರ್ಣಗೊಂಡಿದೆ. ಇದೇ ತಿಂಗಳು ಪುನರಾರಂಭ ಮಾಡಲಾಗುತ್ತದೆ. ನವೀಕರಣಕ್ಕೆ ₹9 ಕೋಟಿಯಿಂದ ₹10 ಕೋಟಿ ವೆಚ್ಚವಾಗಿದೆ. ಸಂಪೂರ್ಣ ವೆಚ್ಚವನ್ನು ಬ್ರಿಗೇಡ್ ಫೌಂಡೇಷನ್ ಭರಿಸಿದೆ. ನವೀಕರಣಗೊಂಡ ಈ ಕಟ್ಟಡವನ್ನು ಇಲಾಖೆಗೆ ಬ್ರಿಗೇಡ್ ಫೌಂಡೇಷನ್ ಹಸ್ತಾಂತರಿಸಲಿದೆ. ಈ ಮೊದಲಿನಂತೆ ಸರ್ಕಾರವೇ ನಿರ್ವಹಣೆ ಮಾಡುತ್ತದೆ’ ಎಂದು ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತ ಎ. ದೇವರಾಜು ತಿಳಿಸಿದರು.

1975ರಲ್ಲಿ ಕಾರ್ಯಾರಂಭ

ಕಲೆಗಾಗಿಯೇ ಇಡೀ ಬದುಕನ್ನು ಸವೆಸಿ, ಅದ್ಭುತ ಪ್ರತಿಭೆಯಿಂದ ಕರ್ನಾಟಕಕ್ಕೆ ಕೀರ್ತಿ ತಂದ ಕಲಾ ತಪಸ್ವಿ ವೆಂಕಟಪ್ಪ. ಅವರ ಹೆಸರಿನಲ್ಲಿ ಈ ಚಿತ್ರಶಾಲೆ ನಿರ್ಮಿಸಲಾಗಿದೆ. ಕಬ್ಬನ್ ಉದ್ಯಾನದ ಸರ್ಕಾರಿ ವಸ್ತು ಸಂಗ್ರಹಾಲಯದ ಆವರಣದಲ್ಲಿರುವ ಈ ಚಿತ್ರಶಾಲೆಯ ಶಂಕುಸ್ಥಾಪನೆ 1967ರಲ್ಲಿ ನೆರವೇರಿತ್ತು. 1975ರಲ್ಲಿ ಉದ್ಘಾಟನೆಗೊಂಡು, ಸಾರ್ವಜನಿಕರ ಪ್ರವೇಶಕ್ಕೆ ಮುಕ್ತವಾಯಿತು.

ವೆಂಕಟಪ್ಪ ಅವರು ತಾವೇ ತಯಾರಿಸಿ ನುಡಿಸುತ್ತಿದ್ದ ಶ್ರುತಿ ವೀಣೆ, ರಾಜ ವೀಣೆ, ತಂಜಾವೂರು ವೀಣೆ, ಲಂಗರ್ ವೀಣೆ, ‘ಪ್ಲಾಸ್ಟರ್ ಆಫ್ ಪ್ಯಾರಿಸ್’ನಲ್ಲಿ ತಯಾರಿಸಿದ ಸುಂದರ ಉಬ್ಬು ಶಿಲ್ಪಗಳು, ರವೀಂದ್ರನಾಥ ಟ್ಯಾಗೋರ್ ಅವರ ಎದೆ ಮಟ್ಟದ ಪ್ರತಿಮೆ, ನಿಸರ್ಗ ವರ್ಣ ಚಿತ್ರಗಳು, ವೆಂಕಟಪ್ಪ ಅವರಿಗೆ ನೀಡಿದ್ದ ಪುರಸ್ಕಾರಗಳು, ಪಾರಿತೋಷಕಗಳು, ಅವರು ಉಪಯೋಗಿಸುತ್ತಿದ್ದ ವಿದೇಶಿ ಕಲಾ ಸಾಮಗ್ರಿ ಹಾಗೂ ವಿವಿಧ ಕಲಾಕೃತಿಗಳು ಈ ಚಿತ್ರಶಾಲೆಯಲ್ಲಿವೆ.

ನವೀಕೃತ ಕಟ್ಟಡದಲ್ಲಿ ಏನೆಲ್ಲ ಇವೆ?

ಈ ಮೊದಲು ಚಿತ್ರಶಾಲೆಯ ನೆಲ ಮಹಡಿಯಲ್ಲಿ ಕಲಾ ಪ್ರದರ್ಶನಕ್ಕೆ ವಿಶಾಲವಾದ ಒಂದೇ ಕೊಠಡಿಯಿತ್ತು. ಈಗ ಆ ಸಂಖ್ಯೆ ಮೂರಕ್ಕೆ ಏರಿಕೆಯಾಗಿದೆ. ಬೃಹತ್, ಮಧ್ಯಮ ಹಾಗೂ ಸಣ್ಣ ಗ್ಯಾಲರಿಯನ್ನು ನಿರ್ಮಾಣ ಮಾಡಲಾಗಿದೆ. ಈಗಾಗಲೇ ಇದ್ದ ಸಭಾಂಗಣವನ್ನೂ ನವೀಕರಣ ಮಾಡಲಾಗಿದ್ದು, ಇದು ಸುಮಾರು 100 ಆಸನಗಳನ್ನು ಒಳಗೊಂಡಿದೆ. ಈ ಸಭಾಂಗಣದಲ್ಲಿ ‘ಪ್ರೊಜೆಕ್ಟರ್’ ಸೇರಿ ವಿವಿಧ ಅತ್ಯಾಧುನಿಕ ಸೌಲಭ್ಯಗಳನ್ನು ಅಳವಡಿಸಿಕೊಳ್ಳಲಾಗಿದೆ. ಕಚೇರಿ ಕೊಠಡಿಯನ್ನು ಕಲಾಕೃತಿಗಳ ಮಾರಾಟ ಮಳಿಗೆಯಾಗಿ ಮಾರ್ಪಾಡು ಮಾಡಲಾಗಿದೆ.

ಮೊದಲ ಮಹಡಿಯ ಗ್ಯಾಲರಿಯಲ್ಲಿ ವೆಂಕಟಪ್ಪ ಅವರ ಕಲಾಕೃತಿಗಳನ್ನು ಪ್ರದರ್ಶನಕ್ಕೆ ಇರಿಸಲಾಗಿದೆ. ಅವರು ಬಳಸುತ್ತಿದ್ದ ವೀಣೆಗಳನ್ನು ನೇತಾಡುವ ಗಾಜಿನ ಪೆಟ್ಟಿಗೆಯಲ್ಲಿ ಪ್ರದರ್ಶಿಸಲಾಗಿದೆ. ಅವರು ಕಲಾಕೃತಿ ರಚನೆಗೆ ಬಳಸುತ್ತಿದ್ದ ಪರಿಕರಗಳು, ಅವರಿಗೆ ಬಂದ ಪುರಸ್ಕಾರ ಗಳನ್ನೂ ಪ್ರದರ್ಶನಕ್ಕೆ ಇಡಲಾಗಿದೆ. ಎರಡನೇ ಮಹಡಿಯಲ್ಲಿ ಹೆಬ್ಬಾರ್ ಗ್ಯಾಲರಿಯಿದ್ದು, ರಾಜಾರಾಂ ಅವರಂತಹ ಹೆಸರಾಂತ ಕಲಾವಿದರ ಕಲಾಕೃತಿಗಳು ಪ್ರದರ್ಶನಕ್ಕಿವೆ. ತಾರಸಿಯಲ್ಲಿ ಮಕ್ಕಳಿಗೆ ಕಾರ್ಯಾಗಾರದಂತಹ ಚಟುವಟಿಕೆಗಳನ್ನು ನಡೆಸಲೂ ಯೋಜನೆ ರೂಪಿಸಲಾಗಿದೆ.

‘ಸ್ಯಾಂಕಿ ಕೆರೆ: ಮಣ್ಣಿನ ಏರಿ ಉಳಿಯಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಯಾಂಕಿ ಕೆರೆಯಲ್ಲಿ ಮಣ್ಣಿನ ಏರಿಯನ್ನೇ ಉಳಿಸಿಕೊಳ್ಳಬೇಕು ಎಂದು ‘ಸ್ಯಾಂಕಿ ಕೆರೆ ತಂಡ’ ಒತ್ತಾಯಿಸಿದೆ.

‘ಸ್ಯಾಂಕಿ ಕೆರೆಯಲ್ಲಿ ಸಾಕಷ್ಟು ಪ್ರದೇಶ ಕಾಂಕ್ರೀಟ್‌ನಿಂದ ಅಭಿವೃದ್ಧಿಯಾಗಿದ್ದು, ಅಳಿದುಳಿದಿರುವ ಏರಿಯನ್ನು ನೈಸರ್ಗಿಕವಾಗಿ ‘ಮಣ್ಣಿನ ಏರಿ’ಯನ್ನಾಗಿ ಸಂರಕ್ಷಿಸಬೇಕು. ಯಾವುದೇ ರೀತಿಯಲ್ಲಿ ಕಾಂಕ್ರೀಟೀಕರಣ ಮಾಡಬಾರದು’ ಎಂದು ಬಿಬಿಎಂಪಿಯ ಕೆರೆಗಳ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹ್ಲೋಟ್ ಅವರಿಗೆ ‘ಸ್ಯಾಂಕಿ ಕೆರೆ ತಂಡ’ದವರು ಪತ್ರ ಬರೆದಿದ್ದಾರೆ.

‘ಕೆರೆಯಲ್ಲಿ ಪಾದಚಾರಿ ಮಾರ್ಗವನ್ನು ನಿರ್ಮಿಸುವುದಕ್ಕೆ ನಾವು ವಿರೋಧ ವ್ಯಕ್ತ-ಪಡಿಸುತ್ತಿಲ್ಲ. ಆದರೆ ಪರಿಸರಸ್ನೇಹಿ ವಾತಾವರಣವನ್ನು ಇದು ಹಾಳು ಮಾಡಬಾರದು. ಸ್ಯಾಂಕಿ ಕೆರೆಯ ಕೆಲವೇ ವಿಸ್ತೀರ್ಣದಲ್ಲಿ ಮಣ್ಣಿನ ಏರಿ ಉಳಿದಿದೆ. ಅದನ್ನು ಸದೃಢಗೊಳಿಸಿ, ಉಳಿಸಿಕೊಳ್ಳಬೇಕು’ ಎಂದು ಒತ್ತಾಯಿಸಿದ್ದಾರೆ.

‘ಹಲವು ಪ್ರಭೇದದ ಪಕ್ಷಿಗಳು ಸ್ಯಾಂಕಿ ಕೆರೆಯಲ್ಲಿವೆ. ಅವುಗಳು ಗೂಡು ಕಟ್ಟಿಕೊಂಡು, ಮರಿಗಳೊಂದಿಗೆ ವಾಸ ಮಾಡುತ್ತಿವೆ. ಜೀವವೈವಿಧ್ಯಕ್ಕೆ ನೈಸರ್ಗಿಕ ತಾಣ ಅಗತ್ಯ. ಹೀಗಾಗಿ, ಗಿಡಗಳಿಂದ ಕೂಡಿರುವ ಪಾದಚಾರಿ ಮಾರ್ಗವನ್ನು (ವಾಕಿಂಗ್ ಟ್ರ್ಯಾಕ್) ಮಣ್ಣಿನಿಂದ ಉಳಿಸಿಕೊಂಡರೆ ಪಕ್ಷಿಗಳು, ಕೀಟಗಳಿಗೆ ಅನುಕೂಲವಾಗುತ್ತದೆ’ ಎಂದಿದ್ದಾರೆ.

‘ಮಣ್ಣಿನ ಏರಿ ಇರುವುದರಿಂದ ಕೆರೆಗೆ ಹರಿಯುವ ನೀರು ಸಂಸ್ಕರಿತವಾಗುತ್ತದೆ. ಅಂತರ್ಜಲ ಮರುಪೂರಣವಾಗುತ್ತದೆ. ಮಣ್ಣಿನ ಏರಿ ‘ಸ್ಪಾಂಜ್’ ರೀತಿ ಕೆಲಸ ಮಾಡಿ, ತೇವಾಂಶವನ್ನು ಉಳಿಸಿಕೊಳ್ಳುತ್ತದೆ’ ಎಂದು ಸದಾಶಿವನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ‘ಸ್ಯಾಂಕಿ ಕೆರೆ ತಂಡ’ದ ಸದಸ್ಯರು ಹೇಳಿದ್ದಾರೆ.



ಸ್ಯಾಂಕಿ ಕೆರೆಯಲ್ಲಿ ಪಕ್ಷಿಗಳು ಅಧಿಕ ಸಂಖ್ಯೆಯಲ್ಲಿರುವ ಪ್ರದೇಶದಲ್ಲಿ ಏರಿಯನ್ನು ಕಾಂಕ್ರೀಟೀಕರಣ ಮಾಡಲು ನಡೆಯುತ್ತಿರುವ ಬಿಬಿಎಂಪಿ ಕಾಮಗಾರಿ

ಸ್ಥಳೀಯ ಮರಗಳನ್ನು ಬೆಳೆಸಲು ಆದ್ಯತೆ; ಅರಣ್ಯ ಸಚಿವ ಈಶ್ವರ ಬಿ.ಖಂಡ್ರೆ

154 ಎಕರೆಯಲ್ಲಿ ಜೈವಿಕ ಉದ್ಯಾನ

ಪ್ರಜಾವಾಣಿ ವಾರ್ತೆ



ಮಾದಪ್ಪನಹಳ್ಳಿ ಅರಣ್ಯ ಪ್ರದೇಶದಲ್ಲಿ ಈಶ್ವರ ಬಿ ಖಂಡ್ರೆ ಸಸಿ ನೆಟ್ಟರು

ಯಲಹಂಕ: ಮಾದಪ್ಪನಹಳ್ಳಿಯಲ್ಲಿ-ರುವ 154 ಎಕರೆ ಅರಣ್ಯ ಭೂಮಿಯಲ್ಲಿ ಲಾಲ್‌ಬಾಗ್ ಮಾದರಿಯಲ್ಲಿ ಬೃಹತ್ ಜೈವಿಕ ಉದ್ಯಾನ ಅಭಿವೃದ್ಧಿಪಡಿಸಲಾಗು ತ್ತದೆ ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಹೇಳಿದರು.

ಮಾದಪ್ಪನಹಳ್ಳಿಯ ನೆಡುತೋಪಿನಲ್ಲಿ ಅರಣ್ಯ ಅಭಿವೃದ್ಧಿ ನಿಗಮದ ವಶದಲ್ಲಿರುವ ಭೂಮಿಯನ್ನು ಹಿಂದಕ್ಕೆ ಪಡೆಯುವ ಸಂಬಂಧ ನಡೆದ ಕಾರ್ಯ-ಕ್ರಮದಲ್ಲಿ ಮಾತನಾಡಿದ ಅವರು, ಈ ಉದ್ಯಾನ ಬೆಂಗಳೂರಿಗೆ ಮಹತ್ವದ ಶ್ವಾಸ ತಾಣವಾಗಲಿದೆ ಎಂದರು.

ಈ ಜಾಗದಲ್ಲಿ ಕೆಎಫ್‌ಡಿಸಿ ನೀಲಗಿರಿ ಮರಗಳನ್ನು ಬೆಳೆಸಿದ್ದು, ಈ ಎಲ್ಲ ಮರಗಳನ್ನು ತೆರವು ಮಾಡಿ, ಸ್ಥಳೀಯ ಪ್ರಭೇದದ ಬಿಲ್ವ, ಮಹಾಬಿಲ್ವ ಹೊನ್ನೆ ನೇರಳೆ, ಮತ್ತಿ, ಆಲದ ಜೊತೆಗೆ ಪಶ್ಚಿಮ-ಘಟ್ಟದಲ್ಲಿ ಬೆಳೆಯುವ ವಿವಿಧ ಪ್ರಭೇದದ ಸಸ್ಯಗಳನ್ನು ಬೆಳೆಸಲು ಉದ್ದೇಶಿಸಲಾಗಿದೆ. ಪ್ರಸ್ತುತ ಈ ಪ್ರದೇಶದಲ್ಲಿ ಹೊನ್ನೆ, ಬೀಟೆ, ಜಾಲಿ, ಕಗ್ಗಲಿ, ಎಲಚಿ, ಚಿಗರೆ ಹೊಳೆಮತ್ತಿ, ಕರಿಮತ್ತಿ ಮತ್ತಿತರ 800 ಮರಗಳಿದ್ದು, ಅವುಗಳನ್ನು ಸಂರಕ್ಷಿಸಲಾಗುವುದು ಎಂದು ತಿಳಿಸಿದರು.

ಎಲ್ಲ 154 ಎಕರೆ ಅರಣ್ಯಭೂಮಿಗೂ ಕಾಂಪೌಂಡ್ ಹಾಕಲಾಗಿದ್ದು, ಒತ್ತುವರಿ ಆಗದಂತೆ ರಕ್ಷಿಸಲಾಗಿದೆ. ಈ ಪ್ರದೇಶದಲ್ಲಿ ಇಂದಿರಾಗಾಂಧಿ ಜೈವಿಕ ಉದ್ಯಾನ, ಡಾ.ಬಾಬಾಸಾಹೇಬ್ ಅಂಬೇಡ್ಕರ್ ಪಕ್ಷಿಲೋಕ, ವಿಶ್ವಗುರು ಬಸವಣ್ಣ ದಿವ್ಯೌಷಧೀಯ ಸಸ್ಯವನ, ಕೆಂಪೇಗೌಡ ಕಿರು ಮೃಗಾಲಯ ಹಾಗೂ ಸಾಲುಮರದ ತಿಮ್ಮಕ್ಕ ವೃಕ್ಷೋದ್ಯಾನ ನಿರ್ಮಿಸಲು ಸಲಹೆಗಳು ಬಂದಿದ್ದು, ಈ ಬಗ್ಗೆ ಯೋಜನೆ ರೂಪಿಸಲಾಗುವುದು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಂದ ಎರಡು ತಿಂಗಳಲ್ಲಿ ಉದ್ಯಾನನಿರ್ಮಾಣ ಕಾಮಗಾರಿಗೆ ಶಂಕುಸ್ಥಾಪನೆ ನೆರವೇರಿಸಲಾಗು-ವುದು ಎಂದು ಮಾಹಿತಿ ನೀಡಿದರು.

ಸಿಎಸ್‌ಆರ್ ನಿಧಿ ಬಳಕೆ: ಈ ಉದ್ಯಾನದ ನಿರ್ಮಾಣಕ್ಕೆ ಆರಂಭಿಕವಾಗಿ ₹20 ಕೋಟಿ ಅನುದಾನ ಮಂಜೂರು ಮಾಡಿ, ಡಿಪಿಆರ್ ಮತ್ತು ಆರಂಭಿಕ ಕಾಮಗಾರಿಗೆ ಚಾಲನೆ ನೀಡಲಾಗುವುದು. ಜೊತೆಗೆ ಸಾಂಸ್ಥಿಕ ಕಂಪನಿಗಳು ಕೈಜೋಡಿಸಿ, ಸಿಎಸ್‌ಆರ್ ಅನುದಾನ ನೀಡಿದರೆ ಮೂರು ವರ್ಷದೊಳಗಾಗಿ ಉದ್ಯಾನ ಪೂರ್ಣಗೊಳಿಸಿ, ಇದೇ ಸರ್ಕಾರದ ಅವಧಿಯಲ್ಲಿ ಉದ್ಘಾಟಿಸುವುದು ತಮ್ಮ ಗುರಿಯಾಗಿದೆ ಎಂದರು.

‘ಡಿಜಿಟಲ್ ಕ್ಷೇತ್ರದಲ್ಲಿ ವಿಶೇಷ ಸಾಧನೆ’

ಪ್ರಜಾವಾಣಿ ವಾರ್ತೆ



ಸಂಜೀವ್ ಸನ್ಯಾಲ್

ಬೆಂಗಳೂರು: ಆರ್ಥಿಕ ವ್ಯವಸ್ಥೆ ಮತ್ತು ಡಿಜಿಟಲ್ ಪರಿವರ್ತನೆಯ ಕ್ಷೇತ್ರಗಳಲ್ಲಿ ಭಾರತ ವಿಶೇಷ ಸಾಧನೆ ಮಾಡಿದ್ದು, ಈಗ ಆಡಳಿತದ ವಿವಿಧ ಹಂತಗಳಲ್ಲಿ ಆಳವಾದ ಸುಧಾರಣೆಯ ಅಗತ್ಯವಿದೆ ಎಂದು ಪ್ರಧಾನ ಮಂತ್ರಿಯ ಆರ್ಥಿಕ ಸಲಹಾ ಮಂಡಳಿಯ ಸದಸ್ಯ ಸಂಜೀವ್ ಸನ್ಯಾಲ್ ಹೇಳಿದರು.

ಚಾಣಕ್ಯ ವಿಶ್ವವಿದ್ಯಾಲಯದ ಯುವ ಪಥದಲ್ಲಿ ‘ಕಾರ್ಯ ವಿಧಾನದಲ್ಲಿ ಸುಧಾರಣೆಗಳು ವಿಕಸಿತ ಭಾರತಕ್ಕೆ ದಾರಿ’ ಎಂಬ ವಿಷಯದ ಕುರಿತು ಉಪನ್ಯಾಸ ನೀಡಿದರು.

ದೇಶದ ಮುಂದಿನ ಅಭಿವೃದ್ಧಿಗೆ ವಿವಿಧ ಕ್ಷೇತ್ರಗಳಲ್ಲಿ ಸುಧಾರಣೆ ಅಗತ್ಯ. ಅಧಿಕಾರಿಶಾಹಿ ವ್ಯವಸ್ಥೆ ಮತ್ತು ಕೆಲಸದ ಪರಿಕ್ರಮಗಳನ್ನು ಸರಳಗೊಳಿಸುವುದು, ನಿರ್ಣಯ ಕೈಗೊಳ್ಳುವ ವೇಗ ಹಾಗೂ ಹೊಣೆಗಾರಿಕೆ ಹೆಚ್ಚಿಸುವುದು ಸುಧಾರಣೆಯ ಪ್ರಮುಖ ಅಂಶವಾಗಿದೆ. ಇದು ಸರ್ಕಾರ ಹಾಗೂ ಖಾಸಗಿ ವಲಯದಲ್ಲಿ ಉತ್ತಮ ಫಲಿತಾಂಶಕ್ಕೆ ಅಗತ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಸಾರ್ವಜನಿಕ ಸಂಸ್ಥೆಗಳ ಕಾರ್ಯಕ್ಷಮತೆ ಹೆಚ್ಚಿಸಲು ಉತ್ತಮ ತರಬೇತಿ, ತಂತ್ರಜ್ಞಾನ ಬಳಕೆ ಮತ್ತು ಫಲಿತಾಂಶ ಆಧಾರಿತ ವ್ಯವಸ್ಥೆಗಳನ್ನು ಅನುಸರಿಸುವ ಅಗತ್ಯವಿದೆ ಎಂದು ಅವರು ಒತ್ತಿ ಹೇಳಿದರು.

ಇದೇ ವೇಳೆ ಪ್ರೇಕ್ಷಕರ ಜತೆ ಸಂವಾದ ನಡೆಸಿದರು. ಉಪನ್ಯಾಸದಲ್ಲಿ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಕೈಗಾರಿಕೋದ್ಯಮಿಗಳು, ನಾಗರಿಕರು ಭಾಗವಹಿಸಿದ್ದರು.

ವಿಶ್ವವಿದ್ಯಾಲಯದ ಕುಲಪತಿ ಪ್ರೊ. ವೈ.ಎಸ್.ಆರ್. ಮೂರ್ತಿ, ಕುಲಾಧಿಪತಿ ಪ್ರೊ. ಎಂ. ಕೆ. ಶ್ರೀಧರ್, ಉಪ ಕುಲಾಧಿಪತಿ ಎಂ. ಪಿ. ಕುಮಾರ್, ಉಪಕುಲಪತಿ ಪ್ರೊ. ಯಶವಂತ ಡೋಂಗ್ರೆ, ಮುಖ್ಯ ಕಾರ್ಯನಿರ್ವ-ಹಣಾಧಿಕಾರಿ ನಾಗರಾಜ್ ರೆಡ್ಡಿ ಉಪಸ್ಥಿತರಿದ್ದರು.

ಸಂಕ್ಷಿಪ್ತ ಸುದ್ದಿ

ಶ್ರೀಹರಿ ರಾಷ್ಟ್ರೀಯ ದಾಖಲೆ



ಚಿನ್ನದ ಪದಕದೊಂದಿಗೆ ಶ್ರೀಹರಿ

ಬೆಂಗಳೂರು: ಒಲಿಂಪಿಯನ್ ಈಜುಪಟು ಶ್ರೀಹರಿ ನಟರಾಜ್ ಅವರು ರಾಷ್ಟ್ರೀಯ ಚಾಂಪಿಯನ್‌ಷಿಪ್‌ನ 200 ಮೀಟರ್ಸ್ ಫ್ರೀಸ್ಟೈಲ್‌ನಲ್ಲಿ ರಾಷ್ಟ್ರೀಯ ದಾಖಲೆಯೊಂದಿಗೆ ಸಾಧನೆ ಮಾಡಿದ್ದಾರೆ.

ಕರ್ನಾಟಕದ 24 ವರ್ಷ ವಯಸ್ಸಿನ ಶ್ರೀಹರಿ ಅವರು 1 ನಿಮಿಷ 48.66 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಈ ಮೂಲಕ 2021ರಲ್ಲಿ ಸಾಜನ್ ಪ್ರಕಾಶ್ (1ನಿ.49.73ಸೆ) ನಿರ್ಮಿಸಿದ್ದ ದಾಖಲೆಯನ್ನು ಮುರಿದರು.

ಸಿಂಗಪುರದ ಝೆಂಗ್ ವೆನ್ ವುಹ್ (1ನಿ.48.94ಸೆ) ಬೆಳ್ಳಿ ಪದಕ ಗೆದ್ದರೆ, ಅದೇ ದೇಶದ ಆರ್ಡಿ ಅಜ್ಮಾನ್ (1ನಿ.49.91ಸೆ) ಕಂಚಿನ ಪದಕ ಗೆದ್ದರು.

ರಾಜ್‌ಮಹಲ್ ತಂಡಕ್ಕೆ ಗೆಲುವು

ಬೆಂಗಳೂರು: ರಾಜ್‌ಮಹಲ್ ಬಿ.ಸಿ ತಂಡವು ಡಿ.ಎನ್.ರಾಜಣ್ಣ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ ಜೂನಿಯರ್ (18 ವರ್ಷದೊಳಗಿನವರ) ಬ್ಯಾಸ್ಕೆಟ್‌ಬಾಲ್ ಟೂರ್ನಿಯ ಬಾಲಕರ ವಿಭಾಗದಲ್ಲಿ 55–14ರಿಂದ ಲಕ್ಷ್ಮಣ್ ತಂಡವನ್ನು ಮಣಿಸಿತು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಸೋಮವಾರ ನಡೆದ ಲೀಗ್‌ನ ಪಂದ್ಯದಲ್ಲಿ ರಾಜ್‌ಮಹಲ್ ಪರ ರಿಷಿ 16 ಮತ್ತು ಮಿಥಿಲ್ 12 ಅಂಕ ಗಳಿಸಿದರು.

ಫಲಿತಾಂಶ: ಬಾಲಕರು: ಚಿಕ್ಕಮಗಳೂರು ಜಿಲ್ಲೆ 74–12ರಿಂದ ಮಂಡ್ಯ ಜಿಲ್ಲೆ ವಿರುದ್ಧ; ಚಾಮರಾಜನಗರ ಜಿಲ್ಲೆ 56–52ರಿಂದ ಮೈಸೂರು ಜಿಲ್ಲೆ ವಿರುದ್ಧ; ದಕ್ಷಿಣ ಕನ್ನಡ ಜಿಲ್ಲೆ 74–21ರಿಂದ ಕಲಬುರಗಿ ಜಿಲ್ಲೆ ವಿರುದ್ಧ; ಕೋಲಾರ ಜಿಲ್ಲೆ 85–42ರಿಂದ ಬಳ್ಳಾರಿ ಜಿಲ್ಲೆ ವಿರುದ್ಧ; ದಾವಣಗೆರೆ ಜಿಲ್ಲೆ 58–42 ಕಲಬುರಗಿ ಜಿಲ್ಲೆ ವಿರುದ್ಧ; ರಾಜ್‌ಮಹಲ್ ಬಿ.ಸಿ 55–14ರಿಂದ ಲಕ್ಷ್ಮಣ್ ಬಿ.ಸಿ ವಿರುದ್ಧ; ಮೈಸೂರು ಜಿಲ್ಲೆ ಎ 57–07ರಿಂದ ಕೋಲಾರ ಜಿಲ್ಲೆ ವಿರುದ್ಧ ಗೆಲುವು ಸಾಧಿಸಿತು.

ಬಾಲಕಿಯರು: ಧಾರವಾಡ ಜಿಲ್ಲೆ ಬಿ 33–13ರಿಂದ ಮೈಸೂರು ಜಿಲ್ಲೆ ಬಿ ಎದುರು; ದಾವಣಗೆರೆ ಜಿಲ್ಲೆ 35–17ರಿಂದ ಕೋಲಾರ ಜಿಲ್ಲೆ ಎದುರು; ವಿಜಯಪುರ ಜಿಲ್ಲೆ 60–23 ಮೈಸೂರು ಜಿಲ್ಲೆ ಬಿ ಎದುರು; ಕೋಲಾರ ಜಿಲ್ಲೆ 19–18ರಿಂದ ಚಿಕ್ಕಮಗಳೂರು ಜಿಲ್ಲೆ ಎದುರು ಗೆಲುವು ಸಾಧಿಸಿತು.



ಕಲಬುರಗಿ ಜಿಲ್ಲಾ ತಂಡದ ಶ್ರೀಹರಿ (ಎಡ) ಮತ್ತು ದಾವಣಗೆರೆ ಜಿಲ್ಲೆಯ ತನ್ಮಯ್ (ಬಲ) ಚೆಂಡಿಗಾಗಿ ಸೆಣಸಾಟ ನಡೆಸಿದರು

‘ಕಾರ್ಯಪಡೆಯ ಗುರಿ ಹಿಂದೂಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಮು ಹಿಂಸೆ ನಿಗ್ರಹ ಕಾರ್ಯಪಡೆ ರಚಿಸಿ, ಹಿಂದೂ ಮುಖಂಡರ ವಿರುದ್ಧ ಪ್ರಕರಣ ದಾಖಲಿಸಲಾಗುತ್ತಿದೆ. ಇದು ಕೋಮುವಾದದ ವಿರುದ್ಧ ಅಲ್ಲ, ಹಿಂದೂಗಳ ವಿರುದ್ಧ ಇರುವ ಪಡೆ’ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ‘ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದೆ ಇದ್ದ ಪೊಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ, ತಮಗೆ ಬೇಕಾದ ಅಧಿಕಾರಿಗಳನ್ನು ಕಾಂಗ್ರೆಸ್ ಸರ್ಕಾರ ನೇಮಿಸಿಕೊಂಡಿದೆ’ ಎಂದು ದೂರಿದರು.

‘ಘಟನೆ ನಡೆದು ಎಷ್ಟೋ ದಿನಗಳ ನಂತರ ಹಿಂದೂ ಮುಖಂಡರ ವಿರುದ್ಧ ಪ್ರಕರಣ ದಾಖಲಿಸಲಾಗುತ್ತಿದೆ. ಸುಳ್ಳು ಆರೋಪ ಹೊರಿಸಿ ಹಿಂದೂ ಕಾರ್ಯಕರ್ತರ ವಿರುದ್ಧ ಪ್ರಕರಣ ದಾಖಲಿಸಿದರೆ, ಬೀದಿಗಿಳಿದು ಹೋರಾಟ ಮಾಡಲಾಗುವುದು’ ಎಂದು ಎಚ್ಚರಿಕೆ ನೀಡಿದರು.

ಜಲಾನಯನ ನಿರ್ವಹಣೆ ರಾಷ್ಟ್ರೀಯ ಸಮ್ಮೇಳನ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಲಾನಯನ ನಿರ್ವಹಣೆಯ ಉತ್ಕೃಷ್ಟ ಕೇಂದ್ರ, ಜಲಾನಯನ ಅಭಿವೃದ್ಧಿ ಇಲಾಖೆ, ಭೂ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಸಹಯೋಗದಲ್ಲಿ ಜೂನ್ 3ರಿಂದ 5ರವರೆಗೆ ಜಿಕೆವಿಕೆಯ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಭಾಂಗಣದಲ್ಲಿ ‘ಭೂ ಸಂಪನ್ಮೂಲ ಸಮೀಕ್ಷೆ ಆಧಾರಿತ ಸುಸ್ಥಿರ ಜಲಾನಯನ ನಿರ್ವಹಣೆ ಕುರಿತು ರಾಷ್ಟ್ರೀಯ ಸಮ್ಮೇಳನ’ ಆಯೋಜಿಸಲಾಗಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬೆಂಗಳೂರು ಕೃಷಿ ವಿಶ್ವವಿದ್ಯಾಲ-ಯದ ಕುಲಪತಿ ಎಸ್.ವಿ. ಸುರೇಶ, ಜಲಾನಯನ ಇಲಾಖೆಯ ನಿರ್ದೇಶಕ ಮೊಹಮ್ಮದ ಪರವೇಜ ಬಂಥನಾಳ, ‘ವಿಶ್ವ ಬ್ಯಾಂಕ್ ಆರ್ಥಿಕ ನೆರವಿನೊಂದಿಗೆ ಕರ್ನಾಟಕ ಹಾಗೂ ಒಡಿಶಾ ರಾಜ್ಯಗಳಲ್ಲಿ ನವೀನ ವಿಧಾನಗಳಿಂದ ಜಲಾನಯನ ಪ್ರದೇಶವನ್ನು ಪುನಶ್ಚೇತನಗೊಳಿಸಿ, ಕೃಷಿಯಲ್ಲಿ ಸ್ಥಿತಿಸ್ಥಾಪಕತ್ವ ಸಾಧಿಸುವ ಯೋಜನೆಯನ್ನು ಜಾರಿಗೊಳಿಸಲಾಗಿದೆ. 2022ರಿಂದ 2026ರವರೆಗೆ 34 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ನವೀನ ವಿಧಾನಗಳ ಮೂಲಕ ಜಲಾನಯನ ಪ್ರದೇಶ ಅಭಿವೃದ್ಧಿಪಡಿಸುವ ಗುರಿ ಇದೆ’ ಎಂದು ಮಾಹಿತಿ ನೀಡಿದರು.

‘ಸಮ್ಮೇಳನದಲ್ಲಿ ಜಲಾನಯನ ನಿರ್ವಹಣೆಯಲ್ಲಿ ಭೂ ಸಂಪನ್ಮೂಲ ಹಾಗೂ ಜಲವಿಜ್ಞಾನಿಗಳ ಸಮೀಕ್ಷೆ ವಿಧಾನಗಳು, ಜಲಾನಯನ ನಿರ್ವಹಣೆಗೆ ಸ್ಥಳ ನಿರ್ದಿಷ್ಟ ಚಟುವಟಿಕೆಗಳನ್ನು ಆಯ್ಕೆ ಮಾಡುವ ಡಿಜಿಟಲ್ ಪರಿಕರಗಳು. ಜಲಾನಯನ ನಿರ್ವಹಣೆಯಲ್ಲಿ ಸಮುದಾಯ ಭಾಗವಹಿಸುವುದರ ಕುರಿತು ತಜ್ಞರೊಂದಿಗೆ ಸಂವಾದಗಳು ನಡೆಯಲಿವೆ.

ದೇಶದ ವಿವಿಧ ಭಾಗಗಳಿಂದ 250ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ’ ಎಂದರು.

ಕೃಷಿ ಸಚಿವ ಎನ್. ಚಲುವರಾಯ ಸ್ವಾಮಿ ಅವರು ಜೂನ್ 3ರಂದು ಸಮ್ಮೇಳನ ಉದ್ಘಾಟಿಸಲಿದ್ದಾರೆ.

ಡಿಜಿ- ಐಜಿಪಿಗೆ ಮನವಿ ಸಲ್ಲಿಸಿದ ಪ್ರಮೋದ್ ಮುತಾಲಿಕ್ ನೇತೃತ್ವದ ನಿಯೋಗ

ಹಿಂದೂ ಮುಖಂಡರ ಹತ್ತಿಕ್ಕುವ ಪ್ರಯತ್ನ: ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರವು ಹಿಂದೂ ಸಂಘಟನೆಗಳ ಮುಖಂಡರನ್ನು ಹತ್ತಿಕ್ಕುವ ಪ್ರಯತ್ನ ನಡೆಸುತ್ತಿದೆ’ ಎಂದು ಶ್ರೀರಾಮಸೇನೆಯ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ಆರೋಪಿಸಿದರು.

‘ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದೂ ವಿರೋಧಿ ಚಟುವಟಿಕೆಗಳು ನಡೆಯುತ್ತಿವೆ’ ಎಂದು ಆರೋಪಿಸಿ ವಿವಿಧ ಸಂಘಟನೆಗಳ ಮುಖಂಡರ ನಿಯೋಗವು ರಾಜ್ಯ ಪೊಲೀಸ್ ಮಹಾನಿರ್ದೇಶಕ (ಡಿಜಿ-ಐಜಿಪಿ) ಡಾ.ಎಂ.ಎ.ಸಲೀಂ ಅವರಿಗೆ ಸೋಮವಾರ ಮನವಿ ಸಲ್ಲಿಸಿತು. ಬಳಿಕ ಮುತಾಲಿಕ್ ಮಾಧ್ಯಮ ಪ್ರತಿನಿಧಿಗಳ ಜೊತೆಗೆ ಮಾತನಾಡಿದರು.

‘ಅಬ್ದುಲ್ ರಹಿಮಾನ್ ಕೊಲೆಗೆ ಸೇಡಿನ ಬಣ್ಣ ಕಟ್ಟಿ ಸರ್ಕಾರವು ಹಿಂದೂ ಮುಖಂಡರನ್ನು ಹತ್ತಿಕ್ಕುತ್ತಿದೆ. ಅಬ್ದುಲ್ ರಹಿಮಾನ್ ಅವರ ಕೊಲೆಗೆ ಮರಳು ಮಾಫಿಯಾ ಕಾರಣ. ಆ ವಿಷಯವನ್ನು ರಾಜ್ಯ ಸರ್ಕಾರವು ಮುಚ್ಚಿಡುತ್ತಿದೆ’ ಎಂದು ಆರೋಪಿಸಿದರು.

‘ರಾಜ್ಯ ಸರ್ಕಾರವೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೌಹಾರ್ದ ಕದಡುವ ಕೆಲಸ ಮಾಡುತ್ತಿದೆ. ಕಾಂಗ್ರೆಸ್‌ನ ನಿಲುವು ಮತ್ತಷ್ಟು ಬೆಂಕಿ ಹಚ್ಚುತ್ತಿದೆ. ಎಲ್ಲರನ್ನೂ ಒಂದೇ ದೃಷ್ಟಿಕೋನದಿಂದ ನೋಡಿದಾಗ ಮಾತ್ರವೇ ಸೌಹಾರ್ದ ಮೂಡಲು ಸಾಧ್ಯ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೌಹಾರ್ದ ವಾತಾವರಣ ಮೂಡಿಸಲು ಪ್ರಯತ್ನಿಸ-ಬೇಕು’ ಎಂದು ಕೋರಿದರು.



ಶ್ರೀರಾಮ ಸೇನೆಯ ರಾಷ್ಟ್ರೀಯ ಅಧ್ಯಕ್ಷ ಪ್ರಮೋದ್ ಮುತಾಲಿಕ್ ನೇತೃತ್ವದ ನಿಯೋಗವು ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ. ಸಲೀಂ ಅವರಿಗೆ ಸೋಮವಾರ ಮನವಿ ಸಲ್ಲಿಸಿತು

‘ಕೇರಳದ ಸುನ್ನಿ ಸ್ಟೂಡೆಂಟ್ಸ್ ಫೆಡರೇಷನ್‌ನ ಸದಸ್ಯರು ಸಾವಿರಾರು ಸಂಖ್ಯೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಬಂದು ಪ್ರತಿಭಟನೆ ಮಾಡಿ, ಪ್ರಚೋದನಕಾರಿ ಹೇಳಿಕೆ ನೀಡಿದ್ದಾರೆ. ಅವರಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಏನು ಕೆಲಸ? ಅವರನ್ನು ಜಿಲ್ಲೆಯ ಒಳಗೆ ಬರಲು ಬಿಟ್ಟವರು ಯಾರು? ಅವರ ವಿರುದ್ಧ ಕ್ರಮ ಆಗಬೇಕು. ಪೊಲೀಸರು ತಾರತಮ್ಯ ಮಾಡದೇ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

‘ಹಿಂದೂ ಕಾರ್ಯಕರ್ತರ ಮನೆಗಳಿಗೆ ಪೊಲೀಸರು ರಾತ್ರಿ ವೇಳೆ ಹೋಗುತ್ತಿದ್ದಾರೆ. ಹಿಂದೂ ಮುಖಂಡರನ್ನು ಹತ್ತಿಕ್ಕುವ ಕೆಲಸ ಮಾಡಿದರೆ ರಾಜ್ಯದಾದ್ಯಂತ ಹೋರಾಟ ನಡೆಸಲಾಗುವುದು’ ಎಂದು ಪ್ರಮೋದ್ ಮುತಾಲಿಕ್ ಎಚ್ಚರಿಸಿದರು.

ನಗರದಲ್ಲಿ ಇಂದು



ತುಷಾರ್ ಗಿರಿನಾಥ್

‘ಅಲ್ಟರ್‌ನೇಟಿವ್ 25’ ಸಸ್ಟೇನೆಬಲ್ ಗ್ರೇಟರ್ ಬೆಂಗಳೂರು: ಅತಿಥಿಗಳು: ತುಷಾರ್ ಗಿರಿನಾಥ್, ಮೀನಾಕ್ಷಿ ಕೃಷ್ಣ ಬೈರೇಗೌಡ, ನಾರಾಯಣಸ್ವಾಮಿ ಕೆ.ಎಸ್., ರವೀಂದ್ರ ಟಿ.ಸಿ., ವಿನಯ್ ಶಿಂಧೆ, ‘ವಾಯ್ಸ್ ಚೇಂಜ್–ಸಸ್ಟೇನೇಬಲ್ ಗ್ರೇಟರ್ ಬೆಂಗಳೂರು’ ಸಂವಾದ: ಡಾ. ರಾಮ್‌ಪ್ರಸಾತ್ ಮನೋಹರ್, ಎಂ.ಎನ್. ಅನುಚೇತ್, ಸ್ನೇಹಲ್ ಆರ್., ಸಿ. ಜಯಕುಮಾರ್, ಆಯೋಜನೆ: ಬಿಬಿಎಂಪಿ, ರಾಷ್ಟ್ರೀಯ ಸೇವಾ ಯೋಜನೆ, ಸ್ಥಳ: ರೇವಾ ವಿಶ್ವವಿದ್ಯಾಲಯ, ಯಲಹಂಕ, ಬೆಳಿಗ್ಗೆ 10ರಿಂದ

ಪ್ರಸನ್ನ ವೆಂಕಟರಮಣಸ್ವಾಮಿ ರಥೋತ್ಸವ: ಆಯೋಜನೆ ಮತ್ತು ಸ್ಥಳ: ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನ, ಕೋಟೆ, ಬೆಳಿಗ್ಗೆ 11

ದೃಶ್ಯೋತ್ಸವದ ಉದ್ಘಾಟನೆ: ಅತಿಥಿಗಳು: ರಮೇಶ್ ಎಂ.ಸಿ., ಎಂ.ಎಸ್. ಅಮರನಾಥ, ಜಯಂತಿ ಶೇಗರ್, ಉಪಸ್ಥಿತಿ: ಬಿ.ಎಲ್. ಶಂಕರ್, ಗೋಮತಿ ಗೌಡ, ಶಶಿಧರ್ ಎಸ್.ಎನ್., ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಬೆಳಿಗ್ಗೆ 11.30

ಎಂ.ಎಲ್. ಮಾದಯ್ಯ ದತ್ತಿ ಪ್ರಶಸ್ತಿ ಪ್ರದಾನ: ಉದ್ಘಾಟನೆ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಮಹೇಶ ಜೋಶಿ, ಪ್ರಶಸ್ತಿ ಪ್ರದಾನ: ಎಸ್. ರಾಮದಾಸ್, ಅತಿಥಿ: ಕೆ.ಪಿ. ಪುತ್ತೂರಾಯ, ಉಪಸ್ಥಿತಿ: ಎಂ.ಎಲ್. ಮಾದಯ್ಯ, ಪ್ರಶಸ್ತಿ ಸ್ವೀಕರಿಸುವವರು: ಎಂ. ಕೃಷ್ಣ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4.30

ಜಾರ್ಜ್ ಫರ್ನಾಂಡಿಸ್ ಜನ್ಮದಿನ: ಭಾಗವಹಿಸುವವರು: ಕೆ.ಎಸ್. ನಾಗರಾಜ್, ಎಲ್. ವೆಂಕಟಪ್ಪ, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 6

ಸಮಷ್ಟಿ 25 ನಾಟಕೋತ್ಸವ: ‘ನೀರು ಕುಡಿಸಿದ ನೀರೆಯರು’ ನಾಟಕ ಪ್ರದರ್ಶನ: ನಿರ್ದೇಶನ: ಮಂಜುನಾಥ್ ಎಲ್. ಬಡಿಗೇರ್, ಅಯೋಜನೆ: ಸಮಷ್ಟಿ, ಸ್ಥಳ: ರಂಗಶಂಕರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಸಿದ್ದರಾಮಯ್ಯಗೆ ಪತ್ರ ಬರೆದ ಫಡಣವೀಸ್ ● ರಾಜ್ಯದ ಬೆಂಬಲಕ್ಕೆ ನಿಲ್ಲುವಂತೆ ಸಂಸದರಿಗೆ ಡಿಕೆಶಿ ಮನವಿ

ಆಲಮಟ್ಟಿ ಅಣೆಕಟ್ಟೆಗೆ 'ಮಹಾ' ಅಡ್ಡಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೃಷ್ಣಾ ನ್ಯಾಯಮಂಡಳಿ ತೀರ್ಪಿನಂತೆ ಆಲಮಟ್ಟಿ ಜಲಾಶಯದ ಎತ್ತರವನ್ನು 519.60 ಮೀಟರ್‌ನಿಂದ 524.25 ಮೀಟರ್‌ಗೆ ಹೆಚ್ಚಿಸಲು ಅಧಿಸೂಚನೆ ಹೊರಡಿಸುವಂತೆ ಕರ್ನಾಟಕ ಸರ್ಕಾರವು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರುತ್ತಿರುವ ಮಧ್ಯೆಯೇ, ಅಣೆಕಟ್ಟೆಯ ಎತ್ತರ ಹೆಚ್ಚಳಕ್ಕೆ ಮಹಾರಾಷ್ಟ್ರ ಸರ್ಕಾರ ತಕರಾರು ತೆಗೆದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಈ ಕುರಿತಂತೆ ಮೇ 9ರಂದು ಪತ್ರ ಬರೆದಿರುವ ಮಹಾರಾಷ್ಟ್ರದ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, 'ಅಣೆಕಟ್ಟೆಯ ಎತ್ತರ ಹೆಚ್ಚಿಸಿದರೆ ಸಾಂಗ್ಲಿ ಮತ್ತು ಕೊಲ್ಹಾಪುರ ಜಿಲ್ಲೆಗಳು ಪ್ರವಾಹ ಸಮಸ್ಯೆ ಎದುರಿಸಲಿವೆ. ಹೀಗಾಗಿ, ಈ ತೀರ್ಮಾನವನ್ನು ಮರು ಪರಿಶೀಲಿಸಬೇಕು' ಎಂದು ಮನವಿ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಜಲಸಂಪನ್ಮೂಲ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಮಹಾರಾಷ್ಟ್ರ ಮುಖ್ಯಮಂತ್ರಿಯವರ ಪತ್ರ ನಮಗೆ ಆಘಾತ ತಂದಿದೆ. ಈ ಯೋಜನೆಯ ವಿಚಾರದಲ್ಲಿ ಮಹಾರಾಷ್ಟ್ರ ಸರ್ಕಾರ ಈ ಹಿಂದೆ ಎಂದೂ ಆಕ್ಷೇಪ ವ್ಯಕ್ತಪಡಿಸಿರಲಿಲ್ಲ. ಬ್ರಿಜೇಶ್ ಕುಮಾರ್ ನೇತೃತ್ವದ ಕೃಷ್ಣಾ ನ್ಯಾಯಮಂಡಳಿ 2010ರ ಡಿಸೆಂಬರ್ 30ರಂದು ನೀಡಿದ್ದ ತೀರ್ಪಿನ ಬಗ್ಗೆ ಎಲ್ಲೂ ಪ್ರಶ್ನೆ ಎತ್ತಿರಲಿಲ್ಲ. ಅಲ್ಲದೆ, ಯೋಜನೆ ಜಾರಿ ಮಾಡಲಿ ಎಂದು ಪ್ರಮಾಣಪತ್ರವನ್ನು ಕೂಡಾ ಸಲ್ಲಿಸಿತ್ತು' ಎಂದರು.


'ನಮ್ಮ ರಾಜ್ಯದ ಪಾಲಿನ ನೀರು ಬಳಸಿಕೊಳ್ಳಲು ಕೃಷ್ಣಾ ನ್ಯಾಯಮಂಡಳಿ ತೀರ್ಪಿನಂತೆ ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು 524 ಮೀಟರ್‌ಗೆ ಹೆಚ್ಚಿಸಬೇಕಿದೆ. ನ್ಯಾಯಮಂಡಳಿ ತೀರ್ಪು ನೀಡಿದಾಗ ಸುಮ್ಮನಿದ್ದ ಮಹಾರಾಷ್ಟ್ರ ಮುಖ್ಯಮಂತ್ರಿ ಇದ್ದಕ್ಕಿದ್ದಂತೆ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದು ಆಕ್ಷೇಪ ವ್ಯಕ್ತಪಡಿಸಿರುವುದು ತೀವ್ರ ಆಶ್ಚರ್ಯ ಉಂಟು ಮಾಡಿದೆ' ಎಂದು ಹೇಳಿದರು.

'ಅಣೆಕಟ್ಟೆಯ ಎತ್ತರ ಹೆಚ್ಚಿಸುವ ಯೋಜನೆಯು ನ್ಯಾಯಮಂಡಳಿಯಲ್ಲಿ ನಮಗೆ ಸಿಕ್ಕಿರುವ ಹಕ್ಕು. ಹೀಗಾಗಿ ನಮ್ಮ ಮುಖ್ಯಮಂತ್ರಿಯವರು ಒಂದೆರಡು ದಿನಗಳಲ್ಲಿ ಮಹಾರಾಷ್ಟ್ರ ಮುಖ್ಯಮಂತ್ರಿಗೆ ಪತ್ರ ಬರೆಯಲಿದ್ದಾರೆ. ಈ ಯೋಜನೆ ಅನುಷ್ಠಾನಗೊಳಿಸುವ ಮೂಲಕ ರಾಜ್ಯ ಹಾಗೂ ರೈತರ ಹಿತ ಕಾಯಲು ಎಲ್ಲ ಸಂಸದರು, ಕೇಂದ್ರ ಸಚಿವರು ಸಹಕರಿಸಬೇಕು' ಎಂದು ಶಿವಕುಮಾರ್ ಅವರು ಮನವಿ ಮಾಡಿದರು.

'ವಿ. ಸೋಮಣ್ಣ ಅವರು ಕೇಂದ್ರ ಜಲಶಕ್ತಿ ಖಾತೆಯ ರಾಜ್ಯ ಸಚಿವರು. ಆಲಮಟ್ಟಿ ಯೋಜನೆ ನಮ್ಮ ರಾಜ್ಯದ ಹಿತ. ನೆರೆ ರಾಜ್ಯಗಳ ಜತೆ ತಿಕ್ಕಾಟ ನಮಗೆ ಇಷ್ಟವಿಲ್ಲ. ಈ ಯೋಜನೆ ವಿಳಂಬ ಆಗುತ್ತಿರುವುದರಿಂದ ಯೋಜನೆಯ ವೆಚ್ಚ ವಿಪರೀತವಾಗಿ ಏರಿಕೆಯಾಗುತ್ತಿದ್ದು, ಭೂಸ್ವಾಧೀನಕ್ಕೆ ₹1 ಲಕ್ಷ ಕೋಟಿ ಬೇಕಾಗಿದೆ' ಎಂದು ವಿವರಿಸಿದರು.

'ನಮ್ಮ ರೈತರ ಹಿತ ಕಾಯಲು ನೀವು (ರಾಜ್ಯದ ಸಂಸದರು, ಕೇಂದ್ರ ಸಚಿವರು) ಯಾವಾಗ ಎಲ್ಲಿಗೆ ಕರೆಯುತ್ತೀರೋ ಅಲ್ಲಿಗೆ ಬರಲು ನಮ್ಮ ಸರ್ಕಾರ ಸಿದ್ಧವಿದೆ. ಮಹಾರಾಷ್ಟ್ರ ಮುಖ್ಯಮಂತ್ರಿ ಬರೆದಿರುವ ಪತ್ರ ಮತ್ತು ಅದಕ್ಕೆ ನಮ್ಮ ಮುಖ್ಯಮಂತ್ರಿ ಬರೆಯುವ ಪತ್ರವನ್ನು ಎಲ್ಲ ಸಂಸದರಿಗೆ ರವಾನಿಸುತ್ತೇವೆ' ಎಂದರು.

'ಅಣೆಕಟ್ಟೆಯನ್ನು ಎತ್ತರಿಸುವ ವಿಚಾರವಾಗಿ ಕೇಂದ್ರ ಸಚಿವರನ್ನು ಮುಖ್ಯಮಂತ್ರಿ ಮತ್ತು ನಾನು ಭೇಟಿ ಮಾಡಿದ್ದೆವು. ಮನವಿಗೆ ಸ್ಪಂದಿಸಿದ್ದ ಕೇಂದ್ರ ಸಚಿವರು, ಸಭೆಗೆ ದಿನ ನಿಗದಿ ಮಾಡಿದ್ದರು. ಬಳಿಕ ಸಭೆ ಮುಂದೂಡಿರುವ ಸಂದೇಶ ಬಂತು. ಯುದ್ಧದ ವಾತಾವರಣದ ಕಾರಣಕ್ಕೆ ಸಭೆ ಮುಂದೂಡಿಕೆ ಆಗಿರಬಹುದು ಎಂದು ಭಾವಿಸಿದ್ದೆ' ಎಂದರು.



519.60 ಮೀಟರ್
ಜಲಾಶಯದ ಈಗಿನ ಎತ್ತರ

524.256 ಮೀಟರ್
ಈ ಎತ್ತರಕ್ಕೆ ಹೆಚ್ಚಿಸುವಂತೆ ನ್ಯಾಯಮಂಡಳಿ ತೀರ್ಪು

130 ಟಿಎಂಸಿ ಅಡಿ
ನೀರು ಸಂಗ್ರಹಿಸುವ ಉದ್ದೇಶ

ಯೋಜನೆಯ ಲಾಭ: ಕಲಬುರಗಿ, ವಿಜಯಪುರ, ಬಾಗಲಕೋಟೆ, ಕೊಪ್ಪಳ, ಯಾದಗಿರಿ, ರಾಯಚೂರು, ಕೊಪ್ಪಳ ಮತ್ತು ಗದಗ ಜಿಲ್ಲೆಗಳ 5.30 ಲಕ್ಷ ಹೆಕ್ಟೇರ್ ಕ್ಷೇತ್ರಕ್ಕೆ ನೀರಾವರಿ

ಸವಾಲು: ಜಲಾಶಯ ಎತ್ತರ ಹೆಚ್ಚಳದಿಂದ 75,563 ಎಕರೆ ಜಲಾವೃತಗೊಳ್ಳಲಿದೆ. 20 ಪುನರ್ವಸತಿ ಕೇಂದ್ರಗಳ ಸ್ಥಾಪನೆಗೆ 6,467 ಎಕರೆ, ಕಾಲುವೆಗಳ ಜಾಲ ನಿರ್ಮಾಣಕ್ಕೆ 51,847 ಎಕರೆ ಸೇರಿ ಒಟ್ಟು 1,33,867 ಎಕರೆ ಭೂಮಿ ಸ್ವಾಧೀನಪಡಿಸಿಕೊಳ್ಳಬೇಕಿದೆ.

ಆಲಮಟ್ಟಿ ಜಲಾಶಯದ ಎತ್ತರ ಹೆಚ್ಚಿಸುವುದರಿಂದ ಮಹಾರಾಷ್ಟ್ರದಲ್ಲಿ ಪ್ರವಾಹ ಎದುರಾದರೆ, ಆ ಪರಿಸ್ಥಿತಿಯನ್ನು ಆಂತರಿಕವಾಗಿ ಅಲ್ಲಿನ ಸರ್ಕಾರ ಸರಿಪಡಿಸಿಕೊಳ್ಳಬೇಕು. ಎತ್ತರ ಹೆಚ್ಚಿಸುವ ಕುರಿತಂತೆ ಕೇಂದ್ರ ಸಚಿವರು ಹಾಗೂ ಪ್ರಧಾನ ಮಂತ್ರಿಯನ್ನು ಭೇಟಿ ಮಾಡಿ ನಾವು ಒತ್ತಡ ಹಾಕಬೇಕು. ಈ ವಿಚಾರದಲ್ಲಿ ಒಗ್ಗಟ್ಟಿನಿಂದ ಧ್ವನಿ ಎತ್ತಬೇಕು. ಈ ಯೋಜನೆಯ ಗೆಜೆಟ್ ಅಧಿಸೂಚನೆಯ ಪ್ರಕಟಣೆಗಾಗಿ 2013ರಿಂದಲೂ ಕಾಯುತ್ತಿದ್ದೇವೆ. ಇನ್ನೆಷ್ಟು ದಿನ ಕಾಯಬೇಕು?

ಡಿ.ಕೆ. ಶಿವಕುಮಾರ್
ಉಪ ಮುಖ್ಯಮಂತ್ರಿ



'ಸರ್ಕಾರವನ್ನು ಬೆದರಿಸಲು ಸಾಧ್ಯವಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೇಮಾವತಿ ನಾಲಾ ಜೋಡಣೆ ಯೋಜನೆ ವಿರುದ್ಧ ಹೋರಾಟಗಾರರ ಬ್ಲ್ಯಾಕ್ ಮೇಲ್, ಬೇಡಿಕೆ ಏನೆಂಬುದನ್ನು ಸಮಯ ಬಂದಾಗ ಬಹಿರಂಗಪಡಿಸುತ್ತೇನೆ. ಕಾನೂನು ಕೈಗೆತ್ತಿಕೊಂಡು ಸರ್ಕಾರವನ್ನು ಬೆದರಿಸಲು ಸಾಧ್ಯವಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎಚ್ಚರಿಕೆ ನೀಡಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಈ ಯೋಜನೆ ಮೂಲಕ ಬೆಂಗಳೂರು ದಕ್ಷಿಣ ಜಿಲ್ಲೆಗೆ ನೀರು ಕೊಂಡೊಯ್ಯಲಾಗುತ್ತಿದೆ ಎಂಬುದು ಸುಳ್ಳು. ಈ ಜಿಲ್ಲೆಗೆ ಹೇಮಾವತಿ ನೀರಿನ ಅಗತ್ಯ ಇಲ್ಲ' ಎಂದರು.

'ಹೇಮಾವತಿ ನಾಲಾ ಜೋಡಣೆ ಯೋಜನೆ ವಿಚಾರದಲ್ಲಿ ಬಿಜೆಪಿ ಶಾಸಕರಿಗೆ ಅಸೂಯೆ ಅಷ್ಟೇ. ಕಳೆದ 10-12 ವರ್ಷಗಳಿಂದ ಕುಣಿಗಲ್ ತಾಲ್ಲೂಕಿಗೆ ಅದರ ಪಾಲಿನ ನೀರು ತಲುಪಿಲ್ಲ. ಅಲ್ಲಿನ ಜನರಿಗೆ ಶೇ 92ರಷ್ಟು ನೀರು ನಷ್ಟವಾಗಿದೆ. ಹೀಗಾಗಿ ಈ ಯೋಜನೆ ಕೈಗೊಂಡಿದ್ದೇವೆ' ಎಂದು ತಿಳಿಸಿದರು.

'ಹೇಮಾವತಿ ನೀರಿನಲ್ಲಿ ಕುಣಿಗಲ್ ತಾಲ್ಲೂಕಿಗೆ 3.3 ಟಿಎಂಸಿ ಅಡಿ ನೀರು ಪಾಲು ಸಿಕ್ಕಿದೆ. ನಾವು ಇಲ್ಲಿ ಅಂತರರಾಜ್ಯ ಸಂಘರ್ಷ ಮಾಡುತ್ತಿದ್ದೇವೆಯೇ? ಇಲ್ಲವಲ್ಲ' ಎಂದ ಅವರು, 'ನಿಮಗಿಂತ ಹೆಚ್ಚು ಶಬ್ದ ಬಳಸುವ ಸಾಮರ್ಥ್ಯ ನನಗಿದೆ. ಆದರೆ, ಅಗತ್ಯವಿಲ್ಲ' ಎಂದು ಹೋರಾಟಗಾರರನ್ನು ಉದ್ದೇಶಿಸಿ ಹೇಳಿದರು.

'ಕುಣಿಗಲ್ ಜನ ಬೇರೆಯವರೇ? ಅವರೂ ತುಮಕೂರು ಭಾಗದವರಲ್ಲವೇ? ನಾವು ಎತ್ತಿನಹೊಳೆ ಯೋಜನೆಯಿಂದ ತುಮಕೂರಿನ ಹಲವು ಕೆರೆಗಳನ್ನು ತುಂಬಿಸುತ್ತಿಲ್ಲವೇ? ಕೋಲಾರ ಹಾಗೂ ಚಿಕ್ಕಬಳ್ಳಾಪುರಕ್ಕೆ ಮಾತ್ರ ನೀರು ಪೂರೈಸಲು ಈ ಯೋಜನೆಯನ್ನು ಆರಂಭಿಸಲಾಗಿತ್ತು. ತುಮಕೂರಿಗೂ ನೀರು ನೀಡುತ್ತಿಲ್ಲವೇ? ಬ್ಲ್ಯಾಕ್ ಮೇಲ್ ಮಾಡುವ ಹೋರಾಟಗಾರರಿಗೆ ಇದು ಅರ್ಥ ಆಗುವುದಿಲ್ಲ' ಎಂದರು.

'ರಾಜ್ಯೋತ್ಸವ'ದ ಮಾದರಿ 'ಕೆಂಪೇಗೌಡ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯೋತ್ಸವ ಪ್ರಶಸ್ತಿಯಂತೆ ಕ್ರೀಡೆ, ಸಾಹಿತ್ಯ, ಕಲೆ, ಪತ್ರಿಕೋದ್ಯಮ, ಕೈಗಾರಿಕೆ, ಪರಿಸರ ಸಂರಕ್ಷಣೆ ಸೇರಿ ಎಲ್ಲಾ ಕ್ಷೇತ್ರದ ಸಾಧಕರಿಗೆ 'ಕೆಂಪೇಗೌಡ ಪ್ರಶಸ್ತಿ' ನೀಡಲು ತೀರ್ಮಾನಿಸಲಾಗಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಂಪೇಗೌಡ ಜಯಂತಿ ಆಚರಣೆಯ ಸಿದ್ಧತೆಗಾಗಿ ಸೋಮವಾರ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ನಂತರ ಅವರು ಮಾತನಾಡಿದರು.

ಕೆಂಪೇಗೌಡರ ಜನ್ಮದಿನವಾದ ಜೂನ್ 27ರಂದು ಸಂಜೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಬೇಕಿತ್ತು. ವಾರ್ಡ್ ಮಟ್ಟಕ್ಕೆ ಸೀಮಿತಗೊಳಿಸುವುದು ಬೇಡ ಎಂದು ನಿರ್ಧರಿಸಿ, ಮಾರ್ಗಸೂಚಿ ನಿಗದಿ ಮಾಡಲು ಸೂಚಿಸಲಾಗಿದೆ. ಪ್ರಶಸ್ತಿ ಪಟ್ಟಿ ಸಿದ್ಧಪಡಿಸಲು ಆಯ್ಕೆ ಸಮಿತಿ ರಚಿಸಲಾಗುವುದು ಎಂದರು.


ಕೆಂಪೇಗೌಡ ಜಯಂತಿ ದಿನದಂದೇ 'ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ'ದ ಕಟ್ಟಡಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗುವುದು. ಪ್ರಾಧಿಕಾರಕ್ಕೆ ಸುಮನಹಳ್ಳಿ ಬಳಿ ಐದು ಎಕರೆ ಜಾಗವನ್ನು ನಿಗದಿ ಮಾಡಲಾಗಿದೆ. ಕಟ್ಟಡದ ವಾಸ್ತು ಶಿಲ್ಪಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಈ ವರ್ಷವೂ ಕೆಂಪೇಗೌಡರ ಗೋಪುರಗಳಿಂದ ಜ್ಯೋತಿ ಬರಲಿದ್ದು, ಪ್ರತಿ ಗೋಪುರಕ್ಕೂ ಒಬ್ಬ ಶಾಸಕರಿಗೆ ಜವಾಬ್ದಾರಿ ನೀಡಲಾಗಿದೆ. 27ರಂದು ಬೆಳಿಗ್ಗೆ ಬಾಬು ಜಗಜೀವನ್ ರಾಮ್ ಭವನದಲ್ಲಿ ಕೆಂಪೇಗೌಡ ಜಯಂತಿ ಕಾರ್ಯಕ್ರಮ ಆಚರಿಸಲಾಗುವುದು ಎಂದು ಮಾಹಿತಿ ನೀಡಿದರು.

ಕೆಂಪೇಗೌಡ ಪ್ರಾಧಿಕಾರದಿಂದ ಮೈಸೂರು ದಸರಾಕ್ಕೆ ಪ್ರತಿ ವರ್ಷ ಒಂದು ಸ್ತಬ್ಧಚಿತ್ರ ಕಳುಹಿಸಲಾಗುವುದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಬೆಂಗಳೂರಿನ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಕೆಂಪೇಗೌಡ ಜಯಂತಿ ಆಚರಿಸಲು ಆರ್ಥಿಕ ನೆರವು ನೀಡಲಾಗುವುದು. ಶಾಲೆಗಳಲ್ಲಿ ಚರ್ಚಾಸ್ಪರ್ಧೆ ಏರ್ಪಡಿಸಲಾಗುವುದು. ಆ ಮೂಲಕ ಬೆಂಗಳೂರು ಹಾಗೂ ಕೆಂಪೇಗೌಡರ ಇತಿಹಾಸದ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸಲಾಗುವುದು ಎಂದರು.

ಬಿಜೆಪಿ ನೇತೃತ್ವದ ಸರ್ಕಾರ ಇದ್ದಾಗ ವಿಮಾನನಿಲ್ದಾಣದ ಬಳಿ ಪ್ರತಿಮೆ ಸ್ಥಾಪಿಸಿದರು. ಶಾಲಾ ಮಕ್ಕಳನ್ನು ಕರೆದುಕೊಂಡು ಹೋಗಿ ಕಾರ್ಯಕ್ರಮ ಮಾಡಿದರು. ಗುತ್ತಿಗೆದಾರರಿಗೆ ಹಣವನ್ನೇ ನೀಡಿರಲಿಲ್ಲ ಎಂದು ದೂರಿದರು.

ಮನೆ ಬಾಗಿಲಿಗೆ ಇ-ಖಾತಾ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಆಸ್ತಿ ಮಾಲೀಕರು ಮನೆಯಲ್ಲಿ ಕುಳಿತೇ ಇ-ಖಾತಾವನ್ನು 'ಜನಸೇವಕರಿಂದ' ಪಡೆದುಕೊಳ್ಳುವ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.

ರಾಜ್ಯ ಸರ್ಕಾರದ ಹಲವು ಸೇವೆಗಳನ್ನು ಮನೆಗೆ ಒದಗಿಸುವ https://janasevaka.karnataka.gov.in/ ವೆಬ್‌ಸೈಟ್ ಮೂಲಕ ಬಿಬಿಎಂಪಿ ಇ-ಖಾತಾವನ್ನೂ ಪಡೆಯಬಹುದಾಗಿದೆ.

ವೆಬ್‌ಸೈಟ್ ಅಥವಾ 080-49203888ಗೆ ಮಾಲೀಕರು ಕರೆ ಮಾಡಿ, 'ಜನಸೇವಕರು' ಮನೆಗೆ ಬರುವ ಸಮಯವನ್ನು ನಿಗದಿಪಡಿಸಿಕೊಳ್ಳಬೇಕು. ಮಾಲೀಕರ ಆಧಾರ್, ಆಸ್ತಿ ತೆರಿಗೆ ಎಸ್‌ಎಎಸ್ ಅರ್ಜಿ ಸಂಖ್ಯೆ, ಸ್ವತ್ತಿನ ಕ್ರಯಪತ್ರ, ಬೆಸ್ಕಾಂ ಖಾತೆ ಸಂಖ್ಯೆ, ಸ್ವತ್ತಿನ ಚಿತ್ರವನ್ನು ಸಿದ್ಧವಾಗಿಟ್ಟುಕೊಂಡಿರಬೇಕು. ಜನಸೇವಕರು ಬಂದಾಗ ಈ ದಾಖಲೆಗಳನ್ನು ನೀಡಿದರೆ, ಅವರು ಇ-ಖಾತೆಗೆ ಅರ್ಜಿ ಸಲ್ಲಿಸುತ್ತಾರೆ. ಎರಡು ಅಥವಾ ಮೂರು ದಿನಗಳಲ್ಲಿ ಇ-ಖಾತೆಯನ್ನು ಪಡೆದುಕೊಳ್ಳಬಹುದು ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಇ-ಖಾತಾ ಅರ್ಜಿಗೆ ₹45, ಪ್ರತಿ ಪುಟ ಸ್ಕ್ಯಾನ್, ಅಪ್‌ಲೋಡ್‌ಗೆ ₹5, ಮನೆ ಬಾಗಿಲಿಗೆ ಜನಸೇವಕನ ಸೇವೆಗೆ ₹115 ಶುಲ್ಕ ಪಾವತಿಸಬೇಕಾಗುತ್ತದೆ. ದಾಖಲೆಗಳ ಪುಟ ಹೆಚ್ಚಿದ್ದರೆ, ಪ್ರತಿ ಪುಟಕ್ಕೆ ₹5 ಹೆಚ್ಚಾಗುತ್ತದೆ.

'ಬಿಬಿಎಂಪಿಯ ಯಾವುದೇ ಕಚೇರಿಗೆ ಭೇಟಿ ನೀಡಬೇಡಿ ಅಥವಾ ಕರೆ ಮಾಡಬೇಡಿ' ಎಂಬ ಘೋಷವಾಕ್ಯದಡಿ 'ನಿಮ್ಮ ಮನೆಯಲ್ಲೇ ಕುಳಿತು ಬಿಬಿಎಂಪಿ ಇ-ಖಾತೆಯನ್ನು ಪಡೆದುಕೊಳ್ಳಿ' ಯೋಜನೆಯನ್ನು ಜಾರಿಗೆ ತರಲಾಗಿದೆ.

ಬಿ-ಖಾತಾ: ಸಿಗಲಿದೆ ಸಕಲ ಸೌಲಭ್ಯ?

ಒಂದನೇ ಪುಟದಿಂದ...

ಯಾರು ಅರ್ಜಿ ಸಲ್ಲಿಸುತ್ತಾರೋ ಅವರಿಗೆ ಪ್ರಕ್ರಿಯೆ ಪೂರ್ಣಗೊಳಿಸಿ ಎ-ಖಾತಾ ಸೇರಿದಂತೆ ಎಲ್ಲ ದಾಖಲೆಗಳನ್ನೂ ಒದಗಿಸಲಾಗುತ್ತದೆ ಎಂದು ಬಿಬಿಎಂಪಿ ನಗರ ಯೋಜನೆಯ ಅಧಿಕಾರಿಗಳು ಮಾಹಿತಿ ನೀಡಿದರು.

30 ಅಡಿ ರಸ್ತೆ ಇದ್ದರೆ ಯಾವುದೇ ರೀತಿಯ ನೋಂದಣಿ ಅಗತ್ಯವಿಲ್ಲ. ಮಾರ್ಗಸೂಚಿ ದರದಂತೆ ಶೇ 5ರಷ್ಟು ಶುಲ್ಕ ಪಾವತಿಸಿದರೆ ಉಳಿದ ಪ್ರಕ್ರಿಯೆಗಳು ನಡೆಯುತ್ತವೆ. ಒಂದು ವೇಳೆ, ಬಿ-ಖಾತಾ ನಿವೇಶನವಿರುವ ರಸ್ತೆಯನ್ನು ಬಿಡಿಎ ಅಥವಾ ಬಿಬಿಎಂಪಿ ನಿರ್ವಹಣೆ ಮಾಡುತ್ತಿದ್ದರೆ, ಅರ್ಜಿ ಸಲ್ಲಿಸಿದ ಮೇಲೆ ಬಿಬಿಎಂಪಿ ಅಧಿಕಾರಿಗಳೇ ರಸ್ತೆಯನ್ನು ಸಾರ್ವಜನಿಕ ರಸ್ತೆಯನ್ನಾಗಿ ಘೋಷಿಸುತ್ತಾರೆ. ಇದರಿಂದ, ಪಹಣಿಯಲ್ಲಿ ಹಳೆಯ ಮಾಲೀಕರ ಹೆಸರಿರುವುದು ಬದಲಾಗುತ್ತದೆ. ಮುಂದೆ ಯಾರೂ ಅದನ್ನು ತಮ್ಮ ಆಸ್ತಿ ಎಂದು ಹಕ್ಕು ಸಾಧಿಸಲು ಸಾಧ್ಯವಾಗುವುದಿಲ್ಲ.

20 ಗುಂಟೆ ಅಥವಾ 20 ಸಾವಿರ ಚದರಡಿವರೆಗಿರುವ ಏಕ ನಿವೇಶನಕ್ಕೆ ಮಾತ್ರ ಈ ರೀತಿ ಸೌಲಭ್ಯವಿರುತ್ತದೆ. ಇದಕ್ಕೂ ಹೆಚ್ಚಿನ ವಿಸ್ತೀರ್ಣದಲ್ಲಿ ಏಕ ನಿವೇಶನವಿದ್ದರೆ, ಶೇ 15ರಷ್ಟು ಉದ್ಯಾನ ಹಾಗೂ ಕನಿಷ್ಠ 30 ಅಡಿ ರಸ್ತೆ ಇರುವುದು ಕಡ್ಡಾಯವಾಗಿರುತ್ತದೆ. ಕಂದಾಯ ಬಡಾವಣೆಗಳೂ (ರೆವೆನ್ಯೂ ಲೇಔಟ್) ಈ ವ್ಯವಸ್ಥೆಯಡಿ ತಮ್ಮೆಲ್ಲ ನಿವೇಶನಗಳನ್ನು ಸಕ್ರಮಗೊಳಿಸಿಕೊಳ್ಳಬಹುದು. ಭೂಪರಿವರ್ತನೆ ಪ್ರಕ್ರಿಯೆಯ ಅಗತ್ಯವೂ ಇರುವುದಿಲ್ಲ.

ಬಿ-ಖಾತಾ ನಿವೇಶನದಲ್ಲಿ ಕಟ್ಟಡ ನಿರ್ಮಿಸಿದ್ದರೆ ಅವರಿಗೂ ಎ-ಖಾತಾ, ನಕ್ಷೆ ಸಿಗಲಿದೆ. ಒಂದುವೇಳೆ 30 ಅಡಿ ರಸ್ತೆ ಬಿಡಲು ಸಾಧ್ಯವಾಗದ ಪರಿಸ್ಥಿತಿ ಇದ್ದರೆ, ನಿವೇಶನಕ್ಕೆ ಎ-ಖಾತಾ ಸಿಗಲಿದೆ. ಆದರೆ, ಕಟ್ಟಡ ಅನಧಿಕೃತ ಎಂದು ನಮೂದಾಗಲಿದೆ.

ಅಪಾರ್ಟ್‌ಮೆಂಟ್‌ನಲ್ಲಿ ಉದ್ಯಾನ ಕಡ್ಡಾಯ

ಬಿಬಿಎಂಪಿ ಹಾಗೂ ಬಿಡಿಎ ವ್ಯಾಪ್ತಿಯಲ್ಲಿ ಎರಡು ಸಾವಿರ ಚದರ ಮೀಟರ್‌ನಿಂದ 10 ಸಾವಿರ ಚದರ ಮೀಟರ್ ವರೆಗಿನ ವ್ಯಾಪ್ತಿಯಲ್ಲಿ ನಿರ್ಮಾಣವಾಗುವ ಅಪಾರ್ಟ್‌ಮೆಂಟ್‌ಗಳು ಶೇ 15ರಷ್ಟು ಭೂಮಿಯನ್ನು ಉದ್ಯಾನವನ್ನಾಗಿ ಅಭಿವೃದ್ಧಿಪಡಿಸುವುದು ಕಡ್ಡಾಯವಾಗಲಿದೆ.

ಈ ಸಂಬಂಧ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ಕಾಯ್ದೆ ಸೆಕ್ಷನ್ 13-ಇಗೆ ತಿದ್ದುಪಡಿ ತಂದು, ಪರಿಷ್ಕೃತ ಮಾಸ್ಟರ್ ಪ್ಲಾನ್-2015ರ ವಲಯ ನಿಯಮಗಳನ್ನು ಬದಲಾಯಿಸಿ ನಗರಾಭಿವೃದ್ಧಿ ಇಲಾಖೆ ಕರಡು ಅಧಿಸೂಚನೆ ಹೊರಡಿಸಿದೆ.

ಹತ್ತಾರು ನಿವೇಶನಗಳ ಬಡಾವಣೆಗಳಲ್ಲಿ ಉದ್ಯಾನವನ್ನು ಕಡ್ಡಾಯಗೊಳಿಸಲಾಗಿದ್ದು, ಅದರಂತೆಯೇ ನೂರಾರು ಮನೆಗಳನ್ನು ಹೊಂದಿರುವ ಅಪಾರ್ಟ್‌ಮೆಂಟ್‌ಗಳಲ್ಲೂ ಉದ್ಯಾನ ಹಾಗೂ ಮಳೆ ನೀರು ಇಂಗುವ ವ್ಯವಸ್ಥೆ ಕಡ್ಡಾಯಗೊಳಿಸಲು ಇಂತಹ ಬದಲಾವಣೆ ತರಲಾಗಿದೆ ಎಂದು ನಗರ ಯೋಜನೆ ಅಧಿಕಾರಿಗಳು ತಿಳಿಸಿದರು.

ಶೇ 15ರಷ್ಟು ಭೂಮಿಯಲ್ಲಿ ಉದ್ಯಾನದ ಜೊತೆಗೆ, ಸೆಟ್‌ಬ್ಯಾಕ್ ಅನ್ನು 6 ಮೀಟರ್‌ಗೆ ಹೆಚ್ಚಿಸಲಾಗಿದೆ. ಇದರಿಂದ ಅಪಾರ್ಟ್‌ಮೆಂಟ್‌ಗಳ ಸುತ್ತಲೂ ಗಿಡ-ಮರಗಳನ್ನು ಬೆಳೆಸಲು ಸ್ಥಳ ಮೀಸಲಿರಲಿದೆ. ನಗರದಲ್ಲಿ ಮಳೆ ನೀರನ್ನು ಹಿಡಿದಿಟ್ಟುಕೊಳ್ಳುವ ಹಾಗೂ ರಾಜಕಾಲುವೆಗಳಲ್ಲಿ ಪ್ರವಾಹದ ಸಂದರ್ಭವನ್ನು ನಿಯಂತ್ರಿಸುವ ಸಲುವಾಗಿ ಈ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ವಸತಿಯೇತರ, ಮಿಶ್ರಬಳಕೆ ಅಪಾರ್ಟ್‌ಮೆಂಟ್‌ಗಳಾದರೆ ಅಲ್ಲಿ ಉದ್ಯಾನದ ಪ್ರದೇಶವನ್ನು ಶೇ 10 ಹಾಗೂ ವಾಹನ ನಿಲುಗಡೆಯನ್ನು ಪ್ರದೇಶವನ್ನು ಶೇ 5ಕ್ಕೆ ನಿಗದಿಪಡಿಸಲಾಗಿದೆ.

55 ಚದರ ಮೀಟರ್‌ನಿಂದ ಎರಡು ಸಾವಿರ ಚದರ ಮೀಟರ್‌ವರೆಗಿನ ಕಟ್ಟಡಗಳು ಉದ್ಯಾನಕ್ಕೆ ಭೂಮಿ ಮೀಸಲಿಡುವ ಬದಲು ಅವರಿಗೆ ಉದ್ಯಾನ ನಿರ್ಮಾಣದ ಶುಲ್ಕವನ್ನು ವಿಧಿಸಲಾಗುತ್ತದೆ. ಮಾರ್ಗಸೂಚಿ ದರದ ಶೇ 5ರಷ್ಟು ಹಣವನ್ನು ಶುಲ್ಕವಾಗಿ ಪಾವತಿಸಬೇಕಾಗುತ್ತದೆ. ಈ ಶುಲ್ಕವನ್ನು ಸ್ವೀಕರಿಸಲು ಪ್ರತ್ಯೇಕ ಎಸ್ಕ್ರೊ ಖಾತೆಯನ್ನು ಯೋಜನಾ ಪ್ರಾಧಿಕಾರ ನಿರ್ವಹಿಸಬೇಕು ಎಂದು ಕರಡು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಆಕ್ಷೇಪಣೆ ಸಲ್ಲಿಸಲು 30 ದಿನಗಳ ಅವಕಾಶವಿದೆ.

ಮುನಿರತ್ನ ಬಂಧನ ಬೇಡ–ಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧ್ಯವಯಸ್ಸಿನ ಮಹಿಳೆಯೊಬ್ಬರ ಮೇಲೆ ತನ್ನ ಸಹಚರರಿಂದ ಕಣ್ಣೆದುರೇ ಅತ್ಯಾಚಾರ ಮಾಡಿಸಿದ ಆರೋಪ ಪ್ರಕರಣದ ಮೊದಲ ಆರೋಪಿ ರಾಜರಾಜೇಶ್ವರಿ ನಗರ ಕ್ಷೇತ್ರದ ಬಿಜೆಪಿ ಶಾಸಕ ಮುನಿರತ್ನ ಅವರನ್ನು ಇದೇ 3ರವರೆಗೆ ಬಂಧಿಸದಂತೆ ಜನಪ್ರತಿನಿಧಿಗಳ ಕೋರ್ಟ್ ಮಧ್ಯಂತರ ರಕ್ಷಣೆ ನೀಡಿದೆ.

ಈ ಕುರಿತ ಪ್ರಕರಣವನ್ನು, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಸೋಮವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಪ್ರಾಸಿಕ್ಯೂಷನ್ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಸಿ.ಎಸ್.ಪ್ರದೀಪ್, 'ಆರೋಪಿ ಮುನಿರತ್ನ ಸಂತ್ರಸ್ತೆಗೆ ಬೆದರಿಕೆ ಒಡ್ಡಿದ ಆರೋಪಕ್ಕೆ ಸಂಬಂಧಿಸಿದಂತೆ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಈ ಕುರಿತ ಕೇಸ್ ಡೈರಿ ಹಾಗೂ ಇತರೆ ದಾಖಲೆಗಳನ್ನು ಕೋರ್ಟ್‌ಗೆ ಹಾಜರು ಪಡಿಸಲು ಸಮಯಾವಕಾಶ ನೀಡಬೇಕು' ಎಂದು ಕೋರಿದರು.

ಇದಕ್ಕೆ ಪ್ರತಿರೋಧ ವ್ಯಕ್ತಪಡಿಸಿದ ಮುನಿರತ್ನ ಪರ ಹೈಕೋರ್ಟ್ ವಕೀಲ ಎಸ್.ಎಸ್.ಶ್ರೀನಿವಾಸ ರಾವ್ ಹಾಗೂ ಉಳಿದ ಆರೋಪಿಗಳ ಪರ ಪದಾಂಕಿತ ವಕೀಲ ಎಸ್.ಶ್ಯಾಮಸುಂದರ್, 'ಮಧ್ಯಂತರ ಜಾಮೀನು ಅರ್ಜಿಯನ್ನು ಈಗಲೇ ಪರಿಗಣಿಸಬೇಕು' ಎಂದು ನ್ಯಾಯಾಧೀಶರಿಗೆ ಮನವಿ ಮಾಡಿದರು.

ಸಂತ್ರಸ್ತೆಯ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ಅವರು, 'ಅಪರಾಧ ದಂಡ ಪ್ರಕ್ರಿಯಾ ಸಂಹಿತೆ-1973ರ (ಸಿಆರ್‌ಪಿಸಿ) ಕಲಂ 438 (1)(4)ರ ಅಡಿಯಲ್ಲಿ ನಿರೀಕ್ಷಣಾ ಜಾಮೀನಿಗೆ ಅರ್ಜಿ ಸಲ್ಲಿಸಿದಾಗ ಪ್ರಾಸಿಕ್ಯೂಟರ್‌ಗೆ ನೋಟಿಸ್ ನೀಡುವ ಪೂರ್ವದಲ್ಲಿ ನ್ಯಾಯಾಲಯ ಮಧ್ಯಂತರ ಆದೇಶ ನೀಡಬಹುದಾಗಿದೆ. ಪ್ರಾಸಿಕ್ಯೂಟರ್‌ಗೆ ನೋಟಿಸ್ ನೀಡಿದ ನಂತರ ಯಾವುದೇ ಮಧ್ಯಂತರ ಆದೇಶ ನೀಡಲು ಕಾನೂನು ಅನುಮತಿಸುವುದಿಲ್ಲ' ಎಂದು ತಕರಾರು ಸಲ್ಲಿಸಿದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಾಧೀಶರು, 'ಆರೋಪಿ ತನಿಖೆಗೆ ಸಹಕರಿಸುವುದಾದರೆ ಅವರನ್ನು ಬಂಧಿಸುವುದಿಲ್ಲ' ಎಂಬ ಪ್ರಾಸಿಕ್ಯೂಷನ್ ಹೇಳಿಕೆಯನ್ನು ಪರಿಗಣಿಸಿ 'ಇದೇ 3ರವರೆಗೆ ಆರೋಪಿಗಳನ್ನು ಬಂಧಿಸಬಾರದು' ಎಂದು ಮಧ್ಯಂತರ ರಕ್ಷಣೆ ನೀಡಿ ವಿಚಾರಣೆಯನ್ನು ಮಂಗಳವಾರ (ಜೂನ್ 3) ಮಧ್ಯಾಹ್ನಕ್ಕೆ ಮುಂದೂಡಿದರು.

ಜುರೇಲ್, ಯಶಸ್ವಿ ಅರ್ಧಶತಕ

ಕ್ಯಾಂಟರ್‌ಬರಿ (ಪಿಟಿಐ): ಭಾರತ ಎ ಮತ್ತು ಇಂಗ್ಲೆಂಡ್ ಲಯನ್ಸ್ ತಂಡಗಳ ನಡುವಣ 'ಟೆಸ್ಟ್' ಪಂದ್ಯ ಡ್ರಾ ಆಯಿತು.

ಮೊದಲ ಇನಿಂಗ್ಸ್‌ನಲ್ಲಿ ಇಂಗ್ಲೆಂಡ್ ತಂಡವು ಅಲ್ಪ ಮುನ್ನಡೆ ಗಳಿಸಿತು. ನಾಲ್ಕನೇ ದಿನವಾದ ಸೋಮವಾರ ಭಾರತ ತಂಡದ ಯಶಸ್ವಿ ಜೈಸ್ವಾಲ್, ಅಭಿಮನ್ಯು ಈಶ್ವರನ್, ಧ್ರುವ ಜುರೇಲ್ ಮತ್ತು ನಿತೀಶ ಕುಮಾರ್ ರೆಡ್ಡಿ ಅರ್ಧಶತಕಗಳನ್ನು ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: 125.1 ಓವರ್‌ಗಳಲ್ಲಿ 557. ಇಂಗ್ಲೆಂಡ್ ಲಯನ್ಸ್: 145.5 ಓವರ್‌ಗಳಲ್ಲಿ 587. ಎರಡನೇ ಇನಿಂಗ್ಸ್: ಭಾರತ ಎ: 41 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 241 (ಯಶಸ್ವಿ ಜೈಸ್ವಾಲ್ 64, ಅಭಿಮನ್ಯು ಈಶ್ವರನ್ 68, ಧ್ರುವ ಜುರೇಲ್: ಔಟಾಗದೇ 53, ನಿತೀಶ ಕುಮಾರ್ ರೆಡ್ಡಿ ಔಟಾಗದೇ 52, ರೆಹಾನ್ ಅಹಮದ್ 41ಕ್ಕೆ2) ಫಲಿತಾಂಶ: ಡ್ರಾ



ಆಂಧ್ರಪ್ರದೇಶ ಹೈಕೋರ್ಟ್‌ನಿಂದ ಕರ್ನಾಟಕ ಹೈಕೋರ್ಟ್‌ಗೆ ವರ್ಗಾವಣೆಯಾಗಿರುವ ನ್ಯಾಯಮೂರ್ತಿ ಕುಂಭಜದಲ ಮನ್ಮಥ ರಾವ್ ಸೋಮವಾರ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳ ಕೋರ್ಟ್ ಹಾಲ್ 1ರಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ಹಂಗಾಮಿ ಮುಖ್ಯ ನ್ಯಾಯಮೂರ್ತಿ ಕೆ.ಕಾಮೇಶ್ವರ ರಾವ್ ಪ್ರಮಾಣ ವಚನ ಬೋಧಿಸಿದರು. ನ್ಯಾಯಮೂರ್ತಿ ಕೆ.ಎಸ್. ಮುದಗಲ್ (ಎಡದಿಂದ ಬಲಕ್ಕೆ) ಮತ್ತು ನ್ಯಾ.ಅನು ಶಿವರಾಮನ್ ಅವರೂ ಇದ್ದರು

'ಬಾನು ಮುಷ್ತಾಕ್ ಮತ್ತು ಬಂಡಾಯ ಪ್ರಜ್ಞೆ' ವಿಚಾರಗೋಷ್ಠಿಯಲ್ಲಿ ಲೋಲಾಕ್ಷಿ

ಬುಕರ್ ಪ್ರಶಸ್ತಿಗೆ ಬುರ್ಖಾ ಹಾಕುವುದು ಬೇಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬುಕರ್ ಪ್ರಶಸ್ತಿಯು ಬಾನು ಮುಷ್ತಾಕ್ ಕಥೆಗಳ ಮೂಲಕ ತೆರೆದಿಟ್ಟ ಹೆಣ್ಣುಮಕ್ಕಳ ಬದುಕನ್ನು ಬದಲಾಯಿಸುವುದು ಹೇಗೆ? ಮಕ್ಕಳ ಹಕ್ಕುಗಳನ್ನು ರಕ್ಷಣೆ ಮಾಡುವುದು ಹೇಗೆ ಎಂಬ ಚಿಂತನೆಗೆ ಕಾರಣವಾಗಬೇಕು. ಇಲ್ಲದೇ ಇದ್ದರೆ ಬುಕರ್ ಪ್ರಶಸ್ತಿಗೆ ಬುರ್ಖಾ ಹಾಕುವ ಪರಿಸ್ಥಿತಿ ಬರಲಿದೆ ಎಂದು ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಎನ್.ಕೆ. ಲೋಲಾಕ್ಷಿ ತಿಳಿಸಿದರು.

ರಾಜ್ಯ ಬಂಡಾಯ ಸಾಹಿತ್ಯ ಸಂಘಟನೆಯು ಸರ್ಕಾರಿ ಕಲಾ ಕಾಲೇಜಿನ ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಸಹಯೋಗದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಬಾನು ಮುಷ್ತಾಕ್ ಅವರಿಗೆ ವಿಚಾರ ಗೋಷ್ಠಿಯ ಗೌರವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬುಕರ್ ಪ್ರಶಸ್ತಿ ಬಂದಿರುವುದು ಹೆಮ್ಮೆಯ ವಿಚಾರ. ಅದನ್ನು ಸಂಭ್ರಮಿಸಲೇಬೇಕು. ಈ ಸಂಭ್ರಮ ಮುಗಿದ ಬಳಿಕವಾದರೂ ಚಿಂತನೆಗೆ ದಾರಿಯಾಗಬೇಕು ಎಂದು ಆಶಿಸಿದರು.

ಬಾನು ಅವರ ಕಥೆಗಳನ್ನು ಓದುತ್ತಾ ಹೋಗುತ್ತಿದ್ದಂತೆ ಸಂಕಟವನ್ನು ಉಂಟು ಮಾಡುವ ಪಾತ್ರಗಳೇ ಬರುತ್ತವೆ. ಹೊರಗಿನ ಕಾನೂನು ಒಂದಾದರೆ ಒಳಗಿನ ಕಾನೂನೇ ಬೇರೆ. ಒಂದು, ಎರಡು, ಮೂರು ಎಂದು ಹೇಳುವ ಹೊತ್ತಿಗೆ ಆಗುವ ವಿಚ್ಛೇದನ, ಮೂರು ಹೆಣ್ಣುಮಕ್ಕಳಿದ್ದರೂ ಆಟೊ ಓಡಿಸಲು ಗಂಡು ಮಗು ಬೇಕು ಎಂದು ಮುಂದಾಗುವ ಗಂಡಿನ ಒಳಗಿನ ಸಂಕಟಗಳನ್ನು ಕಥೆಗಳ ಮೂಲಕ ಬಾನು ತೆರೆದಿಡುತ್ತಾ ಹೋಗುತ್ತಾರೆ. ಹಸೀನಾ ಎಂದು ಸಿನಿಮಾ ಆಗಿರುವ 'ಕರಿನಾಗರ' ಕಥೆಯೇ ಅವರ ಊರಿನ ಮುಸ್ಲಿಮ್ ಸಮುದಾಯದವರು ಬಹಿಷ್ಕಾರ ಹಾಕುವಂತೆ ಮಾಡಿತ್ತು. ಎಂದು ಹೇಳಿದರು.

ತಲಾಖ್‌ಗೆ ಹೆದರಿ ಬದುಕುವ ಮಹಿಳೆಯ ಪಾತ್ರವನ್ನೂ, ಬೀದಿಯಲ್ಲಿ ನಿಂತುಕೊಂಡು ತಲಾಖ್ ಎಂದು ಕೇಳುವ ಮಹಿಳೆಯ ಪಾತ್ರವನ್ನೂ ಒಟ್ಟೊಟ್ಟಿಗೆ ಬಾನು ಸೃಷ್ಟಿಸಿದ್ದಾರೆ. ಕಥೆಗಳಲ್ಲಿ ಮಕ್ಕಳಂತೂ ಯದ್ವಾತದ್ವಾ ಇದ್ದಾರೆ. ತಂದೆ ಇನ್ನೊಂದು ಮದುವೆಯಾಗಲು ಅಡ್ಡಿಯಾಗದ ಮಕ್ಕಳು ತಾಯಿಗೆ ಸುತ್ತಿಕೊಳ್ಳುತ್ತವೆ. ಈ ಎಲ್ಲ ಪರಿಸ್ಥಿತಿಯನ್ನು ಬದಲಾಯಿಸಲು, ಒಳಕಾನೂನನ್ನು ತೊಡೆದುಹಾಕಲು ಸಾಧ್ಯವಾಗದೇ ಹೋದರೆ ಬುಕರ್ ಪ್ರಶಸ್ತಿ ವ್ಯರ್ಥ ಎಂದು ಅಭಿಪ್ರಾಯಪಟ್ಟರು.

ಸಾಹಿತಿ ಬರಗೂರು ರಾಮಚಂದ್ರಪ್ಪ ಮಾತನಾಡಿ, 'ಬುಕರ್ ಪ್ರಶಸ್ತಿ ಮೂಲಕ ಬಾನು ಮುಷ್ತಾಕ್ ಮತ್ತು ದೀಪಾ ಭಾಸ್ತಿ ಕನ್ನಡಕ್ಕೆ, ಕರ್ನಾಟಕಕ್ಕೆ ಮಾತ್ರವಲ್ಲ, ಭಾರತಕ್ಕೇ ಗೌರವ ತಂದಿದ್ದಾರೆ. ಬಂಡಾಯ ಚಳವಳಿಯಲ್ಲಿ ತೊಡಗಿಸಿಕೊಂಡು ಚಳವಳಿಯನ್ನೂ ಬೆಳೆಸಿ, ತಾನೂ ಬೆಳೆದ ಬಾನು ಅವರು ಬಂಡಾಯ ಸಾಹಿತ್ಯಕ್ಕೂ ಹೆಮ್ಮೆ ತಂದಿದ್ದಾರೆ' ಎಂದು ಶ್ಲಾಘಿಸಿದರು.

'ಜಡ ಸಂಪ್ರದಾಯವಾದಿಗಳು ಹಾಸನದಲ್ಲಿ ಬಾನು ಮುಷ್ತಾಕ್ ಕುಟುಂಬಕ್ಕೆ ಬಹಿಷ್ಕಾರ ಹಾಕಿದ್ದಾಗ ನಾನು ಹೋಗಿ ಸಂಧಾನ ಮಾಡಿದ್ದೆ. ಅಲ್ಲೇ ಫತ್ವಾ ಹೊರಡಿಸಿದ್ದವರು, ಅಲ್ಲೇ ಫತ್ವಾ ವಾಪಸ್ ತೆಗೆದುಕೊಂಡಿದ್ದರು' ಎಂದು ನೆನಪು ಮಾಡಿಕೊಂಡರು.

'ಚಳವಳಿಗಳ ಸಂಗಾತಿಯಾಗಿ ಬಾನು ಮುಷ್ತಾಕ್' ಬಗ್ಗೆ ಲೇಖಕ ಆರ್.ಜಿ.ಹಳ್ಳಿ ನಾಗರಾಜ್ ಮಾತನಾಡಿದರು. ಲೇಖಕಿ ಕೆ. ಷರೀಫಾ ಅಧ್ಯಕ್ಷತೆ ವಹಿಸಿದ್ದರು. ಸರ್ಕಾರಿ ಕಲಾ ಕಾಲೇಜು ಪ್ರಾಂಶುಪಾಲ ಶ್ರೀನಿವಾಸ ನಾಯಕ್, ಕನ್ನಡ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಸಂಚಾಲಕ ಬಿ.ಸಿ. ನಾಗೇಂದ್ರ ಕುಮಾರ್ ಭಾಗವಹಿಸಿದ್ದರು.



ಬಾನು ಮುಷ್ತಾಕ್ ಅವರಿಗೆ ವಿಚಾರಗೋಷ್ಠಿಯ ಗೌರವ: ಕಾರ್ಯಕ್ರಮದಲ್ಲಿ ಎನ್‌.ಕೆ. ಲೋಲಾಕ್ಷಿ ಮತ್ತು ಬರಗೂರು ರಾಮಚಂದ್ರಪ್ಪ ಸಮಾಲೋಚನೆಯಲ್ಲಿ ತೊಡಗಿದ್ದರು. ಕೆ. ಷರೀಫಾ ಮತ್ತು ಆರ್‌.ಜಿ. ಹಳ್ಳಿ ನಾಗರಾಜ್ ಉಪಸ್ಥಿತರಿದ್ದರು
ಪ್ರಜಾವಾಣಿ ಚಿತ್ರ

'ಬುಕರ್ ಪ್ರಶಸ್ತಿ ಭರವಸೆಯ ರೂಪಕ'

ಬೆಂಗಳೂರು: 'ಈ ದೇಶದ ಸಂಸ್ಕೃತಿಯಿಂದಲೇ ಮುಸಲ್ಮಾನರನ್ನು ಅಳಿಸಿಹಾಕುವ ಮಾತುಗಳು ಗಟ್ಟಿಯಾಗಿ ಕೇಳಿಬರುತ್ತಿರುವ ಸಂದರ್ಭದಲ್ಲಿ ಬಾನು ಮುಷ್ತಾಕ್ ಅವರಿಗೆ ಬುಕರ್ ಪ್ರಶಸ್ತಿ ಸಂದಿರುವುದು ಭರವಸೆಯ ರೂಪಕ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅಭಿಪ್ರಾಯಪಟ್ಟರು.

ಬುಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್ ಹಾಗೂ ದೀಪಾ ಭಾಸ್ತಿ ಅವರನ್ನು ಸೋಮವಾರ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ಅಭಿನಂದಿಸಿ ಅವರು ಮಾತನಾಡಿದರು.

'ಬಾನು ಮುಷ್ತಾಕ್ ತಮ್ಮನ್ನು ಜಾತ್ರೆಯಲ್ಲಿ ನಿಂತ ಏಕಾಂಗಿ ಎಂದು ಕರೆದುಕೊಳ್ಳುತ್ತಾರೆ. ಮುಸಲ್ಮಾನ ಮಹಿಳೆಯಲ್ಲಿ ಹುಟ್ಟಿದ ಈ ರೀತಿಯ ಏಕಾಂಗಿತನವೇ ಅವರನ್ನು ಜಗತ್ತಿನ ಮುಖ್ಯ ಲೇಖಕಿಯಾಗಿ ರೂಪಿಸಿದೆ. 'ಹಾರ್ಟ್ ಲ್ಯಾಂಪ್' ಕೃತಿಯನ್ನು ಕೇವಲ ಶೈಕ್ಷಣಿಕ ಚೌಕಟ್ಟಿನಲ್ಲಿ ನೋಡಬೇಕಿಲ್ಲ.ಕೃತಿಯ ಮಾನವೀಯ ಮತ್ತು ಸಾಮಾಜಿಕ ನಿಲುವುಗಳು ಸಾರ್ವಕಾಲಿಕ ಮತ್ತು ಸಾರ್ವತ್ರಿಕವಾಗಿವೆ' ಎಂದು ಹೇಳಿದರು.

ಸಭಾಪತಿಗೆ ಕಾಂಗ್ರೆಸ್ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮುಖ್ಯಸಚೇತಕ ಎನ್. ರವಿ ಕುಮಾರ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಪರಿಷತ್‌ನ ಕಾಂಗ್ರೆಸ್ ಸದಸ್ಯರು ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಸೋಮವಾರ ಮನವಿ ಸಲ್ಲಿಸಿದರು.

ಸಂಪುಟ ದರ್ಜೆಯ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದಲ್ಲದೆ, ಇಂತಹ ಅಸಂಸದೀಯ ವರ್ತನೆಗೆ ಕ್ಷಮೆಯಾಚಿಸುವ ಬದಲು ಸಾರ್ವಜನಿಕ ವೇದಿಕೆಗಳಲ್ಲಿ ಸಮರ್ಥಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಅವರ ಹೇಳಿಕೆಗಳು ನೇರವಾಗಿ ಪ್ರಿಯಾಂಕ್ ಖರ್ಗೆ ಅವರನ್ನು ಗುರಿಯಾಗಿಸಿದ್ದರೆ, ಪರೋಕ್ಷವಾಗಿ ಕರ್ನಾಟಕದ ದಲಿತ ಸಮುದಾಯವನ್ನು ಅವಮಾನಿಸುವ ದುರುದ್ದೇಶ ಹೊಂದಿವೆ. ಆ ಮೂಲಕ ನಾರಾಯಣಸ್ವಾಮಿ ತಮ್ಮ ಪ್ರಮಾಣ ವಚನವನ್ನು ಪಾಲಿಸುವಲ್ಲಿ ವಿಫಲರಾಗಿದ್ದಾರೆ ಎಂದು ದೂರಿದರು.

ಎನ್. ರವಿಕುಮಾರ್ ಅವರು 'ಕಲಬುರಗಿ ಜಿಲ್ಲಾಧಿಕಾರಿ ಕಚೇರಿ ಸ್ವಾತಂತ್ರ್ಯ ಕಳೆದುಕೊಂಡಿದೆ. ಡಿ.ಸಿ. ಪಾಕಿಸ್ತಾನದಿಂದ ಬಂದಿದ್ದಾರೆಯೇ' ಎಂದು ಪ್ರಶ್ನಿಸುವ ಮೂಲಕ ಅವರನ್ನು ಧರ್ಮದ ಆಧಾರದಲ್ಲಿ ನಿಂದಿಸಿದ್ದಾರೆ' ಎಂದು ಆರೋಪಿಸಿದರು.

ಜಿಲ್ಲಾಧಿಕಾರಿಗೆ ಅವಹೇಳನ, ಸಚಿವರ ವಿರುದ್ಧ ಜಾತಿ ನಿಂದನೆ ಪ್ರಕರಣ

ರವಿಕುಮಾರ್ 5 ಗಂಟೆ ವಿಚಾರಣೆ

ಪ್ರಜಾವಾಣಿ ವಾರ್ತೆ



ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ಅವರು ಕಲಬುರಗಿಯಲ್ಲಿ ವಿಚಾರಣೆಗಾಗಿ ಪಕ್ಷದ ಮುಖಂಡರೊಂದಿಗೆ ಮೆರವಣಿಗೆಯಲ್ಲಿ ಬಂದರು –ಪ್ರಜಾವಾಣಿ ಚಿತ್ರ

ಕಲಬುರಗಿ: ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ವಿರುದ್ಧ ಅವಹೇಳನಕಾರಿ ಹೇಳಿಕೆ ಹಾಗೂ ಸಚಿವ ಪ್ರಿಯಾಂಕ್ ಖರ್ಗೆಗೆ ಜಾತಿ ನಿಂದನೆ ಮಾಡಿದ ಪ್ರಕರಣದ ಆರೋಪಿ, ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್ ಅವರು ಇಲ್ಲಿನ ಕಲಬುರಗಿ ದಕ್ಷಿಣ ಸಹಾಯಕ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಸೋಮವಾರ ಐದು ಗಂಟೆ ವಿಚಾರಣೆಗೆ ಒಳಗಾದರು.

ಬಿಜೆಪಿ ಮುಖಂಡರೊಂದಿಗೆ ಮೆರವಣಿಗೆಯಲ್ಲಿ ಹೊರಟ ರವಿಕುಮಾರ್, ಬೆಳಿಗ್ಗೆ 11.40ಕ್ಕೆ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿನ ಆಯುಕ್ತರ ಕಚೇರಿಗೆ ಬಂದರು. ಸಂಜೆ 4.18ಕ್ಕೆ ಕಚೇರಿಯಿಂದ ಹೊರಬಂದರು. ತನಿಖಾಧಿಕಾರಿ ಎಸಿಪಿ ಶರಣಪ್ಪ ಸುಬೇದಾರ್ ಅವರು ವಿಚಾರಣೆ ನಡೆಸಿದರು.

'ಭಾಷಣದಲ್ಲಿನ ಹೇಳಿಕೆಯ ನೈಜತೆ ತಿಳಿಯಲು ರವಿಕುಮಾರ್ ಅವರ ಧ್ವನಿ ಮಾದರಿಯನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗುವುದು. ಆರೋಪಿಗೆ 30ಕ್ಕೂ ಹೆಚ್ಚು ಪ್ರಶ್ನೆಗಳನ್ನು ಕೇಳಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ರವಿಕುಮಾರ್, 'ನನ್ನ ಭಾಷಣದಲ್ಲಿ ಉಸ್ತುವಾರಿ ಸಚಿವ, ಜಿಲ್ಲಾಧಿಕಾರಿಗಳಿಗೆ ಬೈದಿಲ್ಲ. ಅಟ್ರಾಸಿಟಿ ಪ್ರಕರಣಕ್ಕೆ ಅನ್ವಯ ಆಗುವಂತಹ ಪದಗಳನ್ನೂ ಬಳಸಿಲ್ಲ. ಪಾಕಿಸ್ತಾನದಲ್ಲಿನ ಅರಾಜಕತೆ, ಅವ್ಯವಸ್ಥೆ, ದುರಾಡಳಿತದ ಹಿನ್ನೆಲೆಯಲ್ಲಿ ಪಾಕ್ ಪದವನ್ನು ಬಳಸಿದ್ದಾಗಿ ವಿಚಾರಣೆಯಲ್ಲಿ ಉತ್ತರ ಕೊಟ್ಟಿದ್ದೇನೆ. ಅವಶ್ಯವಿದ್ದರೆ ಮತ್ತೆ ವಿಚಾರಣೆಗೆ ಬಂದು ಸಹಕಾರ ಕೊಡುತ್ತೇನೆ' ಎಂದರು.

'ಜಿಲ್ಲಾಧಿಕಾರಿಗೆ ಇನ್ನೂ ಕ್ಷಮಾಪಣೆ ಪತ್ರ ಬರೆದಿಲ್ಲ. ಅವರಿಗೆ ಕ್ಷಮಾಪಣೆ ಪತ್ರವನ್ನು ಬರೆಯುತ್ತೇನೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ನಿಯಮ ಉಲ್ಲಂಘನೆ: 'ವಿಚಾರಣೆಗೆ ಒಬ್ಬರೇ ಬರುವಂತೆ ಹೈಕೋರ್ಟ್ ನಿರ್ದೇಶನ ನೀಡಿತ್ತು. ಆದರೆ, ಪಕ್ಷದ ಮುಖಂಡರೊಂದಿಗೆ ಘೋಷಣೆ ಕೂಗುತ್ತಾ ಮೆರವಣಿಗೆಯಲ್ಲಿ ಬಂದು, ನಿಯಮವನ್ನು ಉಲ್ಲಂಘಿಸಿ ವಿಚಾರಣೆಗೆ ಹಾಜರಾಗಿದ್ದಾರೆ. ಈ ಬಗ್ಗೆ ಸರ್ಕಾರಿ ವಕೀಲರ ಮೂಲಕ ಹೈಕೋರ್ಟ್ ಗಮನಕ್ಕೆ ತರಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಜನೌಷಧಿ ಕೇಂದ್ರ ಮುಚ್ಚುವ ನಿರ್ಧಾರ ಕೈಬಿಡಿ'

ಪ್ರಜಾವಾಣಿ ವಾರ್ತೆ



ಪ್ರಲ್ಹಾದ ಜೋಶಿ

ಹುಬ್ಬಳ್ಳಿ: 'ಪ್ರಧಾನಮಂತ್ರಿ ಜನೌಷಧಿ ಕೇಂದ್ರದ ಮೇಲೆ ಪ್ರಧಾನಿ ಮೋದಿ ಅವರ ಭಾವಚಿತ್ರ ಇದೆ ಎಂಬ ಏಕೈಕ ಕಾರಣಕ್ಕೆ ಅವುಗಳನ್ನು ಮುಚ್ಚಲು ರಾಜ್ಯ ಸರ್ಕಾರ ಮುಂದಾಗಿದೆ. ಈ ನಿರ್ಣಯವನ್ನು ಹಿಂಪಡೆಯಬೇಕು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಆಗ್ರಹಿಸಿದರು.

'ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಔಷಧ ನೀಡಲಾಗುತ್ತಿದೆ ಎಂದು ಆರೋಗ್ಯ ಸಚಿವರು ಹೇಳುತ್ತಾರೆ. ಆದರೆ, ಅಲ್ಲಿ ರಕ್ತದೊತ್ತಡ, ಮಧುಮೇಹಕ್ಕೂ ಔಷಧ ಸಿಗುತ್ತಿಲ್ಲ. ದೇಶದಲ್ಲಿ 10 ಸಾವಿರ ಜನೌಷಧಿ ಕೇಂದ್ರಗಳಿದ್ದು, ಯಾವ ರಾಜ್ಯಗಳಲ್ಲೂ ಮುಚ್ಚಿಲ್ಲ. ರಾಜ್ಯದಲ್ಲಿ ಮಾತ್ರ ಮುಚ್ಚಲಾಗುತ್ತಿದೆ. ಇದರ ವಿರುದ್ಧ ತೀವ್ರ ಸ್ವರೂಪದ ಹೋರಾಟ ಮಾಡಲಾಗುವುದು' ಎಂದು ಸುದ್ದಿಗಾರರಿಗೆ ತಿಳಿಸಿದರು.

'ದ್ವೇಷ ಭಾಷಣ ಕಾರಣಕ್ಕೆ ಕಲ್ಲಡ್ಕ ಪ್ರಭಾಕರ್ ಭಟ್ ವಿರುದ್ಧ ಪ್ರಕರಣ ದಾಖಲಿಸುವ ಸರ್ಕಾರ, ಪೊಲೀಸ್ ಠಾಣೆ ಮೇಲೆ ದಾಳಿ ಮಾಡಿದವರ ಮೇಲಿನ ಪ್ರಕರಣ ಹಿಂಪಡೆಯುತ್ತದೆ. ಇದು ಕಾಂಗ್ರೆಸ್‌ನ ತುಷ್ಟೀಕರಣ ನೀತಿಗೆ ಉದಾಹರಣೆ' ಎಂದರು.

ಅಕ್ರಮ ಪ್ರವೇಶ: ₹25 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶಕ್ಕೆ ಅಕ್ರಮ ಪ್ರವೇಶ ಮಾಡಿದ ಇಬ್ಬರಿಗೆ ಅರಣ್ಯ ಇಲಾಖೆ ₹25 ಸಾವಿರ ದಂಡ ವಿಧಿಸಿ, ಮುಚ್ಚಳಿಕೆ ಪತ್ರ ಬರೆಸಿಕೊಂಡಿದೆ.

ಬೆಂಗಳೂರು ಮೂಲದ ಪಲ್ಲವಿ ಮತ್ತು ಘೋಷ್ ಎಂಬುವವರಿಗೆ ದಂಡ ವಿಧಿಸಿದ್ದು, ಇಬ್ಬರು ಬಂಡೀಪುರದ ಮಂಗಲ ಸಮೀಪ ಕಾಡಿನೊಳಗೆ ಅತಿಕ್ರಮವಾಗಿ ಪ್ರವೇಶಿಸಿ ಕಾರು ನಿಲ್ಲಿಸಿಕೊಂಡು ಫೋಟೊ ಶೂಟ್ ಮಾಡುತ್ತಿದ್ದರು. ಅದನ್ನು ಗಮನಿಸಿದ ಸ್ಥಳೀಯರು ಅರಣ್ಯಾಧಿಕಾರಿಗಳಿಗೆ ನೀಡಿದ ಮಾಹಿತಿ ನೀಡಿದರು. ತಕ್ಷಣ ಕಾರ್ಯ ಪ್ರವೃತ್ತರಾದ ಎಸಿಎಫ್ ನವೀನ್ ಕುಮಾರ್ ಮತ್ತು ತಂಡ ಇಬ್ಬರನ್ನೂ ಕರೆಸಿ ದಂಡ ವಿಧಿಸಿದರು.

'ದೇಶಭಕ್ತನಾಗಿ ಇರುವುದು ಇಷ್ಟೊಂದು ಕಠಿಣವೇ?'

ನವದೆಹಲಿ (ಪಿಟಿಐ): 'ಭಯೋತ್ಪಾದನೆ ವಿರುದ್ಧ ಭಾರತದ ನಿಲುವನ್ನು ಜಗತ್ತಿನಾದ್ಯಂತ ತಲುಪಿಸುವ ಯೋಜನೆ ಭಾಗವಾಗಿ ಕೆಲಸ ಮಾಡುತ್ತಿದ್ದರೆ, ಭಾರತದಲ್ಲಿ ಕೂತು ಇದರಿಂದಾಗುವ ರಾಜಕೀಯ ಲಾಭದ ಲೆಕ್ಕಾಚಾರವನ್ನು ಹಾಕಲಾಗುತ್ತಿದೆ. ದೇಶಭಕ್ತನಾಗಿ ಇರುವುದು ಇಷ್ಟೊಂದು ಕಠಿಣವೇ?' ಎಂದು ಕಾಂಗ್ರೆಸ್ ನಾಯಕ ಸಲ್ಮಾನ್ ಖುರ್ಷಿದ್ ಸೋಮವಾರ ಹೇಳಿದರು.

ತಮ್ಮ 'ಎಕ್ಸ್' ಖಾತೆ ಮೂಲಕ ಖುರ್ಷಿದ್ ಈ ಪೋಸ್ಟ್ ಹಂಚಿಕೊಂಡಿದ್ದಾರೆ. ಖುರ್ಷಿದ್ ಅವರು ಜೆಡಿಯು ಸಂಸದ ಸಂಜಯ್ ಕುಮಾರ್ ಝಾ ಅವರ ನೇತೃತ್ವದ ನಿಯೋಗದ ಸದಸ್ಯರಾಗಿದ್ದಾರೆ. ಸದ್ಯ ಈ ನಿಯೋಗವು ಮಲೇಷ್ಯಾದಲ್ಲಿ ಇದೆ.

ಇಂಡೊನೇಷ್ಯಾದಲ್ಲಿ ಚಿಂತಕರ ಚಾವಡಿಯೊಂದಿಗಿನ ಸಭೆಯಲ್ಲಿ ಮಾತನಾಡಿದ್ದ ಖುರ್ಷಿದ್ ಅವರು, 'ಹಲವು ವರ್ಷಗಳವರೆಗೆ ಕಾಶ್ಮೀರದಲ್ಲಿ ಅನೇಕ ಮುಖ್ಯ ಸಮಸ್ಯೆಗಳಿದ್ದವು. ಸಂವಿಧಾನದ 370ನೇ ವಿಧಿ ಅನ್ವಯ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದು ಮಾಡಿದ ಬಳಿಕ ಈ ಎಲ್ಲ ಸಮಸ್ಯೆಗಳು ಅಂತ್ಯಗೊಂಡವು' ಎಂದಿದ್ದರು.

ಈ ಹೇಳಿಕೆಯು ಭಾರತದಲ್ಲಿ ರಾಜಕೀಯ ಹೇಳಿಕೆ–ಪ್ರತಿಹೇಳಿಕೆಗೆ ಕಾರಣವಾಗಿತ್ತು. ಬಿಜೆಪಿಯು ಖುರ್ಷಿದ್ ಅವರ ಹೇಳಿಕೆಯನ್ನು ಬೆಂಬಲಿಸಿತ್ತು. ವಿದೇಶಗಳಲ್ಲಿ ನಿಯೋಗದ ಸಭೆಗಳಲ್ಲಿ ಶಶಿ ತರೂರ್ ಅವರು ನೀಡಿದ ಹಲವು ಹೇಳಿಕೆಗಳೂ ಭಾರತದಲ್ಲಿ ವಿವಾದ ಸ್ವರೂಪ ಪಡೆದುಕೊಂಡಿದ್ದವು.

ಐದು ವರ್ಷದಲ್ಲಿ ಹೆಚ್ಚುವರಿಯಾಗಿ 50 ವಿಮಾನ ನಿಲ್ದಾಣ ಅಭಿವೃದ್ಧಿ

ನವದೆಹಲಿ (ಪಿಟಿಐ): 'ಮುಂದಿನ 5 ವರ್ಷದಲ್ಲಿ ದೇಶದಲ್ಲಿ ಹೆಚ್ಚುವರಿಯಾಗಿ 50 ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿ ಮಾಡಲಾಗುವುದು' ಎಂದು ಕೇಂದ್ರ ವಿಮಾನಯಾನ ಸಚಿವ ಕೆ. ರಾಮ್‌ಮೋಹನ್ ನಾಯ್ಡು ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ವಾಯು ಸಾರಿಗೆ ಒಕ್ಕೂಟ (ಐಎಟಿಎ) ವಾರ್ಷಿಕ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಪ್ರಾದೇಶಿಕ ವಾಯು ಸಂಪರ್ಕ ಯೋಜನೆ (ಉಡಾನ್) ಅಡಿಯಲ್ಲಿ 619 ಮಾರ್ಗಗಳಲ್ಲಿ ವಾಯುಯಾನ ಸಂಪರ್ಕದ ವ್ಯವಸ್ಥೆ ಕಲ್ಪಿಸಲಾಗಿದೆ' ಎಂದು ಹೇಳಿದ್ದಾರೆ.

'ದೇಶದಲ್ಲಿ ಪ್ರಸಕ್ತ 162 ವಿಮಾನ ನಿಲ್ದಾಣಗಳಿದ್ದು, 2014ರಲ್ಲಿ 74 ವಿಮಾನ ನಿಲ್ದಾಣಗಳಿದ್ದವು. ಕಳೆದ 11 ವರ್ಷದಲ್ಲಿ ನಿಲ್ದಾಣಗಳ ಸಂಖ್ಯೆ ದ್ವಿಗುಣಗೊಂಡಿವೆ' ಎಂದು ತಿಳಿಸಿದ್ದಾರೆ.

'2031ರ ವೇಳೆಗೆ 4 ಬಿಲಿಯನ್ ಡಾಲರ್ (₹34 ಸಾವಿರ ಕೋಟಿ) ಮೌಲ್ಯದ ಜಾಗತಿಕ ಎಂಆರ್‌ಒ (ನಿರ್ವಹಣೆ, ರಿಪೇರಿ ಹಾಗೂ ಕೂಲಂಕುಷ ಪರೀಕ್ಷಾ ಕೇಂದ್ರ) ಹಬ್ ನಿರ್ಮಾಣಕ್ಕೆ ಪ್ರಯತ್ನಗಳು ಸಾಗಿವೆ. ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ವಿಮಾನ ಇಂಧನ ಉತ್ಪಾದನೆಯಲ್ಲಿ ಸುಸ್ಥಿರ ಬೆಳವಣಿಗೆ ಸಾಧಿಸಲು ಭಾರತದ ಜೊತೆಗೆ ಸಹಭಾಗಿತ್ವ ಹೊಂದಲು ಮುಂದೆ ಬರಬೇಕು' ಎಂದು ಜಾಗತಿಕ ಸಂಸ್ಥೆಗಳಿಗೆ ಕರೆ ನೀಡಿದ್ದಾರೆ.

ಬೆಂಗಳೂರು, ದೆಹಲಿ, ಮುಂಬೈ ನಡುವೆ ಹೆಚ್ಚು ವಿಮಾನ ಸಂಚಾರ: 2024ರಲ್ಲಿ ಬೆಂಗಳೂರು, ನವದೆಹಲಿ ಹಾಗೂ ಮುಂಬೈ ಮಾರ್ಗದ ನಡುವೆ ದೇಶದಲ್ಲಿಯೇ ಹೆಚ್ಚು ವಿಮಾನಗಳ ಸಂಚಾರ ನಡೆಸುವ ಮೂಲಕ ದೇಶದಲ್ಲಿ ಅತೀ ಹೆಚ್ಚು ದಟ್ಟಣೆಯ ಮಾರ್ಗವಾಗಿ ಗುರುತಿಸಿಕೊಂಡಿದೆ. ದೇಶದಲ್ಲಿ ಈ ಮೂರು ಮಾರ್ಗದಲ್ಲಿಯೇ ಒಟ್ಟು ವಿಮಾನಗಳ ಹಾರಾಟ ಶೇಕಡಾ 4.7ರಷ್ಟಿದೆ' ಅಂತರರಾಷ್ಟ್ರೀಯ ವಾಯುಸಾರಿಗೆ ಒಕ್ಕೂಟ (ಐಎಟಿಎ) ಬಿಡುಗಡೆಗೊಳಿಸಿದ ವರದಿಯಲ್ಲಿ ತಿಳಿಸಲಾಗಿದೆ.

ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ ಭಟ್ ವಿರುದ್ಧದ ಪ್ರಕರಣ

ಬಲವಂತದ ಕ್ರಮ ಬೇಡ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತೀಯ ಗುಂಪುಗಳ ನಡುವೆ ವೈಮನಸ್ಸು ಉಂಟು ಮಾಡುವ ಪ್ರಚೋದನಾತ್ಮಕ ಭಾಷಣ ಮಾಡಿದ ಆರೋಪದಡಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ (ಆರ್‌ಎಸ್‌ಎಸ್) ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ ಪೊಲೀಸರು ಅವರ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು' ಎಂದು ಹೈಕೋರ್ಟ್ ಆದೇಶಿಸಿದೆ.

'ನನ್ನ ವಿರುದ್ಧ ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯ ಪೊಲೀಸರು ದಾಖಲಿಸಿಕೊಂಡಿರುವ ಸ್ವಯಂ ಪ್ರೇರಿತ ಎಫ್‌ಐಆರ್ ಮತ್ತು ಬಂಟ್ವಾಳ ಜೆಎಂಎಫ್‌ಸಿ ಕೋರ್ಟ್‌ನಲ್ಲಿರುವ ಈ ಕುರಿತ ನ್ಯಾಯಿಕ ಪ್ರಕ್ರಿಯೆ ರದ್ದುಪಡಿಸಬೇಕು' ಎಂದು ಕೋರಿ ಪ್ರಭಾಕರ ಭಟ್ ಸಲ್ಲಿಸಿರುವ ಕ್ರಿಮಿನಲ್



ಅರ್ಜಿಯನ್ನು ನ್ಯಾಯ ಮೂರ್ತಿ ಎಸ್. ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹಾಜರಾಗಿದ್ದ ಪದಾಂಕಿತ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್, 'ಇದೊಂದು ದುರುದ್ದೇಶದ ದೂರು. ಭಾಷಣ ಮಾಡಿದ 20 ದಿನಗಳ ನಂತರ ಈ ಎಫ್‌ಐಆರ್ ದಾಖಲಿಸಲಾಗಿದೆ' ಎಂದರು.

'ಇವರ ಭಾಷಣದಿಂದ ಯಾರೂ ಪ್ರಚೋದನೆಗೆ ಒಳಗಾಗಿಲ್ಲ ಅಥವಾ ಯಾವುದೇ ಅಹಿತಕರ ಘಟನೆ ನಡೆದಿಲ್ಲ. ಪ್ರಭಾಕರ ಭಟ್ ವಿರುದ್ಧ ದಾಖಲಿಸಲಾಗಿರುವ ಈ ದೂರು ಪೊಲೀಸರು ಪದೇ ಪದೇ ಕಾನೂನು ಪ್ರಕ್ರಿಯೆ ದುರುಪಯೋಗ ಮಾಡಿಕೊಳ್ಳುತ್ತಿರುವುದಕ್ಕೆ ಸಾಕ್ಷಿಯಾಗಿದೆ. ಅವರ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣವಾಗಿದ್ದು, ಪ್ರಕರಣವನ್ನು ರದ್ದುಗೊಳಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ವಾದವನ್ನು ಪರಿಗಣಿಸಿದ ನ್ಯಾಯಪೀಠ, 'ಅರ್ಜಿದಾರರ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು' ಎಂದು ಪ್ರಾಸಿಕ್ಯೂಷನ್ ಪರ ಹಾಜರಿದ್ದ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್ ಅವರಿಗೆ ನಿರ್ದೇಶಿಸಿತು. ಅಂತೆಯೇ ಪ್ರಾಸಿಕ್ಯೂಷನ್ ತನ್ನ ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆಯನ್ನು ಮುಂದೂಡಿತು.

ಪ್ರಕರಣವೇನು?

'ಹತ್ಯೆಯಾಗಿದ್ದ ಸುಹಾಸ್ ಶೆಟ್ಟಿ ಅವರಿಗೆ ಮೇ 12ರಂದು ಶ್ರದ್ಧಾಂಜಲಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಪ್ರಭಾಕರ್ ಭಟ್ ಸಮಾಜದ ಸ್ವಾಸ್ಥ್ಯ ಕದಡುವಂತಹ, ಮತೀಯ ಗುಂಪುಗಳ ನಡುವೆ ವೈಮನಸ್ಸು ಉಂಟು ಮಾಡುವಂತಹ ಹೇಳಿಕೆ ನೀಡಿದ್ದಾರೆ. ಇದರಿಂದಾಗಿ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗುವ ಸಾಧ್ಯತೆಗಳಿವೆ' ಎಂದು ಪೊಲೀಸರು ಅವರ ವಿರುದ್ಧ, ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 353(2)ರ ಅಡಿ ಪ್ರಕರಣ ದಾಖಲಿಸಿದ್ದಾರೆ.

ಅಹಮದಾಬಾದ್ ಕಂಪನಿಗೆ 32 ಗೇಟ್ ಅಳವಡಿಕೆ ಕಾಮಗಾರಿ



ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಯ ಉಳಿದ 32 ಕ್ರಸ್ಟ್‌ಗೇಟ್‌ಗಳನ್ನು ಅಳವಡಿಸುವ ಟೆಂಡರ್ ಅಹಮದಾಬಾದ್‌ನ ಹಾರ್ಡ್‌ವೇರ್ ಟೂಲ್ಸ್ ಆ್ಯಂಡ್ ಮಷಿನರಿ ಪ್ರೊಜೆಕ್ಟ್ ಕಂಪನಿಗೆ ಸಿಕ್ಕಿದೆ. ಒಟ್ಟು ನಾಲ್ಕು ಕಂಪನಿಗಳು ಬಿಡ್‌ನಲ್ಲಿ ಪಾಲ್ಗೊಂಡಿದ್ದವು.

'₹52 ಕೋಟಿ ವೆಚ್ಚದಲ್ಲಿ 32 ಗೇಟ್‌ಗಳನ್ನು ನಿರ್ಮಿಸಿ, ಮುಂದಿನ ವರ್ಷ ಫೆಬ್ರುವರಿ ಬಳಿಕ ನಂತರ ಕಾಮಗಾರಿ ನಡೆಸುವುದಾಗಿ ಕಂಪನಿ ತಿಳಿಸಿದೆ' ಎಂದು ತುಂಗಭದ್ರ ಮಂಡಳಿಯ ಮೂಲಗಳು ತಿಳಿಸಿವೆ.

ಇದೇ ಕಂಪನಿಗೆ 19ನೇ ಕ್ರಸ್ಟ್‌ಗೇಟ್ ಅಳವಡಿಸುವ ಟೆಂಡರ್ ಸಿಕ್ಕಿದ್ದು, ಗೇಟ್ ರಚನೆಯ ಕೆಲಸ ಆರಂಭವಾಗಿದೆ. ಇನ್ನು 20 ದಿನದಲ್ಲಿ 19ನೇ ಗೇಟಿನ ಸ್ಟಾಪ್‌ಲಾಗ್ ಗೇಟ್ ತೆರವುಗೊಳಿಸಿ, ಕ್ರಸ್ಟ್‌ಗೇಟ್ ಅಳವಡಿಸುವ ಕೆಲಸ ಪೂರ್ಣಗೊಳ್ಳುವ ನಿರೀಕ್ಷೆ ಇದೆ.

ಆರೋಪಿಗಳು ನ್ಯಾಯಾಂಗ ಬಂಧನಕ್ಕೆ

ಬೆಳಗಾವಿ: 15 ವರ್ಷದ ಬಾಲಕಿ ಮೇಲೆ ಸಾಮೂಹಿಕವಾಗಿ ಅತ್ಯಾಚಾರ ಎಸಗಿದ ಪ್ರಕರಣದಲ್ಲಿ ಬಂಧಿತರಾದ ಮೂವರು ಆರೋಪಿಗಳನ್ನು ಪೋಕ್ಸೊ ವಿಶೇಷ ನ್ಯಾಯಾಲಯದ ಎದುರು ಮತ್ತು ಇಬ್ಬರನ್ನು ಬಾಲ ನ್ಯಾಯಮಂಡಳಿ ಎದುರು ಸೋಮವಾರ ಹಾಜರುಪಡಿಸಲಾಯಿತು. ನ್ಯಾಯಾಂಗ ಬಂಧನದ ಆದೇಶದ ಹಿನ್ನೆಲೆಯಲ್ಲಿ ಮೂವರು ಆರೋಪಿಗಳನ್ನು ಹಿಂಡಲಗಾ ಕೇಂದ್ರ ಕಾರಾಗೃಹಕ್ಕೆ ಮತ್ತು ಇಬ್ಬರು ಬಾಲಕರನ್ನು ಬಾಲ ಭವನಕ್ಕೆ ಕಳುಹಿಸಲಾಯಿತು. ಎಪಿಎಂಸಿ ಪೊಲೀಸರು ತನಿಖೆ ನಡೆಸಿದ್ದಾರೆ.

ಕೆನರಾ ಬ್ಯಾಂಕ್‌ಗೆ ಕನ್ನ: 59 ಕೆಜಿ ಚಿನ್ನಾಭರಣ ಕಳವು

ಪ್ರಜಾವಾಣಿ ವಾರ್ತೆ

ವಿಜಯಪುರ: ಜಿಲ್ಲೆಯ ಬಸವನ ಬಾಗೇವಾಡಿ ತಾಲ್ಲೂಕಿನ ಮನಗೂಳಿ ಪಟ್ಟಣದಲ್ಲಿನ ಕೆನರಾ ಬ್ಯಾಂಕ್‌ನಲ್ಲಿ 59 ಕೆಜಿ ಚಿನ್ನಾಭರಣ ಮತ್ತು ₹5.20 ಲಕ್ಷ ನಗದು ಕಳವು ಆಗಿದೆ.

'ಮೇ 23 ರಿಂದ 25ರ ಅವಧಿಯಲ್ಲಿ ಈ ಕೃತ್ಯ ನಡೆದಿದ್ದು, ಮೇ 26ರಂದು ಬ್ಯಾಂಕ್‌ನ ಹಿರಿಯ ವ್ಯವಸ್ಥಾಪಕ ಕಲ್ಮೇಶ ಪೂಜಾರಿ ದೂರು ನೀಡಿದ್ದಾರೆ. ಕಳ್ಳರ ಪತ್ತೆಗೆ ಎಂಟು ತಂಡಗಳನ್ನು ರಚಿಸಲಾಗಿದೆ. ವಿವಿಧ ಆಯಾಮಗಳಲ್ಲಿ ತನಿಖೆ ಮತ್ತು ಪತ್ತೆ ಕಾರ್ಯ ನಡೆದಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ತಿಳಿಸಿದ್ದಾರೆ.



ಲಕ್ಷ್ಮಣ ನಿಂಬರಗಿ

'ಬ್ಯಾಂಕ್‌ನ ಮುಖ್ಯದ್ವಾರದ ಶಟರ್ಸ್‌ಗೆ ಹಾಕಿದ ಕೀಲಿ ಮತ್ತು ಕಿಟಕಿಯ ಸರಳುಗಳನ್ನು ಮುರಿದು ಒಳಗಡೆ ನುಗ್ಗಿರುವ ಕಳ್ಳರು, ಚಿನ್ನಾಭರಣ ಮತ್ತು ನಗದು ಇಟ್ಟಿದ್ದ ಸೇಫ್ ಲಾಕರ್‌ನ ಕೀಲಿ ತೆಗೆದಿದ್ದಾರೆ. ಅದರ ಒಳಗಿದ್ದ ಕಬ್ಬಿಣದ ಬಾಗಿಲಿನ ಸರಳುಗಳನ್ನು ತುಂಡು ಮಾಡಿ, ತಿಜೋರಿಯಲ್ಲಿಇದ್ದ ಚಿನ್ನಾಭರಣ, ನಗದು ಕಳವು ಮಾಡಿದ್ದಾರೆ. ಕೃತ್ಯದ ಸುಳಿವು ಸಿಗದಂತೆ ಮಾಡಲು ಸಿಸಿಟಿವಿ ಕ್ಯಾಮೆರಾದ ಉಪಕರಣಗಳನ್ನೂ ಒಯ್ದಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

ಬಾದಾಮಿ: ಬೆಟ್ಟದ ಭಿತ್ತಿಯಲ್ಲಿ ಪಾರ್ಶ್ವನಾಥ ಉಬ್ಬುಶಿಲ್ಪ ಪತ್ತೆ



ಬಾದಾಮಿ ನಾಲ್ಕನೇ ಜೈನ ಬಸದಿ ಕೆಳಗಿನ ಬೆಟ್ಟದಲ್ಲಿ ಪಾರ್ಶ್ವನಾಥ ಉಬ್ಬುಶಿಲ್ಪಗಳನ್ನು ಅಧಿಕಾರಿಗಳು ಪರಿಶೀಲಿಸಿದರು

ಪ್ರಜಾವಾಣಿ ವಾರ್ತೆ

ಬಾದಾಮಿ: 'ನಾಲ್ಕನೇ ಜೈನಗುಹೆಯ ಕೆಳಗಿನ ಬೆಟ್ಟದ ಭಿತ್ತಿಯ ಮೇಲೆ ಈಚೆಗೆ ಮೂರು ಪಾರ್ಶ್ವನಾಥ ಉಬ್ಬುಶಿಲ್ಪ ಮತ್ತು ಒಂದು ಸಾಲಿನ ಶಿಲಾ ಶಾಸನವು ಪತ್ತೆಯಾಗಿವೆ' ಎಂದು ಧಾರವಾಡ ವಲಯದ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಅಧೀಕ್ಷಕ ರಮೇಶ ಮೂಲಿಮನಿ ತಿಳಿಸಿದರು.

ಧಾರವಾಡ ವಲಯದ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯು ಚಾಲುಕ್ಯರು 6ನೇ ಶತಮಾನದಲ್ಲಿ ನಿರ್ಮಿಸಿದ ನಾಲ್ಕನೇ ಜೈನ ಗುಹಾಲಯದ ಕೆಳಗಿನ ಬೆಟ್ಟದಲ್ಲಿ ಮೂರು ತಿಂಗಳಿನಿಂದ ಅನ್ವೇಷಣೆ ನಡೆಸಿದೆ.

'ನಾಲ್ಕನೇ ಬಸದಿ ಕೆಳಗೆ ಗಿಡಗಳ ಗುಂಪನ್ನು ಶುಚಿಗೊಳಿಸುವಾಗ, ಕಲ್ಲು-ಪಡಿಯಲ್ಲಿ ಉಬ್ಬು ಶಿಲ್ಪಗಳು ಮತ್ತು ಒಂದು ಸಾಲಿನಲ್ಲಿ 'ಕುಳಿಮಂಜ' ಎಂದು ಬರೆದ ಶಾಸನ ಸಿಕ್ಕಿದೆ. 'ಕುಳಿಮಂಜ' ಎನ್ನುವ ಶಾಸನ ಉತ್ತರದ ಗುಡ್ಡದಲ್ಲೂ ಪತ್ತೆಯಾಗಿದೆ. ಅದು ಒಬ್ಬ ಶಿಲ್ಪಿಯ ಹೆಸರು ಇರಬಹುದು' ಎಂದು ಅವರು ತಿಳಿಸಿದರು.

'ಚಾಲುಕ್ಯ ಶಿಲ್ಪಿಗಳು ಬೆಟ್ಟದ ನಾಲ್ಕನೇ ಜೈನ ಬಸದಿಯಲ್ಲಿ ಮೂರ್ತಿಗಳನ್ನು ರೂಪಿಸುವ ಮುನ್ನ ಉಬ್ಬು ಮೂರ್ತಿಗಳನ್ನು ತಯಾರಿಸಲು ಪ್ರಯತ್ನಿಸಿರಬಹುದು. ಇನ್ನೂ ಅನ್ವೇಷಣೆ ಕಾರ್ಯ ಮುಂದುವರಿದಿದೆ. ಚಾಲುಕ್ಯರ ಇತಿಹಾಸದ ಬಗ್ಗೆ ಇನ್ನಷ್ಟು ಹೊಸ ಮಾಹಿತಿ ಸಿಗಬಹುದು' ಎಂದು ಅವರು ಹೇಳಿದರು.

'ಕುರ್‌ಆನ್ ಸುಟ್ಟ ಆರೋಪಿಗಳನ್ನು ಬಂಧಿಸಿ'



ಬೆಳಗಾವಿ ಜಿಲ್ಲಾಧಿಕಾರಿ ಕಚೇರಿ ಎದುರು ಮುಹಫಿಝ್–ಇ–ಕುರ್‌ಆನ್ ಯೂಥ್ ಸಮಿತಿ ನೇತೃತ್ವದಲ್ಲಿ ಮುಸ್ಲಿಮರು ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ತಾಲ್ಲೂಕಿನ ಸಂತಿ ಬಸ್ತವಾಡದ ಮಸೀದಿಯಲ್ಲಿದ್ದ ಕುರ್‌ಆನ್ ಮತ್ತು ಹದೀಸ್‌ಗಳನ್ನು ಸುಟ್ಟ ಆರೋಪಿಗಳನ್ನು ಶೀಘ್ರವೇ ಬಂಧಿಸಬೇಕು. ಪೊಲೀಸರು ಅನಗತ್ಯ ವಿಳಂಬ ಮಾಡಬಾರದು' ಎಂದು ಒತ್ತಾಯಿಸಿ ಮುಹಫಿಝ್–ಇ–ಕುರ್‌ಆನ್ ಯೂಥ್ ಸಮಿತಿ ನೇತೃತ್ವದಲ್ಲಿ ಮುಸ್ಲಿಮರು ಇಲ್ಲಿನ ಜಿಲ್ಲಾಧಿಕಾರಿ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

'ಕೃತ್ಯ ನಡೆದು 20 ದಿನಗಳಾದರೂ ಆರೋಪಿಗಳ ಬಂಧನ ಆಗದಿರುವುದು ಅನುಮಾನಕ್ಕೆ ಕಾರಣವಾಗಿದೆ. ಈ ಮಧ್ಯೆ ಸಂತಿ ಬಸ್ತವಾಡದಲ್ಲಿನ ಗ್ರಾಮಸ್ಥರಿಗೆ ಹಿಂದೂ ಮುಖಂಡರು ತಪ್ಪು ಸಂದೇಶ ನೀಡಿ, ಮುಸ್ಲಿಂ ವ್ಯಾಪಾರಿಗಳನ್ನು ಬಹಿಷ್ಕರಿಸಿದ್ದಾರೆ. ಕೋಮು ಸೌಹಾರ್ದ ಕದಡುತ್ತಿದ್ದಾರೆ. ಊರಲ್ಲಿ ಅಶಾಂತಿ ಉಂಟುಮಾಡುವ ಹುನ್ನಾರ ನಡೆಸಿದ್ದಾರೆ' ಎಂದು ಪ್ರತಿಭಟನಕಾರರು ಆರೋಪಿಸಿದರು.

'ಕುರ್‌ಆನ್ ಅಷ್ಟೇ ಅಲ್ಲ, ಭಗವದ್ಗೀತೆ ಮತ್ತು ಬೈಬಲ್‌ಗೆ ಯಾರೇ ಹಾನಿ ಮಾಡಿದರೂ ತಕ್ಷಣವೇ ಬಂಧಿಸಬೇಕು. ಕಾನೂನು ಕ್ರಮ ಜರುಗಿಸಬೇಕು. ನಮ್ಮ ಬೇಡಿಕೆಗಳನ್ನು ಈಡೇರಿಸದಿದ್ದರೆ, ಮುಂದಿನ ದಿನಗಳಲ್ಲಿ ತೀವ್ರ ಸ್ವರೂಪದ ಹೋರಾಟ ಕೈಗೊಳ್ಳುತ್ತೇವೆ' ಎಂದು ಅವರು ಎಚ್ಚರಿಕೆ ನೀಡಿದರು.

ಜಿಲ್ಲಾಡಳಿತಕ್ಕೆ ಮನವಿಪತ್ರ ಸಲ್ಲಿಸಿದರು.

ಕರ್ನಾಟಕ ವೀರಶೈವ–ಲಿಂಗಾಯತ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

5ನೇ ಮಹಡಿ, ವಿಶ್ವೇಶ್ವರಯ್ಯ ಚಿಕ್ಕ ಗೋಪುರ, ಡಾ|| ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560 001.

E-mail: mdveerashivalingayathagok2021@gmail.com, Phone: 080-22865522

ಸಂಖ್ಯೆ: ಕ.ವಿ.ಲಿ.ಅ.ನಿ/ಸಿ–2/ಸಿಆರ್–02/2025–26 ದಿನಾಂಕ: 02.06.2025

ಪ್ರಕಟಣೆ

2025–26 ನೇ ಸಾಲಿಗೆ ಅನುಷ್ಠಾನಗೊಳಿಸುತ್ತಿರುವ ನಿಗಮದ ಯೋಜನೆಗಳು

ವೀರಶೈವ–ಲಿಂಗಾಯತ ಜಾತಿ ಹಾಗೂ ಉಪಜಾತಿಗೆ ಸೇರಿದ ಸಮುದಾಯದ ಜನರ (**ಪ್ರವರ್ಗ-IIIಬಿ**) ಅಭಿವೃದ್ಧಿಗಾಗಿ 2025–26 ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ಕೆಳಕಂಡ ಯೋಜನೆಗಳಲ್ಲಿ ಸೌಲಭ್ಯ ಪಡೆಯಬಯಸುವ ಫಲಾಪೇಕ್ಷಿಗಳಿಂದ ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30.06.2025

1. ಶೈಕ್ಷಣಿಕ ಸಾಲ ಯೋಜನೆಗಳು

- **ಬಸವ ಬೆಳಗು ಯೋಜನೆ (Fresh Students)**
  ವೀರಶೈವ–ಲಿಂಗಾಯತ ಸಮುದಾಯಕ್ಕೆ ಸೇರಿದ್ದು ಅವರ ಕುಟುಂಬ ವಾರ್ಷಿಕ ಆದಾಯ ರೂ.3.50 ಲಕ್ಷ ಮಿತಿಯಲ್ಲಿರುವ ವಿದ್ಯಾರ್ಥಿಗಳು ವೃತ್ತಿಪರ ಕೋರ್ಸ್‌ಗಳಾದ ಇಂಜಿನಿಯರಿಂಗ್, ವೈದ್ಯಕೀಯ, ದಂತ ವೈದ್ಯಕೀಯ ಮುಂತಾದ 28 ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿದ್ದಲ್ಲಿ ವಾರ್ಷಿಕ ರೂ.1.00 ಲಕ್ಷಗಳಂತೆ ಕೋರ್ಸ್‌ನ ಅವಧಿಗೆ ಗರಿಷ್ಠ ರೂ.4.00 ಲಕ್ಷಗಳಿಂದ 5.00 ಲಕ್ಷಗಳವರೆಗೆ ವಾರ್ಷಿಕ ಶೇ.2 ರ ಬಡ್ಡಿದರದಲ್ಲಿ ಸಾಲ ಮಂಜೂರು ಮಾಡಲಾಗುವುದು. ವಿದ್ಯಾರ್ಥಿಗಳು CET/NEET ಇತ್ಯಾದಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಸರ್ಕಾರಿ ಕೋಟಾದ ಸೀಟು ಪಡೆದಿರಬೇಕು.
- **ಬಸವ ಬೆಳಗು ಯೋಜನೆ (Renewals)**
  ಹಿಂದಿನ ಸಾಲುಗಳಲ್ಲಿ ಸಾಲ ಪಡೆದ ವಿದ್ಯಾರ್ಥಿಗಳಿಗೆ ನವೀಕರಣ ಸಾಲ. ನಿಗಮದಿಂದ ಹಿಂದಿನ ವರ್ಷಗಳಲ್ಲಿ ಸಾಲ ಪಡೆದ ವಿದ್ಯಾರ್ಥಿಗಳಿಗೆ ನವೀಕರಣ ಸಾಲ ಮಂಜೂರು ಮಾಡಲು ವ್ಯಾಸಂಗ ದೃಢೀಕರಣ ಹಾಗೂ ಹಿಂದಿನ ವರ್ಷದ ಅಂಕಪಟ್ಟಿಯೊಂದಿಗೆ ಅರ್ಜಿ ಸಲ್ಲಿಸುವುದು.
- **ವಿದೇಶ ವಿದ್ಯಾವಿಕಾಸ ಯೋಜನೆ (Fresh Students)**
  ವೀರಶೈವ–ಲಿಂಗಾಯತ ಸಮುದಾಯಕ್ಕೆ ಸೇರಿದ್ದು ಅವರ ಕುಟುಂಬದ ವಾರ್ಷಿಕ ಆದಾಯ ರೂ.15.00 ಲಕ್ಷಗಳ ಮಿತಿಯಲ್ಲಿರುವ ವಿದ್ಯಾರ್ಥಿಗಳು QS World Ranking 1000 ರೊಳಗೆ ಬರುವ ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಪೋಸ್ಟ್ ಡಾಕ್ಟರಲ್, ಪಿಹೆಚ್.ಡಿ, ಮಾಸ್ಟರ್ ಡಿಗ್ರಿ ಕೋರ್ಸ್‌ಗಳಲ್ಲಿ ಉನ್ನತ ವ್ಯಾಸಂಗ ಪಡೆಯಲು ವಾರ್ಷಿಕ ಗರಿಷ್ಠ ರೂ.25.00 ಲಕ್ಷಗಳಂತೆ 3 ವರ್ಷದ ಅವಧಿಗೆ ಒಟ್ಟು ಗರಿಷ್ಟ ರೂ.50.00 ಲಕ್ಷಗಳನ್ನು ಶೂನ್ಯ ಬಡ್ಡಿದರದಲ್ಲಿ ಸಾಲ ಮಂಜೂರು ಮಾಡಲಾಗುವುದು.

2. ಜೀವಜಲ ಯೋಜನೆ

ವೀರಶೈವ–ಲಿಂಗಾಯತ ಸಮುದಾಯಕ್ಕೆ ಸೇರಿದ್ದು, ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಪ್ರದೇಶದವರಿಗೆ ರೂ.98,000/– ಹಾಗೂ ಪಟ್ಟಣ ಪ್ರದೇಶದವರಿಗೆ ರೂ.1,20,000/–ಗಳ ಮಿತಿಯೊಳಗಿರುವ ಸಣ್ಣ ಮತ್ತು ಅತಿ ಸಣ್ಣ ರೈತರ ಜಮೀನುಗಳಿಗೆ ಕೊಳವೆ ಬಾವಿ ಕೊರೆಸುವ ಮುಖೇನ ನೀರಾವರಿ ಸೌಲಭ್ಯ ಒದಗಿಸಲಾಗುವುದು.

ದಕ್ಷಿಣ ಕನ್ನಡ, ಉಡುಪಿ, ಕೊಡಗು, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಕನಿಷ್ಠ 1 ಎಕರೆ ಜಮೀನು ಹೊಂದಿರಬೇಕು. ಇತರೆ ಜಿಲ್ಲೆಗಳಲ್ಲಿ ಕನಿಷ್ಠ 2 ಎಕರೆ ಹಾಗೂ ಗರಿಷ್ಠ 5 ಎಕರೆ ಒಳಗೆ ಜಮೀನು ಹೊಂದಿರಬೇಕು. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ Farmer's FRUIT ID ಮತ್ತು ಸಣ್ಣ ಹಿಡುವಳಿದಾರರ ಪ್ರಮಾಣ ಪತ್ರ ಹೊಂದಿರಬೇಕು.

ಕ್ರ. ಸಂ.	ಜಿಲ್ಲೆಗಳು	ಒಟ್ಟು ಘಟಕ ವೆಚ್ಚ	ಸಹಾಯಧನ: ಬೋರ್ ವೆಲ್ drilling ಮತ್ತು ಪಂಪ್‌ಸೆಟ್ ವೆಚ್ಚ	ಸಹಾಯಧನ: ವಿದ್ಯುತ್ ಸರಬರಾಜು ಬಾಬ್ತು	ಸಾಲ
1.	ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ತುಮಕೂರು (06 ಜಿಲ್ಲೆಗಳು)	4,75,000/-	3,50,000/-	75,000/-	50,000/- ಶೇ.4% ಬಡ್ಡಿದರ
2.	ಉಳಿದ 25 ಜಿಲ್ಲೆಗಳು	3,75,000/-	2,50,000/-	75,000/-	50,000/- ಶೇ.4% ಬಡ್ಡಿದರ

3. ಕಾಯಕಕಿರಣ ಯೋಜನೆ:

ವೀರಶೈವ–ಲಿಂಗಾಯತ ಸಮುದಾಯದ ನಿರುದ್ಯೋಗಿಗಳು ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ಚಟುವಟಿಕೆಗಳಿಗನುಸಾರ ಈ ಕೆಳಕಂಡಂತೆ ಸಾಲ ಮತ್ತು ಸಹಾಯಧನ ಸೌಲಭ್ಯ ಒದಗಿಸಲಾಗುವುದು.

ಘಟಕ ವೆಚ್ಚ	ಸಹಾಯಧನದ ಮೊತ್ತ	ಸಾಲದ ಮೊತ್ತ	ಬಡ್ಡಿದರ
₹ 1,00,000/-	₹ 20,000/-	₹ 80,000/-	ಶೇ.4%
₹ 1,00,000/- 2,00,000/-	₹ 30,000/-	₹ 1,70,000/-	

4. ಭೋಜನಾಲಯ ಕೇಂದ್ರ:

ಸಮುದಾಯದ ಜನರು ಹೋಟೆಲ್ (ಖಾನಾವಳಿ) ಉದ್ಯಮ ಕೈಗೊಳ್ಳಲು ಈ ಯೋಜನೆಯಲ್ಲಿ ಸಾಲ ಮತ್ತು ಸಹಾಯಧನ ನೀಡಲಾಗುವುದು. ಹೋಟೆಲ್ ಉದ್ದಿಮೆ ಕೈಗೊಳ್ಳಲು ಘಟಕ ವೆಚ್ಚ ರೂ. 5.00 ಲಕ್ಷ ಇದರಲ್ಲಿ ರೂ.4,60,000/– ಸಾಲ ಹಾಗೂ ರೂ. 40,000/– ಸಹಾಯಧನ ಶೇ. 4ರ ಬಡ್ಡಿದರದಲ್ಲಿ ಸೌಲಭ್ಯ ನೀಡಲಾಗುವುದು. ಫಲಾನುಭವಿಗಳು ಕನಿಷ್ಠ 20x30 ಅಳತೆಯುಳ್ಳ ನಿವೇಶನ/ ಕಟ್ಟಡವನ್ನು ಭೋಗ್ಯ/ಸ್ವಂತ ಅಥವಾ ಬಾಡಿಗೆ ಹೊಂದಿರಬೇಕು.

5. ವಿಭೂತಿ ನಿರ್ಮಾಣ ಘಟಕ

ವೀರಶೈವ–ಲಿಂಗಾಯತ ಸಮುದಾಯದವರು ವಿಭೂತಿಯನ್ನು ತಯಾರಿಸುವವರಿಗೆ ಸಾಲ ಮತ್ತು ಸಹಾಯಧನ ನೀಡುವ ಯೋಜನೆ ಇದಾಗಿದೆ. ಕುಟುಂಬದ ವಾರ್ಷಿಕ ವರಮಾನ ರೂ.3.50 ಲಕ್ಷಗಳು ಮತ್ತು 18 ರಿಂದ 55 ವರ್ಷಗಳ ವಯೋಮಿತಿಯಲ್ಲಿರುವವರು ಅರ್ಜಿ ಸಲ್ಲಿಸಬಹುದು. ವಿಭೂತಿ ಘಟಕ ನಿರ್ಮಿಸಲು ಘಟಕ ವೆಚ್ಚ ರೂ. 4.00 ಲಕ್ಷ ಇದರಲ್ಲಿ ರೂ.3,60,000/– ನಿಗಮದಿಂದ ವಾರ್ಷಿಕ ಶೇ.3 ರ ಬಡ್ಡಿದರದಲ್ಲಿ ಸಾಲ ಮತ್ತು ರೂ. 40,000/– ಸಹಾಯಧನ ಸೌಲಭ್ಯ ನೀಡಲಾಗುವುದು.

6. ಸ್ವಾವಲಂಭಿ ಸಾರಥಿ ಯೋಜನೆ:

ಸ್ವಾವಲಂಭಿ ಸಾರಥಿ ಯೋಜನೆಯಡಿ ನಿರುದ್ಯೋಗಿ ಯುವಜನರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ನಾಲ್ಕು ಚಕ್ರ ವಾಹನ (ಹಳದಿ ಬೋರ್ಡ್) ಖರೀದಿಸಲು ರಾಷ್ಟ್ರೀಕೃತ ಬ್ಯಾಂಕ್‌ಗಳ/ಖಾಸಗಿ/ಹಣಕಾಸು ಸಂಸ್ಥೆಗಳ ಮೂಲಕ ಪಡೆಯುವ ಸಾಲಕ್ಕೆ ಶೇ.50ರಷ್ಟು ಅಥವಾ ಗರಿಷ್ಠ 3.00 ಲಕ್ಷಗಳ ಸಹಾಯಧನವನ್ನು ನಿಗಮದಿಂದ ಮಂಜೂರು ಮಾಡಲಾಗುವುದು. ಉಳಿದ ಮೊತ್ತವನ್ನು ಸದರಿ ಬ್ಯಾಂಕಿನಲ್ಲಿ ಚಾಲ್ತಿಯಿರುವ ಬಡ್ಡಿದರದಲ್ಲಿ ಸಾಲ ಪಡೆಯುವುದು. 21 ರಿಂದ 45 ವರ್ಷಗಳ ವಯೋಮಿತಿಯಲ್ಲಿರುವವರು ಅರ್ಜಿ ಸಲ್ಲಿಸಬಹುದು.

7. ಸ್ವಾತಂತ್ರ್ಯ ಅಮೃತ ಮಹೋತ್ಸವದ ಮುನ್ನಡೆ ಯೋಜನೆ

ವಿದ್ಯಾವಂತ ಯುವಜನರನ್ನು ಗುರುತಿಸಿ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ತರಬೇತಿಯನ್ನು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಾದ ITIs, GTTC, KGTTI, ATDC, VTU & ಕಾಳಿದಾಸ ಶಿಕ್ಷಣ ಸಂಸ್ಥೆ ಮೂಲಕ ವಿವಿಧ ಅಲ್ಪಾವಧಿ ಮತ್ತು ಉತ್ಕೃಷ್ಟ ಕೌಶಲ್ಯ ತರಬೇತಿಯನ್ನು ನೀಡಿ ಅವರ ಉದ್ಯೋಗ ಸಾಮರ್ಥ್ಯವನ್ನು ಹಾಗೂ ಸಾಮಾಜಿಕ/ಆರ್ಥಿಕ ಸ್ಥಿತಿಗತಿಗಳನ್ನು ಉನ್ನತೀಕರಿಸುವ ನಿಟ್ಟಿನಲ್ಲಿ ಉದ್ಯೋಗಮುಖಿಗಳನ್ನಾಗಿಸುವುದು.

ಅರ್ಹತೆಗಳು: 10ನೇತರಗತಿ/ದ್ವಿತೀಯ ಪಿ.ಯು.ಸಿ/ಡಿಪ್ಲೋಮ/ಪದವಿ/ಇಂಜಿನಿಯರಿಂಗ್ ವ್ಯಾಸಂಗವನ್ನು ಪೂರ್ಣಗೊಳಿಸಿರಬೇಕು, ಅರ್ಜಿದಾರರ ವಯಸ್ಸು 18 ರಿಂದ 25 ವರ್ಷಗಳ ಒಳಗಿರಬೇಕು. ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ/ಆದಾಯ ರೂ.8.00 ಲಕ್ಷಗಳಿಗಿಂತ ಕಡಿಮೆ ಇರಬೇಕು. ಅರ್ಜಿದಾರರು **https://www.kaushalkar.com/** ಜಾಲತಾಣದೊಂದಿಗೆ ಅರ್ಜಿಯನ್ನು ಸಲ್ಲಿಸಬಹುದು.

8. ಸ್ವ ಸಹಾಯ ಸಂಘಗಳಿಗೆ ಉತ್ತೇಜನ

ವೀರಶೈವ–ಲಿಂಗಾಯತ ಸಮುದಾಯದವರು ಕೈಗೊಳ್ಳುವ ಆರ್ಥಿಕ ಚಟುವಟಿಕೆಗಳಿಗೆ ಸ್ವ ಸಹಾಯ ಸಂಘಗಳ ಮೂಲಕ ರಿಯಾಯಿತಿ ಬಡ್ಡಿದರದಲ್ಲಿ ಸಾಲ ಹಾಗೂ ಸಹಾಯಧನವನ್ನು ನೀಡಲಾಗುವುದು. ಸ್ವ ಸಹಾಯ ಗುಂಪುಗಳ ಗರಿಷ್ಠ 15 ಸದಸ್ಯರಿಗೆ ತಲಾ ರೂ.15,000/–ಗಳ ಸಹಾಯಧನ ಹಾಗೂ ರೂ.25,000/–ಗಳ ಸಾಲವನ್ನು ವಾರ್ಷಿಕ ಶೇ.4ರ ಬಡ್ಡಿದರದಲ್ಲಿ ನೀಡಲಾಗುವುದು.

ವಿಶೇಷ ಸೂಚನೆ:

- ಅರ್ಜಿದಾರರು ತಮ್ಮ ಆಧಾರ್ ಸಂಖ್ಯೆಗೆ ಮೊಬೈಲ್ ಸಂಖ್ಯೆಯನ್ನು ಜೋಡಣೆ ಮಾಡಿರಬೇಕು ಹಾಗೂ ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆಯನ್ನು ಸೀಡ್ ಮಾಡಿರಬೇಕು.
- ನಿಗಮವು ಅನುಷ್ಠಾನಗೊಳಿಸುವ ಈ ಮೇಲ್ಕಂಡ ಯೋಜನೆಗಳಲ್ಲಿ ಸರ್ಕಾರದ ವಿವೇಚನಾ ಕೋಟಾ ಮತ್ತು ನಿಗಮದ ಅಧ್ಯಕ್ಷರು/ ನಿರ್ದೇಶಕರ ಮಂಡಳಿಯ ವಿವೇಚನಾ ಕೋಟಾದಡಿ ಸೌಲಭ್ಯ ಪಡೆಯಬಯಸುವವರೂ ಸಹ ಆನ್‌ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವುದು. ಒಂದು ಕುಟುಂಬದ ಒಬ್ಬ ಸದಸ್ಯರು ಮಾತ್ರ ಮೇಲ್ಕಂಡ ಯಾವುದಾದರೂ ಒಂದು ಯೋಜನೆಯಲ್ಲಿ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.
- ಅರ್ಹ ಫಲಾಪೇಕ್ಷಿಗಳು ಗ್ರಾಮ ಒನ್/ ಬೆಂಗಳೂರು ಒನ್/ ಕರ್ನಾಟಕ ಒನ್ ನಾಗರೀಕ ಸೇವಾ ಕೇಂದ್ರಗಳಲ್ಲಿ ದಾಖಲೆಗಳೊಂದಿಗೆ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಬೇಕಾಗಿರುತ್ತದೆ.
- ಒಂದು ಬಾರಿ ನಿಗಮದ ಯಾವುದಾದರೂ ಯೋಜನೆಯಲ್ಲಿ ಪ್ರಯೋಜನ ಪಡೆದಿದ್ದಲ್ಲಿ ಅಂತಹವರು ಹಾಗೂ ಅವರ ಕುಟುಂಬದವರು ಮತ್ತೊಮ್ಮೆ ಸೌಲಭ್ಯ ಕೋರಿ ಅರ್ಜಿ ಸಲ್ಲಿಸಲು ಅರ್ಹರಿರುವುದಿಲ್ಲ.
- 2023–24 ಹಾಗೂ 2024–25ನೇ ಸಾಲಿಗೆ ಅರ್ಜಿ ಸಲ್ಲಿಸಿ ಆಯ್ಕೆಯಾಗದವರು ಅದೇ ಯೋಜನೆಗೆ ಈ ವರ್ಷ ಮರು ಅರ್ಜಿ ಸಲ್ಲಿಸುವ ಅಗತ್ಯತೆ ಇರುವುದಿಲ್ಲ.
- ಹೆಚ್ಚಿನ ಮಾಹಿತಿಗಾಗಿ ನಿಗಮದ ಜಾಲತಾಣ **https://kvldcl.karnataka.gov.in** ಅಥವಾ ನಿಗಮದ ದೂರವಾಣಿ ಸಂಖ್ಯೆ 080–22865522/9900012351/9900012352 ಅನ್ನು ಸಂಪರ್ಕಿಸುವುದು ಅಥವಾ ಜಿಲ್ಲಾ ವ್ಯವಸ್ಥಾಪಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ಕಛೇರಿಗಳನ್ನು ಸಂಪರ್ಕಿಸಬಹುದಾಗಿದೆ.

ಸಹಿ/– **ಶ್ರೀ ವಿಜಯಾನಂದ ಎಸ್. ಕಾಶಪ್ಪನವರ** ಮಾನ್ಯ ಅಧ್ಯಕ್ಷರು

ಸಹಿ/– **ಶ್ರೀ ಅರುಣ್ ಕುಮಾರ್ ಹಡಗಲಿ, ಕೆ.ಜಿ.ಎಸ್. (ಹಿ.ಶ್ರೇಣಿ)** ವ್ಯವಸ್ಥಾಪಕ ನಿರ್ದೇಶಕರು

DIPR/CP/RO989/AAPL/2025-26

Infosys

Navigate your next

ಇನ್‌ಫೋಸಿಸ್ ಲಿಮಿಟೆಡ್

ಕಾರ್ಪೊರೇಟ್ ಗುರುತು ಸಂಖ್ಯೆ (ಸಿಐಎನ್): L85110KA1981PLC013115
ನೋಂದಾಯಿತ ಕಛೇರಿ: ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560 100
ದೂರವಾಣಿ: +91 80 2852 0261, ಫ್ಯಾಕ್ಸ್: +91 80 2852 0362
investors@infosys.com, www.infosys.com

44ನೇ ವಾರ್ಷಿಕ ಸರ್ವಸದಸ್ಯರ ಸಭೆ ಮತ್ತು ವಿ–ಮತದಾನ ಮಾಹಿತಿ ಸೂಚನೆ

ಈ ಕೆಳಕಂಡಂತೆ ಸೂಚಿಸಲಾಗಿದೆ:

1. ಇನ್‌ಫೋಸಿಸ್ ಲಿಮಿಟೆಡ್ ("ಕಂಪನಿ")ನ 44ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ('ಎಜಿಎಮ್') ಬುಧವಾರ, ಜೂನ್ 25, 2025 ಭಾರತೀಯ ಕಾಲಮಾನ ಸಂಜೆ 4:00ಕ್ಕೆ ಸರಿಯಾಗಿ ವಿಡಿಯೋ ಕಾನ್ಫರೆನ್ಸ್/ಇತರೆ ದೃಶ್ಯಶ್ರಾವ್ಯ ಮಾಧ್ಯಮದ ('ವಿಸಿ') ಮೂಲಕ ನಡೆಸಲಾಗುವುದು. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ('ಎಮ್‌ಸಿಎ') ಹೊರಡಿಸಿರುವ ಸಾಮಾನ್ಯ ಸುತ್ತೋಲೆ ಸಂಖ್ಯೆ 09/2024, ದಿನಾಂಕ ಸೆಪ್ಟೆಂಬರ್ 19, 2024 ಅನ್ವಯ ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ('ಸೆಬಿ') ಹೊರಡಿಸಿರುವ ಸುತ್ತೋಲೆ ಸಂಖ್ಯೆ SEBI/HO/CFD/CFD-PoD-2/P/CIR/2024/133 ದಿನಾಂಕ ಅಕ್ಟೋಬರ್ 3, 2024, (ಇನ್ನು ಮುಂದೆ ಸಂಗ್ರಾಹ್ಯವಾಗಿ "ಸುತ್ತೋಲೆಗಳು" ಎಂದು ಸೂಚಿಸಲಾಗುವುದು), ಅನ್ವಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ವಿಸಿ ಮೂಲಕ, ಒಂದು ಸ್ಥಳದಲ್ಲಿ ಸದಸ್ಯರು ಭೌತಿಕ ಉಪಸ್ಥಿತಿಯಿಲ್ಲದೆ ನಡೆಸಲು ಅನುವುಮಾಡಿಕೊಡುತ್ತವೆ. ಆದ್ದರಿಂದ, ಕಂಪನಿಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ವಿಸಿ ಮೂಲಕ ದಿನಾಂಕ ಏಪ್ರಿಲ್ 17, 2025 ನೇ ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನೆಯಲ್ಲಿ ಹೇಳಲಾದಂತೆ ವ್ಯಾಪಾರ ವಹಿವಾಟುಗಳನ್ನು ನಡೆಸಲಾಗುವುದು.
2. ಮೇಲ್ಕಾಣಿಸಿದ ಸುತ್ತೋಲೆಗಳಂತೆ, ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆ ಹಾಗೂ ಸಂಯೋಜಿತ ವಾರ್ಷಿಕ ವರದಿ 2024-25 ಇವುಗಳನ್ನು ಯಾವ ಸದಸ್ಯರು ವಿದ್ಯುನ್ಮಾನ ಅಂಚೆ, ಕಂಪನಿ / ಡಿಪಾಸಿಟರಿ ಪಾರ್ಟಿಸಿಪೆಂಟ್(ಗಳು) ('ಡಿಪಿ') ಇವರಲ್ಲಿ ನೋಂದಾಯಿತವಾಗಿದೆಯೋ ಆ ವಿದ್ಯುನ್ಮಾನ ಅಂಚೆಗಳಿಗೆ ವಿದ್ಯುನ್ಮಾನ ಪ್ರತಿಗಳನ್ನು ಕಳುಹಿಸಲಾಗಿದೆ. ಸದರಿ ದಸ್ತಾವೇಜುಗಳು ಕಂಪನಿಯ ಜಾಲತಾಣ www.infosys.com ದಲ್ಲಿಯೂ ಸ್ಟಾಕ್ ಎಕ್ಸ್‌ಚೇಂಜ್ ಜಾಲತಾಣಗಳಲ್ಲಿಯೂ ಮತ್ತು ನ್ಯಾಷನಲ್ ಸೆಕ್ಯೂರಿಟೀಸ್ ಡೆಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್)ನ ಜಾಲತಾಣ https://www.evoting.nsdl.com.ಗಳಲ್ಲಿಯೂ ಲಭ್ಯವಿರುತ್ತದೆ. ವಿದ್ಯುನ್ಮಾನ ಅಂಚೆಯ ಮೂಲಕ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆಯನ್ನು ಕಳುಹಿಸುವ ಪ್ರಕ್ರಿಯೆ ದಿನಾಂಕ ಜೂನ್ 2, 2025ರಂದು ಪೂರ್ಣಗೊಳಿಸಲಾಗಿದೆ.
3. ಕಂಪನಿ ಅಥವಾ ಡೆಪಾಸಿಟರಿಗಳೊಂದಿಗೆ ತಮ್ಮ ಇಮೇಲ್ ವಿಳಾಸವನ್ನು ನೋಂದಾಯಿಸದ ಸದಸ್ಯರಿಗೆ 2024-25ನೇ ಆರ್ಥಿಕ ವರ್ಷದ ಸಮಗ್ರ ವಾರ್ಷಿಕ ವರದಿಯನ್ನು ಪ್ರವೇಶಿಸಲು ವೆಬ್‌ಲಿಂಕ್ ಮತ್ತು ಕ್ಯೂಆರ್ ಕೋಡ್ ಅನ್ನು ಒದಗಿಸುವ ಪತ್ರವನ್ನು ಜೂನ್ 2, 2025 ರಂದು ಕಳುಹಿಸಲಾಗುವುದು.
4. ನಿರ್ಣಾಯಕ ದಿನಾಂಕದಂತೆ ಅಂದರೆ ಜೂನ್ 18, 2025 ಭೌತಿಕ ಅಥವಾ ಡಿಮೆಟೀರಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರುಗಳು ವಿದ್ಯುನ್ಮಾನ ರೂಪದಲ್ಲಿ ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸುವ ಕುರಿತಾಗಿ ವಾರ್ಷಿಕ ಸರ್ವಸದಸ್ಯರ ಸಭಾ ಸೂಚನೆಯಲ್ಲಿ ಹೇಳಿದಂತೆ ಎನ್‌ಎಸ್‌ಡಿಲ್‌ನ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ (ರಿಮೋಟ್ ಇ–ವೋಟಿಂಗ್) ಮತಚಲಾಯಿಸಬಹುದಾಗಿರುತ್ತದೆ. ಷೇರುದಾರರ ಮತದಾನದ ಹಕ್ಕುಗಳು ಕಂಪನಿಯ ಈಕ್ವಿಟಿ ಷೇರು ಬಂಡವಾಳದಲ್ಲಿ ಅವರು ಹೊಂದಿರುವ ಈಕ್ವಿಟಿ ಷೇರುಗಳಿಗೆ ಅನುಗುಣವಾಗಿರುತ್ತವೆ. ವಿಸಿ ಮೂಲಕ ಭಾಗವಹಿಸುವ ಷೇರುದಾರರನ್ನು ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 103 ರ ಅಡಿಯಲ್ಲಿ ಕೋರಂ ಅನ್ನು ಲೆಕ್ಕಾಚಾರ ಮಾಡುವ ಉದ್ದೇಶಕ್ಕಾಗಿ ಎಣಿಸಲಾಗುತ್ತದೆ.
5. ಎಲ್ಲ ಷೇರುದಾರರಿಗೆ ಈ ಕೆಳಕಂಡಂತೆ ಮಾಹಿತಿನೀಡಲಾಗಿರುತ್ತದೆ:
   - i. ವಾರ್ಷಿಕ ಸರ್ವಸದಸ್ಯರ ಸಭಾ ಸೂಚನೆಯಲ್ಲಿ ತಿಳಿಸಿರುವಂತೆ ವ್ಯಾಪಾರ ವಹಿವಾಟುಗಳನ್ನು ಸದೂರ ವಿ–ಮತದಾನ ಅಥವಾ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ ವಾರ್ಷಿಕ ಸರ್ವಸದಸ್ಯರ ಸಭೆ ನಡೆಯುತ್ತಿರುವಾಗ ನಡೆಸಬಹುದಾಗಿರುತ್ತದೆ.
   - ii. ಸದೂರ ವಿದ್ಯುನ್ಮಾನ ವಿಧಾನದಲ್ಲಿ ಅಥವಾ ವಿದ್ಯುನ್ಮಾನ ವಿಧಾನದಲ್ಲಿ ವಾರ್ಷಿಕ ಸರ್ವಸದ್ಯಸರ ಸಭೆಯಲ್ಲಿ ಮತಚಲಾಯಿಸುವ ಅರ್ಹತೆ ಗೊತ್ತುಪಡಿಸುವ ನಿರ್ಣಾಯಕ ದಿನಾಂಕ ಜೂನ್ 18, 2025;
   - iii. ಸದೂರ ವಿ–ಮತದಾನ (ರಿಮೋಟ್ ಇ–ವೋಟಿಂಗ್) ಶುಕ್ರವಾರ, ದಿನಾಂಕ ಜೂನ್ 20, 2025 (ಭಾರತೀಯ ಕಾಲಮಾನ ಬೆಳಿಗ್ಗೆ 9:00 ಗಂಟೆಗೆ)ರಂದು ಆರಂಭವಾಗುತ್ತದೆ.
   - iv. ಸದೂರ ವಿ–ಮತದಾನ (ರಿಮೋಟ್ ಇ–ವೋಟಿಂಗ್) ಮಂಗಳವಾರ, ದಿನಾಂಕ ಜೂನ್ 24, 2025 (ಭಾರತೀಯ ಕಾಲಮಾನ ಸಂಜೆ 5:00 ಗಂಟೆಗೆ)ರಂದು ಮುಕ್ತಾಯವಾಗುತ್ತದೆ.
   - v. ದಿನಾಂಕ ಜೂನ್ 24, 2025 ಭಾರತೀಯ ಕಾಲಮಾನ ಸಂಜೆ 5:00 ಗಂಟೆಯ ನಂತರ ವಿದ್ಯುನ್ಮಾನ ಕ್ರಮದಲ್ಲಿ ರಿಮೋಟ್ ಇ–ವೋಟಿಂಗ್ ಸೌಲಭ್ಯವನ್ನು ನಿಷ್ಕ್ರಿಯಗೊಳಿಸಲಾಗುವುದು.
   - vi. ಷೇರುಗಳನ್ನು ಭೌತಿಕ ರೂಪ ಮತ್ತು ವ್ಯಕ್ತಿಗತವಲ್ಲದ ಹೊಂದಿರುವ ಷೇರುದಾರರು ಅಥವಾ ಯಾವುದೇ ವ್ಯಕ್ತಿ, ಯಾರು ಕಂಪನಿಯ ಷೇರುಗಳನ್ನು ವಾರ್ಷಿಕ ಸರ್ವಸದಸ್ಯರ ಸಭಾ ಸೂಚನೆ ರವಾನೆಯಾದ ನಂತರ ಪಡೆದುಕೊಂಡು ಕಂಪನಿಯ ಸದಸ್ಯರಾಗುತ್ತಾರೋ ನಿರ್ಣಾಯಕ ದಿನಾಂಕವಾದ, ಅಂದರೆ ಜೂನ್ 18, 2025ರೊಳಗೆ ತಮ್ಮ ಸೇರ್ಪಡೆ ಗುರುತು ಪದ ಮತ್ತು ಗುಪ್ತಪದಗಳನ್ನು evoting@nsdl.com ಇಲ್ಲಿಗೆ ಕೋರಿಕೆ ಸಲ್ಲಿಸಿ ಪಡೆದುಕೊಳ್ಳಬಹುದು.
   - vii. ಸದಸ್ಯರ ಗಮನಕ್ಕೆ:
     ಅ) ಒಮ್ಮೆ ಠರಾವಿನ ಮೇಲೆ ಷೇರುದಾರರು ಮತಚಲಾಯಿಸಿದ ನಂತರ ಷೇರುದಾರರು ಅದನ್ನು ಬದಲಿಸಲು ಅವಕಾಶವಿರುವುದಿಲ್ಲ.
     ಆ) ಮತಚಲಾಯಿಸುವ ಸೌಲಭ್ಯ ವಾರ್ಷಿಕ ಸರ್ವಸದಸ್ಯರ ಸಭೆ ನಡೆಯುವ ಸ್ಥಳದಲ್ಲಿಯೂ ಲಭ್ಯವಿದ್ದು ವಿಡಿಯೋ ಕಾನ್ಫರೆನ್ಸ್ (ವಿಸಿ) ವ್ಯವಸ್ಥೆಯಲ್ಲಿ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಹಾಜರಿರುವ ಸದಸ್ಯರು ಯಾರು ಠರಾವುಗಳ ಕುರಿತಾಗಿ ಸದೂರ ವಿದ್ಯುನ್ಮಾನ ಮತದಾನದ ಮೂಲಕ ಮತಚಲಾಯಿಸಿಲ್ಲವೋ ಹಾಗೂ ಮತದಾನ ಮಾಡದಂತೆ ನಿರ್ಬಂಧಿಸಿಲ್ಲವೋ ಅವರು ವಾರ್ಷಿಕ ಸರ್ವಸದಸ್ಯರ ಸಭೆ ನಡೆಯುತ್ತಿರುವಾಗ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ ಮತದಾನ ಮಾಡಬಹುದಾಗಿರುತ್ತದೆ.
     ಇ) ವಾರ್ಷಿಕ ಸರ್ವಸದಸ್ಯರ ಸಭೆಗೆ ಮುಂಚಿತವಾಗಿ ಸದೂರ ವಿ–ಮತದಾನದ ಮೂಲಕ ಮತಚಲಾಯಿಸಿದವರು ವಾರ್ಷಿಕ ಸರ್ವಸದಸ್ಯರ ಸಭೆಗೆ ಹಾಜರಾಗಬಹುದು, ಆದರೆ ಮತ್ತೊಮ್ಮೆ ಮತಚಲಾಯಿಸುವ ಅವಕಾಶವಿರುವುದಿಲ್ಲ; ಮತ್ತು
     ಈ) ನಿರ್ಣಾಯಕ ದಿನಾಂಕದೊಳಗೆ ಷೇರುದಾರರು ವಹಿಯಲ್ಲಿ ದಾಖಲಾಗಿರುವ ಹೆಸರಿನ ಷೇರುದಾರರು ಅಥವಾ ಡೆಪಾಸಿಟರಿಸ್ ಅವರಲ್ಲಿನ ಲಾಭಹಕ್ಕುದಾರರ ವಹಿಯಲ್ಲಿ ದಾಖಲಾಗಿರುವ ಷೇರುದಾರರು ಮಾತ್ರ ಸದೂರ ವಿ–ಮತದಾನ ಅಥವಾ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿನ ವಿದ್ಯುನ್ಮಾನ ಮತದಾನದ ಸೌಲಭ್ಯವನ್ನು ಬಳಸಿಕೊಳ್ಳಬಹುದಾಗಿರುತ್ತದೆ.
   - viii. ಷೇರುಗಳನ್ನು ಭೌತಿಕ, ಡಿಮೆಟೀರಿಲೈಸ್ಡ್ ರೂಪದಲ್ಲಿ ಹೊಂದಿರುವ ಷೇರುದಾರರು ಹಾಗೂ ವಿದ್ಯುನ್ಮಾನ ಅಂಚೆಯನ್ನು ನೋಂದಾಯಿಸಿಲ್ಲದ ಷೇರುದಾರಿಗೆ ಸದೂರ ವಿ–ಮತದಾನದ ಕ್ರಮವನ್ನು ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರದಲ್ಲಿ ನೀಡಲಾಗಿದೆ. ಸದರಿ ವಿವರಗಳನ್ನು ಕಂಪನಿಯ ಜಾಲತಾಣದಲ್ಲಿಯೂ ಸಹ ಒದಗಿಸಲಾಗಿದೆ. ಷೇರುದಾರರು ವಿವರಗಳಿಗಾಗಿ www.infosys.com ಜಾಲತಾಣವನ್ನು ಸಂಪರ್ಕಿಸಬಹುದಾಗಿರುತ್ತದೆ.
   - ix ಅವರು ತಮ್ಮ ವಿದ್ಯುನ್ಮಾನ ಅಂಚೆ (ಈ ಮೇಲ್) ಅನ್ನು ಇತರ ಕೆವೈಸಿ ಮಾಹಿತಿಗಳೊಂದಿಗೆ ತಮ್ಮ ಡೆಪಾಸಿಟರಿಯವರಲ್ಲಿ ಅವರ ಡೆಪಾಸಿಟರಿ ಪಾರ್ಟಿಸಿಪೆಂಟ್‌ಗಳ ಮೂಲಕ ನೋಂದಾಯಿಸಲು ಕೋರಲಾಗಿದೆ. ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವ ಹಾಗೂ ತಮ್ಮ ಕೆವೈಸಿ ಮಾಹಿತಿಯನ್ನು ಒದಗಿಸಿಲ್ಲವೋ ಅವರು ನಮೂನೆ ಐಎಸ್‌ಆರ್–1 (ನಿಗದಿತ ನಮೂನೆಯು https://www.infosys.com/investors/shareholderservices/investors-service.html ಜಾಲತಾಣದಲ್ಲಿ ಲಭ್ಯ) ಅನ್ನು ತಮ್ಮ ವಿದ್ಯುನ್ಮಾನ ಅಂಚೆ, ಬ್ಯಾಂಕ್ ಖಾತೆ ವಿವರಗಳು ಮತ್ತು ಇತರ ಕೆವೈಸಿ ಮಾಹಿತಿಯನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರು (ಆರ್‌ಟಿಎ), ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಭರ್ತಿ ಮಾಡಿದ ನಮೂನೆಯನ್ನು einward.ris@kfintech.com ಇಲ್ಲಿಗೆ ವಿದ್ಯುನ್ಮಾನ ಅಂಚೆ ಮೂಲಕ ರವಾನಿಸಲು ಕೋರಲಾಗಿದೆ. ಇದು ಷೇರುದಾರರು 2024-25ನೇ ಸಾಲಿನ ಸಂಯೋಜಿತ ವಾರ್ಷಿಕ ವರದಿ, ಸೂಚನೆ, ಸದೂರ ವಿದ್ಯುನ್ಮಾನ ಮತದಾನಕ್ಕೆ ಸೂಚನೆಗಳು, ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ವಿಸಿ ಮೂಲಕ ಭಾಗವಹಿಸಲು ಬೇಕಾದ ಸೂಚನೆ ಇವುಗಳನ್ನು ವಿದ್ಯುನ್ಮಾನ ರೂಪದಲ್ಲಿ ಪಡೆದುಕೊಳ್ಳಲು ಹಾಗೂ ಲಾಭಾಂಶವನ್ನು ತಮ್ಮ ಬ್ಯಾಂಕ್ ಖಾತೆಯಲ್ಲಿ ಪಡೆದುಕೊಳ್ಳಲು ಅನುವು ಮಾಡಿಕೊಡುತ್ತದೆ. ತಮ್ಮ ಲಾಭಾಂಶವನ್ನು ಪಡೆಯಲು ಬ್ಯಾಂಕ್ ಆದೇಶಗಳನ್ನು ನೋಂದಾಯಿಸಲು ಬಯಸುವ ಸದಸ್ಯರು ನೋಟಿಸ್‌ನಲ್ಲಿ ವಿವರಿಸಲಾಗಿದೆ.
   - x. ಸದೂರ ವಿದ್ಯುನ್ಮಾನ ಮತದಾನ ಕುರಿತಾಗಿ ಸಂದೇಹಗಳಿದ್ದಲ್ಲಿ, ಷೇರುದಾರರು, ಷೇರುದಾರರ ಸಾಮಾನ್ಯ ಸಂದೇಹಗಳ ವಿಭಾಗವನ್ನು ಮತ್ತು ವಿ–ಮತದಾನ ಬಳಕೆದಾರ ಕೈಪಿಡಿಯನ್ನು https://evoting.nsdl.com ದಲ್ಲಿನ ಡೌನ್‌ಲೋಡ್ ವಿಭಾಗದಿಂದ ಇಳಿಸಿಕೊಂಡು ನೋಡಬಹುದು ಅಥವಾ ಉಚಿತ ಕರೆಸಂಖ್ಯೆ 022-4886 7000ಕ್ಕೆ ಕರೆಮಾಡಬಹುದು ಅಥವಾ ಅಮಿತ್ ವಿಶಾಲ್, ಉಪ ಉಪಾಧ್ಯಕ್ಷ–NSDL ವಿ–ಅಂಚೆ amitv@nsdl.com ಅಥವಾ ಪಲ್ಲವಿ ಮ್ಹಾತ್ರೆ, ಹಿರಿಯ ವ್ಯವಸ್ಥಾಪಕಿ – pallavid@nsdl.com ನಲ್ಲಿ; ವಿಳಾಸ– 301 3ನೇ ಮಹಡಿ, ನಮನ್ ಚೇಂಬರ್ಸ್, ಪ್ಲಾಟ್ C 32, G–ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ ಪೂರ್ವ, ಮುಂಬೈ, ಮಹಾರಾಷ್ಟ – 400 05, ಭಾರತ, ಅಥವಾ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಸೆಲಿನಿಯಮ್ ಟವರ್ ಬಿ, ಪ್ಲಾಟ್ 31-32, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಕ್ರಮ್‌ಗುಡ, ಸೆರಿಲಿಂಗಮ್‌ಪಲ್ಲಿ ಮಂಡಲ್, ಹೈದರಾಬಾದ್–500 032, ವಿ–ಅಂಚೆ einward.ris@kfintech.com. ಅಥವಾ ಶುಲ್ಕ ರಹಿತ ಸಂಖ್ಯೆ 1800 309 4001ಅನ್ನು ಸಂಪರ್ಕಿಸಬಹುದು.
   - xi. ವಿಡಿಯೋ ಕಾನ್ಫರೆನ್ಸ್ ಸೌಲಭ್ಯವನ್ನು ಬಳಸಿಕೊಂಡು ಸಭೆಯಲ್ಲಿ ಭಾಗವಹಿಸುವ ಕುರಿತಾಗಿ ತಾಂತ್ರಿಕ ಸಹಾಯ ಬೇಕಾದ ಷೇರುದಾರರು +91 80 4156 5555 / +91 80 4156 5777 ಮೂಲಕ ಸಹಾಯವಾಣಿಯನ್ನು ಸಂಪರ್ಕಿಸಿ ಸಹಾಯವನ್ನು ಪಡೆದುಕೊಳ್ಳಬಹುದು.
   - xii. ಸೂಚನೆಯೊಂದಿಗೆ ಸಂಯೋಜಿತ ವಾರ್ಷಿಕ ವರದಿಯು ಜಾಲತಾಣ https://www.infosys.com/investors/reports-filings.html#sec ನಲ್ಲಿ ಲಭ್ಯವಿದೆ
6. ಅಂತಿಮ ಲಾಭಾಂಶ ನೀಡಿಕೆಗೆ ನಿಗದಿಪಡಿಸಲಾಗಿರುವ ಅಧಿಕೃತ ದಿನಾಂಕವು ಮೇ 30, 2025 ಆಗಿರುತ್ತದೆ.ಅಂತಿಮ ಹಾಗೂ ವಿಶೇಷ ಲಾಭಾಂಶವನ್ನು, ಷೇರುದಾರರು 44ನೇ ಸರ್ವ ಸದಸ್ಯರ ಸಭೆಯಲ್ಲಿ ಅನುಮೋಸಿದಿದ ಅನಂತರ ಜೂನ್ 30, 2025 ರಂದು ಪಾವತಿಸಲಾಗುವುದು.

ಇನ್‌ಫೋಸಿಸ್ ಲಿಮಿಟೆಡ್ ಪರವಾಗಿ
ಸಹಿ/–
ಎ.ಜಿ.ಎಸ್. ಮಣಿಕಂಠ
ಕಂಪನಿ ಕಾರ್ಯದರ್ಶಿ
ಸದಸ್ಯತ್ವ ಸಂಖ್ಯೆ ಎ21918

ಬೆಂಗಳೂರು, ಭಾರತ
ಜೂನ್ 02, 2025



❦ ಸುಭಾಷಿತ ❦

ಕೆಲಸವಿಲ್ಲದೆ ಸುಮ್ಮನೆ ಕುಳಿತವನ ಭುಜದ ಮೇಲೆ ಶನಿಯು ಬಂದು ಕೂಡುತ್ತಾನೆ.

–ಬೀಚಿ

‘ಸಿಂಧೂರ’ ಕುರಿತು ಸಿಡಿಎಸ್ ಹೇಳಿಕೆ ಇನ್ನಷ್ಟು ಸ್ಪಷ್ಟತೆ ಮೂಡಬೇಕಿದೆ

‘ಸಿಂಧೂರ ಕಾರ್ಯಾಚರಣೆ’ ಸಂದರ್ಭದಲ್ಲಿ ಯುದ್ಧ ವಿಮಾನ ನಷ್ಟ ಉಂಟಾಗಿದೆ ಎಂಬ ಮಾಹಿತಿಯನ್ನು ಸೇನಾ ಪಡೆಗಳ ಮುಖ್ಯಸ್ಥ (ಸಿಡಿಎಸ್) ಜನರಲ್ ಅನಿಲ್ ಚೌಹಾಣ್ ಬಹಿರಂಗಪಡಿಸಿದ್ದಾರೆ. ಹಾಗಾಗಿ ಈ ವಿಚಾರದಲ್ಲಿ ಸ್ವಲ್ಪಮಟ್ಟಿನ ಸ್ಪಷ್ಟತೆ ಮೂಡಿದೆ. ಸರ್ಕಾರ ಈ ವಿಚಾರದಲ್ಲಿ ಈವರೆಗೆ ನುಣುಚಿಕೊಳ್ಳುವ ಉತ್ತರ ನೀಡುತ್ತಿತ್ತು. ಭಾರತೀಯ ವಾಯುಪಡೆಗೆ ಯುದ್ಧ ವಿಮಾನ ನಷ್ಟ ಉಂಟಾಗಿದೆ ಎಂದು ಅನಿಲ್ ಚೌಹಾಣ್ ಹೇಳಿದ್ದಾರೆ. ಆದರೆ ನಿಖರ ಸಂಖ್ಯೆಯನ್ನು ಅವರು ಹೇಳಿಲ್ಲ. ‘ಯುದ್ಧ ತಂತ್ರಕ್ಕೆ ಸಂಬಂಧಿಸಿ ಮಾಡಿದ ತಪ್ಪುಗಳನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಯಿತು’ ಮತ್ತು ತಕ್ಷಣವೇ ಅವನ್ನು ಸರಿಪಡಿಸಿಕೊಳ್ಳಲಾಯಿತು ಎಂದು ಅವರು ಹೇಳಿದ್ದಾರೆ. ವಾಯುಪಡೆಯ ಕಾರ್ಯಾಚರಣೆ ವಿಭಾಗದ ಮಹಾನಿರ್ದೇಶಕ ಏರ್ ಮಾರ್ಷಲ್ ಎ.ಕೆ.ಭಾರ್ತಿ ಅವರು ಕೂಡ ‘ನಷ್ಟಗಳು ಸಂಘರ್ಷದ ಭಾಗವೇ ಆಗಿರುತ್ತವೆ’, ಎಲ್ಲ ಪೈಲಟ್‌ಗಳು ಸುರಕ್ಷಿತವಾಗಿ ಹಿಂದಿರುಗಿದ್ದಾರೆ ಎಂದು ಹೇಳಿದ್ದರು. ಇದು ವಿವಿಧ ರೀತಿಯ ವ್ಯಾಖ್ಯಾನಗಳಿಗೆ ದಾರಿ ಮಾಡಿಕೊಟ್ಟಿತ್ತು. ದೇಶದ ಒಳಗೆ ಮತ್ತು ಹೊರಗೆ ಈ ಕುರಿತಂತೆ ವಿವಿಧ ರೀತಿಯ ಊಹಾಪೋಹಗಳು, ವ್ಯಾಖ್ಯಾನಗಳು ಮತ್ತು ಪ್ರಶ್ನೆಗಳು ಎದ್ದಿದ್ದವು. ಸಿಡಿಎಸ್ ಹೇಳಿಕೆಯಿಂದ ಕೆಲವು ಪ್ರಶ್ನೆಗಳಿಗೆ ಉತ್ತರ ಸಿಕ್ಕಂತಾಗಿದೆ. ನಷ್ಟ ಉಂಟಾಗಿದೆ ಎಂಬ ಅವರ ಹೇಳಿಕೆಯಿಂದ ‘ಸಿಂಧೂರ ಕಾರ್ಯಾಚರಣೆ’ಯ ಮಹತ್ವದ ವಿಚಾರದಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ಸಂಘರ್ಷದ ಸಂದರ್ಭದಲ್ಲಿ ನಷ್ಟ ಉಂಟಾಗುವುದನ್ನು ತಪ್ಪಿಸಲಾಗದು ಮತ್ತು ದೇಶವು ಅದಕ್ಕೆ ಸನ್ನದ್ಧವಾಗಿರಬೇಕು. ನಷ್ಟ ಎಷ್ಟೇ ದೊಡ್ಡದಾಗಿದ್ದರೂ ಅದನ್ನು ಸ್ವೀಕರಿಸಬೇಕು.



ಸಂಸತ್ತು ದೇಶದ ಅತ್ಯುನ್ನತ ಪ್ರಜಾಸತ್ತಾತ್ಮಕ ವೇದಿಕೆ. ಹಾಗಾಗಿ, ಕಾರ್ಯಾಚರಣೆ ಕುರಿತು ಚರ್ಚಿಸುವ ಹಕ್ಕು ಸಂಸತ್ತಿಗೆ ಇದೆ

ಅನಿಲ್ ಚೌಹಾಣ್ ಅವರ ಹೇಳಿಕೆಯು ಕೆಲವು ಹೊಸ ಪ್ರಶ್ನೆಗಳನ್ನು ಎತ್ತಿದೆ. ಕಾರ್ಯಾಚರಣೆ ನಡೆದ ಮೂರು ವಾರಗಳ ಬಳಿಕ ಸಿಂಗಪುರದಲ್ಲಿ ನಡೆದ ಸುರಕ್ಷತೆಗೆ ಸಂಬಂಧಿಸಿದ ಸಮಾವೇಶವೊಂದರ ಸಂದರ್ಭದಲ್ಲಿ ಬ್ಲೂಮ್‌ಬರ್ಗ್ ಟಿ.ವಿಗೆ ನೀಡಿದ ಸಂದರ್ಶನದಲ್ಲಿ ಈ ಕುರಿತು ಅವರು ಮಾತನಾಡಿದ್ದಾರೆ. ಈ ಬಹಿರಂಗಪಡಿಸುವಿಕೆಯನ್ನು ಭಾರತದಲ್ಲಿಯೇ ಮಾಡಬೇಕಿತ್ತು. ಏಕೆಂದರೆ, ವಿಮಾನ ನಷ್ಟಕ್ಕೆ ಸಂಬಂಧಿಸಿ ದೇಶದೊಳಗೆ ನಿರಂತರವಾಗಿ ಪ್ರಶ್ನೆಗಳನ್ನು ಎತ್ತಲಾಗಿತ್ತು. ಸರ್ಕಾರ ಮತ್ತು ಆಡಳಿತ ಪಕ್ಷದ ರಾಜಕೀಯ ನಾಯಕರು ಈ ಪ್ರಶ್ನೆಗಳಿಗೆ ಉತ್ತರಿಸಲು ನಿರಾಕರಿಸಿದ್ದರು. ಹೀಗಾಗಿ, ಮಾಹಿತಿಯನ್ನು ಆರಂಭದಲ್ಲಿ ಮುಚ್ಚಿಡಲಾಯಿತು ಎಂಬ ಭಾವನೆ ಉಂಟಾಗುವುದು ಸಹಜವೇ ಆಗಿದೆ. ಯುದ್ಧ ತಂತ್ರಕ್ಕೆ ಸಂಬಂಧಿಸಿದ ಅಥವಾ ಕಾರ್ಯಾಚರಣೆಯ ವಿವರಗಳ ಕುರಿತು ಪ್ರಶ್ನೆಗಳನ್ನು ಕೇಳಿರಲಿಲ್ಲ. ರಾಷ್ಟ್ರೀಯವಾದಿ ಸಾಮಾಜಿಕ ಮಾಧ್ಯಮಗಳಲ್ಲಿ ಜನರಲ್ ಚೌಹಾಣ್ ಅವರನ್ನು ಅವರು ನೀಡಿದ ಹೇಳಿಕೆಗಾಗಿ ಟೀಕಿಸಲಾಗಿದೆ. ಸಾಮಾಜಿಕ ಮಾಧ್ಯಮಗಳನ್ನು ನಿಯಂತ್ರಿಸಲು ದಾರಿಗಳು ಇಲ್ಲ. ಹಾಗಿದ್ದರೂ ಯುದ್ಧದ ಕುರಿತು ಜನರ ಸಾಮಾನ್ಯ ಗ್ರಹಿಕೆ ಏನು ಎಂಬುದನ್ನು ಇದು ತೋರಿಸುತ್ತದೆ.

‘ಸಿಂಧೂರ ಕಾರ್ಯಾಚರಣೆ ಕುರಿತು ಚರ್ಚಿಸಲು ಸಂಸತ್ತಿನ ವಿಶೇಷ ಅಧಿವೇಶನ ಕರೆಯಬೇಕು ಎಂಬ ವಿರೋಧ ಪಕ್ಷಗಳ ಬೇಡಿಕೆಯನ್ನು ಈ ದೃಷ್ಟಿಯಿಂದ ನೋಡಬೇಕು. ಒಂದು ಯುದ್ಧವು ಯಾವ ಪ್ರಮಾಣದ್ದೇ ಆಗಲಿ, ಯಾವ ಸ್ವರೂಪದ್ದೇ ಆಗಲಿ, ರಾಷ್ಟ್ರಮಟ್ಟದಲ್ಲಿ ದೊಡ್ಡ ಬೆಳವಣಿಗೆ. ಈ ಕಾರ್ಯಾಚರಣೆಯು ಪಾಕಿಸ್ತಾನದ ಜೊತೆಗಿನ ಭಾರತದ ಸಂಬಂಧಕ್ಕೆ ಹೊಸದೊಂದು ಆಯಾಮವನ್ನು ಸೇರಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರೇ ಈ ಕುರಿತು ಮಾತನಾಡಿದ್ದರು. ಸಂಸತ್ತು ದೇಶದ ಅತ್ಯುನ್ನತ ಪ್ರಜಾಸತ್ತಾತ್ಮಕ ವೇದಿಕೆ. ಹಾಗಾಗಿ ಕಾರ್ಯಾಚರಣೆ ಕುರಿತು ಚರ್ಚಿಸುವ ಹಕ್ಕು ಸಂಸತ್ತಿಗೆ ಇದೆ. ಮಾಹಿತಿಯನ್ನು ಕೇಳಿ ಪಡೆಯುವ, ಪ್ರಶ್ನೆಗಳನ್ನು ಕೇಳುವ ಮತ್ತು ನಿರ್ಧಾರಗಳಿಗಾಗಿ ಸರ್ಕಾರವನ್ನು ಉತ್ತರದಾಯಿಯನ್ನಾಗಿ ಮಾಡುವ ಹಕ್ಕು ಸಂಸತ್ತಿಗೆ ಇದೆ. ಎಲ್ಲ ಪ್ರಜಾಪ್ರಭುತ್ವ ವ್ಯವಸ್ಥೆಗಳೂ ಈ ಹಕ್ಕಿಗೆ ಮನ್ನಣೆ ನೀಡಿವೆ. ಭಾರತದಲ್ಲಿಯೂ ಇಂತಹ ಪೂರ್ವನಿದರ್ಶನ ಇದೆ. ಸಂಘರ್ಷದ ಸಂದರ್ಭದಲ್ಲಿ ವಿರೋಧ ಪಕ್ಷಗಳು ಸರ್ಕಾರದ ಜೊತೆಗೆ ನಿಂತಿದ್ದವು ಮತ್ತು ಸಶಸ್ತ್ರ ಪಡೆಗಳಿಗೆ ಸಂಪೂರ್ಣ ಬೆಂಬಲ ಘೋಷಿಸಿದ್ದವು. ಪಾಕಿಸ್ತಾನದ ಜೊತೆಗೆ ಸಂಘರ್ಷ ನಡೆಸಿದ್ದು ಸರ್ಕಾರ ಅಲ್ಲ, ಬದಲಿಗೆ ಭಾರತ ಈ ಸಂಘರ್ಷ ನಡೆಸಿದೆ ಎಂಬುದು ನಮ್ಮ ಗಮನದಲ್ಲಿ ಇರಬೇಕು. ಹಾಗಾಗಿ, ಕಾರ್ಯಾಚರಣೆ ಹೇಗೆ ನಡೆಯಿತು ಎಂಬುದನ್ನು ತಿಳಿದುಕೊಳ್ಳುವ ಹಕ್ಕು ದೇಶಕ್ಕೆ ಇದೆ. ವಿವಿಧ ಮೂಲಗಳು ಅಲ್ಪಸ್ವಲ್ಪ ಮಾಹಿತಿಯನ್ನು ಕಂತು ಕಂತಲ್ಲಿ ಬಹಿರಂಗಪಡಿಸಿದರೆ ನಿಜವಾದ ಚಿತ್ರಣವು ಯಾರಿಗೂ ತಿಳಿಯದು.

ದಿನದ ಟ್ವೀಟ್

ನಮ್ಮ ಆದ್ಯತೆ ಯಾವುದಕ್ಕೆ?!



ಬಡವರ ಮಕ್ಕಳು ಬೀದಿಯಲ್ಲಿ ಹಿಂದೂ, ಮುಸ್ಲಿಂ ಅನ್ನುತ್ತಿರ ಬೇಕಾದರೆ, ನಾಯಕರ ಮಕ್ಕಳು ಶಾಲೆಯಲ್ಲಿ ಎ ಬಿ ಸಿ ಡಿ ಅನ್ನುತ್ತಿದ್ದಾರೆ, ಇಷ್ಟೇ ವ್ಯತ್ಯಾಸ...

ಶ್ವೇತಾ ಕಿರಣ್

ಕಿಡಿನುಡಿ



ಕಮಲ್ ಹಾಸನ್ ಭಾಷಾತಜ್ಞರಲ್ಲ. ಅರೆಬರೆ ತಿಳಿದು ಮಾತನಾಡಿದ್ದಾರೆ. ಕನ್ನಡ ಮತ್ತು ತಮಿಳು ಸಹೋದರ ಭಾಷೆಗಳು. ತಮಿಳಿನಿಂದ ಕನ್ನಡ ಬಂದಿದೆ ಎಂದರೆ ಅದು ಅವರ ಅಜ್ಞಾನ. ಕೆಲವೊಮ್ಮೆ ವಿಷಯಾಂತರ ಮಾಡುವ ಸಾಧ್ಯತೆಯೂ ಇರುತ್ತದೆ. ಟೂಲ್‌ಕಿಟ್ ಭಾಗವೂ ಆಗಿರುತ್ತದೆ. ಈ ರೀತಿಯ ಒಂದೊಂದು ಹೇಳಿಕೆಯನ್ನು ಹೊರಗೆ ಬಿಟ್ಟು ಎಂಥ ಪ್ರತಿಕ್ರಿಯೆಗಳು ಬರುತ್ತವೆಂದು ಎದುರು ನೋಡುತ್ತಿರುತ್ತಾರೆ.

ಸಿ.ಟಿ. ರವಿ, ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ

25 ವರ್ಷಗಳ ಹಿಂದೆ

ಶನಿವಾರ, 3-6-2000

- **ಚುನಾವಣೆ: ಬಹುಪಾಲು ಶಾಂತಿಯುತ, ಕೆಲವೆಡೆ ಹಿಂಸೆ**

ಬೆಂಗಳೂರು, ಜೂನ್ 2– ರಾಜ್ಯದ ಹದಿನಾರು ಜಿಲ್ಲೆಗಳ ವ್ಯಾಪ್ತಿಯ ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತ್ತಿಗಳಿಗೆ ಇಂದು ನಡೆದ ಮೊದಲ ಹಂತದ ಚುನಾವಣೆಯಲ್ಲಿ ಕೆಲವು ಕಡೆ ಘರ್ಷಣೆಗಳು ನಡೆದಿದ್ದನ್ನು ಹೊರತುಪಡಿಸಿ ಬಹುತೇಕ ಶಾಂತಿಯುತವಾಗಿತ್ತು. ಒಟ್ಟು 2,308 ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಶೇಕಡ 61ರಷ್ಟು ಮತದಾನ ಆಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನಲ್ಲಿ ವ್ಯಾಪಕ ಚುನಾವಣಾ ಹಿಂಸಾಚಾರ ಮತ್ತು ಅಕ್ರಮಗಳು ನಡೆದಿವೆ. ತಾಲ್ಲೂಕಿನಲ್ಲಿ ವ್ಯಕ್ತಿಯೊಬ್ಬ ಇರಿತಕ್ಕೆ ಒಳಗಾಗಿ ಸತ್ತಿದ್ದು, ಪೊಲೀಸ್ ಮೂಲಗಳು ‘ಇದು ಚುನಾವಣಾ ಹಿಂಸೆ ಪ್ರಕರಣವಲ್ಲ’ ಎಂದಿವೆ. ಆದರೆ ಸತ್ತ ವ್ಯಕ್ತಿ ಜನತಾ ದಳ ಬೆಂಬಲಿಗ ಎನ್ನಲಾಗಿದ್ದು, ಪ್ರಕರಣ ನಿಗೂಢವಾಗಿದೆ.

ಕೋಲಾರ, ಚಿಕ್ಕಮಗಳೂರು, ರಾಯಚೂರು, ಹಾಸನ ಮತ್ತು ಉತ್ತರ ಕನ್ನಡ ಜಿಲ್ಲೆಯ ಒಂದೆರಡು ಮತಗಟ್ಟೆಗಳಲ್ಲಿ ವಿಭಿನ್ನ ರಾಜಕೀಯ ಪಕ್ಷಗಳ ಕಾರ್ಯಕರ್ತರ ನಡುವೆ ಘರ್ಷಣೆ ಹಾಗೂ ನಕಲಿ ಮತದಾನಕ್ಕೆ ಯತ್ನಿಸಿದ ವರದಿಗಳು ಬಂದಿವೆ.

- **ಸಿಬಿಐನಿಂದ ಕ್ರಿಕೆಟಿಗರ ಬ್ಯಾಂಕ್ ಖಾತೆ ತನಿಖೆ**

ನವದೆಹಲಿ, ಜೂನ್ 2– ಕ್ರಿಕೆಟ್ ಮೋಸದಾಟದಲ್ಲಿ ಪಾಲ್ಗೊಂಡಿದ್ದರೆಂಬ ಆಪಾದನೆಗೆ ಒಳಗಾಗಿರುವ ಆಟಗಾರರು ಕಳೆದ ಕೆಲವು ವರ್ಷಗಳಿಂದ ವ್ಯವಹರಿಸುತ್ತಿರುವ ಬ್ಯಾಂಕುಗಳ ಖಾತೆಗಳನ್ನು ಸಿಬಿಐ ತನಿಖೆಗೆ ಒಳಪಡಿಸಲಿದೆ.

50 ವರ್ಷಗಳ ಹಿಂದೆ

ಮಂಗಳವಾರ, 3-6-1975

- **ಜಿನೀವಾ ಸಮ್ಮೇಳನ: ಅಲಿಪ್ತ ರಾಷ್ಟ್ರಗಳ ಪ್ರಾತಿನಿಧ್ಯಕ್ಕೆ ಕರೆ**

ನವದೆಹಲಿ, ಜೂನ್ 2– ಜಿನೀವಾ ಸಮ್ಮೇಳನದ ಸದಸ್ಯತ್ವ ವ್ಯಾಪ್ತಿ ಹಿಗ್ಗಿಸಿ ಅಲಿಪ್ತ ರಾಷ್ಟ್ರಗಳಿಗೂ ಪ್ರಾತಿನಿಧ್ಯ ನೀಡಿದಲ್ಲಿ ಪಶ್ಚಿಮ ಏಷ್ಯಾ ಸಮಸ್ಯೆಗಳ ನ್ಯಾಯಸಮ್ಮತ ಇತ್ಯರ್ಥಕ್ಕೆ ಭಾರತ ರಚನಾತ್ಮಕ ಕಾಣಿಕೆ ನೀಡುವುದೆಂದು ವಿದೇಶಾಂಗ ವ್ಯವಹಾರಗಳ ಸಚಿವ ವೈ.ಬಿ. ಚವಾಣ್ ಅವರು ಇಂದು ಇಲ್ಲಿ ತಿಳಿಸಿದರು.

ಈಜಿಪ್ಟ್, ಸಿರಿಯಾದಲ್ಲಿ ಪ್ರವಾಸ ಮುಗಿಸಿ ಇಂದು ವಾಪಸಾದ ಅವರು, ಸುದ್ದಿಗಾರರ ಜತೆ ಮಾತನಾಡುತ್ತ ಈ ಎರಡೂ ರಾಷ್ಟ್ರಗಳ ನಾಯಕರ ಜೊತೆ ಮುಕ್ತ ಮನಸ್ಸಿನ ಚರ್ಚೆ ನಡೆಸಿದ್ದಾಗಿ ಹೇಳಿದರು.

ಪಶ್ಚಿಮ ಏಷ್ಯಾ ಸಮಸ್ಯೆ ತುಂಬ ಜಟಿಲವಾದದ್ದೆಂದು ನುಡಿದ ಅವರು, ಜಿನೀವಾ ಸಮ್ಮೇಳನದ ಸದಸ್ಯತ್ವ ವ್ಯಾಪ್ತಿ ಹಿಗ್ಗಬೇಕೆಂದು ಈಜಿಪ್ಟ್, ಸಿರಿಯಾ ಅಭಿಪ್ರಾಯಪಟ್ಟಿವೆ ಎಂದರು.

- **ಪ್ರಾಚ್ಯವಸ್ತು ಕಳವು ತಡೆಗೆ ಕ್ರಮ**

ಬೆಂಗಳೂರು, ಜೂನ್ 2– ಹೊಸದಾಗಿ ರೂಪುಗೊಂಡ ಪ್ರಾಚ್ಯವಸ್ತು ಸಂಶೋಧನಾ ವಲಯವು ಕರ್ನಾಟಕದಲ್ಲಿ ಪ್ರಾಚ್ಯವಸ್ತುಗಳು ಕಳವಾಗುವುದನ್ನು ತಡೆಗಟ್ಟಲು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಅಗ್ರ ಪ್ರಾಶಸ್ತ್ಯ ನೀಡಿದೆ.

ಬೇರ್ಪಟ್ಟಿರುವ ಶಿಲ್ಪ ಕಲಾಕೃತಿಗಳನ್ನು ಇರಿಸುವುದಕ್ಕಾಗಿ ಗ್ಯಾಲರಿಗಳನ್ನು ನಿರ್ಮಿಸುವ ಯೋಜನೆಯನ್ನು ಹಾಕಿಕೊಂಡಿದ್ದು, ಈಗಾಗಲೇ ಐಹೊಳೆ, ಬಾದಾಮಿ ಮತ್ತು ಲಕ್ಕುಂಡಿಯಲ್ಲಿ ಇಂಥ ಗ್ಯಾಲರಿಗಳನ್ನು ನಿರ್ಮಿಸಲಾಗಿದೆ ಎಂದು ವಲಯದ ಡೈರೆಕ್ಟರ್ ಎಸ್.ಆರ್.ರಾವ್ ಅವರು ಇಂದು ಇಲ್ಲಿ ವರದಿಗಾರರಿಗೆ ತಿಳಿಸಿದರು.

‘ಯಾಲ’: ಹರಿವು ನಿಲ್ಲಿಸಿದ ಏಷ್ಯಾದ ಮೊದಲ ಹಿಮನದಿ

ಹಿಮನದಿ ಸಾವು ಏನನ್ನು ಹೇಳುತ್ತಿದೆ?



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ವಾಯುಗುಣ ಏರುಪೇರಿನಿಂದಾಗಿ ಹಿಮನದಿಯೊಂದು ಮರಣಿಸಿದೆ! ನೇಪಾಳ, ಭಾರತ, ಚೀನಾ ಮತ್ತು ಭೂತಾನ್ ದೇಶಗಳ ಬೌದ್ಧ ಸನ್ಯಾಸಿಗಳು ಮತ್ತು ಸ್ಥಳೀಯರು ಸೇರಿ ಪರ್ವತ ಪ್ರದೇಶದಲ್ಲಿ ನದಿಯ ತಿಥಿ ಕಾರ್ಯ ಮಾಡಿ ತರ್ಪಣ ಬಿಟ್ಟಿದ್ದಾರೆ. ಹೌದು! ನೇಪಾಳದ ಲ್ಯಾಂಗ್ ಟಂಗ್ ಕಣಿವೆಯಲ್ಲಿರುವ ‘ಯಾಲ’ ಹಿಮನದಿ (ಗ್ಲೇಸಿಯರ್) ತನ್ನ ಅಂತ್ಯ ಕಂಡಿದೆ ಎಂದು ‘ಇಂಟರ್‌ನ್ಯಾಷನಲ್ ಸೆಂಟರ್ ಫಾರ್ ಇಂಟಿಗ್ರೇಟೆಡ್ ಮೌಂಟೆನ್ ಡೆವಲಪ್‌ಮೆಂಟ್’ ಸಂಸ್ಥೆಯು (ಐಸಿಐಎಂಒಡಿ) ಘೋಷಿಸಿದೆ.

ಹಿಂದೂ ಕುಶ್ ಹಿಮಾಲಯ ಪರ್ವತ ಭಾಗದ ಯಾಲ ಹಿಮನದಿಯು ಶೇ 66ರಷ್ಟು ಸಂಕುಚನಗೊಂಡು ತನ್ನ ಚಲನೆಯನ್ನು ನಿಲ್ಲಿಸಿದ್ದರಿಂದ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಐಸಿಐಎಂಒಡಿ ಹೇಳಿದೆ. 1970ರಲ್ಲಿ 1.4 ಕಿ.ಮೀ. ಉದ್ದವಿದ್ದ ಹಿಮನದಿಗೂ ಈಗಿನದಕ್ಕೂ ದೊಡ್ಡ ವ್ಯತ್ಯಾಸವಿದೆ. ಅಂದಿನಿಂದ ಇಲ್ಲಿಯವರೆಗೆ ಸುಮಾರು 800 ಮೀಟರ್‌ಗಳಷ್ಟು ಸಂಕುಚನಗೊಂಡಿದೆ ಎಂದು ಐಸಿಐಎಂಒಡಿ ದಾಖಲೆ ಒದಗಿಸಿದೆ. ವಿಶ್ವಸಂಸ್ಥೆಯು 2025 ಅನ್ನು ‘ಇಂಟರ್‌ನ್ಯಾಷನಲ್ ಇಯರ್ ಆಫ್ ಗ್ಲೇಸಿಯರ್ಸ್’ ಎಂದು ಘೋಷಿಸಿದ ಬೆನ್ನಲ್ಲೇ ಹಿಮನದಿಯ ಸಾವಿನ ಸುದ್ದಿ ಸಿಕ್ಕಿದೆ.

‘ಯಾಲ’ ನದಿಯ ಅಂತ್ಯ ಏಷ್ಯಾ ಭಾಗದ ಹಿಮನದಿಯೊಂದರ ಮೊದಲ ಸಾವು. ಈ ದುರಂತಕ್ಕೆ ತೀವ್ರಗತಿಯ ವಾಯುಗುಣ ಬದಲಾವಣೆಯೇ ಕಾರಣ ಎಂದಿರುವ ಹಿಮನದಿ ತಜ್ಞರು, ‘ಯಾಲ ಕೇವಲ ಹಿಮನದಿ ಆಗಿರದೆ, ಸಾವಿರಾರು ವಿಜ್ಞಾನಿಗಳ ಪ್ರಯೋಗ ಶಾಲೆಯಾಗಿತ್ತು. ಜಗತ್ತಿನ ಅನೇಕ ಹಿಮವಿಜ್ಞಾನಿಗಳು ಅಲ್ಲಿಗೆ ಬರುತ್ತಿದ್ದರು. ಇನ್ನು ಮುಂದೆ ಅಲ್ಲಿ ಯಾವ ಸಂಶೋಧನೆಗಳೂ ನಡೆಯುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ನದಿಯ ಕೆಳಪಾತಳಿಯಲ್ಲಿ ನೇಪಾಳಿ ಲೇಖಕಿ ಮಂಜುಶ್ರೀ ಥಾಪ ಮತ್ತು ಐಸ್‌ಲೆಂಡ್‌ನ ಕವಿ ಆಂಡ್ರಿ ಸ್ನೇರ್ ಮ್ಯಾಗ್ನಸನ್ ಈ ಇಬ್ಬರೂ ಹಿಮನದಿಯ ಸಾವಿನ ಕುರಿತು ನೀಡಿದ ಹೇಳಿಕೆಗಳನ್ನು ‘ಭವಿಷ್ಯದ ದಿನಗಳಿಗೊಂದು ಸಂದೇಶ’ ಎಂಬ ಶಿರೋನಾಮೆಯೊಂದಿಗೆ, ನೇಪಾಳಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಅಮೃತಶಿಲೆಯ ಫಲಕಗಳ ಮೇಲೆ ಸಂದೇಶಗಳನ್ನು ಕೆತ್ತಿದ್ದಾರೆ.

‘ಹಿಂದೂ ಕುಶ್ ಭಾಗದಲ್ಲಿ 54,000 ಹಿಮನದಿಗಳಿವೆ ಮತ್ತು ಸುತ್ತಲಿನ ವಾತಾವರಣದಲ್ಲಿ 426 ಪಿಪಿಎಂನಷ್ಟು (ಪಾರ್ಟ್ಸ್ ಪರ್ ಮಿಲಿಯನ್– 10 ಲಕ್ಷದಲ್ಲಿ 450 ಭಾಗದಷ್ಟು) ಇಂಗಾಲದ ಡೈಆಕ್ಸೈಡ್ ಶೇಖರಣೆಯಾಗಿದೆ. ಇದರಿಂದ ಭೂಮಿ ಬಿಸಿಯಾಗಿ ವಾಯುಗುಣ ಹದಗೆಟ್ಟಿದೆ. ಈ ಶತಮಾನದ ಅಂತ್ಯಕ್ಕೆ ಬಹಳಷ್ಟು ಹಿಮನದಿಗಳು ಕಣ್ಮರೆಯಾಗಲಿವೆ, ಜಗತ್ತಿನಲ್ಲಿ ಏನು ನಡೆಯುತ್ತಿದೆ ಮತ್ತು ನಾವು ಏನು ಮಾಡಬೇಕು ಎಂಬುದನ್ನು ಈ ಫಲಕವು ತಿಳಿಸುತ್ತದೆ’. ಇದು, ಮ್ಯಾಗ್ನಸನ್ ಅವರ ಹೇಳಿಕೆಯುಳ್ಳ ಫಲಕ.

‘ಎತ್ತರದ ಶೀತಲ ಪ್ರದೇಶವೆಂದರೆ ದೇವತೆಗಳು ನೆಲೆಸುವ ದಿವ್ಯಾನುಭೂತಿಯ ಗಮ್ಯಸ್ಥಳ. ಹಿಮ, ಕಲ್ಲು, ಮಣ್ಣು, ಕೆಸರು, ನೀರು, ಆಕಾಶದ ನೀಲಿ, ಎಲ್ಲ ಕಡೆ ಜೀವದ ಕನಸಿದೆ. ನಮಗೆಲ್ಲ ನಾಗರಿಕತೆ ಕಲಿಸಿದ, ನಾವು ಬಳಸುವ, ಪ್ರೀತಿಸುವ, ನಮ್ಮನ್ನು ಪೊರೆಯುವ ಜೀವಿವ್ಯವಸ್ಥೆಯೊಂದು ಬ್ರಹ್ಮಾಂಡದಿಂದ ಕಣ್ಮರೆಯಾಗುತ್ತಿದೆ. ಇದು ನಮ್ಮೆಲ್ಲರ ಸಾಮೂಹಿಕ ವೈಫಲ್ಯ’ ಎನ್ನುವುದು ಲೇಖಕಿ ಥಾಪ ಅವರ ಭಾವನಾತ್ಮಕ ಒಕ್ಕಣೆ.

ಎಂಟು ದೇಶಗಳಲ್ಲಿ ಹರಡಿಕೊಂಡಿರುವ ಹಿಂದೂ ಕುಶ್ ಪರ್ವತ ಶ್ರೇಣಿಯಲ್ಲಿ ಏಳು ದೊಡ್ಡ ಹಿಮನದಿಗಳಿವೆ. ಎರಡು ದಶಕಗಳಿಂದ ಪ್ರತಿವರ್ಷ ಇವುಗಳ ಉದ್ದವನ್ನು ಅಳೆಯಲಾಗುತ್ತಿತ್ತು. ಹಿಮನದಿಗಳು ಕರಗುತ್ತಿದ್ದ ಗತಿ ಮತ್ತು ಪ್ರಮಾಣದ ಕುರಿತಾದ ಮಾಹಿತಿ ಕರಾರುವಾಕ್ಕಾಗಿ ದೊರಕುತ್ತಿತ್ತು. ಕಳೆದ ಅರ್ಧ ಶತಮಾನದಲ್ಲಿ ಭೂಮಿಯ ಹಿಮನದಿಗಳು 1,542 ಶತಕೋಟಿ ಟನ್‌ಗಳಷ್ಟು ಹಿಮವನ್ನು ಕಳೆದುಕೊಂಡಿವೆ ಎಂಬ ಅಂದಾಜು ಇದೆ.

ಹಿಮಯುಗದ ಕಾಲದಲ್ಲೂ ವಾತಾವರಣದ ಇಂಗಾಲದ ಡೈಆಕ್ಸೈಡ್ (ಇಂಡೈ) ಪ್ರಮಾಣ 300 ಪಿಪಿಎಂ ದಾಟಿರಲಿಲ್ಲ. ಒಂದು ಮೈಲಿ ದಪ್ಪದ ಹಿಮದ ಪದರಗಳಲ್ಲಿ ಸಿಕ್ಕಿಕೊಂಡಿರುವ ಇಂಡೈ ಪ್ರಮಾಣ 250 ಪಿಪಿಎಂ ದಾಟಿದರೆ ಹಿಮನದಿ ಕಾಯಿಲೆ ಬೀಳುತ್ತದೆ. ವಾತಾವರಣದ ಇಂಡೈ ಪ್ರಮಾಣವು 350 ಪಿಪಿಎಂಗಿಂತ ಹೆಚ್ಚಾದರೆ ಭೂಮಿಯ ಬಿಸಿ ಹೆಚ್ಚಾಗುತ್ತದೆ. ಔದ್ಯೋಗೀಕರಣಕ್ಕೂ ಮುನ್ನ 250 ಪಿಪಿಎಂ ಇದ್ದ ಇಂಡೈ ಪ್ರಮಾಣ ಈಗ 412 ತಲುಪಿದೆ. ಇದು ಇನ್ನಷ್ಟು ಮುಂದುವರಿದರೆ, ಭೂಮಿ ಮತ್ತಷ್ಟು ಬಿಸಿಯಾಗಿ, ಈ ಶತಮಾನದ ಮಧ್ಯಂತರದ ನಂತರ ಇನ್ನೂರು ಕೋಟಿ ಜನರಿಗೆ ಕುಡಿಯಲು ಬಳಸಲು ಶುದ್ಧ ನೀರೇ ಇರುವುದಿಲ್ಲ. ಏಷ್ಯಾ ಭಾಗದ ಪ್ರಮುಖ ಆರ್ಥಿಕ ನೆಲೆಗಳಿಗೆ ಮತ್ತು ತೀವ್ರಗತಿಯ ಅಭಿವೃದ್ಧಿ ಬಯಸುತ್ತಿರುವ ದೊಡ್ಡ ನಗರಗಳಿಗೆ ಇದರಿಂದ ತೀವ್ರ ತೊಂದರೆಯಾಗಲಿದೆ ಎಂದಿರುವ ತಜ್ಞರು, ಹಿಮನದಿಗಳನ್ನು ಉಳಿಸಿಕೊಳ್ಳಲು ಜಾಗತಿಕ ಪ್ರಯತ್ನಗಳು ತುರ್ತಾಗಿ ನಡೆಯಬೇಕು ಎಂದು ಒತ್ತಾಯಿಸಿದ್ದಾರೆ.

ಹಿಮನದಿಯ ಸಾವಿನ ಬಗ್ಗೆ ಈಗ ಎಲ್ಲಾ ಕಡೆ ಸುದ್ದಿಯಾಗುತ್ತಿದೆ. ‘ಹಿಮನದಿಗಳನ್ನು ಸಂರಕ್ಷಿಸಿ’ ಎಂಬ ಕೂಗು ದೊಡ್ಡದಾಗಿ ಕೇಳಿಸುತ್ತಿದೆ. ಈ ಕೂಗು ಎಷ್ಟು ದಿನ? ಇನ್ನೊಂದು ನೈಸರ್ಗಿಕ ಅವಘಡ ಸಂಭವಿಸುವವರೆಗೆ ಮಾತ್ರ. ಗಂಟೆಗೊಂದು, ದಿನಕ್ಕೊಂದು ನೈಸರ್ಗಿಕ ವಿಕೋಪ ಘಟಿಸುತ್ತಿರುವ ದಿನಗಳಿವು. ಈ ಅವಘಡಗಳಿಗೆ ಪರಸ್ಪರ ಸಂಬಂಧವಿದೆ ಎಂದು ಅರಿತುಕೊಳ್ಳುವ ವ್ಯವಧಾನ ಯಾರಿಗೂ ಇಲ್ಲ. ಅಮೆಜಾನ್ ಕಾಡಿನ ಬೆಂಕಿ, ವಿಲ್ಕಿನ್ಸನ್ ಶೆಲ್ಫ್ ಹಿಮಹಾಸು ವೇಗವಾಗಿ ಕರಗುತ್ತಿರುವುದು, ರಷ್ಯಾ–ಉಕ್ರೇನ್ ಯುದ್ಧ, ಉತ್ತರಾಖಂಡದ ಮೇಘಸ್ಫೋಟ, ಕೊಡಗಿನ ಭೂಕುಸಿತ, ರೈತರು ಭತ್ತದ ಕೂಳೆ ಸುಡುವುದು, ಜನ ಪ್ಲಾಸ್ಟಿಕ್‌ಗೆ ಬೆಂಕಿ ಹಚ್ಚುವುದು, ಕೆರೆಕಟ್ಟೆಗಳಲ್ಲಿ ಮೀನುಗಳ ಅಸಹಜ ಸಾವು, ಬೆಂಗಳೂರಿನ ಕೆರೆಗಳಲ್ಲಿ ಏಳುವ ನೊರೆಬೆಂಕಿ... ಎಲ್ಲವೂ ಒಂದಕ್ಕೊಂದು ಹೆಣೆದುಕೊಂಡಿವೆ.



2022–24ರ ಅವಧಿಯಲ್ಲಿ ಅತಿ ಹೆಚ್ಚು ಹಿಮದ ಕವಚ ಕರಗಿದೆ ಎಂದು ಹವಾಮಾನ ಇಲಾಖೆ ಸ್ಪಷ್ಟಪಡಿಸಿದೆ. ಗಂಗಾ ನದಿಮುಖಜ ಭೂಮಿಯಲ್ಲಿ ಸಾಮಾನ್ಯವಾಗಿ ಇರುತ್ತಿದ್ದ ಹಿಮ ರಾಶಿಗಿಂತ ಶೇ 24ರಷ್ಟು ಕಡಿಮೆ ಇದೆ ಎಂಬುದು ಈ ವರ್ಷದ ಏಪ್ರಿಲ್ ತಿಂಗಳಿನ ಮಾಹಿತಿ. ಕಳೆದ ಕಾಲು ಶತಮಾನದಲ್ಲೇ ಇದು ಅತ್ಯಂತ ಗಂಭೀರ ವಿದ್ಯಮಾನ ಎಂದಿದ್ದ ಐಸಿಐಎಂಒಡಿ, ಬೇಸಿಗೆಯ ಪ್ರಾರಂಭದಲ್ಲೇ ನದಿಯ ಕೆಳಭಾಗಗಳ ಜನರಿಗೆ ನೀರಿನ ಕೊರತೆ ಉಂಟಾಗುತ್ತದೆ ಎಂಬ ಎಚ್ಚರಿಕೆ ನೀಡಿತ್ತು.

ಹಿಮನದಿಗಳು ರಚನೆಗೊಳ್ಳಲು ಲಕ್ಷಾಂತರ ವರ್ಷಗಳು ಬೇಕು. ಪೂರ್ವ ಅಂಟಾರ್ಕ್ಟಿಕಾದ ಲ್ಯಾಂಬರ್ಟ್ ಹಿಮನದಿಯು 400 ಕಿ.ಮೀ. ಉದ್ದ, 80 ಕಿ.ಮೀ. ಅಗಲ ಮತ್ತು 8,200 ಅಡಿ ದಪ್ಪವಿದೆ. ಹಿಮನದಿ ದೊಡ್ಡದಾದಷ್ಟೂ ತನ್ನದೇ ಭಾರಕ್ಕೆ ಸಿಲುಕಿ ನಿಧಾನವಾಗಿ ಚಲಿಸುತ್ತದೆ. ಕೆಲವು ಹಿಮನದಿಗಳು ದಿನಕ್ಕೆ ನೂರು ಅಡಿ ಚಲಿಸಿದರೆ ಇನ್ನು ಕೆಲವು ವರ್ಷಕ್ಕೆ 20 ಇಂಚು ಜಾರುತ್ತವೆ! ಆಗ ತಮ್ಮ ಸಂಪರ್ಕಕ್ಕೆ ಬರುವ ಕಲ್ಲುಬಂಡೆ ಮತ್ತಿತರ ರಚನೆಗಳನ್ನು ತಮ್ಮೊಂದಿಗೆ ಸೆಳೆದುಕೊಂಡು ಸಾಗುತ್ತವೆ. ಹಿಮನದಿ ಕಣಿವೆಯು ಇಂಗ್ಲಿಷ್ ಅಕ್ಷರಮಾಲೆಯ ‘ಯು’ ಆಕಾರದಲ್ಲಿರುತ್ತದೆ.

ಜಗತ್ತಿನ ಒಟ್ಟು ಹಿಮನದಿಗಳ ವಿಸ್ತೀರ್ಣ 7 ಲಕ್ಷ ಚದರ ಕಿ.ಮೀ.ನಷ್ಟಿದೆ. ಅಂಟಾರ್ಕ್ಟಿಕಾದಲ್ಲಿ ಶೇ 91ರಷ್ಟು, ಗ್ರೀನ್‌ಲ್ಯಾಂಡ್‌ನಲ್ಲಿ ಶೇ 8ರಷ್ಟು ಹಿಮನದಿಗಳಿವೆ. ಉಳಿದ ಶೇ 1ರಷ್ಟು ಹಿಮನದಿಗಳು ಉತ್ತರ ಅಮೆರಿಕ, ಏಷ್ಯಾ, ಯುರೋಪ್, ಆಫ್ರಿಕಾದ ಕೆಲ ದೇಶಗಳಲ್ಲಿವೆ. ಆಸ್ಟ್ರೇಲಿಯಾ ಹೊರತುಪಡಿಸಿ ಜಗತ್ತಿನ ಎಲ್ಲ ಭಾಗಗಳಲ್ಲೂ ಹಿಮನದಿಗಳಿವೆ. ಭೂಮಿಯ ಹಲವು ಹಿಮನದಿಗಳು ಈಗಾಗಲೇ ಹರಿವು ನಿಲ್ಲಿಸಿವೆ. 2019ರಲ್ಲಿ ಐಸ್‌ಲೆಂಡ್‌ನ ‘ಒಕೆ’ ಹಿಮನದಿ ಬತ್ತಿಹೋಗಿತ್ತು. ಇದು ಇತಿಹಾಸದಲ್ಲಿ ದಾಖಲಾದ ಹಿಮನದಿಯ ಪ್ರಥಮ ಸಾವು. ಸ್ವಿಟ್ಜರ್‌ಲೆಂಡ್‌ನ ಪಿಜೋಲ್, ಬಸೋಡಿನೊ, ಒರೆಗಾನ್‌ನ ಕ್ಲಾರ್ಕ್ ಮತ್ತು ಮೆಕ್ಸಿಕೊದ ಆಯೋಲೋಕೊ ಹಿಮನದಿಗಳು ಬರಡಾಗಿ ಈಗಾಗಲೇ ಇತಿಹಾಸ ಸೇರಿವೆ.

ಭೂಮಿಯ ಮೇಲೆ ಮನುಷ್ಯನ ಚಟುವಟಿಕೆಗಳಿಂದಾಗಿ ಹುಟ್ಟುವ ಇಂಡೈ ಮತ್ತಿತರ ಶಾಖವರ್ಧಕ ಅನಿಲಗಳು ಹಿಮನದಿಗಳನ್ನು ತ್ವರಿತವಾಗಿ ಕರಗಿಸುತ್ತವೆ. ಬಿಸಿ ಹೆಚ್ಚಾದಾಗ ದೊಡ್ಡ ಊರಿನ ಗಾತ್ರದ ಹಿಮನದಿಯ ಭಾಗಗಳು ಕಳಚಿಕೊಂಡು ಸಮುದ್ರ ಸೇರುತ್ತವೆ. ಆಗ ಸಮುದ್ರದ ಅಲೆಗಳ ಎತ್ತರದಲ್ಲಿ ಏರಿಕೆಯಾಗುತ್ತದೆ. ಸಮುದ್ರದ ಅಲೆಗಳ ಎತ್ತರ ಈಗಾಗಲೇ 18 ಮಿ.ಮೀ.ನಷ್ಟು ಏರಿದೆ. ಅಲೆಗಳ ಎತ್ತರ ಪ್ರತಿ ಮಿಲಿಮೀಟರ್ ಏರಿದಾಗಲೂ ಎರಡರಿಂದ ಮೂರು ಲಕ್ಷದಷ್ಟು ಜನ ನಿರ್ವಸಿತರಾಗುತ್ತಾರೆ. ಜಗತ್ತಿನಲ್ಲಿರುವ ಅಷ್ಟೂ ಶುದ್ಧ ಕುಡಿಯುವ ನೀರು ಹಿಮನದಿಗಳ ರೂಪದಲ್ಲಿದೆ. ಶಾಖವರ್ಧಕ ಅನಿಲಗಳನ್ನು ನಿಯಂತ್ರಿಸಿ ಹಿಮನದಿಗಳನ್ನು ಸಂರಕ್ಷಿಸಲು ಪ್ರಜ್ಞಾಪೂರ್ವಕ ಪ್ರಯತ್ನಗಳು ನಡೆಯಬೇಕು.

ಚುರುಮುರಿ



ಒನ್‌ಟೈಂ ಸೆಟಲ್‌ಮೆಂಟ್

• ಲಿಂಗರಾಜು ಡಿ.ಎಸ್.

‘ಸಾ, ಹಳೇ ಸರ್ಕಾರಗಳು ಯಾವ್ಯಾವೋ ಕೇಸ್ ಹಾಕಿದ್ವಲ್ಲಾ ಅವುನ್ನೆಲ್ಲಾ ವಾಪಾಸ್ ತಕ್ಕಂದಾರಂತೆ. ಅದರಲ್ಲಿ ಎಂಪಿ, ಶಾಸಕರ ಮೇಲೆ ಹಲವಾರು ಕ್ರಿಮಿನಲ್ ಕೇಸು ಬಿದ್ದಿದ್ವಲ್ಲ, ಅವೂ ಸೇರ್ಕಂದವೇನೋ?’ ಸುದ್ದಿ ಸ್ಫೋಟಿಸಿದೆ.

‘ರಾಜಕೀಯದವ್ರ ಕಳ್ಳು-ಬಳ್ಳಿ, ಬಾಮೈಕ್ನುಗಳು ಜನಸೇವೆ ಮಾಡದು ನೋಡನಾರದೆ ಆಗದೋರು ಹೊಟ್ಟುರಕಂದು ಹುನ್ನಾರ ಮಾಡಿರತರೆ ಕನ್ರೋ. ಬಂಡಾಟಕೆಲ್ಲಾ ದಕ್ಕಬಾರದು ಅಂತ ಇವರು ಕೇಸೆಲ್ಲಾ ವಾಪಾಸ್ ತಕ್ಕಂದಿರತರೆ’ ತುರೇಮಣೆ ವಿವರಿಸಿದರು.

‘ಈ ಕೇಸುಗಳಲ್ಲಿ ಈವತ್ತಿನವರಗೂ ಒಬ್ಬ ರಾಜಕೀಯದೋನೂ ಜೈಲಿಗೋಗಿದ್ದು ಕಾಣೆ. ಕೆಳಗಿನ ಕೋರ್ಟು ಶಿಕ್ಷೆ ಕೊಡಿ ಅಂದ್ರೆ ಮೇಲಿನ ಕೋರ್ಟಿಗೋಗಿ ಬೇಲು ತಕ್ಕತರೆ. ಕೇಸು ಮುಗಿಯೋವೊತ್ಗೆ ರಾಜಕಾರಣಿ ವಯಕ್ ಅಂದಿರತನೆ’ ಸಿಟ್ಟುಗಂಡೆ.

‘ಮೊನ್ನೆ ಲೋಕಾಯುಕ್ತಗಳು ಸುಮಾರು ಮಿಕಗಳನ್ನ ಹಿಡಿದಾಕ್ಕವರೆ ಕನ್ರೋ. ಒಬ್ಬ 31 ಸೈಟು ಮಾಡಿದ್ರೆ ಇನ್ನೊಬ್ಬ ಆರು ಕಾಂಪ್ಲೆಕ್ಸ್ ದುಡಿದವ್ನಂತೆ’ ಯಂಟಪ್ಪಣ್ಣ ಬೆರಗಾಯ್ತು.

‘ಅವರುದ್ದೆಲ್ಲಾ ಅಕ್ರಮ ಸಂಪಾದ್ನೆ ಕನಣ್ಣೆ. ಇವರ ವಿರುದ್ಧ ಕ್ರಮ ತಕ್ಕಳಿ ಅಂತ ಲೋಕಾಯುಕ್ತ ಕೊಟ್ಟ ರಿಪೋರ್ಟ್ ಸರ್ಕಾರದ ಮುಂದದಲ್ಲಾ ಇಟ್ಟಾಡುಸ್ತರೆ ಬುಡಿ’ ನಾನು ಸಮಾಧಾನಗೊಂಡೆ.

‘ಸಾವಿರಗಟ್ಲೆ ರಿಪೋರ್ಟ್ ಸರ್ಕಾರದ ಮುಂದೆ ಬಾಕಿ ಅವಲ್ರೋ. ಲೋಕಾಯುಕ್ತ ಕ್ರಮ ತಕ್ಕಳಿ ಅಂದೇಟಿಗೆ ಸರ್ಕಾರ, ‘ಆಯ್ತು ಕನಾ ಹಾಕ್ಕಂದ್ರು ರುಬ್ರಿ’ ಅಂತ ಪರ್ಮಿಸನ್ ಕೊಡಕ್ಕುಲ್ಲ’ ಯಂಟಪ್ಪಣ್ಣ ಶಕುನ ನುಡಿಯಿತು.

‘ದಿಟ ಕನೋ. ಸರ್ಕಾರಕ್ಕೆ ಕೈಖರ್ಚಿಗೆ ಕಾಸು ಬೇಕಲ್ರೋ, ಒನ್‌ಟೈಂ ಸೆಟಲ್‌ಮೆಂಟ್ ಮಾಡಿ ಒಂದೇ ಕಲ್ಲಲ್ಲಿ ಎರಡು ಹಕ್ಕಿ ಹೊಡೀಬೈದು’.

‘ಅದೇನು ಸರಿಯಾಗೇಳಿ ಸಾ?’ ಗೋಗರೆದೆ.

‘ಅಕ್ರಮದಲ್ಲಿ ಸಿಗೇಬಿದ್ದಿರೋ ಶಾಸಕ, ಮಂತ್ರಿ, ಅಧಿಕಾರಿಗಳಿಗೆ ‘ನಿಮ್ಮ ಅಕ್ರಮ ಸಂಪಾದ್ನೇಲಿ ನಲವತ್ತು ಪರ್ಸೆಂಟ್ ಕಾಸು ಸರ್ಕಾರಕ್ಕೆ ಕಂದಾಯ, ಇಪ್ಪತ್ತು ಪರ್ಸೆಂಟ್ ಸಂಬಂಧಿಸಿದ ಮಂತ್ರಿಗೆ ಸಂದಾಯ ಮಾಡಿ ಕ್ಲೀನ್ ಚಿಟ್ ತಕ್ಕಳಿ’ ಅಂದ್ರಾತಲ್ಲ. ಖೇಲ್ ಖತಂ, ನಾಟಕ್ ಬಂದ್’ ತುರೇಮಣೆ ಮಸ್ತು ಐಡಿಯ ಕೊಟ್ರು.

ಸಂಗತ

ಎಲ್ಲೆಡೆ ಕಾರು! ಪಾರ್ಕಿಂಗ್‌ಗೆ ಎಲ್ಲಿದೆ ಜಾಗ?

ಸಾರ್ವಜನಿಕ ಸಾರಿಗೆ ಬಳಕೆಯು ಪಾರ್ಕಿಂಗ್ ಸಮಸ್ಯೆಗೆ ಉತ್ತಮ ಪರಿಹಾರ

• ಬಿ.ಎಸ್. ಭಗವಾನ್

ನನ್ನ ಮಿತ್ರರೊಬ್ಬರಿಗೆ ಬ್ಯಾಂಕಿನಿಂದ ಕಾರು ಕೊಳ್ಳಲು ಸಾಲ ಮಂಜೂರಾಗಿತ್ತು. ಪಾರ್ಟಿ ಕೊಡಿಸಲು ನಾವು ದುಂಬಾಲು ಬಿದ್ದೆವು. ಅದಕ್ಕೆ ಅವರು ‘ಪಾರ್ಟಿ ಏನಿದ್ದರೂ ಪಾರ್ಕಿಂಗ್‌ಗೆ ತಕ್ಕ ಜಾಗ ಸಿಕ್ಕ ನಂತರ’ ಎಂದರು. ಅವರ ಮಾತಿನಲ್ಲಿ ಅರ್ಥವಿದೆ. ವಾಹನವೊಂದನ್ನು ಕೊಳ್ಳುವಷ್ಟೇ ಮಹತ್ವ ಅದರ ನಿಲುಗಡೆಗೆ ಸೂಕ್ತ ಸ್ಥಳ ವ್ಯವಸ್ಥೆ ಮಾಡಿಕೊಳ್ಳುವುದರಲ್ಲೂ ಇದೆ.


ಗ್ರಾಮ, ನಗರವೆಂಬ ಭೇದವಿಲ್ಲದಂತೆ ವಾಹನಗಳ ಸಂಖ್ಯೆ ಶರವೇಗದಲ್ಲಿ ಏರುತ್ತಿದೆ. ಪ್ರಸ್ತುತ ಜಗತ್ತಿನಲ್ಲಿ 150 ಕೋಟಿ ಕಾರುಗಳಿದ್ದು, 2030ರ ವೇಳೆಗೆ ಈ ಸಂಖ್ಯೆ 250 ಕೋಟಿ ಮುಟ್ಟಬಹುದು ಎನ್ನುವ ಅಂದಾಜಿದೆ. ಇಷ್ಟೆಲ್ಲ ವಾಹನಗಳಿಗೆ ಪಾರ್ಕಿಂಗ್ ವ್ಯವಸ್ಥೆ ಮಾಡುವುದು ಹೇಗೆ?

ಪಾರ್ಕಿಂಗ್ ಒಂದು ಜಾಗತಿಕ ಸಮಸ್ಯೆ. ಕೆಲವೊಮ್ಮೆ ಅದು ಸಂಘರ್ಷ ಮತ್ತು ಗೊಂದಲಕ್ಕೂ ಕಾರಣವಾಗುತ್ತದೆ. ವಾಹನ ಹೊಂದಿಲ್ಲದೆ ಇರುವವರೇ ವಿರಳ ಎನ್ನುವಂತಹ ದಿನಗಳಿವು. ನಗರಗಳು ವೇಗವಾಗಿ ಬೆಳೆಯುತ್ತಿವೆ. ಪಾರ್ಕಿಂಗ್‌ಗೆ ಸ್ಥಳಾವಕಾಶ ಕಡಿಮೆಯಾಗುತ್ತಿದೆ. ವಾಹನ ಕೊಂಡ ಮೇಲೆ, ಎಲ್ಲಾದರೂ ಒಂದೆಡೆ ನಮ್ಮ ವಾಹನಗಳನ್ನು ನಿಲ್ಲಿಸಲೇಬೇಕಲ್ಲ. ವಾಹನಗಳನ್ನು ನಿಲ್ಲಿಸಲು ರಸ್ತೆ, ಫುಟ್‌ಪಾತ್ ಒತ್ತುವರಿ ಆಗುವ ಉದಾಹರಣೆಗಳು ಅಧಿಕ. ಮನೆ ಮುಂದೆ ವಾಹನಗಳನ್ನು ನಿಲ್ಲಿಸಿದರೆ ರಸ್ತೆ ಮೊಟಕಾಗುತ್ತದೆ. ಇನ್ನು ಫುಟ್‌ಪಾತ್ ಮೇಲೆ ಪಾರ್ಕಿಂಗ್‌ನಿಂದ ಆಗುವ ಅನನುಕೂಲ ಒಂದೆರಡಲ್ಲ. ವಾಹನಗಳಿಂದ ಕಿಕ್ಕಿರಿದ ಕಾಲುಹಾದಿಯಲ್ಲಿ ಸಂಚರಿಸಲು ವೃದ್ಧರು, ಮಕ್ಕಳು ಒದ್ದಾಡುತ್ತಾರೆ. ಫುಟ್‌ಪಾತ್‌ನ ಚಪ್ಪಡಿ, ಹಾಸುಗಲ್ಲುಗಳು ವಾಹನಗಳ ಭಾರಕ್ಕೆ ಕುಸಿಯುವ ಆತಂಕ ಇದ್ದೇಇದೆ. ಕಂಡಕಂಡಲ್ಲಿ ವಾಹನಗಳನ್ನು ನಿಲ್ಲಿಸಿದರೆ ಪೌರ ಕಾರ್ಮಿಕರ ರಸ್ತೆ ಸ್ವಚ್ಛತಾ ಕಾರ್ಯಕ್ಕೆ ಅಡಚಣೆ ಆಗುತ್ತದೆ.

ಮಿಜೋರಾಂ ಸರ್ಕಾರವು 2010ರಲ್ಲಿ ‘ಸಾರ್ವಜನಿಕರಿಗೆ ಪಾರ್ಕಿಂಗ್ ವ್ಯವಸ್ಥೆಯಿದ್ದರೆ ಮಾತ್ರ ಹೊಸ ಕಾರಿನ ನೋಂದಣಿ’ ಎನ್ನುವ ಕಾಯ್ದೆ ಜಾರಿಗೆ ತಂದಿತು. ಅಲ್ಲಿ ನಗರಗಳ ವ್ಯಾಪ್ತಿಯಲ್ಲಿ ಸಾರ್ವಜನಿಕ ರಸ್ತೆ, ತೆರೆದ ಸ್ಥಳಗಳಲ್ಲಿ ವಾಹನಗಳನ್ನು ನಿಲ್ಲಿಸುವಂತಿಲ್ಲ. ‘ಗೇಟಿನ ಮುಂದೆ ವಾಹನ ನಿಲ್ಲಿಸಬೇಡಿ’ ಎಂದು ಕೆಲವು ಮನೆಗಳ ಮುಂದೆ ಸೂಚನಾ ಫಲಕ ಅಳವಡಿಸಿರುವುದನ್ನು ಕಾಣಬಹುದು. ವಾಹನ ಸವಾರರಲ್ಲಿ ಒಂದು ಮಟ್ಟಿಗಿನ ನಾಗರಿಕ ಪ್ರಜ್ಞೆ ಇದ್ದರೆ ಇಂತಹ ಫಲಕ ಅಳವಡಿಸುವ ಅಗತ್ಯವೇ ಇರದು. ಸಿಕ್ಕಸಿಕ್ಕಲ್ಲಿ ಕಾರು ನಿಲ್ಲಿಸುವುದಲ್ಲದೆ, ಅದನ್ನು ಎಲ್ಲೆಂದರಲ್ಲಿ ತೊಳೆಯುವವರೂ ಉಂಟು. ಇದರಿಂದ ಇತರರಿಗಾಗುವ ತೊಂದರೆ ಎಷ್ಟೆನ್ನುವುದನ್ನು ಮನಸ್ಸಿಗೆ ತಂದುಕೊಳ್ಳಬೇಕು.

ಮಹಾನಗರಗಳಲ್ಲಿ ಉಲ್ಬಣಿಸಿರುವ ಪಾರ್ಕಿಂಗ್ ಸಮಸ್ಯೆಯನ್ನು ತಕ್ಕಮಟ್ಟಿಗಾದರೂ ತಗ್ಗಿಸಲು ಪರ್ಯಾಯ ಸಂಚಾರ ವಿಧಾನಗಳನ್ನು ಅನುಸರಿಸಬೇಕಿದೆ. ಸ್ವಂತ ವಾಹನ ಬಳಸುವುದರಿಂದ ಪ್ರತಿಷ್ಠೆ ಹೆಚ್ಚುತ್ತದೆ ಮತ್ತು ಸಮಯದ ಉಳಿತಾಯ ಆಗುತ್ತದೆ ಎನ್ನುವುದು ಬರೀ ಭ್ರಮೆ. ‘ಕಾರ್ ಪೂಲಿಂಗ್’ ಎನ್ನುವುದು ಒಂದು ಅದ್ಭುತ ಪರಿಕಲ್ಪನೆ. ಒಂದೇ ದಿಕ್ಕಿನಲ್ಲಿರುವ ಕಚೇರಿಗಳನ್ನು ತಲುಪಬೇಕಾದವರು ಒಂದೇ ವಾಹನದಲ್ಲಿ ಪ್ರಯಾಣಿಸುವ ‘ಕಾರ್ ಪೂಲಿಂಗ್’ನಿಂದ ಸಂಚಾರ ದಟ್ಟಣೆ ತಗ್ಗಿಸಬಹುದು; ಪಾರ್ಕಿಂಗ್ ಸಮಸ್ಯೆಯ ತೀವ್ರತೆಯನ್ನೂ ಸ್ವಲ್ಪಮಟ್ಟಿಗೆ ಕಡಿಮೆ ಮಾಡಬಹುದು.

ರಸ್ತೆಗಳಲ್ಲಿನ ವಾಹನಗಳ ಸಂಖ್ಯೆ ‘ಕಾರ್ ಪೂಲಿಂಗ್’ನಿಂದ ಗಣನೀಯವಾಗಿ ಇಳಿಮುಖವಾಗುವುದು. ಹೆಚ್ಚಿನ ವಾಹನ ದಟ್ಟಣೆಯಿಲ್ಲದೆ ಜನ ತಮ್ಮ ಕರ್ತವ್ಯಕ್ಕೆ ಹಾಜರಾಗಬಹುದು. ಮೇಲಾಗಿ ಪ್ರಯಾಣವನ್ನು ಹಂಚಿಕೊಳ್ಳುವ ಒಂದು ಜನವರ್ಗ ರೂಪುಗೊಳ್ಳುವುದು. ಅವರಲ್ಲಿ ಸೌಹಾರ್ದ, ಸ್ನೇಹಭಾವ ವೃದ್ಧಿಸುವುದು. ಇಂಧನ ಉಳಿತಾಯ ಹಾಗೂ ಸಂಚಾರ ನಿಬಿಡತೆ ಕಡಿಮೆಯಾಗಿ ವೈಯಕ್ತಿಕ ಖರ್ಚಿಗೂ ಕಡಿವಾಣ ಬೀಳುವುದು. ಚಾಲಕರ ಮೇಲಿನ ಒತ್ತಡವೂ ಕಡಿಮೆಯಾಗಿ ಅವರ ದಕ್ಷತೆ ಹೆಚ್ಚುವುದು. ಕಾರ್ ಪೂಲಿಂಗ್‌ನಲ್ಲಿ ಭಾಗಿಯಾಗುವ ಪ್ರತಿಯೊಬ್ಬರೂ ರಸ್ತೆಯಿಂದ ಒಂದೊಂದು ಕಾರು ಕಡಿಮೆಯಾಗಲು ಕಾರಣರಾಗಿರುತ್ತಾರೆ!



ವಿಶಾಲ ಬಯಲನ್ನು ವಾಹನಗಳ ನಿಲುಗಡೆಗೆ ಬಳಸಿಕೊಳ್ಳಬಹುದಾದ ಸಾಧ್ಯತೆಯಿದೆ. ಆದರೆ, ಬೇಕೆಂದಾಗ ವಾಹನಗಳನ್ನು ಹೊರತೆಗೆಯಲು ತೊಂದರೆಯಾಗುವಂತೆ ಇದ್ದರೆ ಬಯಲಿನಲ್ಲಿ ವಾಹನಗಳ ನಿಲುಗಡೆಯೂ ಸಮಸ್ಯೆಯೇ. ಪಾರ್ಕಿಂಗ್ ವ್ಯವಸ್ಥೆ ಸುಸ್ಥಿರವಾಗಿರದಿದ್ದರೆ ಸುಗಮ ಸಂಚಾರ, ಸಂಪರ್ಕ ಹೇಗೆ ತಾನೆ ಸಾಧ್ಯ? ಹಾಗಾಗಿ, ‘ನಿಲುಗಡೆ’ ಎಂಬ ದೈನಿಕ ತಾಕಲಾಟವನ್ನು ಪರಿಹರಿಸಿಕೊಳ್ಳಬೇಕಿದೆ. ವಾಹನಗಳು ಸಾಗದೆ ದಟ್ಟಣೆ ಉಂಟಾದರೆ, ಅವು ಹೊಗೆ ಕಾರುತ್ತಿದ್ದರೆ ಗುಣಮಟ್ಟದ ಗಾಳಿಗೂ ಸಂಚಕಾರ. ಜೊತೆಗೆ ಆರ್ಥಿಕ ಹಿನ್ನಡೆಯೂ ಆದೀತು.

ಮೇಲ್ನೋಟಕ್ಕೆ ಕಾರು ಐಷಾರಾಮಿ ಎನ್ನುವಂತೆ ಕಾಣಿಸಿದರೂ ಅದು ನಮ್ಮ ಬದುಕಿನ ಗುಣಮಟ್ಟವನ್ನು ಸೊರಗಿಸುತ್ತದೆ. ಕಾರು ಇಲ್ಲದಿರುವುದೇ ನೆಮ್ಮದಿ ಎನ್ನುವುದು ಕೆಲವರ ಅನುಭವಕ್ಕಾದರೂ ಬಂದೇ ಇರುತ್ತದೆ. ಬೈಕ್, ಲಾರಿ, ಕಾರು, ಬಸ್ ಮುಂತಾದವುಗಳ ಉತ್ಪಾದನಾ ವೆಚ್ಚ ಹಾಗೂ ರಸ್ತೆಗಳ ತಾಳಿಕೆ ಬಾಳಿಕೆ ಬಗ್ಗೆಯೂ ನಾವು ಯೋಚಿಸಬೇಕು. ಕರಿಬೇವು, ಸಾಸಿವೆ ತರಲಿಕ್ಕೂ ಕಾರು ಎನ್ನುವುದು ಸರಿಯಲ್ಲ. ಸಾರ್ವಜನಿಕ ಸಾರಿಗೆ ಬಳಕೆಯು ಪಾರ್ಕಿಂಗ್ ಸಮಸ್ಯೆಗೆ ಉತ್ತಮ ಪರಿಹಾರ. ನಡಿಗೆ, ಬೈಸಿಕಲ್ ಬಳಕೆಯ ಹಿಂದಿರುವ ಪರಿಸರ ಕಾಳಜಿಯ ಬದ್ಧತೆ ಸಾಮಾನ್ಯವಾದುದಲ್ಲ.

ವಾಚಕರ ವಾಣಿ

ಭಾಷಾಂತರ: ಆಗದಿರಲಿ ಅವಾಂತರ

ಏಳು ಕೋಟಿ ಕನ್ನಡಿಗರಿರುವ, ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಕರ್ನಾಟಕದಲ್ಲಿ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡಲು ಅರ್ಹರು ಇಲ್ಲವೆನ್ನುವಂತೆ, ಇತ್ತೀಚೆಗೆ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡಲು ತಂತ್ರಾಂಶ ಆಧಾರಿತ ಪರಿಕರಗಳ ಮೊರೆಹೋಗುವ ಚಾಳಿ ಹೆಚ್ಚಾಗಿದೆ. ಈ ಬಗೆಯ ಅನುವಾದವಂತೂ ಕನ್ನಡ ಮತ್ತು ಕನ್ನಡಿಗರ ಬಗೆಗೆ ಕನಿಕರ ಉಂಟಾಗುವಂತೆ ಇರುತ್ತದೆ. ಹೊರರಾಜ್ಯದಲ್ಲಿ ಈ ರೀತಿ ಮಾಡಿದರೆ ಕ್ಷಮಿಸಬಹುದು. ಕನ್ನಡನಾಡಿನಲ್ಲಿಯೇ ಕನ್ನಡಕ್ಕೆ ಇಂತಹ ದುರ್ಗತಿ ಬಂದರೆ ಸಹಿಸಲಾಗದು.

ಕೆಲವು ಮಾಲ್‌ಗಳಲ್ಲಿನ ನಾಮಫಲಕ ಮತ್ತು ಡಿಸ್‌ಪ್ಲೇ ಬೋರ್ಡ್‌ಗಳಲ್ಲಿ ಈ ರೀತಿ ಅನುವಾದಗೊಂಡಿರುವ ಕನ್ನಡವೇ ವಿಜೃಂಭಿಸತೊಡಗಿದ್ದು, ಆ ಕನ್ನಡವನ್ನು ನೋಡಿದಾಗ ಅಯ್ಯೋ ಎನಿಸುತ್ತದೆ. ವಿಪರ್ಯಾಸವೆಂದರೆ, ಕೆಲವು ಕಚೇರಿಗಳಲ್ಲಿ ಹಾಕುವ ಬೋರ್ಡ್‌ಗಳಲ್ಲೂ ಈ ಅಧ್ವಾನ ಎದ್ದು ಕಾಣುತ್ತದೆ. ಈ ಬಗೆಯ ಅನುವಾದವನ್ನೇ ಸಂಪೂರ್ಣವಾಗಿ ಅವಲಂಬಿಸದೆ, ಅದನ್ನು ಎಷ್ಟು ಬೇಕೋ ಅಷ್ಟು ಮಾತ್ರ ಬಳಸಿಕೊಂಡು, ಅನುವಾದದಲ್ಲಿ ಹಿಡಿತ ಸಾಧಿಸುವ ರೀತಿಯಲ್ಲಿ ತರಬೇತಿ ನೀಡುವತ್ತ ಗಮನ ಕೇಂದ್ರೀಕರಿಸಬೇಕಾಗಿದೆ.

ರಮಾನಂದ ಶರ್ಮಾ, ಬೆಂಗಳೂರು

ಸಾಬೀತಾಗಿದೆ ಹಸಿರು ಮೇವಿನ ಮಹಿಮೆ

ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ನಿತ್ಯದ ಹಾಲು ಸಂಗ್ರಹ ಒಂದು ಕೋಟಿ ಲೀಟರ್ ದಾಟಿರುವುದು ಸಾರ್ವಕಾಲಿಕ ದಾಖಲೆಯಾಗಿದೆ. ಇದಕ್ಕೆ ಕಾರಣ ವರುಣ ಮಹಾಶಯ! ಈ ವರ್ಷ ಫೆಬ್ರುವರಿ ಕೊನೆಯ ವಾರದಿಂದ ರಾಜ್ಯದ ವಿವಿಧೆಡೆ ವರುಣನ ಸಿಂಚನ ಸಮೃದ್ಧ ಹಸಿರು ಮೇವಿಗೆ ಮುಖ್ಯ ಕಾರಣವಾಯಿತು. ಇದು ಜಾನುವಾರುಗಳಿಗೆ ವರದಾನವಾಗಿ ಒದಗಿಬಂದಿತು. ಬೇರೆ ಯಾವುದೇ ಕೃತಕ ಹಿಂಡಿ, ಕ್ಯಾಟಲ್ ಫೀಡ್, ಒಣಹುಲ್ಲಿಗಿಂತ ಹಸಿರು ಮೇವು ಸಮೃದ್ಧ ಹಾಲಿಗೆ ಅಗತ್ಯ ಎಂಬುದನ್ನು ಇದು ಸಾರಿ ಹೇಳುವಂತಿದೆ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಬ್ಯಾಂಕ್ ಕನಿಷ್ಠ ಮೊತ್ತಕ್ಕೆ ವಿನಾಯಿತಿ ಸ್ವಾಗತಾರ್ಹ

ಉಳಿತಾಯ ಖಾತೆಗಳಲ್ಲಿ ಕನಿಷ್ಠ ಮೊತ್ತ ಕಾಯ್ದುಕೊಳ್ಳದಿದ್ದರೆ ವಿಧಿಸುತ್ತಿದ್ದ ದಂಡ ಶುಲ್ಕಕ್ಕೆ ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ ಜೂನ್ 1ರಿಂದ ವಿನಾಯಿತಿ ನೀಡಿರುವುದು ಸ್ವಾಗತಾರ್ಹ. ಬಡವರು, ಮಧ್ಯಮ ವರ್ಗದವರು ಆರ್ಥಿಕ ಸಂಕಷ್ಟದ ಪರಿಸ್ಥಿತಿಯಲ್ಲಿ ತಮ್ಮ ಬ್ಯಾಂಕ್ ಖಾತೆಯಲ್ಲಿನ ಅಲ್ಪ ಸ್ವಲ್ಪ ಹಣವನ್ನು ಹಿಂಪಡೆಯಲು ಪರಿತಪಿಸುವಂತೆ ಆಗಿದೆ. ಆದ್ದರಿಂದ ಗ್ರಾಹಕರ ಉಳಿತಾಯ ಖಾತೆಗಳಲ್ಲಿ ಕನಿಷ್ಠ ಮೊತ್ತ ಕಾಯ್ದುಕೊಳ್ಳುವಿಕೆಗೆ ಎಲ್ಲಾ ಬ್ಯಾಂಕ್‌ಗಳು ವಿನಾಯಿತಿ ನೀಡಿ ಗ್ರಾಹಕರಿಗೆ ಅನುಕೂಲ ಮಾಡಿಕೊಡಬೇಕು.

ಭಾಸ್ಕರ್ ಶೆಟ್ಟಿ, ಹಾಸನ

ಚರ್ಚೆಗೆ ಬಹಳಷ್ಟು ವಿಷಯಗಳಿವೆ

ಸಾಹಿತಿ ಪ್ರೊ. ಹಂಪ ನಾಗರಾಜಯ್ಯ ಅವರ ‘ಕನ್ನಡ– ತಮಿಳು: ಒಂದೇ ಬೇರು, ಭಿನ್ನ ಕವಲು’ ಎಂಬ ಲೇಖನ (ಪ್ರ.ವಾ., ಮೇ 31) ದ್ರಾವಿಡ ಭಾಷೆಗಳ ಬಗ್ಗೆ ಬಹಳಷ್ಟು ಮಾಹಿತಿಯನ್ನು ನೀಡಿತು. ಯಾವುದೇ ಭಾಷೆಯ ನಟ ನಟಿಯರು ಯಾವುದೇ ಭಾಷೆಗೂ ರಾಯಭಾರಿಗಳಾಗಿರುವುದಿಲ್ಲ. ಅವರು ಎಷ್ಟೇ ಖ್ಯಾತನಾಮರಾದರೂ ಭಾಷೆಯ ಬಗ್ಗೆ ತಿಳಿಯದೆ, ಅದನ್ನು ಆಳವಾಗಿ ಅಭ್ಯಾಸ ಮಾಡದೆ ಅದರ ಬಗ್ಗೆ ಹೇಳಿಕೆಯನ್ನು ಕೊಡುವುದು ತಪ್ಪು. ನೆಚ್ಚಿನ ನಟ ಕಮಲ್ ಹಾಸನ್ ಅವರು ಕರ್ನಾಟಕದಲ್ಲೂ ದೊಡ್ಡ ಅಭಿಮಾನಿ ಬಳಗವನ್ನು ಹೊಂದಿದ್ದಾರೆ. ಹೀಗಿರುವಾಗ, ಒಂದು ಭಾಷೆಯ ಬಗ್ಗೆ ಸಂಪೂರ್ಣ ತಿಳಿವಳಿಕೆ ಇಲ್ಲದೆ ಅವರು ಹೇಗೆ ಮಾತನಾಡುತ್ತಾರೆ?

ದೇಶದಾದ್ಯಂತ ಬೇಕಾದಷ್ಟು ವಿಚಾರಗಳು ಚರ್ಚೆಗೆ ಒಳಗಾಗಲು ಸಾಲುಗಟ್ಟಿ ನಿಂತಿವೆ. ಸಾಧ್ಯವಾದರೆ ಅವುಗಳ ಕುರಿತು ನಮ್ಮ ನಟರು ಗಮನ ಸೆಳೆಯಲಿ, ಆರೋಗ್ಯಕರ ಚರ್ಚೆಗೆ ಯುವಜನರನ್ನು ಪ್ರೇರೇಪಿಸಲಿ.

ರೇಶ್ಮಾ ಗುಳೇದಗುಡ್ಡಕರ್, ಕೊಟ್ಟೂರು

ಅಭ್ಯರ್ಥಿಗಳ ಗೋಳು ಕೇಳುವವರು ಯಾರು?

ಬೇಡದ ಕಾರಣಗಳಿಗಾಗಿ ಕರ್ನಾಟಕ ಲೋಕಸೇವಾ ಆಯೋಗವು (ಕೆಪಿಎಸ್‌ಸಿ) ಪದೇ ಪದೇ ಸುದ್ದಿಯಾಗುತ್ತಿದೆ. ಈಗ ಆಯೋಗದ ಅಧ್ಯಕ್ಷ ಮತ್ತು ಸದಸ್ಯರ ಮಧ್ಯೆ ಸಮನ್ವಯದ ಕೊರತೆ ಮತ್ತು ಕಿತ್ತಾಟವು ಸುದ್ದಿಗೆ ಗ್ರಾಸ ಒದಗಿಸಿರುವುದು (ಪ್ರ.ವಾ., ಜೂನ್ 2) ಅಕ್ಷಮ್ಯ. ನೇಮಕಾತಿ ಪ್ರಕ್ರಿಯೆಗೆ ತೊಡರಾಗುವ ರೀತಿಯಲ್ಲಿ ಈ ಒಳಬೇಗುದಿ ಉಲ್ಬಣಿಸಿರುವುದು ಸರಿಯಲ್ಲ.

ಒಂದು ಪರೀಕ್ಷೆಯ ಸಿದ್ಧತೆಗೆ ಉದ್ಯೋಗ ಆಕಾಂಕ್ಷಿಗಳು ಹಾಕುವ ಶ್ರಮದ ಬೆಲೆ ಆಯೋಗದ ಸದಸ್ಯರಿಗೆ ತಿಳಿದಂತಿಲ್ಲ. ಸಮಯದ ಮಹತ್ವವೂ ಅವರಿಗೆ ಮನವರಿಕೆಯಾದಂತಿಲ್ಲ. ಅಭ್ಯರ್ಥಿಗಳ ಗೋಳು ಕೇಳುವವರೇ ಇಲ್ಲವಾಗಿದೆ. ಆದಕಾರಣ, ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ಸಮಸ್ಯೆ ಬಗೆಹರಿಸಬೇಕು. ನೇಮಕಾತಿ ಪ್ರಕ್ರಿಯೆ ನನೆಗುದಿಗೆ ಬೀಳಲು ಅವಕಾಶ ಕೊಡಬಾರದು.

ಶಿವರಾಜ್ ಎನ್., ಕಲಬುರಗಿ

ಅತಿಥಿ ಉಪನ್ಯಾಸಕರಿಗೆ ಇಡುಗಂಟು ಸ್ವಾಗತಾರ್ಹ

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕೆಲಸ ಮಾಡಿ 60 ವರ್ಷ ತುಂಬಿದವರಿಗೆ ₹5 ಲಕ್ಷ ಇಡುಗಂಟು ನೀಡಲು ಸರ್ಕಾರ ಆದೇಶಿಸಿರುವುದು ಸ್ವಾಗತಾರ್ಹ. ಇದರಿಂದ ಸಾವಿರಾರು ಉಪನ್ಯಾಸಕರಿಗೆ ಅನುಕೂಲವಾಗುತ್ತದೆ. ಅತಿಥಿ ಉಪನ್ಯಾಸಕರ ಸೇವೆಯನ್ನು ಕಾಯಂಗೊಳಿಸಬೇಕು ಎಂಬುದು ಅವರ ಬಹುದಿನಗಳ ಬೇಡಿಕೆ. ವಿವಿಧ ಕಾರಣಗಳಿಂದ ಅದು ಸದ್ಯಕ್ಕೆ ಈಡೇರಿಲ್ಲ. ಆದರೂ ಸರ್ಕಾರ ಆಗಾಗ ಅವರ ವೇತನವನ್ನು ಏರಿಸುತ್ತಲೇ ಬಂದಿದೆ. ಇದೀಗ ₹5 ಲಕ್ಷ ಇಡುಗಂಟು ನೀಡುವ ಮಹತ್ವದ ನಿರ್ಧಾರ ತೆಗೆದುಕೊಂಡಿದೆ. ಸರ್ಕಾರದ ಈ ಕ್ರಮ ಮೆಚ್ಚುಗೆಗೆ ಅರ್ಹ.

ಕೆ.ವಿ.ವಾಸು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪ್ರಜಾವಾಣಿ ವಾರ್ತೆ

ಲೈಂಗಿಕ ದೌರ್ಜನ್ಯ ಬಾಲ್ಯದಲ್ಲೇ ಸಂತ್ರಸ್ತರು



ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ (ಎಸ್‌ವಿಎಸಿ) ಜಾಗತಿಕ ಮಟ್ಟದಲ್ಲಿ ದೊಡ್ಡ ಪಿಡುಗಾಗಿದ್ದರೂ ಅದರ ಬಗ್ಗೆ ಹೆಚ್ಚು ಅಧ್ಯಯನಗಳು ನಡೆದಿಲ್ಲ ಮತ್ತು ಅದಕ್ಕೆ ಸಂಬಂಧಿಸಿದ ಅಂಕಿಅಂಶದ ಲಭ್ಯತೆ ಕೂಡ ಕಡಿಮೆ. ಹೆಣ್ಣು ಹಾಗೂ ಗಂಡು ಮಕ್ಕಳು ಲೈಂಗಿಕ ದೌರ್ಜನ್ಯಕ್ಕೆ ಗುರಿಯಾಗುತ್ತಿದ್ದು, ಅದು ಅವರ ಭವಿಷ್ಯದ ಮೇಲೂ ಪರಿಣಾಮ ಬೀರುತ್ತಿದೆ. ಇದು ಒಂದು ಪ್ರದೇಶಕ್ಕೆ ಸೀಮಿತವಾಗಿಲ್ಲದೇ, ಜಾಗತಿಕ ಸಮಸ್ಯೆಯಾಗಿದೆ.

'ದಿ ಲ್ಯಾನ್ಸೆಟ್' ಜರ್ನಲ್‌ನಲ್ಲಿ ಇತ್ತೀಚೆಗೆ ಪ್ರಕಟವಾಗಿರುವ ಅಧ್ಯಯನ ವರದಿಯು ಜಾಗತಿಕ ಮಟ್ಟದಲ್ಲಿ ಮಕ್ಕಳ ಮೇಲೆ ಆಗುತ್ತಿರುವ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ಸಂಪೂರ್ಣ ನೋಟವನ್ನು ನೀಡುತ್ತಿದೆ.1990ರಿಂದ 2023ರವರೆಗೆ 204 ದೇಶಗಳಲ್ಲಿ ಎಲ್ಲ ವಯೋಮಾನದ ಪುರುಷ ಮತ್ತು ಮಹಿಳೆಯರನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಲೈಂಗಿಕ ದೌರ್ಜನ್ಯದ ಸಂತ್ರಸ್ತರಲ್ಲಿ ಅರ್ಧದಷ್ಟು (ಶೇ 50ರಷ್ಟು) ಮಂದಿ 15 ವರ್ಷ ಮತ್ತು ಅದಕ್ಕಿಂತ ಮೊದಲೇ ಮೊದಲ ಬಾರಿಗೆ ದೌರ್ಜನ್ಯಕ್ಕೆ ಒಳಗಾಗಿದ್ದಾರೆ ಎಂದು ವರದಿ ತಿಳಿಸಿದೆ.

ಜಗತ್ತಿನಲ್ಲಿ ಐವರಲ್ಲಿ ಒಬ್ಬ ಮಹಿಳೆ (ಶೇ 18.9) ಮತ್ತು ಏಳರಲ್ಲಿ ಒಬ್ಬ ಪುರುಷ (ಶೇ 14.8) 18 ವರ್ಷ ಮುಟ್ಟುವ ಮುನ್ನವೇ ಲೈಂಗಿಕ ದೌರ್ಜನ್ಯಕ್ಕೆ ಗುರಿಯಾಗಿರುತ್ತಾರೆ. 13–24 ವರ್ಷ ವಯಸ್ಸಿನ ಸಂತ್ರಸ್ತರ ಪೈಕಿ ಶೇ 67ರಷ್ಟು ಮಹಿಳೆಯರು, ಶೇ 72ರಷ್ಟು ಪುರುಷರು ತಮ್ಮ ಬಾಲ್ಯದಲ್ಲಿ ಅಂದರೆ, 19 ವರ್ಷಕ್ಕೆ ಕಾಲಿಡುವುದಕ್ಕೂ ಮೊದಲು ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದಾರೆ.

ಸಂತ್ರಸ್ತರ ಪ್ರಮಾಣ ದೇಶದಿಂದ ದೇಶಕ್ಕೆ ಭಿನ್ನವಾಗಿದೆ. ಭಾರತದಲ್ಲಿ ಶೇ 30.8 ಮಹಿಳೆಯರು ಮತ್ತು ಶೇ 13.5ರಷ್ಟು ಪುರುಷರು ಸಂತ್ರಸ್ತರಾಗಿದ್ದಾರೆ. ಅಮೆರಿಕದಲ್ಲಿ ಈ ಪ್ರಮಾಣ ಮಹಿಳೆಯರಲ್ಲಿ ಶೇ 27.5 ಮತ್ತು ಪುರುಷರಲ್ಲಿ 16.1 ಇದ್ದರೆ, ಬ್ರಿಟನ್‌ನಲ್ಲಿ ಕ್ರಮವಾಗಿ ಶೇ 24.4 ಮತ್ತು ಪುರುಷರ ಶೇ 16.5 ಸಂತ್ರಸ್ತರಿದ್ದಾರೆ. ಭಾರತದಲ್ಲಿ 20–24 ವರ್ಷ ವಯಸ್ಸಿನವರ ಪೈಕಿ ಶೇ 26.9ರಷ್ಟು ಮಹಿಳೆಯರು ಮತ್ತು ಶೇ 9.4ರಷ್ಟು ಪುರುಷರು ಬಾಲ್ಯದಲ್ಲಿಯೇ ಲೈಂಗಿಕ ದೌರ್ಜನ್ಯ ಅನುಭವಿಸಿದ್ದಾರೆ.

ಸಮಾಜದಲ್ಲಿ ಲೈಂಗಿಕ ದೌರ್ಜನ್ಯ ಪ್ರವೃತ್ತಿ ಗಮನಾರ್ಹ ಪ್ರಮಾಣದಲ್ಲಿ ಇರುವುದು ಮಾತ್ರವಲ್ಲದೇ ಮುಂದುವರಿಯುತ್ತಲೂ ಇದೆ. ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯದಲ್ಲಿ ಭಾರತವು ಜಗತ್ತಿನಲ್ಲಿ ಇಂತಹ ಕೃತ್ಯಗಳು ಗಮನಾರ್ಹ ಪ್ರಮಾಣದಲ್ಲಿ ನಡೆಯುತ್ತಿರುವ ರಾಷ್ಟ್ರಗಳ ಸಾಲಿನಲ್ಲಿದೆ. ಕೋಸ್ಟರಿಕಾ, ಚಿಲಿ, ಸೊಲೋಮನ್ ದ್ವೀಪಗಳಲ್ಲಿ ಈ ಪ್ರಮಾಣ ಜಾಸ್ತಿ ಇದೆ.

ದೌರ್ಜನ್ಯವು ಮಕ್ಕಳ ಹಕ್ಕುಗಳು ಮತ್ತು ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ದೊಡ್ಡ ಪಿಡುಗಾಗಿದೆ. ಇದು ಅಪರಾಧ ಚಟುವಟಿಕೆ ಮಾತ್ರ ಆಗಿರದೇ ಸಮಾಜದ ಸ್ವಾಸ್ಥದ ಮೇಲೆ ಗಂಭೀರ ಪರಿಣಾಮಗಳನ್ನು ಬೀರುತ್ತದೆ. ಇದನ್ನು ಎದುರಿಸುವುದಕ್ಕಾಗಿ ಅರಿವು ಕಾರ್ಯಕ್ರಮಗಳು, ನೀತಿ ನಿಯಮಗಳಲ್ಲಿ ಬದಲಾವಣೆ ಆಗಬೇಕಿದೆ ಎಂದು ಅಧ್ಯಯನಕಾರರು ಪ್ರತಿಪಾದಿಸಿದ್ದಾರೆ.

ಜಾಗತಿಕ ಮಟ್ಟದಲ್ಲಿ ಮಕ್ಕಳ ಮೇಲೆ ದೊಡ್ಡ ಪ್ರಮಾಣದಲ್ಲಿ ಲೈಂಗಿಕ ದೌರ್ಜನ್ಯ ನಡೆಯುತ್ತಿದೆ; ಭಾರತದಲ್ಲಿ ಪ್ರತಿ ಮೂವರಲ್ಲಿ ಒಬ್ಬ ಮಹಿಳೆ ಮೇಲೆ ಮತ್ತು ಏಳರಲ್ಲಿ ಒಬ್ಬ ಪುರುಷನ ಮೇಲೆ ಬಾಲ್ಯದಲ್ಲೇ (18 ವರ್ಷ ವಯಸ್ಸಿಗೂ ಮೊದಲೇ) ಲೈಂಗಿಕ ದೌರ್ಜನ್ಯ ನಡೆದಿರುತ್ತದೆ ಎಂದು 'ದಿ ಲ್ಯಾನ್ಸೆಟ್' ಅಧ್ಯಯನ ವರದಿ ಹೇಳುತ್ತದೆ. ವಿಶ್ವದ ಇನ್ನೂರಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ಅಧ್ಯಯನ ನಡೆಸಲಾಗಿದ್ದು, ಅರ್ಧದಷ್ಟು ಪ್ರಕರಣಗಳು ಸಂತ್ರಸ್ತರಿಗೆ 15 ವರ್ಷ ವಯಸ್ಸಾಗುವ ಮುನ್ನವೇ ನಡೆದಿವೆ ಎಂದು ವರದಿ ಹೇಳಿದೆ. ಜಗತ್ತಿನಲ್ಲಿ ಇಂತಹ ಅಧ್ಯಯನ ಇದೇ ಮೊದಲ ಬಾರಿಗೆ ನಡೆದಿದೆ ಎಂದು ಪ್ರತಿಪಾದಿಸಲಾಗಿದ್ದು, ಅದರಲ್ಲಿರುವ ವಿಚಾರಗಳು ಮಕ್ಕಳ ಹಕ್ಕುಗಳು ಮತ್ತು ಅವರ ಭವಿಷ್ಯದ ದೃಷ್ಟಿಯಿಂದ ಮಹತ್ವದ್ದೆನಿಸಿವೆ

ಸಂತ್ರಸ್ತರು ಇನ್ನಷ್ಟು ಹೆಚ್ಚು?

ವಾಸ್ತವದಲ್ಲಿ ಸಂತ್ರಸ್ತರ ಪ್ರಮಾಣ ಹಾಗೂ ಸಮಸ್ಯೆಯ ವ್ಯಾಪ್ತಿ ಇನ್ನೂ ಹಿರಿದಾಗಿರಬಹುದು ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ. ಸಮೀಕ್ಷೆಗಳನ್ನು ಮಾಡುವ ರೀತಿಯೂ ಪ್ರಕರಣಗಳು ಹೊರಬರದಿರುವುದಕ್ಕೆ ಕಾರಣ ಆಗಬಹುದು. ನೇರವಾಗಿ ಮಾತನಾಡಿಸಿದಾಗ ಹೇಳಲಾಗದ ಎಷ್ಟೋ ವಿಚಾರಗಳನ್ನು ಕೆಲವರು ಪರೋಕ್ಷ ರೀತಿಗಳಲ್ಲಿ ತಿಳಿಸುತ್ತಾರೆ. 63 ದೇಶಗಳಲ್ಲಿ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳಿಗೆ ಸಂಬಂಧಿಸಿದಂತೆ ಮಾಹಿತಿಯೇ ಇರಲಿಲ್ಲ. ಮಾಹಿತಿ ಲಭ್ಯವಿದ್ದ ದೇಶಗಳಲ್ಲಿಯೂ ಒಂದು ವರ್ಷದ ದತ್ತಾಂಶ ಮಾತ್ರ ಲಭ್ಯ ಇತ್ತು. ಇದರಿಂದ ಪ್ರಕರಣಗಳಿಗೆ ಸಂಬಂಧಿಸಿದ ಪ್ರವೃತ್ತಿಗಳನ್ನು, ಅಸ್ತಿತ್ವದಲ್ಲಿರುವ ನೀತಿಗಳಿಗೂ ಪ್ರಕರಣಗಳ ಸಂಖ್ಯೆಗೂ ಇರಬಹುದಾದ ಸಂಬಂಧದ ಬಗ್ಗೆ ಅಧ್ಯಯನ ಮಾಡಲು ಅಡಚಣೆಯಾಯಿತು ಎಂದು ಅಧ್ಯಯನಕಾರರು ವರದಿಯಲ್ಲಿ ಉಲ್ಲೇಖಿಸಿದ್ದಾರೆ.


ಪರಿಣಾಮ ಏನೇನು?

- ಮಕ್ಕಳ ಸುರಕ್ಷತೆ ಮತ್ತು ಆರೋಗ್ಯಕ್ಕೆ ಧಕ್ಕೆ
- ಒತ್ತಡ, ಖಿನ್ನತೆಯಿಂದಾಗಿ ಮಾನಸಿಕ ಆರೋಗ್ಯ ಹಾಳು
- ಮದ್ಯಪಾನ ಸೇರಿದಂತೆ ಇತರ ದುಶ್ಚಟಗಳಿಗೆ ಬಲಿಯಾಗುವ ಸಾಧ್ಯತೆ
- ವೈಯಕ್ತಿಕ ಅಭಿವೃದ್ಧಿಯ ಮೇಲೆ ಪರಿಣಾಮ
- ಶಿಕ್ಷಣ, ವೃತ್ತಿ ಜೀವನ, ಆರ್ಥಿಕ ಸಾಧನೆಗೆ ಹಿನ್ನಡೆ
- ಸಂತ್ರಸ್ತರು ಮಾತ್ರವಲ್ಲದೆ ಅವರ ಪೋಷಕರು, ಕುಟುಂಬ ಸದಸ್ಯರ ಮೇಲೂ ವ್ಯತಿರಿಕ್ತ ಪರಿಣಾಮ ಬೀರುವ ಸಂಭವ
- ದೌರ್ಜನ್ಯಕ್ಕೆ ಒಳಗಾದವರು ಅಪರಾಧ ಕೃತ್ಯಗಳು ಸೇರಿದಂತೆ ಸಮಾಜಘಾತುಕ ಚಟುವಟಿಕೆಗಳಲ್ಲಿ ತೊಡಗುವ ಅಪಾಯ


ತಡೆಗೆ ಏನಾಗಬೇಕು?

- ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ ವಿರುದ್ಧ ದೇಶ ಮತ್ತು ಜಾಗತಿಕ ಮಟ್ಟದಲ್ಲಿ ನಿಗಾ ವ್ಯವಸ್ಥೆ ಬೇಕು
- ಸಂತ್ರಸ್ತರು ಮತ್ತು ಅವರ ಕುಟುಂಬಗಳಿಗೆ ಬೆಂಬಲವಾಗಿ ನಿಲ್ಲುವ ಯೋಜನೆಗಳು ಅಗತ್ಯ
- ಆರೋಗ್ಯ, ಶೈಕ್ಷಣಿಕ, ನ್ಯಾಯ ವ್ಯವಸ್ಥೆ ಮತ್ತು ಸಾಮಾಜಿಕ ಕಲ್ಯಾಣ ವ್ಯವಸ್ಥೆಗಳ ಸುಧಾರಣೆ
- ಸುಸ್ಥಿರ ಅಭಿವೃದ್ಧಿ ಗುರಿಗಳಂತಹ (ಎಸ್‌ಡಿಜಿ) ಜಾಗತಿಕ ಮಟ್ಟದ ಮತ್ತಷ್ಟು ಕಾರ್ಯಕ್ರಮಗಳ ಅವಶ್ಯಕತೆ

ಬಾಲ್ಯದಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರು ಮತ್ತು ಪುರುಷರ ಪ್ರಮಾಣ (%ಗಳಲ್ಲಿ)



ಮೂರು ದಶಕಗಳ ಅಂಕಿ ಅಂಶಗಳನ್ನು ಗಮನಿಸಿದರೆ ದೌರ್ಜನ್ಯ ನಡೆದಿರುವ ಪ್ರಮಾಣ ಸ್ಥಿರವಾಗಿದೆ. ಜಾಗತಿಕ ಮಟ್ಟದ ದತ್ತಾಂಶಗಳಿಗೆ ಹೋಲಿಸಿದರೆ ಬಾಲ್ಯಾವಸ್ಥೆಯಲ್ಲಿ ದೌರ್ಜನ್ಯಕ್ಕೆ ಒಳಗಾದವರ ಮಹಿಳೆಯರ ಪ್ರಮಾಣ ಭಾರತದಲ್ಲಿ ತುಂಬಾ ಹೆಚ್ಚಿದೆ. ಪುರುಷರ ಪ್ರಮಾಣ ಜಾಗತಿಕ ಅಂಕಿ ಅಂಶಗಳಿಗಿಂತ ಕಡಿಮೆ ಇದೆ



ಬಾಲಕರು ಸುರಕ್ಷಿತರಲ್ಲ

ಲೈಂಗಿಕ ದೌರ್ಜನ್ಯ ಎಂದರೆ, ಅದು ಬಾಲಕಿಯರು ಅಥವಾ ಮಹಿಳೆಯರ ಮೇಲೆ ಮಾತ್ರ ನಡೆಯುವಂಥದ್ದು ಎನ್ನುವ ತಿಳಿವಳಿಕೆ ಕೆಲವರಲ್ಲಿದೆ. ಆದರೆ, ಲಭ್ಯ ಇರುವ ದತ್ತಾಂಶ ನೋಡಿದರೆ, ಬಾಲಕರು ಮತ್ತು ಪುರುಷರ ಮೇಲೆಯೂ ಗಮನಾರ್ಹ ಪ್ರಮಾಣದಲ್ಲಿ ಲೈಂಗಿಕ ದೌರ್ಜನ್ಯಗಳು ನಡೆಯುತ್ತಿವೆ.

ಕೆಲವು ದೇಶಗಳಲ್ಲಿ ಸಂತ್ರಸ್ತರ ಪೈಕಿ ಮಹಿಳೆಯರಿಗಿಂತಲೂ ಪುರುಷರ ಪ್ರಮಾಣವೇ ಹೆಚ್ಚಿದೆ. ಬಾಂಗ್ಲಾದೇಶ ಮತ್ತು ಹೈಟಿಯಲ್ಲಿ ಬಾಲಕಿಯರಿಗಿಂತಲೂ ಬಾಲಕರ ಮೇಲೆಯೇ ಹೆಚ್ಚು ದೌರ್ಜನ್ಯಗಳು ನಡೆದಿವೆ. ಭಾರತದಲ್ಲಿ ಲೈಂಗಿಕ ದೌರ್ಜನ್ಯಕ್ಕೆ ಗುರಿಯಾಗುತ್ತಿರುವ ಬಾಲಕರ ಪ್ರಮಾಣ ಶೇ 13.5 ಆಗಿದ್ದು, ಇದು ಜಾಗತಿಕ ಪ್ರಮಾಣವಾದ ಶೇ 14.8ಕ್ಕಿಂತ ಸ್ವಲ್ಪ ಕಡಿಮೆ ಇದೆ. ಪುರುಷತ್ವದ ಬಗೆಗಿನ ನಂಬಿಕೆಗಳು ಮತ್ತಿತರ ಸಾಮಾಜಿಕ ಕಾರಣಗಳಿಂದ ಬಾಲಕರ ವಿರುದ್ಧದ ಪ್ರಕರಣಗಳು ಹೆಚ್ಚು ವರದಿಯಾಗುತ್ತಿಲ್ಲ.

ಆಧಾರ: ದಿ ಲ್ಯಾನ್ಸೆಟ್, ಡೌನ್ ಟು ಅರ್ಥ್

ರಾಷ್ಟ್ರೀಯ

ಭಾರತಕ್ಕೆ ಮುಂದಿನ ವರ್ಷ ಎರಡು 'ಎಸ್–400' ಹಸ್ತಾಂತರ



ನವದೆಹಲಿ (ಪಿಟಿಐ): ಎಸ್–400 ವಾಯು ರಕ್ಷಣಾ ವ್ಯವಸ್ಥೆಯ ಇನ್ನುಳಿದ ಎರಡು ಘಟಕಗಳನ್ನು 2026ರ ಒಳಗಾಗಿ ಭಾರತಕ್ಕೆ ಒದಗಿಸಲು ರಷ್ಯಾ ಬದ್ಧವಾಗಿದೆ ಎಂದು ರಷ್ಯಾ ರಾಯಭಾರ ಕಚೇರಿಯ ಉಪ ಮುಖ್ಯಸ್ಥ ರೋಮನ್ ಬಾಬುಷ್ಕಿನ್ ಸೋಮವಾರ ಹೇಳಿದ್ದಾರೆ.

ವಾಯು ರಕ್ಷಣಾ ಮತ್ತು ಡ್ರೋನ್ ಧ್ವಂಸಗೊಳಿಸುವ ವ್ಯವಸ್ಥೆಗಳಲ್ಲಿ ಭಾರತದೊಂದಿಗೆ ದ್ವಿಪಕ್ಷೀಯ ಸಹಕಾರವನ್ನು ವಿಸ್ತರಿಸುವ ಬಗ್ಗೆಯೂ ಬಾಬುಷ್ಕಿನ್ ಸುಳಿವು ನೀಡಿದ್ದಾರೆ.

'ಭಾರತ ಮತ್ತು ಪಾಕಿಸ್ತಾನ ನಡುವಿನ ಈಚೆಗಿನ ಸಂಘರ್ಷದ ಸಮಯದಲ್ಲಿ ಎಸ್-400 ವಾಯು ರಕ್ಷಣಾ ವ್ಯವಸ್ಥೆ ಬಹಳ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದೆ ಎಂಬುದನ್ನು ನಾವು ಕೇಳಿದ್ದೇವೆ. ಎರಡೂ ದೇಶಗಳ ರಕ್ಷಣಾ ಸಹಕಾರಕ್ಕೆ ದೀರ್ಘ ಇತಿಹಾಸವಿದೆ. ವಾಯು ರಕ್ಷಣಾ ವ್ಯವಸ್ಥೆಗಳು ನಮ್ಮ ಪಾಲುದಾರಿಕೆಯ ಪ್ರಮುಖ ವಿಷಯಗಳಲ್ಲಿ ಒಂದಾಗಿದೆ' ಎಂದು ಅವರು ತಿಳಿಸಿದ್ದಾರೆ.

ವೈಮಾನಿಕ ದಾಳಿಯನ್ನು ಎದುರಿಸುವ ಸಾಮರ್ಥ್ಯವಿರುವ ಅತ್ಯಾಧುನಿಕ ಎಸ್–400 ಟ್ರಯಂಫ್ ವಾಯು ರಕ್ಷಣಾ ವ್ಯವಸ್ಥೆಯ ಐದು ಘಟಕಗಳಿಗೆ ಭಾರತವು 2018ರಲ್ಲಿ ರಷ್ಯಾ ಜತೆ ಒಪ್ಪಂದ ಮಾಡಿಕೊಂಡಿತ್ತು. ಅದರಲ್ಲಿ ಮೂರು ಘಟಕಗಳನ್ನು ಈಗಾಗಲೇ ಭಾರತಕ್ಕೆ ಹಸ್ತಾಂತರಿಸಲಾಗಿದೆ. ಉಳಿದ ಎರಡು ಎಸ್-400 ಘಟಕಗಳ ಹಸ್ತಾಂತರ ಪ್ರಕ್ರಿಯೆ ಒಪ್ಪಂದಕ್ಕೆ ಅನುಗುಣವಾಗಿ 2025-26ರ ವೇಳೆಗೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ.

ರಷ್ಯಾದ ವಿದೇಶಾಂಗ ಸಚಿವ ಸೆರ್ಗಿ ಲಾವ್ರೊವ್ ಅವರ ಭಾರತ ಭೇಟಿಯ ಬಗ್ಗೆ ಮಾಹಿತಿ ನೀಡಿದ ಬಾಬುಷ್ಕಿನ್, 'ಭೇಟಿಯ ದಿನಾಂಕವನ್ನು ಇನ್ನೂ ಅಂತಿಮಗೊಳಿಸಲಾಗಿಲ್ಲ, ಆದರೆ, ಅವರ ಭೇಟಿ ಶೀಘ್ರದಲ್ಲೇ ನಡೆಯಲಿದೆ. ಈ ತಿಂಗಳಲ್ಲೇ ಭಾರತಕ್ಕೆ ಬರುವರು ಎಂದು ನಿರೀಕ್ಷಿಸುತ್ತೇವೆ' ಎಂದಿದ್ದಾರೆ.

ಅಣ್ಣಾ ವಿ.ವಿ: ಅತ್ಯಾಚಾರ ಎಸಗಿದ ಅಪರಾಧಿಗೆ 30 ವರ್ಷ ಜೈಲು ಶಿಕ್ಷೆ

ಚೆನ್ನೈ (ಪಿಟಿಐ): ಅಣ್ಣಾ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿನಿಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಜ್ಞಾನಶೇಖರನ್‌ಗೆ ಮಹಿಳಾ ನ್ಯಾಯಾಲಯವು ಸೋಮವಾರ ಶಿಕ್ಷೆ ಪ್ರಕಟಿಸಿದೆ. ಕ್ಷಮಾದಾನ ಇಲ್ಲದೆ, 30 ವರ್ಷಗಳ ಜೀವಾವಧಿ ಶಿಕ್ಷೆಯನ್ನು ಕೋರ್ಟ್ ವಿಧಿಸಿದೆ.

ನ್ಯಾಯಾಧೀಶರಾದ ಎಂ. ರಾಜಲಕ್ಷ್ಮಿ ಅವರು ಶಿಕ್ಷೆ ಪ್ರಕಟಿಸಿದರು. ಜ್ಞಾನಶೇಖರನ್ ವಿರುದ್ಧ 11 ಆರೋಪಗಳನ್ನು ಹೊರಿಸಲಾಗಿತ್ತು. ದಾಖಲೆಗಳು ಮತ್ತು ವಿಧಿವಿಜ್ಞಾನ ಸಾಕ್ಷ್ಯಗಳ ಮೂಲಕ ಸರ್ಕಾರಿ ವಕೀಲರು ಈ ಎಲ್ಲ ಆರೋಪಗಳನ್ನು ಸಾಬೀತು ಮಾಡಿದ್ದಾರೆ. ಕುಟುಂಬದಲ್ಲಿ ತಾನೊಬ್ಬನೇ ದುಡಿಯುವ ವ್ಯಕ್ತಿ. ಆದ್ದರಿಂದ ಗರಿಷ್ಠ ಶಿಕ್ಷೆ ವಿಧಿಸಬಾರದು ಎಂದು ಅಪರಾಧಿ ನ್ಯಾಯಾಲಯವನ್ನು ಕೋರಿದ್ದ.

2024ರ ಡಿಸೆಂಬರ್‌ನಲ್ಲಿ ಈ ಘಟನೆ ನಡೆದಿತ್ತು. ತಮಿಳುನಾಡಿನಲ್ಲಿ ಈ ಘಟನೆಯು ದೊಡ್ಡ ವಿವಾದವನ್ನೇ ಸೃಷ್ಟಿಸಿತ್ತು. ಅಪರಾಧಿಯು ಆಡಳಿತಾರೂಢ ಡಿಎಂಕೆ ಪಕ್ಷದ ಸಂಪರ್ಕ ಹೊಂದಿದ್ದಾನೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದವು. ಇದಕ್ಕಾಗಿ ರಾಜಕೀಯ ಮೇಲಾಟವೂ ನಡೆದಿತ್ತು. ಜ್ಞಾನಶೇಖರನ್ ಕುರಿತು ಇದೇ ಜನವರಿಯಲ್ಲಿ ಪ್ರತಿಕ್ರಿಯಿಸಿದ್ದ ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, 'ಆತ ತಮ್ಮ ಪಕ್ಷದ ಬೆಂಬಲಿಗನಷ್ಟೆ. ಆತ ಪಕ್ಷದ ಸದಸ್ಯನಾಗಿರಲಿಲ್ಲ' ಎಂದಿದ್ದರು.

ಛತ್ತೀಸಗಢ: 16 ನಕ್ಸಲರ ಶರಣಾಗತಿ

ಸುಕ್ಮಾ (ಪಿಟಿಐ): ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ 16 ನಕ್ಸಲರು ಪೊಲೀಸರಿಗೆ ಸೋಮವಾರ ಶರಣಾಗಿದ್ದಾರೆ.

ಶರಣಾಗತಿ ಹೊಂದಿದ ನಕ್ಸಲರಲ್ಲಿ 6 ಮಂದಿಯ ಸುಳಿವು ಕೊಟ್ಟವರಿಗೆ ಒಟ್ಟು 25 ಲಕ್ಷ ಬಹುಮಾನ ಘೋಷಿಸಲಾಗಿತ್ತು.

ಒಂಬತ್ತು ನಕ್ಸಲರು ಕೆರ್ಲಪೆಂಡ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಸೇರಿದ್ದು, ಅವರ ಶರಣಾಗತಿಯ ಮೂಲಕ ಗ್ರಾಮವು ನಕ್ಸಲ್ ಮುಕ್ತವಾಗಿದೆ. ಸರ್ಕಾರದ ₹1 ಕೋಟಿ ಅನುದಾನ ಪಡೆಯಲು ಅರ್ಹವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.


ಪಿವಿ ಫ್ಯಾಕ್ಟ್ ಚೆಕ್

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಕೆಲವರೊಂದಿಗೆ ಸಂವಾದ ನಡೆಸುವ ಎರಡು ಛಾಯಾಚಿತ್ರಗಳನ್ನು ಒಟ್ಟಾಗಿ ಸೇರಿಸಿದ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ರಾಹುಲ್ ಅವರು ದೆಹಲಿ ವಿವಿ ವಿದ್ಯಾರ್ಥಿಗಳು ಮತ್ತು ರೈಲ್ವೆ ಕೂಲಿಗಳೊಂದಿಗೆ ಸಂವಾದ ನಡೆಸುವ ಚಿತ್ರಗಳು ಅವಾಗಿದ್ದು, ಒಬ್ಬ ವ್ಯಕ್ತಿ ಎರಡೂ ಚಿತ್ರಗಳಲ್ಲಿದ್ದು, ವಿದ್ಯಾರ್ಥಿಯಾಗಿ ಮತ್ತು ಕೂಲಿಯಾಗಿ ಸಂವಾದದಲ್ಲಿ ಭಾಗವಹಿಸಿದ್ದಾರೆ ಎಂದು ಚಿತ್ರದೊಂದಿಗೆ ಹಾಕಲಾಗಿರುವ ಪೋಸ್ಟ್‌ನಲ್ಲಿ ಪ್ರತಿಪಾದಿಸಲಾಗುತ್ತಿದೆ. ಆದರೆ, ಇದು ಸುಳ್ಳು.



ಒಂದು ಚಿತ್ರದಲ್ಲಿ ರಾಹುಲ್ ಗಾಂಧಿ ಅವರು ನೀಲಿ ಟಿ–ಶರ್ಟ್ ಧರಿಸಿದ್ದು, ಅದು ಮೇ 22ರಂದು ದೆಹಲಿ ವಿವಿಯಲ್ಲಿ ವಿದ್ಯಾರ್ಥಿಗಳೊಂದಿಗೆ ನಡೆಸಿದ ಸಂವಾದದ ಚಿತ್ರ. ಎರಡೂ ಚಿತ್ರಗಳಲ್ಲಿ ಒಬ್ಬರೇ ಇದ್ದಾರೆ ಎಂದು ಹೇಳಲಾದ ವ್ಯಕ್ತಿಯ ಹೆಸರು ಲೋಕೇಶ್ ಚೌಧರಿ. ದೆಹಲಿ ವಿವಿಯ ವಿದ್ಯಾರ್ಥಿ ಒಕ್ಕೂಟದ ಜಂಟಿ ಕಾರ್ಯದರ್ಶಿಯಾಗಿದ್ದಾರೆ. ಅಲ್ಲದೆ ಕಾಂಗ್ರೆಸ್‌ನ ವಿದ್ಯಾರ್ಥಿ ಘಟಕ ಎನ್‌ಎಸ್‌ಯುಐನ ಸದಸ್ಯರೂ ಆಗಿದ್ದಾರೆ. ವೈರಲ್ ಚಿತ್ರದ ಬಗ್ಗೆ ಪ್ರತಿಕ್ರಿಯಿಸಿರುವ ಅವರು ಪೋಸ್ಟ್‌ನಲ್ಲಿರುವ ಮಾಹಿತಿಯನ್ನು ತಳ್ಳಿ ಹಾಕಿದ್ದಾರೆ. ಎರಡನೇ ಚಿತ್ರವನ್ನು ರಿವರ್ಸ್ ಇಮೇಜ್ ವಿಧಾನದ ಮೂಲಕ ಹುಡುಕಾಟ ನಡೆಸಿದಾಗ, ರಾಹುಲ್ ಗಾಂಧಿ ಅವರು ಈ ವರ್ಷದ ಮಾರ್ಚ್‌ನಲ್ಲಿ ನವದೆಹಲಿ ರೈಲು ನಿಲ್ದಾಣದಲ್ಲಿ ಕೂಲಿಗಳನ್ನು ಭೇಟಿ ಮಾಡಿದಾಗಿನ ಚಿತ್ರ ಎಂಬುದು ಕಂಡು ಬಂತು. ಫೆ.15ರಂದು ನಡೆದಿದ್ದ ಕಾಲ್ತುಳಿತದ ವೇಳೆ, ಪರಿಹಾರ ಕಾರ್ಯಾಚರಣೆಗೆ ನೆರವಾದ ಕೂಲಿಗಳನ್ನು ಅವರು ಭೇಟಿ ಮಾಡಿದ್ದರು. ಇದರ ವಿಡಿಯೊವನ್ನು ರಾಹುಲ್ ಅವರು ತಮ್ಮ ಎಕ್ಸ್ ಖಾತೆಯಲ್ಲಿ ಮಾರ್ಚ್ 5ರಂದು ಪೋಸ್ಟ್ ಮಾಡಿದ್ದರು. ಎರಡೂ ಫೋಟೊಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಚೌಧರಿ ಮತ್ತು ಕೂಲಿಯಾಗಿ ಕೆಲಸ ನಿರ್ವಹಿಸುವ ವ್ಯಕ್ತಿ ಬೇರೆ ಬೇರೆ ಎಂಬುದು ದೃಢಪಟ್ಟಿದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಮಾದರಿಯಾದ ವೀರ ಮಹಿಳೆಯರು

ನುಡಿ ಬೆಳಗು



ದೀಪಾ ಹಿರೇಗುತ್ತಿ

ರಾಣಿ ವೇಲು ನಾಚಿಯಾರ್. ದಕ್ಷಿಣ ತಮಿಳುನಾಡಿನ ರಾಜ್ಯ ರಾಮನಾಥಪುರದ ರಾಜಕುಮಾರಿ. ಹುಟ್ಟಿದ್ದು 1730ರ ಜನವರಿ 3ರಂದು. ವೀರ ಮಂಗೈ (ವೀರ ಮಹಿಳೆ) ಎಂದು ಕರೆಯಲ್ಪಡುತ್ತಿದ್ದಳು. ಕುದುರೆ ಸವಾರಿ, ಬಿಲ್ಲುಗಾರಿಕೆ ಮುಂತಾದ ಸಮರಕಲೆಗಳಲ್ಲಿ ಪರಿಣತಳಾಗಿದ್ದಳು. ಇಂಗ್ಲಿಷ್, ಉರ್ದು ಮುಂತಾದ ಭಾಷೆಗಳೂ ಆಕೆಗೆ ಬರುತ್ತಿದ್ದವು. ಶಿವಗಂಗಾ ರಾಜ್ಯದ ದೊರೆಯೊಂದಿಗೆ ಈಕೆಯ ವಿವಾಹವಾಗುತ್ತದೆ. ರಾಜ್ಯ ವಿಸ್ತರಿಸುತ್ತಿದ್ದ ಬ್ರಿಟಿಷರು ಈ ರಾಜ್ಯದ ಮೇಲೆ ದಾಳಿ ಮಾಡುತ್ತಾರೆ. ರಾಜ ಹೋರಾಡುತ್ತ ಮರಣ ಹೊಂದುತ್ತಾನೆ. ವೇಲು ನಾಚಿಯಾರ್ ರಾಜ್ಯದಿಂದ ತಲೆಮರೆಸಿಕೊಳ್ಳಬೇಕಾಗುತ್ತದೆ. ರಾಜ್ಯಭ್ರಷ್ಟಳಾದರೂ ಮಹಿಳಾ ಸೈನ್ಯ ಕಟ್ಟುತ್ತಾಳೆ. ಹಲವಾರು ರಾಜರನ್ನು ಒಗ್ಗೂಡಿಸುತ್ತಾಳೆ. ಎಂಟು ವರ್ಷಗಳ ನಂತರ ಬ್ರಿಟಿಷರ ಮೇಲೆ ಯುದ್ಧ ಹೂಡುತ್ತಾಳೆ. ರಾಣಿಯ ಮುಖ್ಯ ಸೈನಿಕರಲ್ಲಿ ಒಬ್ಬಳಾಗಿದ್ದ ಕುಯಿಲಿ ಎನ್ನುವ ವೀರ ಮಹಿಳೆ ತನ್ನಿಡೀ ದೇಹವನ್ನು ತುಪ್ಪದಲ್ಲಿ ನೆನೆಸಿಕೊಂಡು ತನಗೆ ತಾನೇ ಬೆಂಕಿ ಹಚ್ಚಿಕೊಂಡು ಬ್ರಿಟಿಷರ ಶಸ್ತ್ರಾಗಾರಕ್ಕೆ ಧುಮುಕಿ ಅದನ್ನು ನಾಶ ಪಡಿಸುತ್ತಾಳೆ. ಯುದ್ಧ ಗೆದ್ದ ರಾಣಿ, ಮುಂದಿನ ಹತ್ತು ವರ್ಷ ರಾಜ್ಯವನ್ನಾಳುತ್ತಾಳೆ.

ಭಾರತದ ಮೊದಲ ಸ್ವಾತಂತ್ರ್ಯ ಹೋರಾಟಗಾರ್ತಿ ಎಂದು ಇತಿಹಾಸದ ಪುಟಗಳಲ್ಲಿ ರಾಣಿ ವೇಲು ನಾಚಿಯಾರ್ ಹೆಸರು ದಾಖಲಾಗಿದೆ. 2008ರಲ್ಲಿ ಭಾರತ ಸರ್ಕಾರ ಈಕೆಯ ಹೆಸರಿನ ಅಂಚೆಚೀಟಿಯನ್ನು ಬಿಡುಗಡೆ ಮಾಡಿ ಗೌರವ ಸಲ್ಲಿಸಿದೆ. ಬ್ರಿಟಿಷರು ಆಧುನಿಕ ಶಸ್ತ್ರಾಸ್ತ್ರವುಳ್ಳ ವೈರಿಗಳಾದರೂ ಎದೆಗುಂದದೇ ಸೈನ್ಯ ಒಗ್ಗೂಡಿಸಿ ಹೋರಾಡಿದ ರಾಣಿ ವೇಲು ನಾಚಿಯಾರ್, ತಾಯ್ನಾಡಿನ ರಕ್ಷಣೆಗಾಗಿ ತನ್ನನ್ನು ತಾನು ಸುಟ್ಟುಕೊಂಡ ಕುಯಿಲಿ... ಇಂತಹ ವೀರ ಮಹಿಳೆಯರ ಕಥೆಗಳನ್ನು ನಾವು ಮಕ್ಕಳಿಗೆ ಹೇಳಬೇಕಾಗಿದೆ. ಹೆಣ್ಣೆಂದರೆ ಸೌಂದರ್ಯ ಮಾತ್ರ ಎಂದು ಬಿಂಬಿಸುವ ಸ್ಟೀರಿಯೊಟೈಪ್‌ಗಳನ್ನು ತಿರಸ್ಕರಿಸಿ ಹೆಣ್ಣುಮಕ್ಕಳಲ್ಲಿ ಆತ್ಮಸ್ಥೈರ್ಯ ತುಂಬುವ ವ್ಯಕ್ತಿಗಳನ್ನು ಉದಾಹರಣೆಯಾಗಿ ನೀಡಬೇಕಿದೆ.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಒಂದು ಕ್ಷಣವೂ ಸ್ವಂತಕ್ಕಾಗಿ ಯೋಚಿಸದೆ ತಾಯ್ನಾಡಿನ ಹಿತವನ್ನೇ ಚಿಂತಿಸುತ್ತ ನಗುನಗುತ್ತ ಪ್ರಾಣಾರ್ಪಣೆಗೈದ ಮಹಿಳೆಯರು ಒಂದೆಡೆಯಿದ್ದರು. ಜತೆಗೇ, ಕುಟುಂಬದ ಪುರುಷರನ್ನು ಸಾವಿನ ಬಾಗಿಲಿಗೆ ಕಳಿಸಿ, ಎದೆಯಲ್ಲಿ ಸಾವಿರ ಸಂಕಟಗಳನ್ನು ಬಚ್ಚಿಟ್ಟು ಕುಟುಂಬವನ್ನು ಮುನ್ನಡೆಸಿದ ನಮ್ಮ ದೇಶದ ಸಾಮಾನ್ಯ ಮಹಿಳೆಯರು ಕೂಡ ಬಹುಸಂಖ್ಯೆಯಲ್ಲಿದ್ದರು. ಈ ಎಲ್ಲ ಧೀರ ಸ್ತ್ರೀಯರನ್ನು ಅವರ ಅಸಾಮಾನ್ಯ ಸಾಹಸಕ್ಕಾಗಿ ನಾವಿಂದು ಸ್ಮರಿಸಬೇಕಿದೆ. ಮೊನ್ನೆ 'ಆಪರೇಷನ್ ಸಿಂಧೂರ' ಬಗ್ಗೆ ಕರ್ನಲ್ ಸೋಫಿಯಾ ಖುರೇಷಿ ಮತ್ತು ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡುತ್ತಿದ್ದಾಗ ವೇಲು ನಾಚಿಯಾರ್, ಕುಯಿಲಿ ಇಂತಹ ವೀರ ಮಹಿಳೆಯರ ತ್ಯಾಗ ವ್ಯರ್ಥವಾಗಲಿಲ್ಲ ಅನ್ನಿಸಿ ಮನಸ್ಸು ತುಂಬಿ ಬಂತು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಮಂಗಳವಾರ ಜೂನ್ 3, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಶುಕ್ಲ ಅಷ್ಟಮಿ ಗಂ. 21-57 ನಕ್ಷತ್ರ: ಪೂರ್ವ ಫಲ್ಗುಣಿ ಗಂ. 24-59 ಯೋಗ: ಹರ್ಷಣ ಗಂ. 8-08 ಕರಣ: ವಿಷ್ಟಿ ಗಂ. 09-11, ವೃಷಭ ಮಾಸದ 20 ನೇ ದಿನ.

ರಾಹುಕಾಲ : ಮಧ್ಯಾಹ್ನ 03-00 – 04-30

ಸೂರ್ಯೋದಯ : 06-06 **ಸೂರ್ಯಾಸ್ತ :** 06-51

ಮುಸ್ಲಿಂ ದಿನಾಂಕ : 06 ಜುಲ್‌ಹಿಜಾ

ಅದೃಷ್ಟ ಸಂಖ್ಯೆ : 4, 11

ಮೇಷ: ವೃತ್ತಿ ಜೀವನಕ್ಕೆ ಸಂಬಂಧಿತ ವಿಚಾರದಲ್ಲಿ ಮಹತ್ವದ ನಿರ್ಣಯ ಕೈಗೊಳ್ಳಲು ಆಪ್ತರ ಸಲಹೆ ಪಡೆಯುವುದು, ಏಕಾಂತದಲ್ಲಿ ಯೋಚಿಸುವುದು ಉತ್ತಮ. ಉನ್ನತ ವ್ಯಾಸಂಗಕ್ಕೆ ನೇರವಾಗಿ ಆಯ್ಕೆಯಾಗುವ ಸಂಭವವಿದೆ.

ವೃಷಭ: ಉದರ ಸಂಬಂಧಿ ಕಾಯಿಲೆಗಳಿಂದ ರಕ್ಷಿಸಿಕೊಳ್ಳಲು ಸ್ನಿಗ್ಧ ಆಹಾರ ಅಥವಾ ದ್ರವ ರೂಪಿ ಆಹಾರವನ್ನು ಹೆಚ್ಚು ಸೇವಿಸಿ. ತಾವು ಬಯಸಿದ ಕ್ಷೇತ್ರದಲ್ಲಿ ಹೊಸ ತಿರುವನ್ನು ಪಡೆಯುವಲ್ಲಿ ಯಶಸ್ವಿಯಾಗುವಿರಿ.

ಮಿಥುನ: ಏಜೆನ್ಸಿಯಂತಹ ಉದ್ಯೋಗ ತೆರೆಯಲು ಸೂಕ್ತ ಸ್ಥಳದ ಹುಡುಕಾಟದಲ್ಲಿರುವ ನಿಮಗೆ ಅನುಕೂಲಕರವಾದ ಸ್ಥಳ ದೊರಕುವುದು. ಗೃಹ ತಾಪತ್ರಯಗಳಿಂದಲೂ ಮುಕ್ತರಾಗಿ ನಿಶ್ಚಿಂತರಾಗುವಿರಿ.

ಕರ್ಕಾಟಕ: ಕಬ್ಬಿಣ ಅಥವಾ ಯಂತ್ರೋಪಕರಣ ತಯಾರಿ, ರಿಪೇರಿಯವರಿಗೆ ಅಗ್ನಿ ಅಥವಾ ಶಸ್ತ್ರ ಸಂಬಂಧಿ ಆಪತ್ತು ಎದುರಾಗಬಹುದು. ದಿನಸಿ ವರ್ತಕರಿಗೆ ಲಾಭ ಆಗಲಿದೆ. ಸರ್ಕಾರಿ ಕಚೇರಿಯಲ್ಲಿನ ಕೆಲಸ ಪ್ರಗತಿ ಹೊಂದುವುದು.

ಸಿಂಹ: ನೀವೇ ಬೆಳೆಸಿದ ವ್ಯಕ್ತಿಗಳಿಂದ ಮೋಸ ಹೋಗುವ ಸಂಭವವಿದೆ. ಅತಿಯಾದ ನಂಬಿಕೆ ನಿಮಗೆ ಮುಳುವಾಗಬಹುದು. ಸಾಲದ ಹಣ ಮರುಪಾವತಿ ಮಾಡುವುದರಿಂದ ಆತ್ಮಾಭಿಮಾನವನ್ನು ಕಾಪಾಡಿಕೊಳ್ಳಬಹುದು.

ಕನ್ಯಾ: ನೀವು ನಿಮ್ಮ ಮನೋಭಾವವನ್ನು ಬದಲಿಸಿಕೊಳ್ಳುವಂತೆ ಆಗಲಿದೆ. ಯಾವುದಕ್ಕೆ ಪ್ರಾಮುಖ್ಯತೆ ಕೊಡಬೇಕೆಂಬುದು ನಿಮಗೆ ತಿಳಿಯುವುದು. ಮನೆ ನಿರ್ಮಾಣದ ಕೆಲಸ ಪೂರ್ತಿಗೊಳ್ಳುವ ಹಂತ ತಲುಪಿ ಸಂತೋಷವಾಗುತ್ತದೆ.

ತುಲಾ: ನಿಮ್ಮ ಆರ್ಥಿಕ ಜೀವನದ ಹೊಸ ಅಧ್ಯಾಯ ಆರಂಭವಾಗುವ ಎಲ್ಲಾ ಸಾಧ್ಯತೆಗಳಿವೆ. ಅಕ್ರಮವಾದ ವ್ಯವಹಾರಗಳನ್ನು ಕೈಬಿಡುವುದು ಕ್ಷೇಮಕರ. ಗೃಹೋಪಯೋಗಿ ವಸ್ತುಗಳ ಮಾರಾಟದಿಂದ ಲಾಭ ಬರಲಿದೆ.

ವೃಶ್ಚಿಕ: ಸಜ್ಜನರ ಸಹವಾಸದಿಂದ ಪ್ರಾಪಂಚಿಕವಾದ ಜ್ಞಾನ ವೃದ್ಧಿಯಾಗುತ್ತದೆ. ಸ್ನೇಹಪರ, ದಾನ-ಧರ್ಮದ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನ ಮಾನಗಳು ಲಭಿಸುವುದು. ವಾಹನ ಚಲಾಯಿಸುವಾಗ ಎಚ್ಚರವಿರಲಿ.

ಧನು: ಮಾರುಕಟ್ಟೆಯಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗಮನಿಸಿ ನಂತರದಲ್ಲಿ ಷೇರುಗಳನ್ನು ಕೊಳ್ಳುವ ಯೋಜನೆಗೆ ಮುಂದಾಗಿ. ಭಾವನಾತ್ಮಕ ಪ್ರವೃತ್ತಿಯು ನಿಮ್ಮನ್ನು ಹೆಚ್ಚು ಕೆಲಸ ಮಾಡಿಸುವಂತೆ ಮಾಡಬಹುದು.

ಮಕರ: ಚಿತ್ರಕಲೆ ಅಥವಾ ಪಠ್ಯೇತರ ವಿಷಯದಲ್ಲಿ ನಿಮ್ಮ ಉತ್ಸಾಹ ಇಮ್ಮಡಿಗೊಳ್ಳಲಿದೆ. ತೀರ್ಥಯಾತ್ರೆಗಳನ್ನು ಮಾಡಬೇಕೆಂದುಕೊಂಡವರು ಆ ಬಗ್ಗೆ ಯೋಚಿಸಲು ಇದು ಪ್ರಶಸ್ತ ಸಮಯ.

ಕುಂಭ: ಮಗಳು ಹಾಗೂ ಕುಟುಂಬ ವರ್ಗದವರಿಗೆ ಸಹಾಯ ಅಗತ್ಯವಿರುವುದರಿಂದ ಅದನ್ನು ನಡೆಸಿಕೊಡಿ. ಕೆಲವರಿಗೆ ನಿಮ್ಮ ಮೇಲಿದ್ದ ಸಂಶಯದ ಮನೋಭಾವ ನಿವಾರಣೆಯಾಗುವುದು.

ಮೀನ: ವ್ಯಾಪಾರ ವ್ಯವಹಾರಗಳನ್ನು ಮಾಡುತ್ತಿರುವವರು ನಿಮ್ಮ ವ್ಯಾಪ್ತಿಯನ್ನು ವಿದೇಶಕ್ಕೆ ಪಸರಿಸುವ ಯೋಚನೆ ಮಾಡಬಹುದು. ಹಣ್ಣು, ಹೂವು, ತರಕಾರಿ ಮಾರಾಟಗಾರರಿಗೆ ಲಾಭ ನಷ್ಟಗಳ ಮಿಶ್ರ ಫಲ ಅನುಭವಕ್ಕೆ ಬರಲಿದೆ.

ಪದಬಂಧ 6062


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಆಗಸ ನೋಡುತ್ತಾ ಬರುತ್ತಿರುವ ಮಡಿವಾಳ (3)
4.ಹೊಲದಡೆ ಹೋಗುವುದನ್ನು ತಡೆದುದಕ್ಕೇ ಈ ಏಟು! (3)
6.ಸಾಯುವ ಸಮಯವಿದು (5)
7.ಇದು ಸ್ತ್ರೀ ಅಥವಾ ಪುರುಷನಲ್ಲ (4)
9.ಊರಿಗೆಲ್ಲಾ ತಕರಾರಿಲ್ಲದೇ ಸಹಾಯ ಮಾಡುವವನು (4)
10.ಆ ಹಾಲು ಕೊಟ್ಟವನ ಪ್ರಾರ್ಥನೆ (4)
11.ಈ ಆಚಾರಿ ನೀತಿಗೆಟ್ಟವನು (4)
13.ಕರ ತಟ್ಟಿ ಹೊಡೆದ ಚಪ್ಪಾಳೆ (5)
16.ಅಕ್ಕರೆಯೇಕೆ? ಈ ಅಸುರನಿಗೆ? (3)
17.ದಂಪತಿ ಹಬ್ಬಿಸಿರುವ ಗಾಳಿಸುದ್ದಿ! (3)

ಮೇಲಿಂದ ಕೆಳಕ್ಕೆ

1.ಅವನು ಮಾನವಂತನಾಗಿದ್ದರೂ ಈ ಸಂದೇಹವೇ? (4)
2.ಇದು ಅಸಮವಲ್ಲ ಬಿಡಿ! (2)
3.ಕಾಜಾಣ ತೋರಿಸಿದ ಬುದ್ಧಿವಂತ (2)
4. ಬೆಳೆ ಬೆಳೆಯುವ ಭೂಮಿ (2)
5.ತರತರದ ಕಾಯಿಪಲ್ಲೆ (4)
8.ಕಡ ಕೇಳುತ್ತಾ ತೋರಿಸಿದ ಸಮುದ್ರ (3)
9.ಉಮೇದುವಾರನಿಗೆ ಬಹಳ ಹುರುಪು! (3)
10.ಆದರ ತೋರದಿರುವಿಕೆ (4)
12.ಯತಿಗೇಕೆ ಈ ರೀತಿ ಸೋಡಿ? (4)
13.ಕನಸಲ್ಲೇ ನೋಡಿದ ಕೊಳೆ (2)
14.ಆ ತಾವರೆ ಗೋಚರಿಸಿದ್ದು ಈ ನಕ್ಷತ್ರವಿದ್ದಾಗ (2)
15.ವನದಲ್ಲಿ ತಿರುಗಿದ್ದಕ್ಕೇ ಹೊಸತು ಕಂಡಿದೆ (2)



6061ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉದಕ 3.ಕನಸು 4.ಮಡಕೆ 6.ಕುಶಲ 6.ವಾಡಿಕೆ 9.ಮರುಕ 11.ನವಿರು 13.ದಿವಾನ 15.ಪ್ರವಾದಿ 17.ಲಫಂಗ 18.ವರ್ತಕ 19.ತಿವಸ.

ಮೇಲಿಂದ ಕೆಳಕ್ಕೆ:
1.ಉಸುಕು 2.ಕಮಲ 3.ಕರಡಿ 5.ಕೆಸರು 7.ವಾಗ್ದಾನ 8.ಕೆನ್ನೀರು 9.ಮಸೀದಿ 10.ಕದನ 12.ವಿಪುಲ 14.ವಾದಕ 15.ಪ್ರಗತಿ 16.ದವಸ

ಸುಡೊಕು 6446

6		4				7		8
	9			7	1			
1				4	8			6
		1				9		
			3	9	7		5	4
7		9				8		
5				6		4		
4					3		2	
	6				4		7	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6445 ಸುಡೊಕು

9	3	7	6	1	8	2	5	4
2	6	1	4	5	9	8	3	7
5	4	8	7	2	3	9	6	1
4	8	6	5	3	2	7	1	9
7	2	3	9	6	1	5	4	8
1	5	9	8	4	7	3	2	6
8	1	5	3	7	6	4	9	2
3	9	2	1	8	4	6	7	5
6	7	4	2	9	5	1	8	3

ಕಳೆದ ವರ್ಷವೇ ಅರ್ಜಿ ಆಹ್ವಾನಿಸಿದರೂ ನಡೆಯದ ಪರೀಕ್ಷೆ

‘ಬಿಎಫ್‌ಟಿ’: ಕಾದಿರುವ ಆಕಾಂಕ್ಷಿಗಳು

• ಎಂ. ಮಹೇಶ್

ಮೈಸೂರು: ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ (ಮ–ನರೇಗಾ) ಯೋಜನೆಯಡಿ ಮಂಜೂರಾದ ಬಿಎಫ್‌ಟಿ (ಬೇರ್‌ಫೂಟ್ ಟೆಕ್ನೀಷಿಯನ್)ಗಳ ಹುದ್ದೆಗಳ ಭರ್ತಿ ಪ್ರಕ್ರಿಯೆ ಒಂದೂವರೆ ವರ್ಷವಾದರೂ ನಡೆಯದೆ ಆಕಾಂಕ್ಷಿಗಳು ಚಾತಕಪಕ್ಷಿಗಳಂತೆ ಕಾಯುತ್ತಿದ್ದಾರೆ.

ರಾಜ್ಯದ 5,962 ಗ್ರಾಮ ಪಂಚಾಯಿತಿಗಳಲ್ಲಿ 1,790 ಬಿಎಫ್‌ಟಿ ಹುದ್ದೆಗಳ ಭರ್ತಿಗೆ 2024ರ ಜನವರಿಯಲ್ಲೇ ಆಯಾ ಜಿಲ್ಲಾ ಪಂಚಾಯಿತಿಗಳಿಂದ ಅರ್ಜಿ ಆಹ್ವಾನಿಸಲಾಗಿತ್ತು. ಅರ್ಜಿ ಸಲ್ಲಿಸಲು ಜ.16 ಕೊನೆಯ ದಿನವಾಗಿತ್ತು. ಆದರೆ, ಅಂದಿನಿಂದ ಇಲ್ಲಿವರೆಗೂ ಲಿಖಿತ ಪರೀಕ್ಷೆಯೇ ನಡೆದಿಲ್ಲ.

ಮೈಸೂರು ಜಿಲ್ಲೆಗೆ 64 ಬಿಎಫ್‌ಟಿ ಹುದ್ದೆಗಳು ಮಂಜೂರಾಗಿದ್ದು, 46 ಮಂದಿ ವಿವಿಧ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಉಳಿದ 18 ಹುದ್ದೆಗಳು ಖಾಲಿ ಇವೆ.

ಅರ್ಹತೆಗಳೇನು?: ‘ಅರ್ಜಿ ಸಲ್ಲಿಸುವವರು ನರೇಗಾ ಯೋಜನೆಯಡಿ ಸಕ್ರಿಯ ಕೆಲಸಗಾರರಾಗಿರಬೇಕು (ಹಿಂದಿನ ಮೂರು ವರ್ಷಗಳಲ್ಲಿ ಕನಿಷ್ಠ 2 ವರ್ಷ 25 ದಿನಗಳಿಗೆ ಕಡಿಮೆ ಇಲ್ಲದಂತೆ ಕೂಲಿಕಾರರಾಗಿ ಕೆಲಸ ಮಾಡಿರಬೇಕು). 10ನೇ ತರಗತಿ ಉತ್ತೀರ್ಣರಾಗಿರಬೇಕು. 45 ವರ್ಷಕ್ಕಿಂತ ಕಡಿಮೆ ವಯಸ್ಸಿನವರಾಗಿರಬೇಕು. ಕನಿಷ್ಠ ಮೂರು ವರ್ಷಗಳು ಸಾಮಾಜಿಕ ಪರಿಶೋಧನೆಯಲ್ಲಿ ಗ್ರಾಮ ಸಂಪನ್ಮೂಲ ವ್ಯಕ್ತಿಯಾಗಿ ಕಾರ್ಯ ನಿರ್ವಹಿಸಿದವರಿಗೆ ಶೇ 20ರಷ್ಟು ಆದ್ಯತೆ ನೀಡಲಾಗುವುದು’ ಎಂದು ಪ್ರಕಟಣೆ ನೀಡಲಾಗಿತ್ತು.

ಮುಖ್ಯಾಂಶಗಳು

- ಮೈಸೂರು ಜಿಲ್ಲೆಯಲ್ಲಿ 18 ಹುದ್ದೆ ಖಾಲಿ
- 2024ರ ಜನವರಿಯಲ್ಲೇ ಅರ್ಜಿ ಆಹ್ವಾನ
- ಪರೀಕ್ಷೆ ನಡೆಸುವ ಹೊಣೆ ಎಸ್‌ಐಆರ್‌ಡಿಗೆ



ಜಿಲ್ಲೆಯಲ್ಲಿ ಬಹಳ ಮಂದಿ ಅರ್ಜಿ ಸಲ್ಲಿಸಿದ್ದಾರೆ. ಪರಿಶೀಲಿಸಿ 54 ಅಭ್ಯರ್ಥಿಗಳ ಪಟ್ಟಿಯನ್ನು ಎಸ್‌ಐಆರ್‌ಡಿಗೆ ನಾವೇ ಮೊದಲಿಗೆ ಕಳುಹಿಸಿದ್ದೇವೆ

ಎಸ್.ಯುಕೇಶ್‌ಕುಮಾರ್, ಸಿಇಒ, ಜಿಲ್ಲಾ ಪಂಚಾಯಿತಿ, ಮೈಸೂರು

ಬಿಎಫ್‌ಟಿಗಳ ಕೆಲಸವೇನು?



‘ಕೂಲಿಕಾರರನ್ನು ಸಂಘಟಿಸಿ, ಕಾಮಗಾರಿಗಳಲ್ಲಿ ತೊಡಗಿಸುವ ಮೂಲಕ ಹೆಚ್ಚು ಮಾನವ ದಿನಗಳನ್ನು ಸೃಜನೆ ಮಾಡಲು ಮತ್ತು ಅನುಷ್ಠಾನಗೊಂಡ ಕಾಮಗಾರಿಗಳ ಕಾರ್ಯಸ್ಥಳಗಳ ಮೇಲ್ವಿಚಾರಣೆಗೆ ಬಿಎಫ್‌ಟಿಗಳನ್ನು ನೇಮಿಸಿಕೊಳ್ಳಲಾಗುತ್ತಿದೆ. ಅರ್ಹತೆಗಳನ್ನು ಆಧರಿಸಿ, ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಲ್ಲಿ 1:3 ಅನುಪಾತದಲ್ಲಿ ಪರೀಕ್ಷೆ ನಡೆಸಿ ಆಯ್ಕೆ ಮಾಡಿಕೊಳ್ಳಬೇಕು ಎಂದು ಸೂಚಿಸಲಾಗಿತ್ತು. ಪರೀಕ್ಷೆ ಹಾಗೂ ಮೌಲ್ಯಮಾಪನ ಪ್ರಕ್ರಿಯೆಯನ್ನು ಮೈಸೂರಿನ ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಂಸ್ಥೆ (ಎಸ್‌ಐಆರ್‌ಡಿ) ಮೂಲಕ ನಡೆಸುವಂತೆ ಆದೇಶಿಸಲಾಗಿದೆ.

‘ಅರ್ಜಿ ಸಲ್ಲಿಸಿ ಒಂದೂವರೆ ವರ್ಷವಾದರೂ ಪ್ರಕ್ರಿಯೆ ನಡೆಸಿಲ್ಲ. ಜಿಲ್ಲಾ ಪಂಚಾಯಿತಿಗೆ ಹೋಗಿ ವಿಚಾರಿಸಿದರೆ, ತಡವಾಗುತ್ತದೆ ಎನ್ನುತ್ತಿದ್ದಾರೆ. ಪರೀಕ್ಷೆ ದಿನಾಂಕವನ್ನೂ ತಿಳಿಸುತ್ತಿಲ್ಲ. ಕೆಲಸಕ್ಕಾಗಿ ಕಾಯುತ್ತಿದ್ದೇವೆ. ಸಿಕ್ಕರೆ ಅನುಕೂಲವಾಗುತ್ತದೆ. ಅರ್ಹತೆ ಎಲ್ಲವೂ ನಮಗಿದೆ. ವಿಳಂಬವಾಗುತ್ತಿರುವುದರಿಂದ ನೇಮಕಾತಿ ಆಗುತ್ತದೆಯೋ, ಇಲ್ಲವೋ ಎಂಬ ಆತಂಕವೂ ಮೂಡಿದೆ’ ಎಂದು ಆಕಾಂಕ್ಷಿಗಳು ‘ಪ್ರಜಾವಾಣಿ’ಗೆ ತಿಳಿಸಿದರು.

ಯೋಜನೆಯಡಿ ನಡೆಸುವ ಕೆಲಸಗಳ ಸ್ಥಳಗಳಿಗೆ ತೆರಳಿ ಜಿಯೊ ಟ್ಯಾಗಿಂಗ್, ಜಿಪಿಎಸ್ ಮಾಡುವುದು, ಕಾಮಗಾರಿಯ ಅಳತೆ ಮಾಡುವುದು, ಉದ್ಯೋಗಿ ಚೀಟಿ ಕೊಡಿಸಲು ನೆರವಾಗುವುದು, ಎಂಜಿನಿಯರ್‌ಗಳು ಹಾಗೂ ತಾಂತ್ರಿಕ ಸಿಬ್ಬಂದಿಗೆ ನೆರವಾಗುವುದು ಬಿಎಫ್‌ಟಿಗಳ ಕೆಲಸ. ಸದ್ಯ ಹುದ್ದೆಗಳು ಭರ್ತಿಯಾಗದಿರುವುದರಿಂದ ಒಬ್ಬೊಬ್ಬ ಬಿಎಫ್‌ಟಿ ಸರಾಸರಿ ಹತ್ತು ಪಂಚಾಯಿತಿಗಳ ಹೊಣೆ ನಿಭಾಯಿಸಬೇಕಾದ ಪರಿಸ್ಥಿತಿ ಇದೆ.

‘ಕೆಲವು ಜಿಲ್ಲೆಗಳ ಪಟ್ಟಿಗಳಷ್ಟೇ ಸಲ್ಲಿಕೆಯಾಗಿವೆ. ಎಲ್ಲ ಜಿಲ್ಲೆಗಳ ಅಭ್ಯರ್ಥಿಗಳ ಪಟ್ಟಿ ಬಂದ ಬಳಿಕ ಒಮ್ಮೆಲೇ ಪರೀಕ್ಷೆ ನಡೆಸಲಾಗುವುದು’ ಎಂದು ಎಸ್‌ಐಆರ್‌ಡಿ ಮೂಲಗಳು ತಿಳಿಸಿವೆ.

ವೈದ್ಯಕೀಯ ವಿದ್ಯಾರ್ಥಿನಿ ಶವ ಪತ್ತೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿನ ಸುಬ್ಬಯ್ಯ ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿನಿ ವಿಷ್ಣುಪ್ರಿಯಾ (23) ಅವರ ಶವ ಹಾಸ್ಟೆಲ್‌ನ ಕೊಠಡಿಯಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಸೋಮವಾರ ಪತ್ತೆಯಾಗಿದೆ.



ವಿಷ್ಣುಪ್ರಿಯಾ

ವಿಷ್ಣುಪ್ರಿಯಾ ಮೂಲತಃ ಬಳ್ಳಾರಿಯವರು. ಅವರ ತಂದೆ ವೆಂಕಟೇಶ್ ಎಂಜಿನಿಯರ್ ಆಗಿದ್ದು, ಕುಟುಂಬ ಸಮೇತ ಬಹರೇನ್‌ನಲ್ಲಿ ವಾಸವಿದ್ದಾರೆ. ಎಂಬಿಬಿಎಸ್ ಕೋರ್ಸ್ ಪೂರ್ಣಗೊಳಿಸಿದ್ದ ವಿಷ್ಣುಪ್ರಿಯಾ ಇಂಟರ್ನ್‌ಶಿಪ್ ಮಾಡುತ್ತಿದ್ದರು. ಹಾಸ್ಟೆಲ್‌ನಲ್ಲಿ ಜೊತೆಗಿದ್ದ ಸ್ನೇಹಿತೆಯರು ಇಂಟರ್ನ್‌ಶಿಪ್ ಮುಗಿಸಿ ಊರಿಗೆ ಮರಳಿದ್ದು, ವಿಷ್ಣುಪ್ರಿಯಾ ಒಬ್ಬರೇ ಕೊಠಡಿಯಲ್ಲಿ ಇದ್ದರು ಎಂದು ತಿಳಿದುಬಂದಿದೆ.

‘ಸ್ಥಳದಲ್ಲಿ ಯಾವುದೇ ಮರಣಪತ್ರ ಸಿಕ್ಕಿಲ್ಲ. ಮೇಲ್ನೋಟಕ್ಕೆ ಆತ್ಮಹತ್ಯೆಯಂತೆ ಕಾಣುತ್ತಿದೆ. ಅಸ್ವಾಭಾವಿಕ ಸಾವು ಪ್ರಕರಣ ದಾಖಲಿಸಿಕೊಂಡು ಪಾಲಕರಿಗೆ ವಿಷಯ ತಿಳಿಸಿದ್ದೇವೆ. ಅವರು ಬಂದು ದೂರು ನೀಡಿದ ನಂತರ ಮುಂದಿನ ಪ್ರಕ್ರಿಯೆ ಕೈಗೊಳ್ಳಲಿದ್ದೇವೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಿ.ಕೆ.ಮಿಥುನ್‌ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಜಾರಿ

ಸಫಾರಿ ಸಮಯ, ಶುಲ್ಕ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಮೈಸೂರು: ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಸಫಾರಿ ಸಮಯ ಮತ್ತು ಶುಲ್ಕವನ್ನು ಪರಿಷ್ಕರಿಸಲಾಗಿದ್ದು, ಭಾನುವಾರದಿಂದ ಜಾರಿಗೆ ಬಂದಿದೆ.

ನಾಗರಹೊಳೆ ಅಭಯಾರಣ್ಯದಲ್ಲಿ ಎಚ್‌.ಡಿ. ಕೋಟೆ ತಾಲ್ಲೂಕು ಅಂತರಸಂತೆ ವಲಯದ ಕಾಕನಕೋಟೆ (ದಮ್ಮನಕಟ್ಟೆ), ಹುಣಸೂರು ತಾಲ್ಲೂಕಿನ ವೀರನಹೊಸಹಳ್ಳಿ ಮತ್ತು ಕೊಡಗಿನ ನಾಣಚ್ಚಿ ಗೇಟ್ ಬಳಿ ಮೂರು ಕೇಂದ್ರಗಳಿಂದ ಪ್ರತಿ ದಿನ ಸಫಾರಿಗೆ ಕರೆದೊಯ್ಯಲಾಗುತ್ತಿದೆ. ಕಬಿನಿ ಹಿನ್ನೀರು ವ್ಯಾಪ್ತಿಯ ಕಾಕನಕೋಟೆ ಸಫಾರಿ ಕೇಂದ್ರದಿಂದ ಸಫಾರಿಗೆ ಹೋಗುವವರು ಹೆಚ್ಚಾಗಿರುತ್ತಿದ್ದುದರಿಂದ ಕೆಲವರಿಗೆ ಟಿಕೆಟ್ ಸಿಗುತ್ತಿರಲಿಲ್ಲ ಎಂಬ ಕಾರಣಕ್ಕೆ, ಸಮಯ ಪರಿಷ್ಕರಿಸಲಾಗಿದೆ. ಇದರಿಂದ, ಹೆಚ್ಚಿನ ಪ್ರವಾಸಿಗರಿಗೆ ಸಫಾರಿಗೆ ತೆರಳಲು ಅವಕಾಶ ದೊರೆಯಲಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಕಾಕನಕೋಟೆ ಸಫಾರಿ ಕೇಂದ್ರದಿಂದ ಇದುವರೆಗೆ ಬಸ್‌ನಲ್ಲಿ 3 ಗಂಟೆಯ ಅವಧಿಯ ಸಫಾರಿಗೆ ವಯಸ್ಕರಿಗೆ ₹865, ಮಕ್ಕಳಿಗೆ ₹430, ಜೀಪ್‌ನಲ್ಲಿ ತೆರಳಲು ಒಬ್ಬರಿಗೆ ₹855 ನಿಗದಿಪಡಿಸಲಾಗಿತ್ತು. ಹೊಸ ವೇಳಾಪಟ್ಟಿಯಂತೆ ಬೆಳಿಗ್ಗೆ ಮತ್ತು ಸಂಜೆ ತಲಾ 2 ಗಂಟೆ ಅವಧಿಯ ಸಫಾರಿ ಇರಲಿದೆ. ಬೆಳಿಗ್ಗೆ 6ರಿಂದ 8, 8.15ರಿಂದ 10.15, ಮಧ್ಯಾಹ್ನ 2.15ರಿಂದ 4.15, ಸಂಜೆ 4.30ರಿಂದ 6.30 ರವರೆಗೆ ಸಫಾರಿ ವಾಹನ ತೆರಳುತ್ತದೆ. ಬಸ್‌ನಲ್ಲಿ 2 ಗಂಟೆಯ ಸಫಾರಿಗೆ ₹600, ಮಕ್ಕಳಿಗೆ ₹300 ನಿಗದಿಪಡಿಸಲಾಗಿದೆ. ಜೀಪ್‌ನಲ್ಲಿ ತೆರಳಲು ತಲಾ ₹1 ಸಾವಿರ ಪಾವತಿಸಬೇಕು.



ನಾಗರಹೊಳೆ ಅಭಯಾರಣ್ಯದ ದಮ್ಮನಕಟ್ಟೆ ವ್ಯಾಪ್ತಿಯಲ್ಲಿ ಪ್ರವಾಸಿಗರ ಸಫಾರಿ (ಸಂಗ್ರಹ ಚಿತ್ರ)

ವೀರನಹೊಸಹಳ್ಳಿ ಗೇಟ್‌ನಿಂದ ನಿತ್ಯ ಬೆಳಿಗ್ಗೆ 6.15ರಿಂದ 9.45ರವರೆಗೆ, ಮಧ್ಯಾಹ್ನ 3ರಿಂದ 6.30ರವರೆಗೆ ಇರುವ ಬಸ್ ಸಫಾರಿಗೆ ವಯಸ್ಕರಿಗೆ ₹600, ಮಕ್ಕಳಿಗೆ ₹300, ಜೀಪ್‌ಗೆ ತಲಾ ₹1 ಸಾವಿರ ನಿಗದಿ ಮಾಡಲಾಗಿದೆ.

ಕೊಡಗು ಜಿಲ್ಲೆಯ ಕುಟ್ಟ ಸಮೀಪದ ನಾಣಚ್ಚಿ ಗೇಟ್ ಕೇಂದ್ರದಿಂದ ನಿತ್ಯ ಬೆಳಿಗ್ಗೆ 6ರಿಂದ 8, ಬೆಳಿಗ್ಗೆ 8.15ರಿಂದ 10.15ರವರೆಗೆ, ಮಧ್ಯಾಹ್ನ 2.15ರಿಂದ 4.15ರವರೆಗೆ, 4.30ರಿಂದ 6.30ರವರೆಗೆ ತಲಾ 2 ಗಂಟೆ ಅವಧಿಯ ಸಫಾರಿ ಇರಲಿದ್ದು, ವಯಸ್ಕರಿಗೆ ತಲಾ ₹600 ಹಾಗೂ ಮಕ್ಕಳಿಗೆ ₹300, ಜೀಪ್ ಸಫಾರಿಗೆ ₹1 ಸಾವಿರ ನಿಗದಿಪಡಿಸಲಾಗಿದೆ.

ಸಫಾರಿ ವೇಳೆ ಪ್ರವಾಸಿಗರು ಒಯ್ಯುವ ಕ್ಯಾಮೆರಾ ಶುಲ್ಕವನ್ನೂ ಪರಿಷ್ಕರಿಸಲಾಗಿದೆ. ಲೆನ್ಸ್ ಇಲ್ಲದ ಡಿಎಸ್‌ಎಲ್‌ಆರ್ ಕ್ಯಾಮೆರಾಕ್ಕೆ ಶುಲ್ಕವಿಲ್ಲ. 200 ಎಂಎಂನಿಂದ 500 ಎಂಎಂ ಲೆನ್ಸ್ ಹೊಂದಿದ್ದರೆ ₹1 ಸಾವಿರ + ಜಿಎಸ್‌ಟಿ, 500 ಎಂಎಂಗಿಂತ ಹೆಚ್ಚಿನ ಸಾಮರ್ಥ್ಯದ ಲೆನ್ಸ್ ತೆಗೆದುಕೊಂಡು ಬಂದರೆ ₹1,500 + ಶೇ.18ರಷ್ಟು ಜಿಎಸ್‌ಟಿ ಪಾವತಿಸಬೇಕು. ಈ ಹಿಂದೆ ಲೆನ್ಸ್ ಇಲ್ಲದ ಕ್ಯಾಮೆರಾಕ್ಕೂ ಶುಲ್ಕ ಪಾವತಿಸಬೇಕಾಗಿತ್ತು.

ಬೆಳಗಾವಿ: ಕಾಹರ್ 15ನೇ ಘಟಿಕೋತ್ಸವ ಇಂದು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಕೆಎಲ್‌ಇ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ (ಕಾಹರ್) 15ನೇ ಘಟಿಕೋತ್ಸವವು ಮಂಗಳವಾರ ಕೆಎಲ್‌ಇ ಶತಮಾನೋತ್ಸವದ ಸಭಾಂಗಣದಲ್ಲಿ ನಡೆಯಲಿದೆ.

‘ಮುಂಬೈನ ಟಾಟಾ ಮೆಮೋರಿಯಲ್ ಕೇಂದ್ರದ ಉಪನಿರ್ದೇಶಕ ಡಾ.ಶೈಲೇಶ ವಿ. ಶ್ರೀಖಂಡೆ ಅವರಿಗೆ ‘ಡಾಕ್ಟರೇಟ್ ಡಾಕ್ಟರ್ ಆಫ್ ಸೈನ್ಸ್’ ನೀಡಲಾಗಿದೆ. ಕ್ಯಾನ್ಸರ್ ಶಸ್ತ್ರಚಿಕಿತ್ಸೆಯಲ್ಲಿ ಅವರದ್ದು ದೊಡ್ಡ ಹೆಸರು’ ಎಂದು ಕಾಹರ್‌ನ ಕುಲಾಧಿಪತಿ, ಕೆಎಲ್ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ತಿಳಿಸಿದರು. ಕುಲಪತಿ ಡಾ.ನಿತಿನ್ ಗಂಗಾಣೆ ಮಾತನಾಡಿ, ‘40 ಪಿಎಚ್‌.ಡಿ, 660 ಸ್ನಾತಕೋತ್ತರ ಪದವಿ, 1,080 ಪದವಿ, 9 ಪಿಜಿ ಡಿಪ್ಲೊಮಾ, 4 ಫೆಲೋಶಿಪ್ ಹಾಗೂ 11 ವಿವಿಧ ಸರ್ಟಿಫಿಕೇಟ್ ಕೋರ್ಸ್‌ಗಳ ಪದವಿ ಪ್ರದಾನ ಮಾಡಲಾಗುವುದು. 35 ವಿದ್ಯಾರ್ಥಿಗಳಿಗೆ 46 ವಿವಿಧ ಚಿನ್ನದ ಪದಕಗಳನ್ನು ನೀಡಲಾಗುವುದು’ ಎಂದರು.

ಅಬ್ದುಲ್ ರಹಿಮಾನ್, ಅಶ್ರಫ್ ಹತ್ಯೆ ಖಂಡಿಸಿ ಎಸ್‌ಡಿಪಿಐ ನೇತೃತ್ವದಲ್ಲಿ ಪ್ರತಿಭಟನೆ

‘ಬದುಕಿನ ಗ್ಯಾರಂಟಿ ಬೇಕು’

ಪ್ರಜಾವಾಣಿ ವಾರ್ತೆ



ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಜನಸ್ತೋಮ

ಮಂಗಳೂರು: ‘ನಿಮ್ಮ ಪುಗಸಟ್ಟೆ ಗ್ಯಾರಂಟಿಯನ್ನು ನಾವು ಕೇಳಿಯೇ ಇಲ್ಲ. ನಮಗೆ ಬದುಕಿನ ಗ್ಯಾರಂಟಿ ಬೇಕು. ಹೊರಗೆ ಹೋದವರು ಮನೆಗೆ ಮರಳುವ ಗ್ಯಾರಂಟಿ ಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇನ್ನೊಬ್ಬ ಅಮಾಯಕನ ರಕ್ತ ಚೆಲ್ಲಬಾರದು ಎಂಬ ಭರವಸೆ ಸರ್ಕಾರದಿಂದ ನಮಗೆ ಬೇಕು’ ಎಂದು ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾದ (ಎಸ್‌ಡಿಪಿಐ) ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಅನ್ವರ್ ಸಾದತ್ ಬಜತ್ತೂರು ಹೇಳಿದರು.

ಅಬ್ದುಲ್ ರಹಿಮಾನ್ ಹತ್ಯೆ, ಕಲಂದರ್ ಶಾಫಿ ಹತ್ಯೆ ಯತ್ನ ಹಾಗೂ ಕುಡುಪುವಿನಲ್ಲಿ ಈಚೆಗೆ ಗುಂಪು ಹಲ್ಲೆ ನಡೆಸಿ ವಯನಾಡಿನ ಅಶ್ರಫ್ ಹತ್ಯೆ ನಡೆಸಿದ್ದನ್ನು ಖಂಡಿಸಿ ಎಸ್‌ಡಿಪಿಐ ದಕ್ಷಿಣ ಕನ್ನಡ ಜಿಲ್ಲಾ ಘಟಕವು ಇಲ್ಲಿ ಸೋಮವಾರ ಏರ್ಪಡಿಸಿದ್ದ ಪ್ರತಿಭಟನೆಯಲ್ಲಿ ಅವರು ಮಾತನಾಡಿದರು.

‘ಜಿಲ್ಲೆಯಲ್ಲಿ ಶಾಂತಿ ಕಾಪಾಡಲು ಅಧಿಕಾರಿಗಳ ಬದಲಾಯಿಸುವ ಅಗತ್ಯವಿಲ್ಲ. ನಿರಂತರ ದ್ವೇಷ ಭಾಷಣ ಮಾಡುತ್ತಿರುವ ದುಷ್ಟಕೂಟದ ಪ್ರಮುಖರನ್ನು ಗಡೀಪಾರು ಮಾಡಿದರೆ ಸಾಕು. ಸಂಘ ಪರಿವಾರದ ಕೋಮು ಗೂಂಡಾಗಳನ್ನು ಹಡೆಮುರಿಕಟ್ಟಿದರೆ, ಇಡಿ ಜಿಲ್ಲೆ ರಾತ್ರಿ 7 ಗಂಟೆಗೆ ಬಂದ್ ಆಗುವ ಸ್ಥಿತಿ ಇರುವುದಿಲ್ಲ. ಇಂತಹ ಗೂಂಡಾಗಳನ್ನು ಮಟ್ಟಹಾಕಲು ಪೊಲೀಸರಿಗೆ ಸ್ವಾತಂತ್ರ್ಯ ನೀಡಿದರೆ ಸಾಕು’ ಎಂದರು.

‘ದೇಹದ ಗುರುತು ಸಿಗದಂತೆ ಕೊಲ್ಲುತ್ತೇವೆ ಎಂದು ಬಾಡಿಗೆ ಭಾಷಣಕಾರರು ಹೇಳಿಕೆ ನೀಡಿದಾಗಲೇ ಪೊಲೀಸರ ಗಮನಕ್ಕೆ ತಂದಿದ್ದೆವು. ಅಂತಹವರನ್ನು ಗಡೀಪಾರು ಮಾಡಿ ಎಂದು ಹೇಳಿದ್ದೆವು. ಅವರ ಮೇಲೆ ಎಫ್‌ಐಆರ್ ದಾಖಲಿಸಿ ಬಿಟ್ಟುಬಿಟ್ಟರು. ತಲವಾರು ಹಿಡಿದು ದ್ವಿಚಕ್ರವಾಹನದಲ್ಲಿ ಅಡ್ಡಾಡಿದವರನ್ನು ತಕ್ಷಣವೇ ಬಂಧಿಸಿ ಜೈಲಿಗೆ ಅಟ್ಟುತ್ತಿದ್ದರೆ, ಊರಿಗೆ ಉಪಕಾರಿಯಾಗಿದ್ದ ಅಬ್ದುಲ್ ರಹಿಮಾನ್ ಅವರನ್ನು ಕಳೆದುಕೊಳ್ಳುವ ಗತಿ ಬರುತ್ತಿರಲಿಲ್ಲ’ ಎಂದರು.

ತಮ್ಮನನ್ನು ಕೊಂದ ಬಳಿಕವೂ 2 ಗಂಟೆ ಕ್ರಿಕೆಟ್ ಆಡಿದ್ದಾರೆ. ಅದನ್ನು ಅಸಹಜ ಸಾವು ಎಂದು ಬಿಂಬಿಸಲು ಯತ್ನಿಸಿದ್ದಾರೆ. ಆತನನ್ನು ಕೊಂದವರ ಮನಸ್ಥಿತಿ ಎಷ್ಟು ಕ್ರೂರವಾಗಿರಬಹುದು

ಅಬ್ದುಲ್ ಜಬ್ಬಾರ್, ಗುಂಪು ಹಲ್ಲೆಯಿಂದ ಸತ್ತ ಅಶ್ರಫ್‌ನ ಸಹೋದರ

ತಮ್ಮನಿಗೆ ನ್ಯಾಯ ಸಿಗಬೇಕಾದರೆ ಅವನ ಹತ್ಯೆ ಮಾಡಿದವರು, ತಲವಾರು ಕೊಟ್ಟವರು, ವಾಹನ ಕೊಟ್ಟವರಿಗೂ ಶಿಕ್ಷೆ ಆಗಬೇಕು. ಇಲ್ಲದಿದ್ದರೆ 10 ಲಕ್ಷ ಜನ ಸೇರಿ ಪ್ರತಿಭಟಿಸುತ್ತೇವೆ

ಹನೀಫ್ ಕೊಳತ್ತಮಜಲು, ಮೃತ ಅಬ್ದುಲ್ ರಹಿಮಾನ್ ಸಹೋದರ


ಹಿಂದೂ ಜಾಗರಣ ವೇದಿಕೆ ಮುಖಂಡನ ಬಂಧನ



ರತ್ನಾಕರ ಅಮೀನ್

ಉಡುಪಿ: ಸಾಮಾಜಿಕ ಮಾಧ್ಯಮದಲ್ಲಿ ಪ್ರಚೋದನಕಾರಿ ಪೋಸ್ಟ್ ಮಾಡಿದ ಆರೋಪದಲ್ಲಿ ಹಿಂದೂ ಜಾಗರಣ ವೇದಿಕೆ ಮುಖಂಡ, ಕಾರ್ಕಳದ ಅಜೆಕಾರು ನಿವಾಸಿ ರತ್ನಾಕರ ಅಮೀನ್ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಸರ್ಕಾರದಿಂದಲೇ ಗಲಭೆಗೆ ಪ್ರಚೋದನೆ’



ಬಿ.ವೈ. ವಿಜಯೇಂದ್ರ

ಕುಷ್ಟಗಿ (ಕೊಪ್ಪಳ ಜಿಲ್ಲೆ): ‘ಕರಾವಳಿ ಭಾಗದಲ್ಲಿ ಶಾಂತಿ, ಸುವ್ಯವಸ್ಥೆ ಪರಿಸ್ಥಿತಿ ನಿಭಾಯಿಸುವಲ್ಲಿ ವಿಫಲವಾಗಿರುವ ರಾಜ್ಯದ ಕಾಂಗ್ರೆಸ್ ಸರ್ಕಾರ ಅಮಾಯಕ ಹಿಂದೂ ಕಾರ್ಯಕರ್ತರನ್ನು ಬಂಧಿಸುತ್ತಿದೆ. ಆ ಮುಖಂಡರ ಮೇಲೆ ಪ್ರಕರಣ ದಾಖಲಿಸಿ ಪೊಲೀಸರ ಮೂಲಕ ಸರ್ಕಾರವೇ ಗಲಭೆಗೆ ಪ್ರಚೋದನೆ ನೀಡುತ್ತಿದೆ’ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆರೋಪಿಸಿದರು.

ಸೋಮವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕರಾವಳಿ ಭಾಗದಲ್ಲಿ ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ, ಒಬ್ಬ ಮುಸಲ್ಮಾನನ ಹತ್ಯೆಯಾಗಿದೆ. ಕಾನೂನು ಸುವ್ಯವಸ್ಥೆ ಕಾಪಾಡುವ ನೆಪದಲ್ಲಿ ರಾಜ್ಯ ಸರ್ಕಾರ ಪೊಲೀಸರ ಮೇಲೆ ಒತ್ತಡ ಹೇರಿ ಮಧ್ಯರಾತ್ರಿ ಅಮಾಯಕ ಹಿಂದೂ ಕಾರ್ಯಕರ್ತರ ಮನೆ ಬಾಗಿಲು ತಟ್ಟಿ ವಿಚಾರಣೆಗೆ ಒಳಪಡಿಸುತ್ತಿದೆ. ಕಾಂಗ್ರೆಸ್ ಸರ್ಕಾರ ಯಾರನ್ನೋ ಓಲೈಸುವ, ಹಿಂದೂ ಕಾರ್ಯಕರ್ತರಿಗೆ ಬೆದರಿಕೆ ಒಡ್ಡುವ ಕೆಲಸ ಮಾಡುತ್ತಿರುವಂತಿದೆ’ ಎಂದು ದೂರಿದರು.

‘ತಪ್ಪು ಮಾಡಿದವರನ್ನು ಬಂಧಿಸಲಿ. ಆದರೆ, ವಿನಾಕಾರಣ ಹಿಂದೂಗಳನ್ನು ಗುರಿಯಾಗಿಸಿ ಕೊಳ್ಳುವುದು ಸರಿಯಲ್ಲ. ಇಂಥ ನಡವಳಿಕೆಯಿಂದ ಅಲ್ಲಿನ ವಾತಾವರಣ ಮತ್ತಷ್ಟು ಹದಗೆಡಲಿದ್ದು, ಅದಕ್ಕೆ ಸರ್ಕಾರವೇ ಹೊಣೆ ಎಂಬುದನ್ನು ಸಿದ್ದರಾಮಯ್ಯ, ಜಿ.ಪರಮೇಶ್ವರ ಅರ್ಥ ಮಾಡಿಕೊಳ್ಳಲಿ’ ಎಂದರು.

‘ಕೋಮುವಾದಿ’ ಮುಖಂಡರ ಮೇಲೆ ನಿಗಾ...

ಒಂದನೇ ಪುಟದಿಂದ...

ಸಂಘಟನೆಗಳಲ್ಲಿ ಗುರುತಿಸಿಕೊಂಡ ಮುಖಂಡರ ಮನೆಗೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸುವುದಕ್ಕೆ ವಿರೋಧ ವ್ಯಕ್ತವಾಗಿದೆ. ಈ ಕ್ರಮಕ್ಕೆ ಆಕ್ಷೇಪ ವ್ಯಕ್ತಪಡಿಸಿ ಕೆಲವರು ಕಡಬ ಪೊಲೀಸ್ ಠಾಣೆ ಮುಂದೆ ಭಾನುವಾರ ರಾತ್ರಿ ಪ್ರತಿಭಟನೆ ನಡೆಸಿದ್ದಾರೆ. ತಮ್ಮ ಕುಟುಂಬದ ಸದಸ್ಯರನ್ನೂ ಕರೆದುಕೊಂಡು ಬಂದು ಪ್ರತಿಭಟನೆ ನಡೆಸುವುದಾಗಿ ಕೆಲ ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ‘ಯಾವುದೇ ಅನುಮತಿ ಪಡೆಯದೆಯೇ ಕೆಲವರು ಅಕ್ರಮವಾಗಿ ಗುಂಪು ಸೇರಿ ಕಡಬ ಠಾಣೆ ಎದುರು ಪ್ರತಿಭಟನೆ ನಡೆಸಿದ್ದಾರೆ. ಈ ಬಗ್ಗೆ 15 ಜನರ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಲಿದ್ದೇವೆ’ ಎಂದಿದ್ದಾರೆ.

‘ಪೊಲೀಸರು ಕರ್ತವ್ಯ ನಿರ್ವಹಿಸುವುದಕ್ಕೆ ಅಡ್ಡಿಪಡಿಸಿದರೆ, ಮುಂದೆಯೂ ಕ್ರಮ ಕೈಗೊಳ್ಳಲಿದ್ದೇವೆ. ಕಾನೂನು ಸುವ್ಯವಸ್ಥೆ ನಿಯಂತ್ರಣಕ್ಕೆ ಬರುವವರೆಗೂ ಇದು ಮುಂದುವರಿಯಲಿದೆ. ತಮ್ಮ ಕುಟುಂಬದ ಸದಸ್ಯರನ್ನೂ ಕರೆತಂದು ಪ್ರತಿಭಟನೆ ನಡೆಸುವುದಾಗಿ ಕಡಬದಲ್ಲಿ ಧರಣಿ ನಡೆಸಿದ ಕೆಲವರು ಹೇಳಿದ್ದಾರೆ. ಆ ರೀತಿ ಮಾಡಿದರೆ ಅವರ ಕುಟುಂಬದ ಸದಸ್ಯರ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳಲಿದ್ದೇವೆ’ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ವಿಎಚ್‌ಪಿ ಎಚ್ಚರಿಕೆ: ‘ಜಿಲ್ಲೆಯಲ್ಲಿ ಪೊಲೀಸರು ರಾತ್ರಿ 10ರಿಂದ 2ಗಂಟೆಯ ನಡುವೆ ಹಿಂದೂ ಕಾರ್ಯಕರ್ತರ ಮನೆಗಳಿಗೆ ಹೋಗಿ ಕಿರುಕುಳ ನೀಡುತ್ತಿದ್ದಾರೆ. ಮನೆಯಲ್ಲಿರುವ ಅನಾರೋಗ್ಯ ಪೀಡಿತರಿಗೆ, ಹಿರಿಯರಿಗೆ ತೊಂದರೆ ಆಗುತ್ತಿದೆ. ಹಿಂದೂ ಕಾರ್ಯಕರ್ತರನ್ನು ದಮನಿಸಲು ಸರ್ಕಾರ ಈ ಕ್ರಮ ಕೈಗೊಂಡಿದೆ. ಇದರಿಂದ ಸಮಸ್ಯೆಗಳಾದರೆ ಇಲಾಖೆಯೇ ಹೊಣೆ’ ಎಂದು ವಿಶ್ವ ಹಿಂದೂ ಪರಿಷತ್ ಮುಖಂಡರು ಎಚ್ಚರಿಸಿದ್ದಾರೆ.

‘ಕಾರ್ಯಕರ್ತರ ಮನೆಗಳಿಗೆ ತೆರಳುವ ಪೊಲೀಸರು, ಜಿಪಿಎಸ್ ದಾಖಲೆಸಹಿತ ಫೋಟೊ ತೆಗೆದು ಗಾಬರಿಪಡಿಸುತ್ತಿದ್ದಾರೆ. ವಾಹನ ತಪಾಸಣೆ ನಡೆಸಿ ಕಿರುಕುಳ ನೀಡುತ್ತಿದ್ದಾರೆ. ಕಾನೂನುಬಾಹಿರ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳದ ನಮ್ಮ ಸಂಘಟನೆಯ ಕಾರ್ಯಕರ್ತರ ಮನೆಗಳಿಗೆ ರಾತ್ರಿ ವೇಳೆ ತೆರಳಿ ಈ ರೀತಿ ಮಾಡುವುದು ಸರಿಯಲ್ಲ. ಇದನ್ನು ಸಹಿಸುವುದಿಲ್ಲ. ಸಂದೇಹಗಳಿದ್ದರೆ ನೋಟಿಸ್ ನೀಡಿ ಕರೆಸಿಕೊಳ್ಳಲಿ. ಈ ಬಗ್ಗೆ ಹೈಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ದಾವೆ ಹೂಡುತ್ತೇವೆ’ ಎಂದು ವಿಶ್ವ ಹಿಂದೂ ಪರಿಷತ್ ಪುತ್ತೂರು ಘಟಕದ ಅಧ್ಯಕ್ಷ ಕೃಷ್ಣಪ್ರಸನ್ನ ತಿಳಿಸಿದ್ದಾರೆ.

ಆಡಳಿತ ಯಂತ್ರದ ದುರ್ಬಳಕೆ: ಸಂಸದ

‘ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ಹಾಗೂ ಹಿಂದೂ ಸಂಘಟನೆಗಳ ಪ್ರಮುಖರ ವಿರುದ್ಧ ಎಫ್‌ಐಆರ್ ದಾಖಲಿಸಿ ಕರಾವಳಿಯ ಹಿಂದೂ ನಾಯಕರನ್ನು ಮತ್ತು ಸಂಘಟನೆಗಳನ್ನು ಬೆದರಿಸಲು, ಕಿರುಕುಳ ನೀಡಲು ಸರ್ಕಾರ ಆಡಳಿತ ಯಂತ್ರವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ’ ಎಂದು ದಕ್ಷಿಣ ಕನ್ನಡ ಸಂಸದ ಕ್ಯಾ.ಬ್ರಿಜೇಶ್ ಚೌಟ ದೂರಿದ್ದಾರೆ.

‘ಜಿಲ್ಲೆಯಲ್ಲಿ ಹಿಂದೂ ಸಮಾಜದ ನಾಯಕರಿಗೆ ಕಿರುಕುಳ ನೀಡುತ್ತಿರುವ ಬಗ್ಗೆ ರಾಜ್ಯ ಪೊಲೀಸ್ ಮಹಾನಿರ್ದೇಶಕರ ಜೊತೆ ಮಾತನಾಡಿ ಕಳವಳ ವ್ಯಕ್ತಪಡಿಸಿದ್ದೇನೆ. ಇದೇ ವಿಷಯವಾಗಿ ಜಿಲ್ಲೆಯ ಬಿಜೆಪಿ ಶಾಸಕರು, ಪಕ್ಷದ ಜಿಲ್ಲಾ ಘಟಕದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಮಂಗಳೂರು ಪೊಲೀಸ್ ಕಮಿಷನರ್ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರನ್ನು ಇದೇ 3ರಂದು (ಮಂಗಳವಾರ) ಭೇಟಿ ಮಾಡಲಿದ್ದಾರೆ’ ಎಂದು ಅವರು ತಿಳಿಸಿದ್ದಾರೆ.

‘ತಾಲಿಬಾನಿ ಸರ್ಕಾರ ಸ್ಥಾಪನೆಯ ಹೆಜ್ಜೆ’

ಮೈಸೂರು: ‘ಕಲ್ಲಡ್ಕ ಪ್ರಭಾಕರ್ ಭಟ್ ವಿರುದ್ಧ ಎಫ್‌ಐಆರ್ ದಾಖಲಿಸಿರುವುದು, ತಾಲಿಬಾನಿ ಸರ್ಕಾರ ಸ್ಥಾಪಿಸಲು ಇಟ್ಟಿರುವ ಹೆಜ್ಜೆಯಾಗಿದೆ’ ಎಂದು ಮಾಜಿ ಸಂಸದ ಪ್ರತಾಪ ಸಿಂಹ ಆರೋಪಿಸಿದರು.

ನಗರದಲ್ಲಿ ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿ, ‘ದಕ್ಷಿಣ ಕನ್ನಡದಲ್ಲಿ ಹಿಂದೂಗಳಲ್ಲಿ ಅಭದ್ರತೆ, ಆತಂಕವಿದೆ. ಪ್ರವೀಣ್ ನೆಟ್ಟಾರ್ ಹತ್ಯೆಯಾಗದಿದ್ದರೆ ಈ ಸರಣಿ ಹತ್ಯೆ ನಡೆಯುತ್ತಿದ್ದಾ? ಪ್ರವೀಣ್ ಕೊಂದವರಿಗೆ ಸರಿಯಾದ ಪಾಠ ಕಲಿಸಿದ್ದರೆ ಹತ್ಯೆಗಳು ಆಗುತ್ತಿರಲಿಲ್ಲ’ ಎಂದು ಪ್ರತಿಪಾದಿಸಿದರು.

ಷೇರುಪೇಟೆ ವಹಿವಾಟು ▼ 77

ಹಿಂದಿನ ಅಂತ್ಯ 81,451 — ಇಂದಿನ ಅಂತ್ಯ 81,373

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,750
ಇಂದಿನ ಅಂತ್ಯ	24,716
▼	34
ದಿನದ ಕನಿಷ್ಠ	24,526

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹605
12 ಕ್ಕೆ	₹80
ಮೈಸೂರು	
100ಕ್ಕೆ	₹610

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹289-540
ದ್ವಿತಳಿ (ಬಿ.ವಿ)	₹400-722

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹196
ಆರ್‌ಎಸ್‌ಎಸ್-5	₹191.50
ಗುಡ್ ಲಾಟ್	₹181.50

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹10000-20500
ದಾವಣಗೆರೆ	₹17350-17350
ತಿಪಟೂರು	₹18500-20511
ತುಮಕೂರು	₹15200-16500
ತುರುವೇಕೆರೆ	₹17000-20500

ಎ.ಐ ಕ್ಷೇತ್ರದಲ್ಲಿನ ನೇಮಕಾತಿ ಶೇ 25ರಷ್ಟು ಏರಿಕೆ

ನವದೆಹಲಿ (ಪಿಟಿಐ): ಕೃತಕ ಬುದ್ಧಿಮತ್ತೆ ಮತ್ತು ಮಷಿನ್ ಲರ್ನಿಂಗ್ (ಎ.ಐ ಆ್ಯಂಡ್ ಎಂ.ಎಲ್) ವಲಯದಲ್ಲಿನ ನೇಮಕಾತಿಯು ಮೇ ತಿಂಗಳಲ್ಲಿ ಶೇ 25ರಷ್ಟು ಏರಿಕೆಯಾಗಿದೆ ಎಂದು ನೌಕರಿ ಡಾಟ್ ಕಾಂ ವರದಿ ಸೋಮವಾರ ತಿಳಿಸಿದೆ.

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿನ ನೇಮಕಾತಿಯು ಕಳೆದ ವರ್ಷದ ಇದೇ ತಿಂಗಳಿಗೆ ಹೋಲಿಸಿದರೆ ಶೇ 5ರಷ್ಟು ಇಳಿಕೆಯಾಗಿದೆ ಎಂದು ತಿಳಿಸಿದೆ.

ರಿಯಲ್ ಎಸ್ಟೇಟ್ ಮತ್ತು ವಿಮಾ ಕ್ಷೇತ್ರದಲ್ಲಿ ನೇಮಕಾತಿಯು ಕ್ರಮವಾಗಿ ಶೇ 5 ಮತ್ತು ಶೇ 6ರಷ್ಟು ಏರಿಕೆಯಾಗಿದೆ. ಚಿಲ್ಲರೆ, ದೂರಸಂಪರ್ಕ/ಐಎಸ್‌ಪಿ, ಬ್ಯಾಂಕಿಂಗ್, ಹಣಕಾಸು ಕ್ಷೇತ್ರದಲ್ಲಿ ಶೇ 8ರಿಂದ ಶೇ 9ರಷ್ಟು ಇಳಿದಿದೆ.

ಹೈದರಾಬಾದ್ ಮತ್ತು ಕೊಚ್ಚಿಯಲ್ಲಿ ನೇಮಕಾತಿಯು ಕ್ರಮವಾಗಿ ಶೇ 7 ಮತ್ತು ಶೇ 8ರಷ್ಟು ಬೆಳವಣಿಗೆ ಕಂಡಿದೆ ಎಂದು ತಿಳಿಸಿದೆ.

ಮರ್ಸಿಡೀಸ್ ಬೆಂಜ್, ಸ್ಕೋಡಾ–ಫೋಕ್ಸ್‌ವ್ಯಾಗನ್, ಹುಂಡೈ, ಕಿಯಾಗೆ ಆಸಕ್ತಿ: ಕೇಂದ್ರ

‘ಟೆಸ್ಲಾ’ಕ್ಕೆ ಘಟಕ ಸ್ಥಾಪನೆಗೆ ಆಸಕ್ತಿ ಇಲ್ಲ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ (ಪಿಟಿಐ): ‘ವಿದ್ಯುತ್‌ಚಾಲಿತ ವಾಹನಗಳ ತಯಾರಿಕಾ ಕಂಪನಿ ಟೆಸ್ಲಾ ಭಾರತದಲ್ಲಿ ತಯಾರಿಕಾ ಘಟಕ ಸ್ಥಾಪಿಸಲು ಆಸಕ್ತಿ ಹೊಂದಿಲ್ಲ. ಆದರೆ, ಮಳಿಗೆಗಳನ್ನು ತೆರೆಯುವ ಉದ್ದೇಶವನ್ನು ಹೊಂದಿದೆ’ ಎಂದು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್‌.ಡಿ. ಕುಮಾರಸ್ವಾಮಿ ಸೋಮವಾರ ತಿಳಿಸಿದ್ದಾರೆ.



ಎಚ್‌. ಡಿ. ಕುಮಾರಸ್ವಾಮಿ

ಭಾರತದಲ್ಲಿ ವಿದ್ಯುತ್‌ಚಾಲಿತ ಕಾರುಗಳ ಉತ್ಪಾದನೆಯನ್ನು ಉತ್ತೇಜಿಸುವ ಯೋಜನೆಯ ಮಾರ್ಗಸೂಚಿಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು. ಕಳೆದ ವರ್ಷ ಮಾರ್ಚ್ 15ರಂದು ಈ ಯೋಜನೆಯನ್ನು ಪ್ರಕಟಿಸಲಾಗಿದ್ದರೂ ಈಗ ಇದರ ಮಾರ್ಗಸೂಚಿಗಳನ್ನು ಹೊರಡಿಸಲಾಯಿತು ಎಂದು ಹೇಳಿದ್ದಾರೆ.

ಮರ್ಸಿಡೀಸ್ ಬೆಂಜ್, ಸ್ಕೋಡಾ–ಫೋಕ್ಸ್‌ವ್ಯಾಗನ್, ಹುಂಡೈ ಮತ್ತು ಕಿಯಾ ಸೇರಿದಂತೆ ಜಾಗತಿಕ ಆಟೊಮೊಬೈಲ್ ತಯಾರಕರು ಭಾರತದಲ್ಲಿ ಎಲೆಕ್ಟ್ರಿಕ್ ಕಾರುಗಳನ್ನು ತಯಾರಿಸಲು ಆಸಕ್ತಿ ತೋರಿಸಿದ್ದಾರೆ ಎಂದು ತಿಳಿಸಿದ್ದಾರೆ.

ಇಲ್ಲಿಯವರೆಗೆ ಟೆಸ್ಲಾ ಕಾರುಗಳ ತಯಾರಿಕಾ ಘಟಕ ಸ್ಥಾಪಿಸಲು ಆಸಕ್ತಿ ತೋರಿಸಿಲ್ಲ. ಭಾರತದಲ್ಲಿ ವಿದ್ಯುತ್‌ಚಾಲಿತ ಕಾರುಗಳ ತಯಾರಕರ ಸಭೆಯಲ್ಲಿ ಟೆಸ್ಲಾದ ಪ್ರತಿನಿಧಿಗಳು ಮೊದಲ ಸುತ್ತಿನ ಪಾಲುದಾರರ ಚರ್ಚೆಗಳಲ್ಲಿ ಮಾತ್ರ ಭಾಗವಹಿಸಿದ್ದರು. ಎರಡು ಮತ್ತು ಮೂರನೇ ಸುತ್ತಿನ ಚರ್ಚೆಗಳಲ್ಲಿ ಭಾಗವಹಿಸಿರಲಿಲ್ಲ ಎಂದು ತಿಳಿಸಿದ್ದಾರೆ.

‘ಭಾರತ ವಿಧಿಸುವ ಸುಂಕ ತಪ್ಪಿಸಿಕೊಳ್ಳಲು ಟೆಸ್ಲಾ ಸಿಇಒ ಇಲಾನ್ ಮಸ್ಕ್ ಅವರು ಅಲ್ಲಿಯೇ ಟೆಸ್ಲಾ ವಿದ್ಯುತ್‌ಚಾಲಿತ ಕಾರು ತಯಾರಿಕಾ ಘಟಕ ಸ್ಥಾಪಿಸಿದರೆ, ಅದು ಅಮೆರಿಕಕ್ಕೆ ಮಾಡುವ ಅನ್ಯಾಯವಾಗಲಿದೆ’ ಎಂದು ಇತ್ತೀಚೆಗೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದರು.

ಇ.ವಿ ಕಾರು ಉತ್ಪಾದನೆಗೆ ಮಾರ್ಗಸೂಚಿ ಪ್ರಕಟ

ದೇಶದಲ್ಲಿ ವಿದ್ಯುತ್ ಚಾಲಿತ ವಾಹನಗಳಿಗೆ (ಇ.ವಿ) ಉತ್ತೇಜನ ನೀಡುವ ಉದ್ದೇಶದ ಬೃಹತ್ ಹೂಡಿಕೆ ಯೋಜನೆಯನ್ನು ಎಚ್‌.ಡಿ.ಕುಮಾರಸ್ವಾಮಿ ಘೋಷಿಸಿದರು.

ದೇಶದಲ್ಲಿ ಭೂಸಾರಿಗೆ ಕ್ಷೇತ್ರದಲ್ಲಿ ಇಂಗಾಲದ ಹೊರಸೂಸುವಿಕೆಯನ್ನು ಶೂನ್ಯಕ್ಕೆ ಇಳಿಸಬೇಕು ಎಂಬ ಪ್ರಧಾನಿ ನರೇಂದ್ರ ಮೋದಿ ಅವರ ಸಂಕಲ್ಪವನ್ನು ಈಡೇರಿಸುವ ಗುರಿಯೊಂದಿಗೆ ಈ ಹೂಡಿಕೆ ಯೋಜನೆಯನ್ನು ಘೋಷಣೆ ಮಾಡಲಾಗಿದೆ ಎಂದು ಸುದ್ದಿಗೋಷ್ಠಿಯಲ್ಲಿ ಸೋಮವಾರ ತಿಳಿಸಿದರು.

ಈ ಯೋಜನೆಯು ಜಾಗತಿಕ ಮಟ್ಟದ ವಿದ್ಯುತ್ ಚಾಲಿತ ವಾಹನಗಳ ತಯಾರಕರನ್ನು ಭಾರತದಲ್ಲಿ ಹೂಡಿಕೆ ಮಾಡಲು ಮತ್ತು ದೇಶೀಯವಾಗಿಯೇ ಕಾರುಗಳನ್ನು ತಯಾರಿಸಲು ಆಕರ್ಷಿಸುವ ಗುರಿಯನ್ನು ಹೊಂದಿದೆ. ಮೂರು ವರ್ಷದಲ್ಲಿ ಕಂಪನಿಗಳು ಕನಿಷ್ಠ ₹4,150 ಕೋಟಿ ಹೂಡಿಕೆ ಮಾಡಬೇಕಿದೆ. ಈ ಕಂಪನಿಗಳಿಗೆ ಆಮದು ಸುಂಕದಲ್ಲಿ ರಿಯಾಯಿತಿ ಸಿಗಲಿದೆ ಎಂದರು.

ಯೋಜನೆಯಡಿ ಅರ್ಜಿ ಸಲ್ಲಿಸುವ ಪ್ರಕ್ರಿಯೆ ಶೀಘ್ರ ಆರಂಭವಾಗಲಿದೆ. ಆರಂಭದಲ್ಲಿ 120 ದಿನಗಳವರೆಗೆ ವಿಂಡೋ ತೆರೆದಿರುತ್ತದೆ. ಭವಿಷ್ಯದಲ್ಲಿ ಅಗತ್ಯವಿರುವಂತೆ ಸಚಿವಾಲಯವು ಅದನ್ನು ಪುನಃ ತೆರೆಯಬಹುದು. ಈ ಯೋಜನೆಯು 2026ರ ಮಾರ್ಚ್ 15ರ ವರೆಗೆ ಅರ್ಜಿಗಳನ್ನು ಸ್ವೀಕರಿಸುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1350 (1365)
ಸೋಯಾ (ರಿಫೈನ್ಡ್)	₹1190 (1225)
ಸೂರ್ಯಕಾಂತಿ (ರಿಫೈನ್ಡ್)	₹1335 (1370)
ಪಾಮೋಲಿನ್	₹1160 (1165)

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1,000-1,500
ಮಧ್ಯಮ	₹600-1,000
ಸಣ್ಣ	₹300-600

ವಿನಿಮಯ ದರ

$ ಡಾಲರ್	85.39
£ ಪೌಂಡ್	115.60
€ ಯುರೊ	97.55
¥ ಯೆನ್ (100ಕ್ಕೆ)	60

ತಯಾರಿಕಾ ಚಟುವಟಿಕೆ ಇಳಿಕೆ

ನವದೆಹಲಿ (ಪಿಟಿಐ): ದೇಶದ ತಯಾರಿಕಾ ವಲಯದ ಚಟುವಟಿಕೆಯು ಮೇ ತಿಂಗಳಲ್ಲಿ ಮೂರು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆಯಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷೆ ವರದಿ ಸೋಮವಾರ ತಿಳಿಸಿದೆ.

ಏಪ್ರಿಲ್ ತಿಂಗಳಲ್ಲಿ ಸೂಚ್ಯಂಕವು 58.2 ದಾಖಲಾಗಿತ್ತು. ಮೇ ತಿಂಗಳಲ್ಲಿ 57.6 ಆಗಿದೆ. ಹಣದುಬ್ಬರದ ಒತ್ತಡ, ಉತ್ಪನ್ನಗಳಿಗೆ ಕುಸಿದ ಬೇಡಿಕೆಯಿಂದ ಸೂಚ್ಯಂಕವು ಇಳಿಕೆಯಾಗಿದೆ ಎಂದು ತಿಳಿಸಿದೆ.

ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕ (ಪಿಎಂಐ) ಆಧಾರದ ಮೇಲೆ ಲೆಕ್ಕ ಹಾಕುವ ಈ ಸೂಚ್ಯಂಕವು 50ರ ಮೇಲಿದ್ದರೆ ಸಕಾರಾತ್ಮಕ ಬೆಳವಣಿಗೆ ಎಂದು ಅರ್ಥೈಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ನಕಾರಾತ್ಮಕ ಪ್ರಗತಿ ಎಂದು ಪರಿಗಣಿಸಲಾಗುತ್ತದೆ.

‘ದೇಶದ ತಯಾರಿಕಾ ವಲಯದ ಚಟುವಟಿಕೆ ಮೇ ತಿಂಗಳಲ್ಲಿ ಸದೃಢವಾಗಿದೆ. ಉತ್ಪಾದನೆ ಮತ್ತು ಹೊಸ ಬೇಡಿಕೆಯು ಏಪ್ರಿಲ್ ತಿಂಗಳಿಗೆ ಹೋಲಿಸಿದರೆ ಕಡಿಮೆಯಾಗಿದೆ’ ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞ ಪ್ರಂಜುಲ್ ಭಂಡಾರಿ ಹೇಳಿದ್ದಾರೆ. ಕಳೆದ ತಿಂಗಳು ಕಂಪನಿಗಳು ಹೆಚ್ಚುವರಿ ಸಿಬ್ಬಂದಿಯನ್ನು ನೇಮಕಾತಿ ಮಾಡಿಕೊಂಡವು ಎಂದು ತಿಳಿಸಿದ್ದಾರೆ.

ಸರಕುಗಳ ವೆಚ್ಚ, ತಯಾರಿಕಾ ಮತ್ತು ಕಾರ್ಮಿಕರ ವೆಚ್ಚ ಹೆಚ್ಚಳವಾಗಿದೆ. ಇದರಿಂದ ತಯಾರಕರು ಮಾರಾಟದ ಬೆಲೆಯನ್ನು ಏರಿಕೆ ಮಾಡಿದ್ದಾರೆ. ಏಷ್ಯಾ, ಯುರೋಪ್, ಪಶ್ಚಿಮ ಏಷ್ಯಾ ಮತ್ತು ಅಮೆರಿಕದಿಂದ ಬೇಡಿಕೆ ಸದೃಢವಾಗಿದೆ ಎಂದು ತಿಳಿಸಿದ್ದಾರೆ. ಮುಂದಿನ ದಿನಗಳಲ್ಲಿ ತಯಾರಿಕೆಯಲ್ಲಿ ಹೆಚ್ಚಳವಾಗುವ ವಿಶ್ವಾಸವನ್ನು ತಯಾರಕರು ಹೊಂದಿದ್ದಾರೆ ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಯುಪಿಐ ಮೂಲಕ ₹25 ಲಕ್ಷ ಕೋಟಿ ವಹಿವಾಟು

ನವದೆಹಲಿ (ಪಿಟಿಐ): ಏಕೀಕೃತ ಪಾವತಿ ವ್ಯವಸ್ಥೆ (ಯುಪಿಐ) ಮೂಲಕ ಮೇ ತಿಂಗಳಲ್ಲಿ ದಾಖಲೆಯ ಗರಿಷ್ಠ ₹25.14 ಲಕ್ಷ ಕೋಟಿಗಳಷ್ಟು ವಹಿವಾಟು ನಡೆದಿದೆ ಎಂದು ರಾಷ್ಟ್ರೀಯ ಪಾವತಿ ನಿಗಮ (ಎನ್‌ಪಿಸಿಐ) ಸೋಮವಾರ ತಿಳಿಸಿದೆ.

ಏಪ್ರಿಲ್ ತಿಂಗಳಲ್ಲಿ ಯುಪಿಐ ವಹಿವಾಟಿನ ಮೌಲ್ಯ ₹23.94 ಲಕ್ಷ ಕೋಟಿಯಷ್ಟಿತ್ತು. ಇದಕ್ಕೆ ಹೋಲಿಸಿದರೆ ಶೇ 5ರಷ್ಟು ಏರಿಕೆಯಾಗಿದೆ. ಕಳೆದ ವರ್ಷದ ಮೇ ತಿಂಗಳಲ್ಲಿ ₹20.44 ಲಕ್ಷ ಕೋಟಿಗಳಷ್ಟಿತ್ತು ಎಂದು ತಿಳಿಸಿದೆ.

ಏಪ್ರಿಲ್‌ನಲ್ಲಿ 1,789.3 ಕೋಟಿ, ಮೇ ತಿಂಗಳಲ್ಲಿ 1,867.7 ಕೋಟಿ ವಹಿವಾಟುಗಳು ನಡೆದಿವೆ. ಈ ತಿಂಗಳಲ್ಲಿ ದೈನಂದಿನ ವಹಿವಾಟು ಮೌಲ್ಯ ಸರಾಸರಿ ₹81,106 ಕೋಟಿಯಾಗಿದೆ ಎಂದು ತಿಳಿಸಿದೆ.

‘ಮೇ ತಿಂಗಳಲ್ಲಿ ₹25.14 ಲಕ್ಷ ಕೋಟಿ ಮೌಲ್ಯದ 1,868 ಕೋಟಿ ಯುಪಿಐ ವಹಿವಾಟು ನಡೆದಿದೆ. ಇದು ದಾಖಲೆಯ ಮೈಲುಗಲ್ಲಾಗಿದೆ. ಭಾರತದಲ್ಲಿ ಹೆಚ್ಚುತ್ತಿರುವ ಡಿಜಿಟಲ್ ಪಾವತಿ ವ್ಯವಸ್ಥೆ ಮತ್ತು ಆದ್ಯತೆಯ ವಹಿವಾಟಿಗೆ ಇದು ಸಾಕ್ಷಿಯಾಗಿದೆ’ ಎಂದು ಸ್ವೈಸ್ ಮನಿ ಸಂಸ್ಥಾಪಕ ಮತ್ತು ಸಿಇಒ ದಿಲೀಪ್ ಮೋದಿ ತಿಳಿಸಿದ್ದಾರೆ.

ಶೇ 98.26ರಷ್ಟು ನೋಟು ವಾಪಸ್

ಮುಂಬೈ (ಪಿಟಿಐ): ₹2 ಸಾವಿರ ಮುಖಬೆಲೆಯ ಶೇ 98.26ರಷ್ಟು ನೋಟುಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿವೆ. ₹6,181 ಕೋಟಿ ಮೌಲ್ಯದ ನೋಟುಗಳು ಜನರ ಬಳಿ ಈಗಲೂ ಉಳಿದಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೋಮವಾರ ತಿಳಿಸಿದೆ.

₹2 ಸಾವಿರ ಮುಖಬೆಲೆಯ ಒಟ್ಟು ₹3.56 ಲಕ್ಷ ಕೋಟಿ ಮೌಲ್ಯದ ನೋಟುಗಳನ್ನು ಚಲಾವಣೆಯಿಂದ ಹಿಂಪಡೆಯುವುದಾಗಿ 2023ರ ಮೇ 19ರಂದು ಆರ್‌ಬಿಐ ಘೋಷಿಸಿತ್ತು. ಪ್ರಸಕ್ತ ವರ್ಷದ ಮೇ ತಿಂಗಳಿಗೆ ಎರಡು ವರ್ಷ ಪೂರ್ಣಗೊಂಡಿದೆ.


ಬ್ಯಾಂಕ್‌ಗಳಲ್ಲಿ ಠೇವಣಿ ಇಡುವ ಹಾಗೂ ಬೇರೆ ಮುಖಬೆಲೆಯ ನೋಟುಗಳೊಂದಿಗೆ ಬದಲಾಯಿಸಿಕೊಳ್ಳುವುದಕ್ಕೆ ಬೆಂಗಳೂರು ಸೇರಿ ಆರ್‌ಬಿಐನ 19 ಪ್ರಾದೇಶಿಕ ಕಚೇರಿಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ	
ಚಾಲಿ	37089-43899
ಚಿಪ್ಪು	24589-29999
ಕೋಕ	6569-19869
ಫ್ಯಾಕ್ಟರಿ	5099-19869
ಹೊಸಚಾಲಿ	35099-44419
ಪುತ್ತೂರು	
ಕೋಕ	20000-31500
ಹೊಸತು	26000-49500
ಸಾಗರ	
ಬಿಳಿಗೋಟು	9786-25899
ಚಾಲಿ	26099-39269
ಕೋಕ	9569-19500
ಕೆಂಪುಗೋಟು	15989-29000
ರಾಶಿ	26899-58099
ಸಿಪ್ಪೆಗೋಟು	9099-18699
ಶಿವಮೊಗ್ಗ	
ಬೆಟ್ಟೆ	51899-57600
ಗೊರಬಲು	16196-32309
ರಾಶಿ	48668-58599
ಸರಕು	51200-74100
ಸಿದ್ದಾಪುರ	
ಕೆಂಪುಗೋಟು	20899-23122
ರಾಶಿ	41099-46009
ತಟ್ಟಿಬೆಟ್ಟೆ	28900-40099
ಬಿಳಿಗೋಟು	24000-31800
ಚಾಲಿ	34899-42629
ಕೋಕ	14889-27309
ಶಿರಸಿ	
ಬೆಟ್ಟೆ	29599-34699
ಬಿಳಿಗೋಟು	22299-31699
ಚಾಲಿ	35699-43149
ಕೆಂಪುಗೋಟು	15999-23099
ರಾಶಿ	40291-47699
ಯಲ್ಲಾಪುರ	
ಬಿಳಿಗೋಟು	14569-34600
ಚಾಲಿ	35200-42599
ಕೋಕ	9699-17209
ಕೆಂಪುಗೋಟು	17099-25909
ರಾಶಿ	40000-53199
ತಟ್ಟಿಬೆಟ್ಟೆ	28900-38699

ಅದಾನಿ ಕಂಪನಿ ಪಾತ್ರ– ಅಮೆರಿಕ ತನಿಖೆ

ವಾಷಿಂಗ್ಟನ್/ನವದೆಹಲಿ (ರಾಯಿಟರ್ಸ್): ಉದ್ಯಮಿ ಗೌತಮ್ ಅದಾನಿ ಅವರ ಕಂಪನಿಗಳು ಗುಜರಾತ್‌ನಲ್ಲಿರುವ ಮುಂದ್ರಾ ಬಂದರಿನ ಮೂಲಕ ಇರಾನ್‌ನಿಂದ ದ್ರವೀಕೃತ ಪೆಟ್ರೋಲಿಯಂ ಅನಿಲವನ್ನು (ಎಲ್‌ಪಿಜಿ) ಭಾರತಕ್ಕೆ ಆಮದು ಮಾಡಿಕೊಂಡಿವೆಯೇ ಎಂದು ಅಮೆರಿಕದ ತನಿಖಾ ಸಂಸ್ಥೆಗಳು ತನಿಖೆ ನಡೆಸುತ್ತಿರುವುದಾಗಿ ‘ವಾಲ್ ಸ್ಟ್ರೀಟ್ ಜರ್ನಲ್’ ಸೋಮವಾರ ವರದಿ ಮಾಡಿದೆ.



ಗೌತಮ್ ಅದಾನಿ

ಅದಾನಿ ಎಂಟರ್‌ಪ್ರೈಸಸ್‌ಗೆ ಸರಕುಗಳನ್ನು ಸಾಗಿಸಲು ಬಳಸುವ ಹಲವಾರು ಎಲ್‌ಪಿಜಿ ಟ್ಯಾಂಕರ್‌ಗಳು ಮುಂದ್ರಾ ಬಂದರಿನಿಂದ ಗುಜರಾತ್‌ನ ಇತರ ಕಡೆಗಳಿಗೆ ಪ್ರಯಾಣಿಸಿರುವುದು ಕಂಡುಬಂದಿದ್ದು, ಅಮೆರಿಕದ ನ್ಯಾಯಾಂಗ ಇಲಾಖೆಯು ಈ ಬಗ್ಗೆ ಪರಿಶೀಲಿಸುತ್ತಿದೆ ಎಂದು ವರದಿ ತಿಳಿಸಿದೆ.

ಇರಾನ್‌ನ ತೈಲ ಅಥವಾ ಪೆಟ್ರೋಕೆಮಿಕಲ್ ಉತ್ಪನ್ನಗಳ ಎಲ್ಲ ರೀತಿಯ ಖರೀದಿಗಳನ್ನು ನಿಲ್ಲಿಸಬೇಕು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮೇ ತಿಂಗಳಲ್ಲಿ ಹೇಳಿದ್ದರು. ಇರಾನ್‌ನಿಂದ ತೈಲ ಆಮದು ಮಾಡಿಕೊಳ್ಳುವ ಯಾವುದೇ ದೇಶ ಅಥವಾ ವ್ಯಕ್ತಿಯ ಮೇಲೆ ತಕ್ಷಣವೇ ನಿರ್ಬಂಧ ಹೇರಲಾಗುತ್ತದೆ ಎಂದು ಎಚ್ಚರಿಸಿದ್ದರು.

ಅಲ್ಲಗಳೆದ ಅದಾನಿ ಸಮೂಹ (ಪಿಟಿಐ ವರದಿ): ‘ವಾಲ್ ಸ್ಟ್ರೀಟ್ ಜರ್ನಲ್’ನಲ್ಲಿ ಪ್ರಕಟವಾಗಿರುವ ವರದಿಯನ್ನು ಅದಾನಿ ಸಮೂಹ ಅಲ್ಲಗಳೆದಿದ್ದು, ಇರಾನ್‌ನಿಂದ ಬರುವ ಯಾವುದೇ ಸರಕುಗಳನ್ನು ತನ್ನ ಬಂದರುಗಳು ನಿರ್ವಹಿಸುವುದಿಲ್ಲ ಎಂದಿದೆ.

‘ನಮ್ಮ ಯಾವುದೇ ಬಂದರುಗಳಲ್ಲೂ ಇರಾನ್‌ನಿಂದ ಬರುವ ಸರಕುಗಳನ್ನು ಇಳಿಸಲು ಅವಕಾಶ ನೀಡುವುದಿಲ್ಲ. ಇರಾನ್‌ನ ಬಂದರುಗಳಿಂದ ಪ್ರಯಾಣ ಆರಂಭಿಸುವ ಅಥವಾ ಇರಾನ್‌ನ ಧ್ವಜ ಹೊಂದಿರುವ ಹಡಗುಗಳಿಗೆ ಈ ನಿಯಮ ಅನ್ವಯಿಸುತ್ತದೆ. ಇರಾನ್‌ನ ವ್ಯಕ್ತಿಗಳ ಒಡೆತನದ ಹಡಗುಗಳನ್ನೂ ನಾವು ನಿರ್ವಹಿಸುವುದಿಲ್ಲ. ನಮ್ಮ ಎಲ್ಲ ಬಂದರುಗಳಲ್ಲಿ ಈ ನಿಯಮ ಕಟ್ಟುನಿಟ್ಟಾಗಿ ಪಾಲಿಸಲಾಗುತ್ತದೆ’ ಎಂದು ಸ್ಪಷ್ಟಪಡಿಸಿದೆ.

ವಿವಿಧ ದೇಶಗಳಿಗೆ ಪಾಕ್ ನಿಯೋಗ

ಇಸ್ಲಾಮಾಬಾದ್ (ಪಿಟಿಐ): ಭಾರತದಂತೆಯೇ ಪಾಕಿಸ್ತಾನ ಕೂಡ ಅಮೆರಿಕ ಸೇರಿದಂತೆ ವಿವಿಧ ದೇಶಗಳಿಗೆ ಸರ್ವ ಪಕ್ಷಗಳ ನಾಯಕರನ್ನು ಒಳಗೊಂಡ ತನ್ನ ಉನ್ನತ ಮಟ್ಟದ ನಿಯೋಗವನ್ನು ಕಳುಹಿಸಲು ನಿರ್ಧರಿಸಿದ್ದು, ಸೋಮವಾರವೇ ನಿಯೋಗಗಳು ವಿವಿಧ ದೇಶಗಳಿಗೆ ತೆರಳಿವೆ.

ಪಹಲ್ಗಾಮ್ ದಾಳಿ, ಆಪರೇಷನ್ ಸಿಂಧೂರದ ಕುರಿತು ದೇಶದ ಪರವಾದ ಮುಂದಿಡಲು ಭಾರತವು ಹಲವು ನಿಯೋಗಗಳನ್ನು ಕಳುಹಿಸಿದೆ. ಇದೇ ವಿಚಾರವಾಗಿ ಪಾಕಿಸ್ತಾನವು ತನ್ನ ಪರವಾದ ವಿಚಾರಗಳನ್ನು ಮಂಡಿಸಲು ನಿಯೋಗವನ್ನು ಕಳುಹಿಸಿದೆ. ಶಶಿ ತರೂರ್ ನೇತೃತ್ವದ ನಿಯೋಗವು ಅಮೆರಿಕದಲ್ಲಿ ವಾದ ಮಂಡಿಸಲು ನಿರ್ಧರಿಸಿದ ದಿನದಂದೇ ಪಾಕಿಸ್ತಾನದ ನಿಯೋಗವು ಅಮೆರಿಕದಲ್ಲಿ ಸಭೆ ನಡೆಸಲಿದೆ.

ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ, ಸಾಮಾನ್ಯ ಸಭೆಯ ಮುಖ್ಯಸ್ಥ ಸೇರಿದಂತೆ ವಿಶ್ವ ಸಂಸ್ಥೆಯ 15 ಸದಸ್ಯ ರಾಷ್ಟ್ರಗಳ ಪೈಕಿ 14 ದೇಶಗಳ ರಾಯಭಾರಿಗಳನ್ನು ಪಾಕಿಸ್ತಾನದ ನಿಯೋಗಗಳು ಭೇಟಿ ಮಾಡಲಿವೆ. ಚೀನಾ ಮತ್ತು ರಷ್ಯಾ ದೇಶಗಳಿಗೂ ಪಾಕಿಸ್ತಾನವು ತನ್ನ ನಿಯೋಗ ಕಳುಹಿಸಿದೆ.

‘ಭಾರತದ ಆಕ್ರಮಣಶೀಲತೆ ಕುರಿತು ಪಾಕಿಸ್ತಾನದ ವಾದವನ್ನು ಮಂಡಿಸಲು ಮತ್ತು ಸಂಘರ್ಷಕ್ಕಿಂತ ಮಾತುಕತೆಯೇ ಮುಖ್ಯ ಎನ್ನುವುದುನ್ನು ಮನಗಾಣಿಸಲು ನಿಯೋಗಗಳನ್ನು ಕಳುಹಿಸಲಾಗುತ್ತಿದೆ. ಸಿಂಧೂ ನದಿ ನೀರಿನ ಒಪ್ಪಂದವು ತಕ್ಷಣವೇ ಮರುಚಾಲನೆಗೊಳ್ಳಬೇಕು ಎನ್ನುವ ವಿಚಾರವನ್ನೂ ನಿಯೋಗಗಳು ಮಂಡಿಸಲಿವೆ’ ಎಂದು ಪಾಕಿಸ್ತಾನದ ವಿದೇಶಾಂಗ ಕಚೇರಿಯು ಮಾಹಿತಿ ನೀಡಿದೆ.

ಪೋಲೆಂಡ್: ನವ್ರೊಸ್ಕಿ ಅಧ್ಯಕ್ಷ

ವಾರ್ಸಾ (ಎಎಫ್‌ಪಿ): ರಾಷ್ಟ್ರೀಯವಾದಿ ಇತಿಹಾಸಕಾರ ಕಾರೊಲ್ ನವ್ರೊಸ್ಕಿ ಅವರು ಪೋಲೆಂಡ್‌ನ ಅಧ್ಯಕ್ಷೀಯ ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದಾರೆ.



ಭಾನುವಾರ ನಡೆದ ಚುನಾವಣೆಯ ಫಲಿತಾಂಶ ಸೋಮವಾರ ಹೊರಬಿದ್ದಿದ್ದು, 42 ವರ್ಷದ ನವ್ರೊಸ್ಕಿ, ಶೇ 50.9ರಷ್ಟು ಮತಗಳನ್ನು ಪಡೆದುಕೊಂಡಿದ್ದಾರೆ.

ಅವರ ಪ್ರಮುಖ ಪ್ರತಿಸ್ಪರ್ಧಿಯಾಗಿದ್ದ 53 ವರ್ಷದ ರಫೇಲ್ ತ್ರಾಕೊವ್‌ಸ್ಕಿ ಶೇ 49.1ರಷ್ಟು ಮತಗಳನ್ನು ಪಡೆದರು. ಫಲಿತಾಂಶದ ಬೆನ್ನಲ್ಲೇ ಸೋಲು ಒಪ್ಪಿಕೊಂಡ ರಫೇಲ್, ‘ಇಂತಹ ಕಠಿಣ ಪರಿಸ್ಥಿತಿಯಲ್ಲಿ ಗೆಲುವು ಪಡೆದ ನವ್ರೊಸ್ಕಿಗೆ ಅಭಿನಂದನೆಗಳು’ ಎಂದು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ನವ್ರೊಸ್ಕಿ ಅವರ ಗೆಲುವು ಪ್ರಧಾನಿ ಡೊನಾಲ್ಡ್ ಟಸ್ಕ್ ನೇತೃತ್ವದ ಸರ್ಕಾರಕ್ಕೆ ಮುಂದಿನ ದಿನಗಳಲ್ಲಿ ಕಠಿಣ ಪರಿಸ್ಥಿತಿ ತಂದೊಡ್ಡಲಿದೆ’ ಎಂದು ವಿಶ್ಲೇಷಿಸಲಾಗಿದೆ.

ಶಾಂತಿ ಸ್ಥಾಪನೆ: ಯೋಜನೆ ಹಂಚಿಕೊಂಡ ರಷ್ಯಾ, ಉಕ್ರೇನ್

ಇಸ್ತಾಂಬುಲ್ (ಎಎಫ್‌ಪಿ): ಮೂರು ವರ್ಷಗಳಿಂದ ನಡೆಯುತ್ತಿರುವ ಯುದ್ಧವನ್ನು ಕೊನೆಗಾಣಿಸಿ ಶಾಂತಿ ಸ್ಥಾಪಿಸುವ ಸಂಬಂಧದ ಯೋಜನೆಗಳನ್ನು ರಷ್ಯಾ ಮತ್ತು ಉಕ್ರೇನ್ ಇಲ್ಲಿ ನಡೆದ ನೇರ ಮಾತುಕತೆಯಲ್ಲಿ ಸೋಮವಾರ ಪರಸ್ಪರ ವಿನಿಮಯ ಮಾಡಿಕೊಂಡಿವೆ.

2022ರ ಫೆಬ್ರುವರಿಯಿಂದ ಎರಡೂ ದೇಶಗಳ ಮಧ್ಯೆ ಯುದ್ಧ ನಡೆಯುತ್ತಿದೆ. ಎರಡನೇ ವಿಶ್ವ ಯುದ್ಧದ ಬಳಿಕ ಯುರೋಪ್‌ನಲ್ಲಿ ನಡೆಯುತ್ತಿರುವ ಅತಿದೊಡ್ಡ ಸಂಘರ್ಷ ಇದಾಗಿದೆ.

ಶಾಂತಿ ಸ್ಥಾಪನೆಗಾಗಿ ಮಾತುಕತೆ ನಡೆಸುವಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಉಭಯ ರಾಷ್ಟ್ರಗಳನ್ನು ಒತ್ತಾಯಿಸಿದ್ದರು. ಆ ಬಳಿಕ ಮಾಸ್ಕೋ ಮತ್ತು ಕೀವ್ ನೇರ ಮಾತುಕತೆಗೆ ತೆರೆದುಕೊಂಡಿವೆ. ಆದರೆ ನಿರ್ಣಾಯಕ ಪ್ರಗತಿ ಸಾಧಿಸಿಲ್ಲ.

ಹಲವು ಸಾವಿರ ಕಿಲೋಮೀಟರ್ ದೂರದಲ್ಲಿನ ರಷ್ಯಾದ ವಾಯುನೆಲೆಗಳಲ್ಲಿ ನಿಲುಗಡೆ ಮಾಡಿದ್ದ ಯುದ್ಧ ವಿಮಾನಗಳ ಮೇಲೆ ಡ್ರೋನ್ ಮೂಲಕ ದಾಳಿಮಾಡಿದ್ದ ಉಕ್ರೇನ್, ಅಪಾರ ಹಾನಿ ಮಾಡಿತ್ತು. ಅದರ ಬೆನ್ನಲ್ಲೇ ಎರಡೂ ದೇಶಗಳ ಮಧ್ಯೆ ಶಾಂತಿಗಾಗಿ ಮಾತುಕತೆ ನಡೆದಿದೆ.

ಎರಡೂ ರಾಷ್ಟ್ರಗಳ ಮಧ್ಯೆ ಕಳೆದ ತಿಂಗಳು ಮೊದಲ ಸುತ್ತಿನ ಮಾತುಕತೆ ನಡೆದಿತ್ತು. ಆ ಬಳಿಕ ದೊಡ್ಡ ಪ್ರಮಾಣದಲ್ಲಿ ಯುದ್ಧ ಕೈದಿಗಳ ವಿನಿಮಯ ನಡೆದಿತ್ತು. ಆದರೆ, ಉಭಯ ದೇಶಗಳ ನಡುವಿನ ಸಂಘರ್ಷ ಮುಂದುವರಿದಿತ್ತು.

ಸೋಮವಾರ ಇಸ್ತಾಂಬುಲ್‌ನಲ್ಲಿ ಮಾತುಕತೆ ಮುಕ್ತಾಯವಾದ ಬಳಿಕ ವಿಲಿನಿಯಸ್ ನಗರ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ, ‘ಟರ್ಕಿಯ ಮೂಲಕ ನಮ್ಮ ಯೋಜನೆಯನ್ನು ಹಂಚಿಕೊಂಡಿದ್ದೇವೆ. ಮತ್ತೊಂದು ಸುತ್ತಿನ ಯುದ್ಧ ಕೈದಿಗಳ ಬಿಡುಗಡೆಗೆ ನಾವು ಸಜ್ಜಾಗುತ್ತಿದ್ದೇವೆ’ ಎಂದರು.

‘ಶಾಂತಿ ಸ್ಥಾಪನೆಗೆ ಅಗತ್ಯ ಕ್ರಮ ಕೈಗೊಳ್ಳಲು ನಾವು ಸಿದ್ಧರಿದ್ದೇವೆ. ಶಾಂತಿ ಸ್ಥಾಪನೆಗೆ ಸಂಬಂಧಿಸಿದಂತೆ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರಿಗೆ ಯಾವ ಕೀರ್ತಿಯೂ ಸಲ್ಲಬಾರದು. ಆತ ಒಬ್ಬ ಆಕ್ರಮಣಕಾರ’ ಎಂದು ಹೇಳಿದರು.

ಯಾವುದೇ ಷರತ್ತುಗಳಿಲ್ಲದ ಸಂಪೂರ್ಣ ಕದನ ವಿರಾಮ ಘೋಷಣೆಯಾದರೆ ಮಾತ್ರ ಮುಂದಿನ ದೀರ್ಘಾವಧಿಯ ಮಾತುಕತೆಗೆ ತಾನು ಸಿದ್ಧ ಎಂದು ಉಕ್ರೇನ್ ಹೇಳಿದೆ. ರಷ್ಯಾ ಈ ಬೇಡಿಕೆಯನ್ನು ನಿರಂತರವಾಗಿ ತಳ್ಳಿಹಾಕುತ್ತಾ ಬಂದಿದೆ.

‘ಸಂಘರ್ಷದ ಮೂಲ ಕಾರಣಕ್ಕೆ ಪರಿಹಾರ ಬೇಕಿದೆ. ಉಕ್ರೇನ್ ಸೇನೆಗೆ ನಿಯಂತ್ರಣ ಹೇರಬೇಕು. ಆ ರಾಷ್ಟ್ರವು ನ್ಯಾಟೊ ಒಕ್ಕೂಟ ಸೇರದಂತೆ ನಿರ್ಬಂಧ ಹೇರಬೇಕು. ಉಕ್ರೇನ್‌ನ ಭೌಗೋಳಿಕ ವ್ಯಾಪ್ತಿಗೆ ಗಣನೀಯವಾಗಿ ಮಿತಿ ಹೇರಬೇಕು’ ಎಂಬ ಬೇಡಿಕೆಗಳನ್ನು ರಷ್ಯಾ ಮುಂದಿಟ್ಟಿದೆ.

ದಸರಾಗೆ ಲ್ಯಾಂಡ್‌ಲಾರ್ಡ್

ಜಡೇಶ್ ಭಿನ್ನ ಲೆಕ್ಕಾಚಾರ!

ಅಭಿಲಾಷ್ ಪಿ.ಎಸ್.

‘ಜಂಟಲ್‌ಮ್ಯಾನ್’, ‘ಗುರುಶಿಷ್ಯರು’ ಚಿತ್ರಗಳ ನಿರ್ದೇಶಕ ಹಾಗೂ ‘ಕಾಟೇರ’ ಸಿನಿಮಾದ ಕಥೆಗಾರ ಜಡೇಶ ಕೆ. ಹಂಪಿ ತಮ್ಮ ನಿರ್ದೇಶನದ ಮೂರನೇ ಸಿನಿಮಾವನ್ನು ತೆರೆಗೆ ತರುವ ತಯಾರಿಯಲ್ಲಿದ್ದಾರೆ. ‘ದುನಿಯಾ’ ವಿಜಯ್ ನಟನೆಯ 29ನೇ ಸಿನಿಮಾ ‘ಲ್ಯಾಂಡ್‌ಲಾರ್ಡ್’ನ ಮಾತಿನ ಭಾಗದ ಚಿತ್ರೀಕರಣ ಪೂರ್ಣಗೊಂಡಿದ್ದು, ಮೂರು ಹಾಡುಗಳ ಶೂಟಿಂಗ್ ಉಳಿದಿದೆ. ಇವೆಲ್ಲವನ್ನೂ ಶೀಘ್ರದಲ್ಲೇ ಪೂರ್ಣಗೊಳಿಸಿ ಸೆಪ್ಟೆಂಬರ್ ಮಾಸಾಂತ್ಯದಲ್ಲಿ ಸಿನಿಮಾವನ್ನು ತೆರೆಗೆ ತರಲು ಜಡೇಶ್ ನಿರ್ಧರಿಸಿದ್ದಾರೆ. ಇದೇ ಅವಧಿಯನ್ನು ಆಯ್ಕೆ ಮಾಡಿಕೊಳ್ಳಲು ಒಂದು ಕುತೂಹಲಕಾರಿ ಕಾರಣವನ್ನೂ ನೀಡಿದ್ದಾರೆ. ಅದೇನದು ಎಂಬುವುದನ್ನು ಜಡೇಶ್ ಅವರ ಮಾತಿನಲ್ಲೇ ತಿಳಿಯಿರಿ...

‘ಲ್ಯಾಂಡ್‌ಲಾರ್ಡ್ ಸಿನಿಮಾದ ಚಿತ್ರೀಕರಣ ಅಂತಿಮ ಹಂತದಲ್ಲಿದೆ. ನಾಲ್ಕೈದು ದಿನಗಳ ಪ್ಯಾಚ್‌ವರ್ಕ್, ಮೂರು ಹಾಡುಗಳು ಚಿತ್ರೀಕರಣಗೊಳ್ಳಬೇಕಿದೆ. ದಸರಾದೊಳಗೆ ಇವೆಲ್ಲವನ್ನೂ ಮುಗಿಸಿಕೊಂಡು ಸೆ.26ಕ್ಕೆ ಸಿನಿಮಾ ಬಿಡುಗಡೆ ಮಾಡುವ ಗುರಿ ನನ್ನದು. ಸಾಧ್ಯವಾಗದೇ ಇದ್ದಲ್ಲಿ ಒಂದು ತಿಂಗಳು ಮುಂದಕ್ಕೆ ಹೋಗಲಿದೆ. 2025 ವರ್ಷಾಂತ್ಯದೊಳಗೇ ಸಿನಿಮಾ ರಿಲೀಸ್ ಆಗಲಿದೆ’ ಎನ್ನುತ್ತಾರೆ ಜಡೇಶ್.

ಜಡೇಶ್‌ಗೆ ಹೊಂಬಾಳೆ ಲಕ್!: ‘ದೊಡ್ಡ ಸಿನಿಮಾಗಳ ಜೊತೆ ಜೊತೆಗೆ ತಮ್ಮ ಸಿನಿಮಾಗಳನ್ನು ಬಿಡುಗಡೆ ಮಾಡಲು ನಿರ್ದೇಶಕರು, ನಿರ್ಮಾಪಕರು ಹಿಂದೇಟು ಹಾಕುತ್ತಾರೆ. ಆದರೆ ಜಡೇಶ್ ಇದಕ್ಕೆ ತದ್ವಿರುದ್ಧವಾಗಿದ್ದಾರೆ. ‘ಕಾಂತಾರ ಚಾಪ್ಟರ್ 1’ ಅ.2ಕ್ಕೆ ಬಿಡುಗಡೆಯಾಗಲಿದೆ. ತಮ್ಮ ಸಿನಿಮಾವನ್ನು ‘ಕಾಂತಾರ’ ಪ್ರೀಕ್ವೆಲ್‌ಗಿಂತ ಕೇವಲ ಒಂದು ವಾರ ಮೊದಲು ಬಿಡುಗಡೆ ಮಾಡಲು ಜಡೇಶ್ ಯೋಚಿಸುತ್ತಿದ್ದಾರೆ. ಇದಕ್ಕೆ ಅವರ ಬಳಿ ಕಾರಣವೂ ಇದೆ.



ಜಡೇಶ್, ದುನಿಯಾ ವಿಜಯ್

‘ನನ್ನ ‘ಗುರುಶಿಷ್ಯರು’ ಸಿನಿಮಾ ‘ಕಾಂತಾರ’ ಬಿಡುಗಡೆಯ ಒಂದು ವಾರ ಹಿಂದೆ ರಿಲೀಸ್ ಆಗಿತ್ತು. ಅದು ನನಗೆ ಯಶಸ್ಸು ತಂದಿತು. ಅದೇ ರೀತಿ ‘ಕಾಟೇರ’ ಸಿನಿಮಾ ‘ಸಲಾರ್’ಗಿಂತ ಒಂದು ವಾರ ಬಳಿಕ ಬಂತು. ಇದೂ ಯಶಸ್ವಿಯಾಯಿತು. ಈಗಲೂ ಇದೇ ರೀತಿ ಒಂದು ವಾರದ ಅಂತರದಲ್ಲಿ ಬರುವ ಯೋಜನೆ ಹಾಕಿಕೊಂಡಿದ್ದೇನೆ. ಇದು ಅಂತಿಮವೆಂದೇನಲ್ಲ’ ಎಂದರು.

ಈ ಯೋಚನೆ ಅಪಾಯವಲ್ಲವೇ ಎಂದು ಪ್ರಶ್ನಿಸಿದರೆ, ‘ಅದು ಹಬ್ಬದ ವಾತಾವರಣ. ಚಿತ್ರಮಂದಿರಗಳು ಸಿಕ್ಕೇ ಸಿಗುತ್ತವೆ. ಮಲ್ಟಿಪ್ಲೆಕ್ಸ್‌ಗಳಲ್ಲಿ ಯಾವುದೇ ಸಮಸ್ಯೆಯಾಗುವುದಿಲ್ಲ. ತುಮಕೂರು, ಮೈಸೂರು ಸೇರಿದಂತೆ ಜಿಲ್ಲಾ ಕೇಂದ್ರಗಳಲ್ಲಿ ಎರಡು ಚಿತ್ರಮಂದಿರಗಳು ಇದ್ದೇ ಇವೆ. ನಾವು ಇವುಗಳನ್ನು ಹಂಚಿಕೊಳ್ಳುವುದರಲ್ಲಿ ಯಾವುದೇ ತಪ್ಪಿಲ್ಲ. ನಾವು ಅ.2ಕ್ಕೆ ಬರುವ ಯೋಚನೆಯಲ್ಲಿ ಇಲ್ಲ’ ಎಂದರು ಜಡೇಶ್.

ವಿಜಯ್‌ಗೊಂದು ಭಿನ್ನ ಪಾತ್ರ: ‘ಶರಣ್ ಅವರಿಗೆ ‘ಗುರುಶಿಷ್ಯರು’ ಸಿನಿಮಾದಲ್ಲೊಂದು ಭಿನ್ನವಾದ ಪಾತ್ರ ಕಟ್ಟಿದ್ದೆ. ಅವರು ಹಿಂದೆಂದೂ ಅಂತಹ ಪಾತ್ರ ಮಾಡಿರಲಿಲ್ಲ. ‘ಕಾಟೇರ’ದಲ್ಲಿ ದರ್ಶನ್ ಅವರಿಗೊಂದು ಭಿನ್ನವಾದ ಪಾತ್ರ. ಬೇರೆ ಸಿನಿಮಾಗಳಲ್ಲಿ ಇವರಿಗೆ ಇಂತಹ ಪಾತ್ರದ ಅಲ್ಪಸ್ವಲ್ಪ ಗುಣಲಕ್ಷಣಗಳಿದ್ದರೂ, ಪರಿಪೂರ್ಣವಾದ ಪಾತ್ರ ‘ಕಾಟೇರ’ದಲ್ಲಿತ್ತು. ‘ಲ್ಯಾಂಡ್‌ಲಾರ್ಡ್’ನಲ್ಲಿ ವಿಜಯ್ ಅವರ ಪಾತ್ರವೂ ಶಕ್ತಿಯುತವಾಗಿದೆ. ಇವರ ಮೇಲೆ ಇಂತಹ ಪಾತ್ರದ ಪ್ರಯತ್ನ ಇಲ್ಲಿಯವರೆಗೂ ಯಾರೂ ಮಾಡಿಲ್ಲ. ಮಾಸ್ ಜೊತೆಗೆ ಕಥೆಗೆ ಹೆಚ್ಚಿನ ಒತ್ತು ಇಲ್ಲಿ ನೀಡಿದ್ದೇನೆ. ‘ಲ್ಯಾಂಡ್‌ಲಾರ್ಡ್’ ನಾನು ಕಂಡ ಜಗತ್ತು. ನಾನು ನೋಡಿದ, ಓದಿದ, ಕೇಳಿದ ಕಥೆಗಳನ್ನಷ್ಟೇ ಶಕ್ತಿಯುತವಾಗಿ ಬರೆಯಲು ಸಾಧ್ಯ. ಅದರ ಆಳ, ನೋವು ನನಗೆ ಗೊತ್ತಿರುತ್ತದೆ. ಇವೆಲ್ಲವನ್ನೂ ಒಂದೇ ಕಾಲಘಟ್ಟಕ್ಕೆ ತಂದು ನಾಯಕನ ಜೀವನದೊಳಗೆ ಅಳವಡಿಸಿ ಹೇಳುವ ಪ್ರಯತ್ನವನ್ನು ಈ ಸಿನಿಮಾ ಮೂಲಕ ಮಾಡಿದ್ದೇನೆ’ ಎನ್ನುತ್ತಾರೆ ಜಡೇಶ್.

ರೈತರು, ಅವರ ಸಮಸ್ಯೆ, ವ್ಯವಸ್ಥೆ ಜೊತೆಗಿನ ಸಂಘರ್ಷದ ಕಥೆ ಹೊತ್ತ ಈ ಸಿನಿಮಾವನ್ನು ಕೆ.ವಿ.ಸತ್ಯಪ್ರಕಾಶ್ ‘ಸಾರಥಿ ಫಿಲಂಸ್’ ಮೂಲಕ ನಿರ್ಮಾಣ ಮಾಡುತ್ತಿದ್ದಾರೆ.

> “ಇದು ಒಬ್ಬ ಬಡವನ ಮನೆ ಕಥೆ. ಈ ಸಿನಿಮಾದಲ್ಲಿ ವಿಷಯದ ಜೊತೆಗೆ ಆ್ಯಕ್ಷನ್ ಇದೆ. ವಿನಃ ಸಾಹಸವೇ ಎಲ್ಲ ಅಲ್ಲ” —‘ದುನಿಯಾ’ ವಿಜಯ್

ಕ್ರಾಂತಿ ತಂದ ಸ್ವತಂತ್ರ ಭೂಮಿಯ ಕಲ್ಪನೆ

‘ಈ ಸಿನಿಮಾದಲ್ಲಿ ಮೂರು ಅಂಶಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿದೆ. ನಾಯಕನಿಗೆ ಸ್ವತಂತ್ರ ಭೂಮಿಯ ಕಲ್ಪನೆ, ಶಿಕ್ಷಣ, ಕೂಲಿಗೆ ತಕ್ಕ ಕಾಸು ಎಂಬ ವಿಷಯಗಳ ಸುತ್ತ ಕಥಾಹಂದರವಿದೆ’ ಎಂದು ಸಿನಿಮಾದ ಜಾನರ್ ಬಗ್ಗೆ ವಿವರಿಸಿದ ಜಡೇಶ್, ‘ಇದೊಂದು ಹಳ್ಳಿ ಹಿನ್ನೆಲೆಯ 80–90ರ ದಶಕದ ಕಥೆ. ಇಲ್ಲಿ ಅಸ್ತಿತ್ವದ ಹೋರಾಟ ಇರುತ್ತದೆ. ಕೋಲಾರ ಸುತ್ತಮುತ್ತ ನಡೆದ ಈಗಲೂ ನಡೆಯುತ್ತಿರುವ ಘಟನೆಯನ್ನು ಚಿತ್ರವು ಹೊಂದಿದೆ. ಸ್ವಾವಲಂಬಿಯಾಗಬೇಕು ಎನ್ನುವ ನಾಯಕನ ಯೋಚನೆ ಹೇಗೆ ಕ್ರಾಂತಿಯಾಗುತ್ತದೆ ಎನ್ನುವ ಕಥೆ ಇದಾಗಿದೆ. ನಾಯಕನ ಬಾಲ್ಯದಿಂದ ಹಿಡಿದು ಆತನಿಗೆ ಐವತ್ತು ವರ್ಷದವರೆಗಿನ ಕಥೆಯನ್ನು ಹೇಳಿದ್ದೇನೆ. ‘ಚೋಮನ ದುಡಿ’ಯಲ್ಲಿನ ‘ಚೋಮ’ನ ಅಂಶಗಳನ್ನು ಸಣ್ಣಮಟ್ಟಿನಲ್ಲಿ ಈ ಸಿನಿಮಾದ ನಾಯಕನಲ್ಲಿ ಕಾಣಬಹುದು’ ಎಂದರು.



ಜಡೇಶ ಕೆ.ಹಂಪಿ

‘ಘೋಸ್ಟ್’ ಕಿರುಚಿತ್ರದಲ್ಲಿ ಸುಧಾರಾಣಿ



‘ಆನಂದ್’ ಚಿತ್ರದ ಮೂಲಕ ನಾಯಕಿಯಾಗಿ ಬೆಳ್ಳಿತೆರೆಗೆ ಹೆಜ್ಜೆ ಇಟ್ಟ ನಟಿ ಸುಧಾರಾಣಿ, ಇದೀಗ ಕಿರುಚಿತ್ರವೊಂದರಲ್ಲಿ ನಟಿಸಿದ್ದಾರೆ. ‘ಘೋಸ್ಟ್’ ಎಂಬ ಶೀರ್ಷಿಕೆಯ ಈ ಚಿತ್ರವನ್ನು ಸುದೇಶ್ ಕೆ.ರಾವ್ ನಿರ್ದೇಶಿಸಿದ್ದಾರೆ.

ಪ್ರಸ್ತುತ ಸಿನಿಮಾಗಳ ಜೊತೆಗೆ ಧಾರಾವಾಹಿಗಳಲ್ಲೂ ನಟಿಸಿ ಸೈ ಎನಿಸಿಕೊಂಡಿದ್ದಾರೆ ಸುಧಾರಾಣಿ. ‘ಶ್ರೀರಸ್ತು ಶುಭಮಸ್ತು’ ಧಾರಾವಾಹಿಯ ಮೂಲಕ ಕಿರುತೆರೆ ಪ್ರವೇಶಿಸಿದ ಅವರು ‘ಘೋಸ್ಟ್’ ಕಿರುಚಿತ್ರವನ್ನು ನಿರ್ಮಾಣ ಮಾಡಿರುವುದು ವಿಶೇಷ. ಈ ಕಿರುಚಿತ್ರವು ಸಸ್ಪೆನ್ಸ್ ಥ್ರಿಲ್ಲರ್ ಅಂಶವನ್ನು ಹೊಂದಿದೆ. ‘ಜಗತ್ತಿನಲ್ಲಿ ಒಳ್ಳೆಯದು ಹೇಗಿದೆಯೋ ಹಾಗೆಯೇ ಕೆಟ್ಟದ್ದೂ ಇದೆ. ದೇವರು ಇದ್ದಾನೆ, ದೆವ್ವವೂ ಇದೆ. ಇದೆಲ್ಲವೂ ನಮ್ಮ ನಮ್ಮ ಕಲ್ಪನೆಗೆ ಬಿಟ್ಟದ್ದು. ಈ ವಿಚಾರದ ಮೇಲೆ ಬಂದಂತಹ ಒಂದು ಎಳೆಯನ್ನಿಟ್ಟುಕೊಂಡು ಈ ಚಿತ್ರ ನಿರ್ಮಾಣವಾಗಿದೆ’ ಎಂದಿದೆ ತಂಡ. ‘ಶ್ರೀರಸ್ತು ಶುಭಮಸ್ತು ಧಾರಾವಾಹಿಯ ನಿರ್ದೇಶಕರು ಈ ಕಥೆ ಹೇಳಿದಾಗ ಬಹಳ ಇಷ್ಟವಾಯಿತು. ನಿರ್ಮಾಣದ ಮೊದಲ ಹೆಜ್ಜೆಯಾಗಿ ಇದನ್ನು ನಿರ್ಮಾಣ ಮಾಡಿದ್ದೇನೆ ಹಾಗೂ ಪ್ರಮುಖಪಾತ್ರದಲ್ಲಿ ಅಭಿನಯಿಸಿದ್ದೇನೆ’ ಎನ್ನುತ್ತಾರೆ ಸುಧಾರಾಣಿ.

ಚಿತ್ರದಲ್ಲಿ ಸುಧಾರಾಣಿಯವರ ಜೊತೆಗೆ ನಟಿಸುವುದರ ಜೊತೆಗೆ, ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿರುವ ಸುದೇಶ್ ಕೆ. ರಾವ್ ಮಾತನಾಡಿ ‘ಘೋಸ್ಟ್ ವಿಶೇಷ ಕಥೆಯಾಗಿದೆ. ಪ್ರಪಂಚದಲ್ಲಿ ಇರುವುದೆಲ್ಲವೂ ಪಾಸಿಟಿವ್. ನಾವೇ ಎಲ್ಲದರಲ್ಲೂ ನಕಾರಾತ್ಮಕ ಅಂಶಗಳನ್ನು ಹುಡುಕಿ, ನಮ್ಮ ತಲೆ ಮತ್ತು ಮನಸ್ಸನ್ನು ಕೆಡಿಸಿಕೊಳ್ಳುತ್ತೇವೆ. ಅಂತಹ ಎಲ್ಲರಿಗೂ ಈ ಕಿರುಚಿತ್ರ ಪರಿಹಾರ ನೀಡಲಿದೆ’ ಎಂದರು.

‘ಚೌಕಿದಾರ್’ ಸಿನಿಮಾದ ಹಾಡಲ್ಲಿ ತಂದೆ–ಮಗನ ಬಾಂಧವ್ಯ

‘ರಥಾವರ’ ಸಿನಿಮಾ ನಿರ್ದೇಶಿಸಿದ್ದ ಚಂದ್ರಶೇಖರ್ ಬಂಡಿಯಪ್ಪ ಆ್ಯಕ್ಷನ್ ಕಟ್ ಹೇಳಿರುವ, ಪೃಥ್ವಿ ಅಂಬಾರ್ ಮುಖ್ಯಭೂಮಿಕೆಯಲ್ಲಿ ನಟಿಸಿರುವ ‘ಚೌಕಿದಾರ್’ ಚಿತ್ರದ ಹಾಡೊಂದು ಬಿಡುಗಡೆಯಾಗಿದೆ. ಅಪ್ಪ ಮಗನ ಬಾಂಧವ್ಯದ ಈ ಗೀತೆಯಲ್ಲಿ ಸಾಯಿಕುಮಾರ್ ಹಾಗೂ ಪೃಥ್ವಿ ಅಂಬಾರ್ ತಂದೆ–ಮಗನಾಗಿ ಜೊತೆಯಾಗಿದ್ದಾರೆ. ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯದ ಈ ಹಾಡಿಗೆ ಸಚಿನ್ ಬಸ್ರೂರ್ ಸಂಗೀತ ನೀಡಿದ್ದು, ವಿಜಯ್ ಪ್ರಕಾಶ್ ಅವರ ದನಿಯಲ್ಲಿ ಹಾಡು ಮೂಡಿಬಂದಿದೆ.

ಚಿತ್ರದಲ್ಲಿ ಪೃಥ್ವಿಗೆ ಧನ್ಯಾ ರಾಮ್‌ಕುಮಾರ್ ಜೋಡಿಯಾಗಿದ್ದಾರೆ. ‘ಚೈತ್ರದ ಪ್ರೇಮಾಂಜಲಿ’ ಚಿತ್ರದ ನಾಯಕಿ ಶ್ವೇತಾ, ಸಾಯಿಕುಮಾರ್ ತಾರಾಬಳಗದಲ್ಲಿದ್ದಾರೆ. ಸುಧಾರಾಣಿ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿದ್ದಾರೆ. ‘ಚೌಕಿದಾರ್’ ಸಿನಿಮಾವನ್ನು ಕಲ್ಲಹಳ್ಳಿ ಚಂದ್ರಶೇಖರ್ ನಿರ್ಮಾಣ ಮಾಡುತ್ತಿದ್ದು, ಬಹುಭಾಷೆಯಲ್ಲಿ ಈ ಸಿನಿಮಾ ಮೂಡಿಬರುತ್ತಿದೆ.



ಈಶಾನ್ಯ ರಾಜ್ಯಗಳಲ್ಲಿ ಮುಂದುವರಿದ ಮಳೆ ಆರ್ಭಟ ● ಸಿಕ್ಕಿಂನಲ್ಲಿ ಭೂಕುಸಿತ

3 ಯೋಧರು ಬಲಿ, 6 ಮಂದಿ ನಾಪತ್ತೆ



ಅಸ್ಸಾಂನ ನಗಾಂವ್‌ನಲ್ಲಿ ಪ್ರವಾಹದಿಂದ ತೊಂದರೆಗೊಳಗಾದ ಜನರು ಸುರಕ್ಷಿತ ಪ್ರದೇಶಕ್ಕೆ ತೆರಳಿದರು —ಪಿಟಿಐ ಚಿತ್ರ

ಗ್ಯಾಂಗ್ಟೋಕ್/ ಕೋಲ್ಕತ್ತ (ಪಿಟಿಐ): ಈಶಾನ್ಯ ರಾಜ್ಯಗಳಲ್ಲಿ ಸೋಮವಾರವೂ ಮಳೆಯ ಆರ್ಭಟ ಮುಂದುವರಿದಿದ್ದು, ಸಿಕ್ಕಿಂನಲ್ಲಿ ಸಂಭವಿಸಿದ ಭೂಕುಸಿತದಲ್ಲಿ ಮೂವರು ಯೋಧರು ಮೃತಪಟ್ಟಿದ್ದಾರೆ.

ಮಂಗನ್ ಜಿಲ್ಲೆಯ ಲಾಚೆನ್ ಪಟ್ಟಣದ ಸಮೀಪ ಭಾನುವಾರ ರಾತ್ರಿ 7ರ ಸುಮಾರಿಗೆ ಸೇನೆಯ ಶಿಬಿರ ಇರುವ ಜಾಗದಲ್ಲಿ ಭೂಕುಸಿತ ಸಂಭವಿಸಿದೆ. ಘಟನೆಯಲ್ಲಿ ಆರು ಯೋಧರು ನಾಪತ್ತೆಯಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಮೃತಪಟ್ಟ ಯೋಧರನ್ನು ಲಖ್ವಿಂದರ್ ಸಿಂಗ್, ಮನೀಷ್ ಠಾಕೂರ್ ಮತ್ತು ಅಭಿಷೇಕ್ ಲಖಾಡ ಎಂದು ಗುರುತಿಸಲಾಗಿದೆ. ನಾಲ್ವರು ಯೋಧರನ್ನು ಸಣ್ಣಪುಟ್ಟ ಗಾಯಗಳೊಂದಿಗೆ ರಕ್ಷಿಸಲಾಗಿದೆ. ನಾಪತ್ತೆಯಾಗಿರುವ ಆರು ಯೋಧರ ಪತ್ತೆಗೆ ಶೋಧ ಕಾರ್ಯ ಮುಂದುವರಿದಿದೆ’ ಎಂದು ಹೇಳಿದ್ದಾರೆ.

ಮೃತರ ಸಂಖ್ಯೆ 10ಕ್ಕೆ ಏರಿಕೆ: ಅರುಣಾಚಲ ಪ್ರದೇಶದ ಲೋಹಿತ್ ಜಿಲ್ಲೆಯಲ್ಲಿ ಪ್ರವಾಹದ ನೀರಿನಲ್ಲಿ ಕೊಚ್ಚಿಕೊಂಡು ಹೋದ ವ್ಯಕ್ತಿಯೊಬ್ಬರ ಮೃತದೇಹ ಸೋಮವಾರ ಪತ್ತೆಯಾಗಿದೆ. ಇದರಿಂದ ರಾಜ್ಯದಲ್ಲಿ ಮಳೆ ಸಂಬಂಧಿ ಅವಘಡಗಳಿಂದ ಮೃತಪಟ್ಟವರ ಸಂಖ್ಯೆ 10ಕ್ಕೆ ಏರಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

23 ಜಿಲ್ಲೆಗಳ 156 ಗ್ರಾಮಗಳಲ್ಲಿ ಸಾವಿರಕ್ಕೂ ಅಧಿಕ ಮಂದಿ ತೊಂದರೆಗೆ ಸಿಲುಕಿದ್ದಾರೆ. ರಾಜ್ಯದಲ್ಲಿ ಬಹುತೇಕ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಪಶ್ಚಿಮ ಕಾಮೆಂಗ್, ಕಾಮ್ಲೆ, ಲೋವರ್ ಮತ್ತು ಅಪ್ಪರ್ ಸುಬನಸಿರಿ, ದಿಬಾಂಗ್ ಕಣಿವೆ, ಲೋವರ್ ದಿಬಾಂಗ್ ಕಣಿವೆ, ಲೋಹಿತ್, ಚಾಂಗ್‌ಲಾಂಗ್ ಮತ್ತು ಲಾಂಗ್‌ಡಿಂಗ್ ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ಮುಂದುವರಿದಿದೆ.

ಪೂರ್ವ ಕಾಮೆಂಗ್ ಜಿಲ್ಲೆಯ ಹೆದ್ದಾರಿಯಲ್ಲಿ ಶುಕ್ರವಾರ ತಡರಾತ್ರಿ ಸಂಭವಿಸಿದ ಭೂಕುಸಿತದಲ್ಲಿ ಏಳು ಮಂದಿ ಬಲಿಯಾಗಿದ್ದರು. ಎರಡು ವಾಹನಗಳು ಮಣ್ಣಿನಡಿ ಹೂತುಹೋಗಿದ್ದು, ಅದರಲ್ಲಿದ್ದ ಏಳೂ ಮಂದಿ ಮೃತಪಟ್ಟಿದ್ದರು.

ಅಸ್ಸಾಂ: ಭಾರಿ ಮಳೆ ಸಾಧ್ಯತೆ

ಗುವಾಹಟಿ: ಅಸ್ಸಾಂನಲ್ಲಿ ಸೋಮವಾರವೂ ಪ್ರವಾಹ ಪರಿಸ್ಥಿತಿ ತಲೆದೋರಿದ್ದು, ರಾಜ್ಯದ ಹಲವು ನದಿಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಜ್ಯದ ಹೆಚ್ಚಿನ ಭಾಗಗಳಲ್ಲಿ ಸಾಧಾರಣ ಹಾಗೂ ಕೆಲವು ಭಾಗಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ನೆಚ್ಚರಿಕೆ ನೀಡಿದೆ.

ಮಳೆ ಸಂಬಂಧಿ ಅವಘಡಗಳಿಂದ ಕಛಾರ್ ಮತ್ತು ಶ್ರೀಭೂಮಿ ಜಿಲ್ಲೆಗಳಲ್ಲಿ ಮತ್ತಿಬ್ಬರು ಸತ್ತಿದ್ದು, ಕಳೆದ ಮೂರು ದಿನಗಳಲ್ಲಿ ಮೃತಪಟ್ಟವರ ಸಂಖ್ಯೆ 10ಕ್ಕೆ ಏರಿಕೆಯಾಗಿದೆ ಎಂದು ಅಸ್ಸಾಂ ರಾಜ್ಯದ ವಿಪತ್ತು ನಿಯಂತ್ರಣ ಪ್ರಾಧಿಕಾರ ತಿಳಿಸಿದೆ. ಪ್ರವಾಹದಿಂದಾಗಿ ನಾಲ್ಕು ಲಕ್ಷಕ್ಕೂ ಅಧಿಕ ಮಂದಿ ತೊಂದರೆಗೆ ಒಳಗಾಗಿದ್ದಾರೆ.

> ಪ್ರವಾಹ ಪರಿಸ್ಥಿತಿಯಿಂದ ತತ್ತರಿಸಿರುವ ಈಶಾನ್ಯ ರಾಜ್ಯಗಳಿಗೆ ಕೇಂದ್ರ ಸರ್ಕಾರ ತಕ್ಷಣವೇ ಪರಿಹಾರದ ಹಣ ಬಿಡುಗಡೆ ಮಾಡಲಿ
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

ಮಣಿಪುರ: 3,365 ಮನೆಗಳಿಗೆ ಹಾನಿ

- ಮಣಿಪುರದಲ್ಲಿ ಪ್ರವಾಹದಿಂದ 19 ಸಾವಿರಕ್ಕೂ ಅಧಿಕ ಮಂದಿ ತೊಂದರೆಗೆ ಸಿಲುಕಿದ್ದು, 3,365 ಮನೆಗಳಿಗೆ ಹಾನಿಯಾಗಿದೆ
- ಇಂಫಾಲ್ ಪೂರ್ವ ಜಿಲ್ಲೆ ಸೇರಿದಂತೆ ವಿವಿಧೆಡೆ 31 ಕಾಳಜಿ ಕೇಂದ್ರಗಳನ್ನು ತೆರೆಯಲಾಗಿದೆ
- ಮಣಿಪುರದಲ್ಲಿ ಕಳೆದ ನಾಲ್ಕು ದಿನಗಳಲ್ಲಿ 47 ಭೂಕುಸಿತ ಘಟನೆಗಳು ವರದಿಯಾಗಿವೆ
- ಮಿಜೋರಾಂನಲ್ಲಿ ಸೋಮವಾರವೂ ಎಲ್ಲ ಶಾಲಾ–ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು
- ಸಿಕ್ಕಿಂನ ಲಾಚುಂಗ್‌ನಲ್ಲಿ ಸಿಲುಕಿದ್ದ 100ಕ್ಕೂ ಹೆಚ್ಚು ಪ್ರವಾಸಿಗರನ್ನು ರಕ್ಷಿಸಲಾಗಿದೆ

ವೃತ್ತಿಪರ ಸಂಸ್ಥೆಗಳಲ್ಲಿ ಆರ್‌ಎಸ್‌ಎಸ್ ವ್ಯವಸ್ಥಿತವಾಗಿ ನುಸುಳುತ್ತಿದೆ: ಕಾಂಗ್ರೆಸ್



ಜೈರಾಮ್ ರಮೇಶ್

ನವದೆಹಲಿ (ಪಿಟಿಐ): ವೃತ್ತಿಪರ ಸಂಸ್ಥೆಗಳಲ್ಲಿ ಆರ್‌ಎಸ್‌ಎಸ್ ವ್ಯವಸ್ಥಿತವಾಗಿ ನುಸುಳುತ್ತಿದೆ ಮತ್ತು ಅವುಗಳನ್ನು ನಾಶ ಮಾಡುತ್ತಿದೆ ಎಂದು ಕಾಂಗ್ರೆಸ್ ಸೋಮವಾರ ಆರೋಪಿಸಿದೆ.

ಭಾರತೀಯ ಇತಿಹಾಸ ಸಂಶೋಧನಾ ಮಂಡಳಿಯಲ್ಲಿ (ಐಸಿಎಚ್‌ಆರ್) ನಡೆದ ಹಗರಣವನ್ನು ಉಲ್ಲೇಖಿಸಿ ಈ ಆರೋಪ ಮಾಡಲಾಗಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರು, ‘2014ರಿಂದ ವೃತ್ತಿಪರ ಸಂಸ್ಥೆಗಳಲ್ಲಿ ಆರ್‌ಎಸ್‌ಎಸ್ ವ್ಯವಸ್ಥಿತವಾಗಿ ನುಸುಳುತ್ತಿದೆ. ಐಸಿಎಚ್‌ಆರ್ ಅದಕ್ಕೊಂದು ಉದಾಹರಣೆ’ ಎಂದರು.

‘ಐಸಿಎಚ್‌ಆರ್‌ನಲ್ಲಿ ನಡೆದ ಅಕ್ರಮಗಳ ಬಗ್ಗೆ ಕೇಂದ್ರ ಜಾಗೃತ ದಳ(ಸಿವಿಸಿ) ತನಿಖೆ ನಡೆಸುತ್ತಿದ್ದು, ಆರ್‌ಎಸ್‌ಎಸ್‌ನ ‘ಅಖಿಲ ಭಾರತೀಯ ಇತಿಹಾಸ ಸಂಕಲನ್ ಯೋಜನೆ’(ಎಬಿಐಎಸ್‌ವೈ) ಸದಸ್ಯರ ಮೇಲೆ ದೋಷಾರೋಪಣೆ ಮಾಡಿದೆ. ಇದು ಬರೋಬ್ಬರಿ ₹14 ಕೋಟಿ ಹಗರಣ. ಐಸಿಎಚ್‌ಆರ್‌ಗೆ ಇದು ದೊಡ್ಡ ಮೊತ್ತ’ ಎಂದು ಎಂದರು.

ಜೆಇಇ: ದಕ್ಷ್, ಶಶಾಂಕ ರಾಜ್ಯಕ್ಕೆ ಮೊದಲಿಗರು

ಒಂದನೇ ಪುಟದಿಂದ...

ರಾಜ್ಯದ ಹಲವಾರು ವಿದ್ಯಾರ್ಥಿಗಳು 100 ರ್‍ಯಾಂಕ್‌ಗಳ ಒಳಗೆ ಗಳಿಸಿದ್ದಾರೆ. ಬೆಂಗಳೂರಿನ ಚೈತನ್ಯ ಟೆಕ್ನೋ ಶಾಲೆಯ ಮಾರತ್ತಹಳ್ಳಿಯ ವಿದ್ಯಾರ್ಥಿ ಭವೇಶ್ ಜಯಂತಿ ಎಐಆರ್‌ನಲ್ಲಿ 35ನೇ ಸ್ಥಾನಗಳಿಸಿ ರಾಜ್ಯಕ್ಕೆ ಎರಡನೇ ಸ್ಥಾನ ಪಡೆದಿದ್ದಾರೆ. ಭವೇಶ್ ಕರ್ನಾಟಕ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ (ಸಿಇಟಿ) ಎಂಜಿನಿಯರಿಂಗ್ ವಿಭಾಗದಲ್ಲಿ ಅಗ್ರಸ್ಥಾನ ಪಡೆದಿದ್ದರು. ಅವರು ಸಹ ಮುಂಬೈನ ಐಐಟಿಗೆ ಪ್ರವೇಶ ಪಡೆದು, ಕಂಪ್ಯೂಟರ್ ಸೈನ್ಸ್ ಅಧ್ಯಯನ ಮಾಡುವ ಇಚ್ಛೆ ವ್ಯಕ್ತಪಡಿಸಿದರು.

ರಾಜ್ಯಕ್ಕೆ ಮೂರನೇ ಸ್ಥಾನ ಪಡೆದ ಕುಶಾಗ್ರ ಗುಪ್ತಾ ಎಐಆರ್‌ನಲ್ಲಿ 49ನೇ ಸ್ಥಾನ ಪಡೆದಿದ್ದಾರೆ. ಅವರು ಬೆಂಗಳೂರಿನ ಕಸವನಹಳ್ಳಿಯ ನಾರಾಯಣ ಕೋ-ಕಾವೇರಿ ಭವನದ ವಿದ್ಯಾರ್ಥಿ. ಕುಶಾಗ್ರ ಅವರೂ ಮುಂಬೈನ ಐಐಟಿಗೆ ಸೇರುವ ಗುರಿ ಹೊಂದಿದ್ದಾರೆ ಮತ್ತು ನಂತರ ಗಣಿತ ಸಂಶೋಧನೆಯಲ್ಲಿ ತೊಡಗಿಸಿಕೊಳ್ಳಲು ಬಯಸಿದ್ದಾರೆ.

ಜೆಇಇ (ಅಡ್ವಾನ್ಸ್ಡ್) 2025ರಲ್ಲಿ ಒಟ್ಟು 1,80,422 ಅಭ್ಯರ್ಥಿಗಳು 1 ಮತ್ತು 2 ಪತ್ರಿಕೆಗಳಿಗೆ ಹಾಜರಾಗಿದ್ದರು. ಅದರಲ್ಲಿ 54,378 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದಾರೆ.

ಜನನ ಪ್ರಮಾಣಪತ್ರದಲ್ಲಿ ‘ಪೋಷಕರು’

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಲಿಂಗತ್ವ ಅಲ್ಪಸಂಖ್ಯಾತ ದಂಪತಿಯು ಮಗುವಿನ ಜನನ ಪ್ರಮಾಣಪತ್ರದಲ್ಲಿ ತಮ್ಮನ್ನು ‘ತಂದೆ’ ಮತ್ತು ‘ತಾಯಿ’ ಎಂದು ನಮೂದಿಸುವ ಬದಲು ‘ಪೋಷಕರು’ ಎಂದು ನಮೂದಿಸಬಹುದು ಎಂದು ಕೇರಳ ಹೈಕೋರ್ಟ್ ಸೋಮವಾರ ಆದೇಶಿಸಿದೆ.

ದೇಶದಲ್ಲಿ ಇದೇ ಮೊದಲ ಬಾರಿಗೆ ಇಂತಹ ತೀರ್ಪು ಬಂದಿದ್ದು, 2023ರ ಫೆಬ್ರುವರಿಯಲ್ಲಿ ಮಗುವಿಗೆ ಜನ್ಮ ನೀಡಿದ ಕೇರಳದ 25 ವರ್ಷದ ಜಹಾದ್ ಮತ್ತು 24 ವರ್ಷದ ಜಿಯಾ ದಂಪತಿಗೆ ಸಮಾಧಾನ ತಂದಿದೆ.

ಕೋಯಿಕ್ಕೋಡ್ ನಗರ ಪಾಲಿಕೆಯು ನೀಡಿದ ಜನನ ಪ್ರಮಾಣಪತ್ರದಲ್ಲಿ ಮಗುವಿಗೆ ಜನ್ಮ ನೀಡಿದ ಜಹಾದ್ ಅವರನ್ನು ತಾಯಿ ಎಂದೂ, ಆಕೆಯ ಸಂಗಾತಿ ಜಿಯಾ ಅವರನ್ನು ತಂದೆ ಎಂದು ಉಲ್ಲೇಖಿಸಲಾಗಿತ್ತು. ತಾವಿಬ್ಬರೂ ಲಿಂಗತ್ವ ಅಲ್ಪಸಂಖ್ಯಾತ ಆಗಿರುವುದರಿಂದ ತಮ್ಮನ್ನು ‘ಪೋಷಕರು’ ಎಂದು ಉಲ್ಲೇಖಿಸುವಂತೆ ಕೋರಿದ್ದರು.

ಕೇರಳದ ಲಿಂಗತ್ವ ಅಲ್ಪಸಂಖ್ಯಾತ ಸಮುದಾಯದ ಮೊದಲ ವಕೀಲೆಯಾಗಿರುವ ಪದ್ಮ ಲಕ್ಷ್ಮೀ ಅವರು ಕೇರಳ ಹೈಕೋರ್ಟ್‌ನಲ್ಲಿ ಲಿಂಗತ್ವ ಅಲ್ಪಸಂಖ್ಯಾತ ದಂಪತಿಯ ಪರ ವಾದ ಮಂಡಿಸಿದರು.

ನ್ಯಾಯಮೂರ್ತಿ ಜಿಯಾದ್ ರೆಹಮಾನ್ ಅವರ ಪೀಠವು ದಂಪತಿಯ ಅರ್ಜಿಯನ್ನು ಅಂಗೀಕರಿಸಿ, ಇಬ್ಬರನ್ನೂ ‘ಪೋಷಕರು’ ಎಂದು ಉಲ್ಲೇಖಿಸುವ ಜನನ ಪ್ರಮಾಣಪತ್ರವನ್ನು ನೀಡುವಂತೆ ಕೋಯಿಕ್ಕೋಡ್ ನಗರಪಾಲಿಕೆಗೆ ನಿರ್ದೇಶಿಸಿತು.

ಜಹಾದ್ ಅವರು ಕೋಯಿಕ್ಕೋಡ್ ಸರ್ಕಾರಿ ವೈದ್ಯಕೀಯ ಕಾಲೇಜಿನ ಆಸ್ಪತ್ರೆಯಲ್ಲಿ 2023ರ ಫೆ.8ರಂದು ಮಗುವಿಗೆ ಜನ್ಮ ನೀಡಿದ್ದರು. ಲಿಂಗತ್ವ ಅಲ್ಪಸಂಖ್ಯಾತರೊಬ್ಬರು ಮಗುವಿಗೆ ಜನ್ಮ ನೀಡಿದ ಮೊದಲ ಮೊದಲ ಪ್ರಕರಣ ಇದು ಎನ್ನಲಾಗಿತ್ತು.

ಮೊಬೈಲ್ ಫೋನ್, ಕತ್ತಿ, ಚಾಕು, ಆಸ್ತಿಗೆ ಸಂಬಂಧಿಸಿದ ದಾಖಲೆಗಳು ವಶ

ಭಯೋತ್ಪಾದನೆ ಪ್ರಕರಣ: 12 ಮಂದಿ ಬಂಧನ

ಮುಂಬೈ (ಪಿಟಿಐ): ಉಗ್ರ ಚಟುವಟಿಕೆಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ಠಾಣೆ ಜಿಲ್ಲೆಯಲ್ಲಿ ಶೋಧ ಕಾರ್ಯ ನಡೆಸಿದ ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) 12 ಮಂದಿಯನ್ನು ಸೋಮವಾರ ಬಂಧಿಸಿದೆ.

ನಿಷೇಧಿತ ಸ್ಟೂಡೆಂಟ್ ಇಸ್ಲಾಮಿಕ್ ಮೂವ್‌ಮೆಂಟ್ ಆಫ್ ಇಂಡಿಯಾದ (ಸಿಮಿ) ಸದಸ್ಯರು ಹಾಗೂ ಕಚೇರಿಯ ಮಾಜಿ ಪದಾಧಿಕಾರಿಗಳ ಮನೆಗಳಲ್ಲಿ ಶೋಧ ಕಾರ್ಯ ನಡೆಸಲಾಗಿದೆ. ಮೊಬೈಲ್ ಫೋನ್‌ಗಳು, ಕತ್ತಿ, ಚಾಕು, ಆಸ್ತಿಗೆ ಸಂಬಂಧಿಸಿದ ದಾಖಲೆಗಳು, ಭಯೋತ್ಪಾದನಾ ಚಟುವಟಿಕೆಗಳಿಗೆ ಬಳಸಿದ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಮುಂಬೈಗೆ ಹೊಂದಿಕೊಂಡಿರುವ ಪಡ್ಘಾ ಹಾಗೂ ಬೋರಿವಲಿ ಗ್ರಾಮಗಳಲ್ಲಿ ಎಟಿಎಸ್‌ನ ಮುಂಬೈ ಘಟಕವು ಠಾಣೆ ಗ್ರಾಮಾಂತರ ಪೊಲೀಸರ ನೆರವಿನೊಂದಿಗೆ ಬೆಳಿಗ್ಗೆ 4 ಗಂಟೆಗೆ ಶೋಧ ಕಾರ್ಯ ನಡೆಸಲಾಯಿತು. ಈ ಎರಡು ಗ್ರಾಮಗಳಲ್ಲಿ ಬಿಗಿ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

ಸಾಖಿಬ್ ನಾಚನ್, ಆಖಿಬ್ ಸಾಖಿಬ್ ನಾಚನ್, ಅಬ್ದುಲ್ ಲತೀಫ್ ಕಸ್ಕರ್, ಕೈಫ್ ನಾಚನ್ ಮತ್ತು ಶಾಜಿಲ್ ನಾಚನ್ ಸೇರಿದಂತೆ 12 ಮಂದಿಯ ಮನೆಗಳಲ್ಲಿ ಶೋಧ ನಡೆಸಲಾಗಿದೆ. ಸಾಖಿಬ್ ನಾಚನ್ ಮತ್ತು ಸಹಚರರು ರಾಷ್ಟ್ರ ವಿರೋಧಿ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಗ್ರಾಮದ ಹಲವರಿಗೆ ಪ್ರಚೋದಿಸುತ್ತಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭೂ ದಲ್ಲಾಳಿ, ‘ಸಿಮಿ’ಯ ಮಾಜಿ ಸದಸ್ಯ ಫರಾಕ್ ಜುಬೇರ್ ಮುಲ್ಲಾ (60) ಎಂಬಾತನ ಮನೆಯಲ್ಲೂ ಶೋಧ ನಡೆಸಲಾಗಿದೆ. ಈತನ ಅಣ್ಣ ಹಸಿಬ್ ಜುಬೇರ್ ಮುಲ್ಲಾ 2002 ಮತ್ತು 2003ರ ಮುಂಬೈ ರೈಲು ಬಾಂಬ್ ಸ್ಫೋಟ ಪ್ರಕರಣದ ಆರೋಪಿಯಾಗಿದ್ದ. ಹಸಿಬ್ 10 ವರ್ಷಗಳ ಜೈಲು ಶಿಕ್ಷೆ ಅನುಭವಿಸಿದ್ದ. ಜತೆಗೆ ಇಸ್ಲಾಮಿಕ್ ಸ್ಟೇಟ್ ಉಗ್ರಗಾಮಿ ಸಂಘಟನೆಗೆ ಸಂಬಂಧಿಸಿದ ಪ್ರಕರಣದಲ್ಲಿ ದೆಹಲಿಯ ಜೈಲಿನಲ್ಲಿ ಸಾಖಿಬ್ ನಾಚನ್‌ನೊಟ್ಟಿಗೆ 2023ರ ಡಿಸೆಂಬರ್ 9ರಿಂದ ಸೆರೆವಾಸ ಅನುಭವಿಸುತ್ತಿದ್ದಾನೆ.

ಗೋದಾಮಿನಲ್ಲಿ ಕೆಲಸ ಮಾಡುವ ಅಬ್ದುಲ್ ಲತೀಫ್ ಕಸ್ಕರ್ (27) ಎಂಬಾತನ ಮನೆಯನ್ನೂ ಶೋಧಿಸಲಾಗಿದ್ದು, ಈತ ಐಎಸ್‌ನ ಪ್ರಕರಣವೊಂದರಲ್ಲಿ ಭದ್ರತಾ ಏಜೆನ್ಸಿಯಿಂದ ಬಂಧಿತನಾಗಿದ್ದ ಫರ್ಹಾನ್ ಸುಸೆಯ ಆಪ್ತನಾಗಿದ್ದ. ಶೋಧ ಕಾರ್ಯದ ವೇಳೆ ಆರು ಮಂದಿ ಮನೆಯಲ್ಲಿ ಲಭ್ಯವಿರಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪಹಲ್ಗಾಮ್ ಉಗ್ರರ ದಾಳಿ ಹಿನ್ನೆಲೆಯಲ್ಲಿ ಭಯೋತ್ಪಾದನೆಗೆ ಸಂಬಂಧಿಸಿದ ಚಟುವಟಿಕೆಗಳನ್ನು ನಿಗ್ರಹಿಸಲು ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳುವ ಅಗತ್ಯವಿದೆ ಎಂದು ಎಟಿಎಸ್‌ನ ವರದಿ ಹೇಳಿದೆ.

2023ರಲ್ಲಿ ಭಯೋತ್ಪಾದನಾ ಸಂಘಟನೆಯಾದ ಐಸಿಸ್ ವಿರುದ್ಧ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಪಡ್ಘಾ ಸೇರಿದಂತೆ ರಾಷ್ಟ್ರವ್ಯಾಪಿ ನಡೆಸಿದ ಶೋಧ ಕಾರ್ಯದಲ್ಲಿ ಸಾಖಿಬ್ ನಾಚನ್ ಸೇರಿದಂತೆ ಅನೇಕರನ್ನು ಬಂಧಿಸಿತ್ತು.

ಆರ್‌ಟಿಐ ಅರ್ಜಿಗಳ ಇ-ಮೇಲ್ ಪರಿಶೀಲನೆ’

ನವದೆಹಲಿ (ಪಿಟಿಐ): ಮಾಹಿತಿ ಹಕ್ಕು ಕಾಯ್ದೆಯಡಿ ಸಲ್ಲಿಸಲಾಗುವ ಎಲ್ಲಾ ಅರ್ಜಿಗಳನ್ನು ಒಂದು ಬಾರಿಯ ಪಾಸ್‌ವರ್ಡ್ (ಒಟಿಪಿ) ಮೂಲಕ ಇ-ಮೇಲ್ ಪರಿಶೀಲನೆ ನಡೆಸುವ ಪ್ರಕ್ರಿಯೆಯನ್ನು ಜೂನ್ 16ರಿಂದ ಕೇಂದ್ರ ಸರ್ಕಾರ ಜಾರಿಗೆ ತರಲಿದೆ ಎಂದು ಸೋಮವಾರ ಬಿಡುಗಡೆ ಮಾಡಿದ ಅಧಿಕೃತ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಪೋರ್ಟಲ್‌ನ ಸೈಬರ್ ಭದ್ರತಾ ಚೌಕಟ್ಟನ್ನು ಬಲಪಡಿಸುವುದರ ಜೊತೆಗೆ ನಾಗರಿಕರ ಗೋಪ್ಯತೆ ಇದರ ಉದ್ದೇಶವಾಗಿದೆ ಎಂದಿದೆ.


www.rtionline.gov.in ಮೂಲಕ ಆರ್‌ಟಿಐ ಅರ್ಜಿಗಳನ್ನು ಸಲ್ಲಿಸಬಹುದು. ಇದು ಬಳಕೆದಾರರಿಗೆ ಮೇಲ್ಮನವಿ ಸಲ್ಲಿಸಲು ಅನುವು ಮಾಡಿಕೊಡುತ್ತದೆ.

ಜೆಇಇ– ಅಡ್ವಾನ್ಸ್ಡ್ ಫಲಿತಾಂಶ: ರಜಿತ್ ಗುಪ್ತಾ ಪ್ರಥಮ

ನವದೆಹಲಿ (ಪಿಟಿಐ): ದೇಶದ ಎಲ್ಲ ಐಐಟಿಗಳಿಗೆ ಪ್ರವೇಶ ಪಡೆದುಕೊಳ್ಳುವುದಕ್ಕಾಗಿ ನಡೆಸುವ ಜೆಇಇ– ಅಡ್ವಾನ್ಸ್ಡ್ ಪರೀಕ್ಷೆಯ ಫಲಿತಾಂಶ ಸೋಮವಾರ ಪ್ರಕಟಗೊಂಡಿದೆ. ದೆಹಲಿ ವಲಯದ ರಜಿತ್ ಗುಪ್ತಾ ಅವರು ಪರೀಕ್ಷೆಯಲ್ಲಿ ಈ ಬಾರಿ ಮೊದಲ ರ್‍ಯಾಂಕ್ ಗಳಿಸಿದ್ದಾರೆ.

ಐಐಟಿ ಕಾನ್ಪುರವು ಈ ಬಾರಿಯ ಪರೀಕ್ಷೆಯನ್ನು ಏರ್ಪಡಿಸಿತ್ತು. 360 ಅಂಕಗಳಲ್ಲಿ ರಜಿತ್ ಗುಪ್ತಾ ಅವರು 332 ಗಳಿಸಿದ್ದಾರೆ. ಹರಿಯಾಣದ ಸಕ್ಷಮ್ ಜಿಂದಾಲ್ ಅವರು ಎರಡನೇ ರ್‍ಯಾಂಕ್ ಪಡೆದುಕೊಂಡಿದ್ದಾರೆ. ಈ ಇಬ್ಬರೂ ರಾಜಸ್ಥಾನದ ಕೋಟಾದಲ್ಲಿ ತರಬೇತಿ ಪಡೆದುಕೊಂಡಿದ್ದರು. ಮಹಿಳಾ ಅಭ್ಯರ್ಥಿಗಳ ಪೈಕಿ ಕಾನ್ಪುರ ವಲಯದ ದೇವದತ್ತಾ ಮಾಝಿ ಅವರು ಮೊದಲ ಸ್ಥಾನ ಗಳಿಸಿದ್ದಾರೆ. ಇವರಿಗೆ 312 ಅಂಕಗಳು ದೊರೆತಿವೆ. ಮೇ 18ರಂದು ಜೆಇಇ– ಅಡ್ವಾನ್ಸ್ಡ್ ಪರೀಕ್ಷೆ ನಡೆದಿತ್ತು.

ರ್‍ಯಾಂಕ್ ಲೆಕ್ಕಾಚಾರ ಹೇಗೆ?: ‘ರ್‍ಯಾಂಕ್ ನೀಡುವ ವೇಳೆ ಗಣಿತ, ಭೌತ ಮತ್ತು ರಾಸಾಯನ ವಿಜ್ಞಾನ ವಿಷಯಗಳಲ್ಲಿ ಪಡೆದ ಅಂಕಗಳ ಸರಾಸರಿ ಅಂಕಗಳನ್ನು ಪರಿಗಣಿಸಲಾಗುತ್ತದೆ. ಸರಾಸರಿ ಅಂಕಗಳ ಜೊತೆಗೆ ಪ್ರತಿ ವಿಷಯದಲ್ಲಿಯು ಅಭ್ಯರ್ಥಿಯು ಪಡೆದುಕೊಂಡ ಅಂಕಗಳನ್ನೂ ಪರಿಗಣಿಸಲಾಗುತ್ತದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.



1.80 ಲಕ್ಷ ಪತ್ರಿಕೆ 1 ಮತ್ತು 2 ಪರೀಕ್ಷೆಗಳಿಗೆ ಹಾಜರಾದ ಒಟ್ಟು ಅಭ್ಯರ್ಥಿಗಳ ಸಂಖ್ಯೆ

116 ವಿದೇಶಿ ಅಭ್ಯರ್ಥಿಗಳ ಸಂಖ್ಯೆ

13 ಅರ್ಹತೆ ಪಡೆದುಕೊಂಡವರ ಸಂಖ್ಯೆ

- ಅರ್ಹತೆ ಪಡೆದುಕೊಂಡ ಮೊದಲ **100** ಅಭ್ಯರ್ಥಿಗಳ ಪೈಕಿ, **31** ಅಭ್ಯರ್ಥಿಗಳ ಬಾಂಬೆ ಮತ್ತು ದೆಹಲಿ ವಲಯದವರು. **23** ಹೈದರಾಬಾದ್ ವಲಯದವರು, **4** ಕಾನ್ಪುರ ವಲಯದವರು, **5** ಖಡಗಪುರ ವಲಯ ಮತ್ತು **6** ರುಡಕೀ ವಲಯದವರು

‘ಎನ್‌ಸಿಇಆರ್‌ಟಿ ಪಠ್ಯಗಳಿಗೆ ಹೆಚ್ಚು ಒತ್ತು’

ಇದು ನನಗೆ ಸಂತೋಷದ ಗಳಿಗೆ. ನನ್ನ ಕಠಿಣ ಪರಿಶ್ರಮಕ್ಕೆ ಸಿಕ್ಕ ಪ್ರತಿಫಲ. 10ನೇ ತರಗತಿಯಿಂದಲೇ ನಾನು ಜೆಇಇ ಪರೀಕ್ಷೆಗೆ ತಯಾರಿ ನಡೆಸಿದ್ದೇನೆ. ತಯಾರಿಯಲ್ಲಿ ಅಂಥ ವಿಶೇಷವೇನೂ ಇರಲಿಲ್ಲ. ನನ್ನ ಮುಖ್ಯ ಗುರಿ ಪಠ್ಯವನ್ನು ಸರಿಯಾದ ಸಮಯಕ್ಕೆ ಓದಿ ಮುಗಿಸುವುದು. ಎಚ್.ಸಿ. ವರ್ಮಾ ಮತ್ತು ಇರೋಡೋವ್ ಪುಸ್ತಕಗಳಲ್ಲಿನ ಮಾದರಿ ಪ್ರಶ್ನೆಗಳನ್ನು ಬಿಡಿಸುತ್ತಿದ್ದೆ. ಇದು ನನ್ನ ಅನುಕೂಲಕ್ಕೆ ಬಂದಿತು. ಆದರೆ, ಎನ್‌ಸಿಇಆರ್‌ಟಿ ಪಠ್ಯಗಳಿಗೆ ಹೆಚ್ಚು ಒತ್ತು ನೀಡಿದೆ

ರಜಿತ್ ಗುಪ್ತಾ, ಮೊದಲ ರ್‍ಯಾಂಕ್ ಪಡೆದ ಅಭ್ಯರ್ಥಿ

ಇಂಡಿಯನ್ ಪ್ರೀಮಿಯರ್ ಲೀಗ್ ಫೈನಲ್ 2025



18 ವರ್ಷದ ಕನಸು ನನಸಾಗುವ ನಿರೀಕ್ಷೆಯಲ್ಲಿ 'ಬೆಂಗಳೂರು': ಚಾಂಪಿಯನ್ ಪಟ್ಟದ ಮೇಲೆ ಕಿಂಗ್ಸ್ ಚಿತ್ತ

ಐಪಿಎಲ್ ಸಿಂಹಾಸನದ ಮೇಲೆ ಆರ್‌ಸಿಬಿ ಕಣ್ಣು



ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದ ಆರ್‌ಸಿಬಿ 'ನವತಾರೆಯರು'

ಕೃಣಾಲ್ ಪಾಂಡ್ಯ(ಎರಡು ಬಾರಿ), ರಜತ್ ಪಾಟೀದಾರ್(ಎರಡುಬಾರಿ), ಫಿಲಿಪ್ ಸಾಲ್ಟ್, ಟಿಮ್ ಡೇವಿಡ್, ವಿರಾಟ್ ಕೊಹ್ಲಿ, ಜೋಶ್ ಹ್ಯಾಜಲ್‌ವುಡ್, ರೊಮೆರಿಯೊ ಶೆಫರ್ಡ್, ಜಿತೇಶ್ ಶರ್ಮಾ ಹಾಗೂ ಸುಯಶ್ ಶರ್ಮಾ

ಅಹಮದಾಬಾದ್‌ನಲ್ಲಿ ತಂಡಗಳ ಸಾಧನೆ

ಆರ್‌ಸಿಬಿ		ಪಂಜಾಬ್
6	ಪಂದ್ಯ	7
3	ಗೆಲುವು	5
3	ಸೋಲು	2

• ಸಿದ್ದಿ ಕಿರಣ್

ಅಹಮದಾಬಾದ್: ರಾಯಲ್ ಚಾಲೆಂಜರ್ಸ್ ಬೆಂಗಳೂರು 'ಈ ಸಲ ಕಪ್' ಜಯಿಸುವ ನೆಚ್ಚಿನ ತಂಡವಾಗಿ ಮಂಗಳವಾರ ನಡೆಯಲಿರುವ ಐಪಿಎಲ್ ಫೈನಲ್‌ನಲ್ಲಿ ಕಣಕ್ಕಿಳಿಯಲಿದೆ. 18 ವರ್ಷಗಳಲ್ಲಿ ಆರ್‌ಸಿಬಿ ತಂಡವು ನಾಲ್ಕನೇ ಸಲ ಫೈನಲ್ ಪ್ರವೇಶಿಸಿದ್ದು, ಮೊದಲ ಬಾರಿ ಚಾಂಪಿಯನ್ ಪಟ್ಟ ಅಲಂಕರಿಸುವ ಛಲದಲ್ಲಿದೆ.

ಮಂಗಳವಾರ ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಆರ್‌ಸಿಬಿಯು ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿದೆ. ಈ ವರ್ಷದ ಟೂರ್ನಿಯುದ್ದಕ್ಕೂ ತುಂಬು ಚೈತನ್ಯದ ಆಟವಾಡುತ್ತ ಫೈನಲ್ ಹಂತಕ್ಕೆ ಏರಿರುವ ಉಭಯ ತಂಡಗಳಲ್ಲಿ ಯಾರೇ ಗೆದ್ದರೂ ಮೊದಲ ಬಾರಿ ಚಾಂಪಿಯನ್ ಆಗುತ್ತಾರೆ. ಪಂಜಾಬ್ ತಂಡಕ್ಕೂ 18 ವರ್ಷಗಳಿಂದ ಪ್ರಶಸ್ತಿ ಕನಸು ನನಸಾಗಿಲ್ಲ.


ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಮುಂಬೈ ಇಂಡಿಯನ್ಸ್ ತಂಡಗಳು ತಲಾ ಐದು ಬಾರಿ ಪ್ರಶಸ್ತಿ ಗೆದ್ದು ದಾಖಲೆ ಹಂಚಿಕೊಂಡಿವೆ. ಕೋಲ್ಕತ್ತ ನೈಟ್ ರೈಡರ್ಸ್ ಮೂರು ಸಲ ಚಾಂಪಿಯನ್ ಆಗಿದೆ. ಫ್ರ್ಯಾಂಚೈಸಿ ಲೀಗ್‌ನಲ್ಲಿ ಅತ್ಯಂತ ಜನಪ್ರಿಯ ತಂಡಗಳಲ್ಲಿ ಒಂದಾಗಿರುವ ಆರ್‌ಸಿಬಿಯು ಇದುವರೆಗೆ 9 ಸಲ ಪ್ಲೇ ಆಫ್ ಪ್ರವೇಶಿಸಿದೆ. ಅದರಲ್ಲಿ ಮೂರು ಬಾರಿ (2009,2011 ಮತ್ತು 2016) ರನ್ನರ್ಸ್ ಅಪ್ ಆಗಿದೆ.

ಚಾಂಪಿಯನ್ ಆಗದಿದ್ದರೂ ತಂಡದ ಮೇಲಿನ ಅಭಿಮಾನಿಗಳ ಪ್ರೀತಿ ಮಾತ್ರ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಸಾಮಾಜಿಕ ಜಾಲತಾಣಗಳಲ್ಲಿ ಅತಿ ಹೆಚ್ಚು ಫಾಲೋವರ್ಸ್‌ಗಳನ್ನು ಹೊಂದಿರುವ ಐಪಿಎಲ್ ತಂಡ ಇದಾಗಿದೆ. ಅಷ್ಟೇ ಅಲ್ಲ; ಪಂದ್ಯ ನಡೆಯುವ ಕ್ರೀಡಾಂಗಣದಲ್ಲಿಯೂ ಆರ್‌ಸಿಬಿ ಅಭಿಮಾನಿಗಳ ಸಂಖ್ಯೆಯೇ ಹೆಚ್ಚು. ತಂಡದ ಆಟಗಾರರು ಪಯಣಿಸುವ ದಾರಿಗಳಲ್ಲಿಯೂ ಅಭಿಮಾನದ ಹೊಳೆ ಹರಿಯುತ್ತದೆ. ಇದಕ್ಕೆ ಕಾರಣರಾಗಿರುವ ವಿರಾಟ್ ಕೊಹ್ಲಿ ಅವರು ಅಭಿನಂದನಾರ್ಹರು. ಈ ಸಲದ ಐಪಿಎಲ್‌ನಲ್ಲಿ ಕಪ್ ಗೆಲ್ಲುವ ನೆಚ್ಚಿನ ತಂಡ ಆರ್‌ಸಿಬಿ ಎಂಬುದು ನಿಸ್ಸಂಶಯ. ಬಳಗದಲ್ಲಿರುವ ಪ್ರತಿಯೊಬ್ಬರಿಗೂ ಚಾಂಪಿಯನ್ ಎನಿಸಿಕೊಳ್ಳಬೇಕು ಎಂಬ ತವಕ ಇರುವುದೂ ಸುಸ್ಪಷ್ಟ. ಅದರಲ್ಲಿ ದಿಗ್ಗಜ ಕೊಹ್ಲಿ ಕೂಡ ಇದ್ದಾರೆ.

ಈ ಸಲದ ಟೂರ್ನಿಯಲ್ಲಿ ಆರ್‌ಸಿಬಿಯ ಲೆಕ್ಕಾಚಾರಗಳಲ್ಲಿ ಬಹುತೇಕ ಎಲ್ಲವೂ ಕೈಗೂಡಿವೆ. ಆದ್ದರಿಂದ ಕಪ್ ಗೆಲ್ಲುವ ನಿರೀಕ್ಷೆಯೂ ಹೆಚ್ಚಿದೆ. ಈ ಋತುವಿನಲ್ಲಿ ಆರ್‌ಸಿಬಿಯು ಒಂದು ತಂಡವಾಗಿ ಅಮೋಘ ಸಾಧನೆ ಮಾಡಿದೆ.

ವಿರಾಟ್ ಒಟ್ಟು 614 ರನ್ ಗಳಿಸಿದ್ದಾರೆ. ಫಿಲ್ ಸಾಲ್ಟ್ (387 ರನ್) ಮತ್ತು ತಂಡಕ್ಕೆ ಈ ವರ್ಷವಷ್ಟೇ ನಾಯಕನಾಗಿ ನೇಮಕಗೊಂಡ ರಜತ್ ಪಾಟೀದಾರ್ (286), 'ಫಿನಿಷರ್' ಜಿತೇಶ್ ಶರ್ಮಾ (237), ಆಲ್‌ರೌಂಡರ್ ಕೃಣಾಲ್ ಪಾಂಡ್ಯ (105), ಟಿಮ್ ಡೇವಿಡ್ (187) ಮತ್ತು ರೊಮೆರಿಯೊ ಶೆಫರ್ಡ್ ಅವರೆಲ್ಲರೂ ತಂಡಕ್ಕೆ ಅಗತ್ಯವಿದಾಗ ಮಿಂಚಿದ್ದಾರೆ. ಗೆಲುವಿನ ರೂವಾರಿಗಳಾಗಿದ್ದಾರೆ.

ಬೌಲಿಂಗ್‌ನಲ್ಲಿಯೂ ತಂಡವು ಸಮತೋಲನದಿಂದ ಕೂಡಿದೆ. ವೇಗಿ ಜೋಶ್ ಹ್ಯಾಜಲ್‌ವುಡ್ (21 ವಿಕೆಟ್), ಯಶ್ ದಯಾಳ್ (12), ಭುವನೇಶ್ವರ್ ಕುಮಾರ್ (15), ಕೃಣಾಲ್ ಪಾಂಡ್ಯ (15) ಮತ್ತು ಸುಯಶ್ ಶರ್ಮಾ (8) ಕೂಡ ಉತ್ತಮ ಲಯದಲ್ಲಿದ್ದಾರೆ. ಇವರೆಲ್ಲರ ಸಾಮರ್ಥ್ಯವು ಮಂಗಳವಾರ ಭೋರ್ಗರೆದರೆ ಆರ್‌ಸಿಬಿ ಅಭಿಮಾನಿಗಳ ವಲಯದಲ್ಲಿ ಸಂತಸದ ಮಹಾಪೂರ ಹರಿಯುವುದರಲ್ಲಿ ಸಂಶಯವೇ ಇಲ್ಲ.



ಎಸೆತಗಳ ವೇಗ ವೈವಿಧ್ಯಕ್ಕೆ ಹೆಸರಾದ ಅರ್ಷದೀಪ್ ಸಿಂಗ್

ಸ್ವಿಂಗ್ ಚಾಣಾಕ್ಷ ಜೋಶ್ ಹ್ಯಾಜಲ್‌ವುಡ್

ಗೂಗ್ಲಿ ಗಾರುಡಿಗ ಯಜುವೇಂದ್ರ ಚಾಹಲ್

ಬೆಂಗಳೂರಿನಲ್ಲಿ ಬಂದೋಬಸ್ತ್

ಬೆಂಗಳೂರು: ಐಪಿಎಲ್ ಫೈನಲ್ ಪಂದ್ಯದ ಅಂಗವಾಗಿ ಬೆಂಗಳೂರು ನಗರದ ಕೆಲವು ಸ್ಥಳಗಳಲ್ಲಿ ಮಂಗಳವಾರ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ತಂಡವು ಟ್ರೋಫಿ ಜಯಿಸಿದರೆ ಅಭಿಮಾನಿಗಳು ಪಬ್‌ಗಳು, ಮೈದಾನಗಳು ಹಾಗೂ ಮಾಲ್‌ಗಳಲ್ಲಿ ವಿಜಯೋತ್ಸವ ಆಚರಣೆ ಮಾಡುವ ಸಾಧ್ಯತೆಯಿದೆ. ಹೀಗಾಗಿ, ಸೂಕ್ಷ್ಮ ಪ್ರದೇಶಗಳಲ್ಲಿ ಪೊಲೀಸ್ ಬಂದೋಬಸ್ತ್ ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

'ನಗರದ ಯಾವುದೇ ರಸ್ತೆಗಳಲ್ಲಿ ಮೆರವಣಿಗೆಗೆ ಅವಕಾಶ ಇಲ್ಲ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಮಳೆ ಬಂದರೆ ಮೀಸಲು ದಿನ

ಅಹಮದಾಬಾದ್ (ಪಿಟಿಐ): ಭಾನುವಾರ ಇಲ್ಲಿ ನಡೆದ ಪಂಜಾಬ್ ಕಿಂಗ್ಸ್ ಮತ್ತು ಮುಂಬೈ ಇಂಡಿಯನ್ಸ್ ನಡುವಣ ಎರಡನೇ ಕ್ವಾಲಿಫೈಯರ್ ಪಂದ್ಯದ ಸಂದರ್ಭದಲ್ಲಿ ಮಳೆ ಸುರಿದಿತ್ತು. ಅದರಿಂದಾಗಿ ಪಂದ್ಯವು ಎರಡು ತಾಸು ತಡವಾಗಿ ಆರಂಭವಾಯಿತು.

ಮಂಗಳವಾರ ಇಲ್ಲಿಯೇ ನಡೆಯಲಿರುವ ಫೈನಲ್ ಸಂದರ್ಭದಲ್ಲಿ ಹೆಚ್ಚು ಮಳೆ ಸುರಿಯುವ ಮುನ್ಸೂಚನೆಗಳಿಲ್ಲ. ಒಂದು ವೇಳೆ ಮಳೆಯಾದರೆ ಪಂದ್ಯಕ್ಕೆ 120 ನಿಮಿಷಗಳ ಹೆಚ್ಚುವರಿ ಅವಧಿ ಇದೆ. ಒಂದೊಮ್ಮೆ ಮಳೆಯಿಂದಾಗಿ ಈ ದಿನ ಪಂದ್ಯವೇ ನಡೆಯದಿದ್ದರೆ ಮೀಸಲು ದಿನವಾದ ಬುಧವಾರ ಆಯೋಜಿಸಲಾಗುವುದು.

₹20 ಕೋಟಿ ಚಾಂಪಿಯನ್ ತಂಡಕ್ಕೆ ಸಿಗುವ ಬಹುಮಾನ

₹13 ಕೋಟಿ ರನ್ನರ್ಸ್ ಅಪ್ ತಂಡ ಪಡೆಯುವ ಬಹುಮಾನ



ವಿರಾಟ್ ಕೊಹ್ಲಿ

14 ಪಂದ್ಯ

63 ಬೌಂಡರಿ

19 ಸಿಕ್ಸರ್

ಬೆಂಗಳೂರಿಗೆ ಶ್ರೇಯಸ್, ಚಾಹಲ್ ಸವಾಲು

ಪಂಜಾಬ್ ಕಿಂಗ್ಸ್ ತಂಡವು ಲೀಗ್ ಹಂತದಲ್ಲಿ ಒಂದು ಪಂದ್ಯ ಮತ್ತು ಮೊದಲ ಕ್ವಾಲಿಫಯರ್‌ನಲ್ಲಿ ಆರ್‌ಸಿಬಿ ಎದುರು ಸೋತಿದೆ. ಆದರೂ ತಂಡವನ್ನು ಹಗುರವಾಗಿ ಪರಿಗಣಿಸುವಂತಿಲ್ಲ. ಅದರಲ್ಲೂ ಭಾನುವಾರ ರಾತ್ರಿ ಎರಡನೇ ಕ್ವಾಲಿಫಯರ್‌ನಲ್ಲಿ ನಾಯಕ ಶ್ರೇಯಸ್ ಅಯ್ಯರ್ ಅವರ ಅಬ್ಬರದ ಬ್ಯಾಟಿಂಗ್ ನೋಡಿದ ಮೇಲಂತೂ ಆರ್‌ಸಿಬಿ ಬೌಲರ್‌ಗಳು ತಮ್ಮ ಪೂರ್ವಯೋಜಿತ ತಂತ್ರಗಾರಿಕೆಯನ್ನು ಮರುಪರಿಶೀಲಿಸಿಕೊಳ್ಳಬೇಕೇನೋ?

ಮುಂಬೈ ತಂಡದ ಸ್ಟಾರ್ ಬೌಲರ್ ಜಸ್‌ಪ್ರೀತ್ ಬೂಮ್ರಾ, ಟ್ರೆಂಟ್ ಬೌಲ್ಟ್ ಮತ್ತು ಅಶ್ವಿನಿಕುಮಾರ್ ಅವರ ಎಸೆತಗಳನ್ನು ಶ್ರೇಯಸ್ ಲೀಲಾಜಾಲವಾಗಿ ಎದುರಿಸಿದ್ದರು. ಅಜೇಯ 87 ರನ್ ಗಳಿಸಿ ಪಂಜಾಬ್ ತಂಡವನ್ನು ಗೆಲುವಿನ ದಡ ಸೇರಿಸಿದ್ದರು.

ಆರ್‌ಸಿಬಿಯ ರಜತ್ ಪಾಟೀದಾರ್ ಅವರಿಗೆ ಹೋಲಿಸಿದರೆ ಶ್ರೇಯಸ್‌ಗೆ ನಾಯಕತ್ವದ ಅನುಭವ ಹೆಚ್ಚು. ಅಲ್ಲದೇ ತಾವು ನಾಯಕತ್ವ ವಹಿಸಿದ ತಂಡಗಳನ್ನು ಫೈನಲ್ ತಲುಪಿಸಿದ ಶ್ರೇಯವೂ ಅವರಿಗೆ ಇದೆ. ಅವರ ನಾಯಕತ್ವದ ಡೆಲ್ಲಿ ಕ್ಯಾಪಿಟಲ್ಸ್ ಫೈನಲ್ ತಲುಪಿ ಸೋತಿತ್ತು. ಹೋದ ವರ್ಷ ಶ್ರೇಯಸ್ ನಾಯಕತ್ವದ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಚಾಂಪಿಯನ್ ಆಗಿತ್ತು. ಈ ವರ್ಷ ಶ್ರೇಯಸ್ ಅವರು ದುಬಾರಿ ಮೊತ್ತ ಪಡೆದು ಸೇರಿರುವ ಪಂಜಾಬ್ ತಂಡವೂ ಫೈನಲ್ ಪ್ರವೇಶಿಸಿದೆ.

ಶ್ರೇಯಸ್ ಅಲ್ಲದೇ ಪ್ರಿಯಾಂಶ್ ಆರ್ಯ, ಪ್ರಭಸಿಮ್ರನ್ ಸಿಂಗ್, ಮಾರ್ಕಸ್ ಸ್ಟೊಯಿನಿಸ್, ನೆಹಲ್ ವಧೇರಾ, ಶಶಾಂಕ್ ಸಿಂಗ್ ಹಾಗೂ ಜೋಶ್ ಇಂಗ್ಲಿಸ್ ಅವರು ಬ್ಯಾಟಿಂಗ್ ವಿಭಾಗದ ಶಕ್ತಿಯಾಗಿದ್ದಾರೆ. ಎಡಗೈ ವೇಗಿ ಅರ್ಷದೀಪ್ ಸಿಂಗ್, ಕೈಲ್ ಜೆಮಿಸನ್, ಕನ್ನಡಿಗ ವೈಶಾಖ ವಿಜಯಕುಮಾರ್ ಮತ್ತು ಸ್ಪಿನ್ ಚತುರ ಯಜುವೇಂದ್ರ ಚಾಹಲ್ ಅವರು ಬೌಲಿಂಗ್ ವಿಭಾಗವನ್ನು ಶಕ್ತಿಯುತಗೊಳಿಸಿದ್ದಾರೆ. ಚಾಹಲ್ ಈ ಹಿಂದೆ ಕೆಲವು ವರ್ಷ ಆರ್‌ಸಿಬಿಯಲ್ಲಿ ಆಡಿದ್ದರು.

ಆರೆಂಜ್ ಕ್ಯಾಪ್
ಸಾಯಿ ಸುದರ್ಶನ್ (ಜಿಟಿ) 759 ರನ್

ಪರ್ಪಲ್ ಕ್ಯಾಪ್
ಪ್ರಸಿದ್ಧ ಕೃಷ್ಣ (ಜಿಟಿ) 25 ವಿಕೆಟ್

ಆರ್‌ಸಿಬಿ ಸೋತಿರುವ ಮೂರು ಫೈನಲ್

ವರ್ಷ	ಎದುರಾಳಿ	ಸ್ಥಳ	ಫಲಿತಾಂಶ
2009	ಡಿಸಿ	ಜೋಹಾನಸ್‌ಬರ್ಗ್	6 ರನ್‌ಗಳ ಸೋಲು
2011	ಸಿಎಸ್‌ಕೆ	ಚೆನ್ನೈ	58 ರನ್‌ಗಳ ಸೋಲು
2016	ಎಸ್‌ಆರ್‌ಎಚ್	ಬೆಂಗಳೂರು	8 ರನ್‌ಗಳ ಸೋಲು

ಗರಿಷ್ಠ ವಿಕೆಟ್ ಪಡೆದವರು

ಬೌಲರ್	ಪಂದ್ಯ	ವಿಕೆಟ್	ಸರಾಸರಿ	ಶ್ರೇಷ್ಠ
ರಾಯಲ್ ಚಾಲೆಂಜರ್ಸ್ ಬೆಂಗಳೂರು				
ಜೋಶ್ ಹ್ಯಾಜಲ್‌ವುಡ್	11	21	15.80	33ಕ್ಕೆ4
ಕೃಣಾಲ್ ಪಾಂಡ್ಯ	14	15	24.13	45ಕ್ಕೆ4
ಭುವನೇಶ್ವರ ಕುಮಾರ್	13	15	29.66	33ಕ್ಕೆ3
ಪಂಜಾಬ್ ಕಿಂಗ್ಸ್				
ಅರ್ಷದೀಪ್ ಸಿಂಗ್	16	18	26.55	16ಕ್ಕೆ3
ಮಾರ್ಕೊ ಯಾನ್ಸನ್	14	16	27.12	17ಕ್ಕೆ3
ಯಜುವೇಂದ್ರ ಚಾಹಲ್	13	15	26.20	28ಕ್ಕೆ4

ಗರಿಷ್ಠ ರನ್ ಗಳಿಸಿದವರು

ಆಟಗಾರ	ಪಂದ್ಯ	ರನ್	ಸರಾಸರಿ	ಅರ್ಧಶತಕ	ಶ್ರೇಷ್ಠ
ರಾಯಲ್ ಚಾಲೆಂಜರ್ಸ್ ಬೆಂಗಳೂರು					
ವಿರಾಟ್ ಕೊಹ್ಲಿ	14	614	55.81	8	73*
ಫಿಲ್ ಸಾಲ್ಟ್	12	387	35.18	4	65
ರಜತ್ ಪಾಟೀದಾರ್	14	286	23.83	2	64
ಪಂಜಾಬ್ ಕಿಂಗ್ಸ್					
ಶ್ರೇಯಸ್ ಅಯ್ಯರ್	16	603	54.81	6	97*
ಪ್ರಭಸಿಮ್ರನ್ ಸಿಂಗ್	16	523	32.68	4	91
ಪ್ರಿಯಾಂಶ್ ಆರ್ಯ	16	451	28.18	2	103

ಏಕದಿನ ಕ್ರಿಕೆಟ್‌ಗೆ ಮ್ಯಾಕ್ಸ್‌ವೆಲ್ ವಿದಾಯ

ಮೆಲ್ಬರ್ನ್(ಪಿಟಿಐ): ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಸೋಮವಾರ ಏಕದಿನ ಕ್ರಿಕೆಟ್ ಮಾದರಿಗೆ ವಿದಾಯ ಘೋಷಿಸಿದರು.

ಮುಂದಿನ ವರ್ಷ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲು ಹೆಚ್ಚು ಗಮನ ನೀಡಲು ಮ್ಯಾಕ್ಸ್‌ವೆಲ್ ಈ ನಿರ್ಧಾರ ಕೈಗೊಂಡಿದ್ದಾರೆ.

'ನನ್ನ ಸ್ವಾರ್ಥಕ್ಕಾಗಿ ಆಟ ಮುಂದುವರಿಸುವ ಮನಸ್ಸಿಲ್ಲ' ಎಂದಿರುವ ಅವರು ತಮ್ಮ ದೇಹವು ಏಕದಿನ ಮಾದರಿಯಲ್ಲಿ ಎದುರಿಸುತ್ತಿರುವ ತೊಂದರೆಗಳ ಬಗ್ಗೆಯೂ ಮಾತನಾಡಿದ್ದಾರೆ.

36 ವರ್ಷದ ಮ್ಯಾಕ್ಸ್‌ವೆಲ್ ಅವರು 149 ಅಂತರರಾಷ್ಟ್ರೀಯ ಏಕದಿನ ಪಂದ್ಯಗಳನ್ನು ಆಡಿದ್ದಾರೆ. ಅದರಲ್ಲಿ 3990 ರನ್ ಗಳಿಸಿದ್ದು, 4 ಶತಕ ಮತ್ತು 23 ಅರ್ಧಶತಕಗಳನ್ನು ಹೊಡೆದಿದ್ದಾರೆ. 77 ವಿಕೆಟ್ ಕೂಡ ಗಳಿಸಿದ್ದಾರೆ.



ಗ್ಲೆನ್ ಮ್ಯಾಕ್ಸ್‌ವೆಲ್

ಸ್ಫೋಟಕ ಶೈಲಿಯ ಬ್ಯಾಟರ್ ಮತ್ತು ಆಫ್‌ಸ್ಪಿನ್ ಬೌಲರ್ ಆಗಿ ಅವರು ಹಲವು ಸ್ಮರಣಾರ್ಹ ಇನಿಂಗ್ಸ್‌ಗಳನ್ನು ಆಡಿದ್ದಾರೆ. 2023ರ ವಿಶ್ವಕಪ್ ಟೂರ್ನಿಯಲ್ಲಿ ಆಸ್ಟ್ರೇಲಿಯಾ ತಂಡವು ಅಫ್ಗಾನಿಸ್ತಾನ ಎದುರಿನ ಪಂದ್ಯದಲ್ಲಿ 91 ರನ್‌ಗಳಿಗೆ 7 ವಿಕೆಟ್ ಕಳೆದುಕೊಂಡಿತ್ತು. ನಾಕೌಟ್ ಪ್ರವೇಶದ ದೃಷ್ಟಿಯಿಂದ ತಂಡಕ್ಕೆ ಆ ಪಂದ್ಯದ ಗೆಲುವು ಮಹತ್ವದ್ದಾಗಿತ್ತು. ಈ ಹಂತದಲ್ಲಿ ಮ್ಯಾಕ್ಸ್‌ವೆಲ್ 128 ಎಸೆತಗಳಲ್ಲಿ 201 ರನ್ ಗಳಿಸಿದ್ದರು. ಆ ದ್ವಿಶತಕದಿಂದಾಗಿ ಅವರ ತಂಡ ರೋಚಕ ಜಯ ಸಾಧಿಸಿತ್ತು. ತೊಡೆಯ ಸ್ನಾಯು ಸೆಳೆತದಲ್ಲಿಯೂ ಅವರು ಆಡಿದ್ದರು. ಆ ವರ್ಷ ಆಸ್ಟ್ರೇಲಿಯಾ ಚಾಂಪಿಯನ್ ಆಗಿತ್ತು.

'ನನ್ನ ದೈಹಿಕ ಸಾಮರ್ಥ್ಯವು ಏಕದಿನ ಕ್ರಿಕೆಟ್‌ನಲ್ಲಿ ಆಡುವ ಮಟ್ಟಕ್ಕೆ ನಿರ್ವಹಣೆಯಾಗುತ್ತಿಲ್ಲ. ನನ್ನಿಂದಾಗಿ ತಂಡಕ್ಕೆ ತೊಂದರೆಯಾಗುತ್ತಿದೆ ಎನಿಸುತ್ತಿತ್ತು. ಆದ್ದರಿಂದ ಆಯ್ಕೆ ಸಮಿತಿಯ ಮುಖ್ಯಸ್ಥ ಜಾರ್ಜ್ ಬೇಲಿ ಅವರೊಂದಿಗೆ ಚರ್ಚಿಸಿದೆ. ಎರಡು ವರ್ಷಗಳ ನಂತರದ ವಿಶ್ವಕಪ್ (ಏಕದಿನ) ಕುರಿತು ಮಾತನಾಡಿದೆವು. ಅಲ್ಲಿಯವರೆಗೂ ನನಗೆ ಆಡಲು ಸಾಧ್ಯವಾಗಲಿಕ್ಕಿಲ್ಲ ಎಂದು ತಿಳಿಸಿದೆ. ನಂತರ ಈ ನಿರ್ಧಾರ ಕೈಗೊಂಡೆ' ಎಂದು ಫೈನಲ್ ವರ್ಡ್ ಪಾಡ್‌ಕಾಸ್ಟ್‌ನಲ್ಲಿ ಮ್ಯಾಕ್ಸ್‌ವೆಲ್ ಹೇಳಿದ್ದಾರೆ.

ಮಹಿಳಾ ವಿಶ್ವಕಪ್ ಕ್ರಿಕೆಟ್ ಬೆಂಗಳೂರಿನಲ್ಲಿ ಮೊದಲ ಪಂದ್ಯ

ದುಬೈ (ಪಿಟಿಐ): ಏಕದಿನ ಕ್ರಿಕೆಟ್ ಮಹಿಳೆಯರ ವಿಶ್ವಕಪ್ ಟೂರ್ನಿಯು ಸೆಪ್ಟೆಂಬರ್ 30ರಿಂದ ಆರಂಭವಾಗಲಿವೆ. ಉದ್ಘಾಟನಾ ಪಂದ್ಯವು ಬೆಂಗಳೂರಿನಲ್ಲಿ ಆಯೋಜನೆಗೊಳ್ಳಲಿದೆ.

ಭಾರತ ಮತ್ತು ಶ್ರೀಲಂಕಾ ಜಂಟಿಯಾಗಿ ಟೂರ್ನಿಯನ್ನು ಆಯೋಜಿಸಲಿವೆ. ಬೆಂಗಳೂರು, ಗುವಾಹಟಿ, ಇಂದೋರ್, ವಿಶಾಖಪಟ್ಟಣ ಹಾಗೂ ಕೊಲಂಬೊದಲ್ಲಿ ಪಂದ್ಯಗಳು ನಡೆಯಲಿವೆ. ಪಾಕಿಸ್ತಾನವು ತಮ್ಮ ತಂಡವನ್ನು ಭಾರತಕ್ಕೆ ಕಳುಹಿಸದಿರಲು ನಿರ್ಧರಿಸಿದೆ. ಹಾಗಾಗಿ, ಪಾಕಿಸ್ತಾನ ತಂಡ ಆಡುವ ಪಂದ್ಯಗಳನ್ನು ತಟಸ್ಥ ಸ್ಥಳದಲ್ಲಿ (ಕೊಲಂಬೊ) ನಿಗದಿಪಡಿಸಲಾಗಿದೆ ಎಂದು ಐಸಿಸಿ ತಿಳಿಸಿದೆ.

ಮೊದಲ ಸೆಮಿಫೈನಲ್ ಪಂದ್ಯ ಅಕ್ಟೋಬರ್ 29ರಂದು ಗುವಾಹಟಿ ಅಥವಾ ಕೊಲಂಬೊದಲ್ಲಿ, ಎರಡನೇ ಸೆಮಿಫೈನಲ್ ಪಂದ್ಯ ಅಕ್ಟೋಬರ್ 30ರಂದು ಬೆಂಗಳೂರಿನಲ್ಲಿ ನಡೆಯಲಿದೆ. ಫೈನಲ್ ಪಂದ್ಯವು ನವೆಂಬರ್ 2ರಂದು ಬೆಂಗಳೂರು ಅಥವಾ ಕೊಲಂಬೊದಲ್ಲಿ ನಡೆಯಲಿದೆ.

ಆತಿಥೇಯ ಭಾರತ, ಶ್ರೀಲಂಕಾ ಹಾಗೂ ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ, ಇಂಗ್ಲೆಂಡ್, ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ, ಪಾಕಿಸ್ತಾನ ಮತ್ತು ಬಾಂಗ್ಲಾದೇಶ ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ.

ಬಾಯ್ಸನ್‌ಗೆ ಮಣಿದ ಪೆಗುಲಾ

ಪ್ಯಾರಿಸ್ (ಎಪಿ): ಶ್ರೇಯಾಂಕರಹಿತ ಆಟಗಾರ್ತಿ ಲೋಯಿಸ್ ಬಾಯ್ಸನ್ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಸೋಮವಾರ ಮೂರನೇ ಶ್ರೇಯಾಂಕದ ಜೆಸ್ಸಿಕಾ ಪೆಗುಲಾ ಅವರಿಗೆ ಆಘಾತ ನೀಡಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.



ಬಾಯ್ಸನ್

ಟೂರ್ನಿಗೆ ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದ ವಿಶ್ವದ 361ನೇ ರ‍್ಯಾಂಕ್‌ನ ಬಾಯ್ಸನ್ ಮಹಿಳೆಯರ ಸಿಂಗಲ್ಸ್‌ನಲ್ಲಿ 3-6, 6-4, 6-4ರಿಂದ ಅಮೆರಿಕದ ಆಟಗಾರ್ತಿಯನ್ನು ಹಿಮ್ಮೆಟ್ಟಿಸಿದರು. ಫ್ರಾನ್ಸ್‌ನ ಆಟಗಾರ್ತಿ ಇದೇ ಮೊದಲ ಬಾರಿಗೆ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರಲ್ಲಿ ಎಂಟರ ಘಟ್ಟ ಪ್ರವೇಶಿಸಿದರು.

ಬಾಯ್ಸನ್ ಮುಂದಿನ ಸುತ್ತಿನಲ್ಲಿ ಆರನೇ ಶ್ರೇಯಾಂಕದ ಮಿರಾ ಆ್ಯಂಡ್ರೀವಾ ಅವರನ್ನು ಎದುರಿಸಲಿದ್ದಾರೆ. ರಷ್ಯಾದ ಆ್ಯಂಡ್ರೀವಾ 7-5, 6-3ರಿಂದ ಆಸ್ಟ್ರೇಲಿಯಾದ ಡೇರಿಯಾ ಕಸತ್ಕಿನಾ ಅವರನ್ನು ಸೋಲಿಸಿದರು.

ಎರಡನೇ ಶ್ರೇಯಾಂಕದ ಕೊಕೊ ಗಾಫ್ (ಅಮೆರಿಕ) 6-0, 7-5ರಿಂದ 20ನೇ ಶ್ರೇಯಾಂಕದ ಎಕಟೆರಿನಾ ಅಲೆಕ್ಸಾಂಡ್ರೋವಾ (ರಷ್ಯಾ) ಅವರನ್ನು ಸೋಲಿಸಿದರು. ಅವರಿಗೆ ಕ್ವಾರ್ಟರ್ ಫೈನಲ್‌ನಲ್ಲಿ ಅಮೆರಿಕದ ಮತ್ತೊಬ್ಬ ಆಟಗಾರ್ತಿ ಮ್ಯಾಡಿಸನ್ ಕೀಸ್ ಎದುರಾಳಿ. ಏಳನೇ ಶ್ರೇಯಾಂಕದ ಕೀಸ್ 6-3, 7-5ರಿಂದ ಸ್ವದೇಶದ ಹೀಲಿ ಬ್ಯಾಪ್ಟಿಸ್ಟ್ ಅವರನ್ನು ಸೋಲಿಸಿದರು.

ಜ್ವರೇವ್ ಮುನ್ನಡೆ: ಪುರುಷರ ಸಿಂಗಲ್ಸ್‌ನ ನಾಲ್ಕನೇ ಸುತ್ತಿನಲ್ಲಿ ಮೂರನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವರೇವ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಜರ್ಮನಿಯ ಆಟಗಾರ 6-4, 3-0 ಮುನ್ನಡೆಯಲ್ಲಿದ್ದಾಗ ಡಚ್ ಆಟಗಾರ ಟ್ಯಾಲನ್ ಗ್ರೀಕ್ಸ್‌ಪೂರ್ ಸ್ಪರ್ಧೆಯಿಂದ ಹಿಂದೆಸರಿದರು.

ಜ್ವರೇವ್ ಮುಂದಿನ ಸುತ್ತಿನಲ್ಲಿ ಸರ್ಬಿಯಾದ ನೊವಾಕ್ ಜೊಕೊವಿಚ್ ಅವರ ಸವಾಲನ್ನು ಎದುರಿಸಲಿದ್ದಾರೆ. ಆರನೇ ಶ್ರೇಯಾಂಕದ ಜೊಕೊವಿಚ್ 6-2, 6-3, 6-2ರಿಂದ ಬ್ರಿಟನ್‌ನ ಕ್ಯಾಮರೂನ್ ನಾರ್ರಿ ಅವರನ್ನು ಸೋಲಿಸಿದರು. ಇದರೊಂದಿಗೆ ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಸ್ಪೇನ್‌ನ ದಿಗ್ಗಜ ರಫೆಲ್ ನಡಾಲ್ (112) ಬಳಿಕ 100ನೇ ಪಂದ್ಯವನ್ನು ಗೆದ್ದ ದಾಖಲೆ ಬರೆದರು.

ಕಾರ್ಲ್‌ಸನ್‌ಗೆ ಗುಕೇಶ್ ಆಘಾತ

ಸ್ಟಾವೆಂಜರ್ (ನಾರ್ವೆ), (ಪಿಟಿಐ): ಹಾಲಿ ವಿಶ್ವ ಚಾಂಪಿಯನ್, ಭಾರತದ ಡಿ.ಗುಕೇಶ್ ಅವರು ಭಾನುವಾರ ನಾರ್ವೆ ಚೆಸ್ ಟೂರ್ನಿಯಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರಿಗೆ ಆಘಾತ ನೀಡಿದರು.

ಸೋಲಿನ ಅಂಚಿನಿಂದ ಚತುರ ನಡೆ ಪ್ರದರ್ಶಿಸಿದ ಭಾರತದ ಗ್ರ್ಯಾಂಡ್ ಮಾಸ್ಟರ್ ಗುಕೇಶ್, ಕ್ಲಾಸಿಕಲ್ ಆರನೇ ಸುತ್ತಿನ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಕಾರ್ಲ್‌ಸನ್ ವಿರುದ್ಧ ಅಚ್ಚರಿಯ ಗೆಲುವು ಸಾಧಿಸಿದರು. ಕ್ಲಾಸಿಕಲ್ ಸ್ಪರ್ಧೆಯಲ್ಲಿ ಗುಕೇಶ್ ಇದೇ ಮೊದಲ ಬಾರಿ ನಾರ್ವೆಯ ಆಟಗಾರನನ್ನು ಸೋಲಿಸಿದರು.

ಸುಮಾರು ನಾಲ್ಕು ಗಂಟೆಗಳ ಕಾಲ ನಡೆದ ಸ್ಪರ್ಧೆಯಲ್ಲಿ ಕಾರ್ಲ್‌ಸನ್ ಮೇಲುಗೈ ಸಾಧಿಸಿದಂತೆ ತೋರುತ್ತಿತ್ತು. ಆದರೆ ಸಮಯದ ಅಭಾವದಲ್ಲಿ ಅವರು ತಪ್ಪು ನಡೆ ಇಟ್ಟಿದ್ದು, ಗುಕೇಶ್‌ಗೆ ಮೇಲುಗೈ ಸಾಧಿಸಲು ದಾರಿ ಮಾಡಿಕೊಟ್ಟಿತು.

ಕಾರ್ಲ್‌ಸನ್ ಅವರಿಗೆ ತಪ್ಪಿನ ಅರಿವಾಯಿತಾದರೂ ಅಷ್ಟು ಹೊತ್ತಿಗೆ ಸಮಯ ಮೀರಿತ್ತು. ಸೋಲಿನ ಆಘಾತವನ್ನು ಅರಗಿಸಿಕೊಳ್ಳಲಾಗದ



ಡಿ.ಗುಕೇಶ್

ಐದು ಬಾರಿಯ ಚಾಂಪಿಯನ್ ಕಾರ್ಲ್‌ಸನ್ ಒಂದು ಹಂತದಲ್ಲಿ ತಾಳ್ಮೆ ಕಳೆದುಕೊಂಡು ಚೆಸ್ ಟೇಬಲ್ ಗುದ್ದಿ ಹತಾಶೆ ವ್ಯಕ್ತಪಡಿಸಿದರು. ಕೆಲವೇ ಕ್ಷಣಗಳ ನಂತರ ಕಾರ್ಲ್‌ಸನ್ ಅವರು ಗುಕೇಶ್ ಅವರತ್ತ ಸಾಗಿ ಬೆನ್ನು ತಟ್ಟಿ ಅಭಿನಂದಿಸಿದರು.

ಪಂದ್ಯದ ಬಳಿಕ ಪ್ರತಿಕ್ರಿಯಿಸಿದ ಗುಕೇಶ್, 'ನಾನು ಸೋಲಿನ ಅಂಚಿನಲ್ಲಿದ್ದೆ. ಆದರೂ ಕಾರ್ಲ್‌ಸನ್ ಅವರಿಗೆ ಗೆಲುವನ್ನು ಕಷ್ಟಕರವಾಗಿಸುವ ಪ್ರಯತ್ನದಲ್ಲಿದ್ದೆ. ಆದರೆ, ಅಂತಿಮವಾಗಿ ಅದೃಷ್ಟ ನನ್ನ ಪಾಲಾಯಿತು' ಎಂದು ಹೇಳಿದ್ದಾರೆ.

ಈ ಗೆಲುವಿನೊಂದಿಗೆ 19 ವರ್ಷ ವಯಸ್ಸಿನ ಗುಕೇಶ್ 8.5 ಅಂಕಗಳೊಂದಿಗೆ ಮೂರನೇ ಸ್ಥಾನಕ್ಕೆ ಏರಿದರು. ಕಾರ್ಲ್‌ಸನ್ ಮತ್ತು ಅಮೆರಿಕದ ಗ್ರ್ಯಾಂಡ್‌ಮಾಸ್ಟರ್ ಫ್ಯಾಬಿಯಾನೊ ಕರುವಾನಾ 9.5 ಅಂಕಗಳೊಂದಿಗೆ ಜಂಟಿ ಅಗ್ರಸ್ಥಾನದಲ್ಲಿದ್ದಾರೆ.

ಮತ್ತೊಂದು ಪಂದ್ಯದಲ್ಲಿ ಭಾರತದ ಜಿಎಂ ಅರ್ಜುನ್ ಇರಿಗೇಶಿ (7.5) ಅವರು 'ಆರ್ಮ್‌ಗೆಡನ್'ನಲ್ಲಿ ಚೀನಾದ ಗ್ರ್ಯಾಂಡ್‌ಮಾಸ್ಟರ್ ವೀ ಯಿ ವಿರುದ್ಧ ಗೆಲುವು ಸಾಧಿಸಿದರು. ಕರುವಾನಾ ಅವರು 'ಆರ್ಮ್‌ಗೆಡನ್'ನಲ್ಲಿ ಅಮೆರಿಕದ ಹಿಕಾರು ನಕಮುರಾ (7.5) ಅವರನ್ನು ಮಣಿಸಿದರು.

ಜಂಟಿ ಮುನ್ನಡೆಯಲ್ಲಿ ಹಂಪಿ: ಮಹಿಳೆಯರ ವಿಭಾಗದಲ್ಲಿ ಭಾರತದ ಆರ್. ವೈಶಾಲಿ (8) ಅವರು ಸ್ವದೇಶದ ಕೋನೇರು ಹಂಪಿ (9.5) ಅವರನ್ನು ಮಣಿಸಿದರು. ಈ ಸೋಲಿನ ಹೊರತಾಗಿಯೂ ಹಂಪಿ, ಉಕ್ರೇನ್‌ನ ಅನ್ನಾ ಮುಝಿಚುಕ್ (9.5) ಅವರೊಂದಿಗೆ ಜಂಟಿ ಅಗ್ರಸ್ಥಾನದಲ್ಲಿದ್ದಾರೆ.